ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ನನ್ನದೊಂದು ವಿನಂತಿ ತಾವೇನೊ ಖರ್ಚು ಮಾಡಿದ್ದೀರಿ, ಆದರೆ ತಾವು ಮೇಲೆ ಒಪ್ಪಿಕೊಂಡಿರುವ ರೀತಿಯಲ್ಲಿ ಕುಡಿಯುವ ನೀರಿನ ತೊಂದರೆ ಸಕಲೇಶಪುರಕ್ಕೆ ಇನ್ನು ತಪ್ಪಲಿಲ್ಲ. ಆದ್ದರಿಂದ ತಾವು ದಯಮಾಡಿ ಇದನ್ನು ಪರಿಶೀಲಿಸಿ ತಾವು ಈಗೇನು ಹಣವನ್ನು ಖರ್ಚು ಮಾಡಿದ್ದೀರಿ, ವಾಸ್ತವಾಂಶ ತಾವೇನು ಈಗ ಪಟ್ಟಿ ಕೊಟ್ಟಿದ್ದೀರಿ, ಅದರಿಂದಲೆ ಸರಿಯಾಗಿ ಖರ್ಚಾಗಿದೆಯೇ? ಖರ್ಚಾಗದಿದ್ದರೆ ಏಕೆ ಸರಿಯಾಗಿ ಖರ್ಚಾಗಲಿಲ್ಲ? ಕುಡಿಯುವ ನೀರಿನ ಬವಣೆ ಏನಿದೆ, ಅದನ್ನು ತಪ್ಪಿಸಲಿಕ್ಕೆ ತಾವೇನು ಪ್ರಯತ್ನ ಮಾಡುತ್ತೀರಿ? ಸಾಕಷ್ಟು ಹಣ ಖರ್ಚು ಮಾಡಿದ್ದೀರಿ. ಆದರೆ ವ್ಯವಸ್ಥೆಯಾಗಲಿಲ್ಲ. ಕುಡಿಯುವ ನೀರು ಬರಲಿಲ್ಲ. ಸಾಕಷ್ಟು ನೀರು ಸಪ್ಲೈ ಆಗುತ್ತಿಲ್ಲ. ನೀರಿಗೆ ತುಂಬಾ ತೊಂದರೆ ಇದೆ ಸಕಲೇಶಪುರದಲ್ಲಿ. ತಮಗೆ ಗೊತ್ತಿರಬಹುದು. ಇವತ್ತು ಮಳೆಗಾಲ ಪ್ರಾರಂಭವಾಯಿತು. ಎಲ್ಲರೂ ಸಂಪೂರ್ಣವಾಗಿ ಕೆಂಪು ನೀರನ್ನು ಕುಡಿಯಬೇಕು. ಒಳ್ಳೆಯ ನೀರು ಸಿಗುವುದಿಲ್ಲ. ಏಕೆಂದರೆ ನೇರವಾಗಿ ಹೇಮಾವತಿ ನದಿಯಿಂದ ಬರುತ್ತಿರುವಂಥ ನೀರು, ಇದು ಫಿಲ್ಟರ್ ಆಗುವುದಿಲ್ಲ. ಆಂದ ಮೇಲೆ ಈ ವ್ಯವಸ್ಥೆಗೆ ತಾವೇನು ಖರ್ಚುಮಾಡಿದ್ದೀರಿ? ಇದನ್ನು ದಯಮಾಡಿ ತಾವು ಪರಿಶೀಲಿಸಬೇಕು ಎಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಪರಿಶೀಲಿಸಿ ವರದಿ ತರಿಸಿ ಉಳಿದ ಕೆಲಸಗಳನ್ನು ನೀರನ್ನು ಒದಗಿಸುವಂಥದ್ದಕ್ಕೆ ಹಣ ತೊಡಗಿಸಿ ಸಂಪೂರ್ಣವಾಗಿ ಈ ಸಾರಿಯೇ ಮಾಡಿಕೊಡುತ್ತೇವೆ. ಏಕೆಂದರೆ ಇದರಲ್ಲಿ ಹಣ ಫೈಪ್ಡ್ ವಾಟರ್ ಸಪ್ಲೈ ಆದ್ದರಿಂದ ನಾವೇನೆ ಮಾಡುವಂಥದ್ದು. ಆದ್ದರಿಂದ ಸರ್ಕಾರ ಈ ಸಾರಿ 96-97 ರಲ್ಲಿ ಹಣ ತೊಡಗಿಸಿ ಅದನ್ನು ಮಾಡುಕೊಡುತ್ತೇನೆ.

ವಿಷಯ :- ಮೈಸೂರು ನಗರದ ಸಿದ್ದಾರ್ಥ ಬಡಾವಣೆಗೆ 5 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಾಗಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 218 (751)

ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜು) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮೈಸೂರು ನಗರದ ಸಿದ್ದಾರ್ಥ ಬಡಾವಣೆಯಲ್ಲಿ 5 ಲಕ್ಷ ಲೀಟರ್ ಸಾಮರ್ಥ್ಯದ ಆರ್.ಸಿ.ಸಿ. ಜಲಸಂಗ್ರಹಾಗಾರ ಪೂರ್ಣಗೊಂಡಿದ್ದು ನೀರು ತುಂಬಿಸುವ ಕಾರ್ಯವು ವಿಳಂಬವಾಗಿರುವುದಕ್ಕೆ ಕಾರಣವೇನು?

2) ಕಣಿಯರ ರಾಮಮಂದಿರ, ನಾಯ್ಡುನಗರ, ಸುಭಾಶ್‌ನಗರ, ಗಾಯತ್ರಿಪುರಂ ಬಡಾವಣೆಗಳಲ್ಲಿ ಕಳೆದ 10 ವರ್ಷಗಳ ಹಿಂದೆ ಪ್ರಾರಂಭವಾದ ಕಾಮಗಾರಿಯು ಪೂರ್ಣಗೊಳ್ಳದಿರಲು ಕಾರಣವೇನು. ಪೂರ್ಣಗೊಳ್ಳಲು ತಗಲುವ ಸಮಯವೆಷ್ಟು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :-

1) ಮೈಸೂರು ನಗರದ ಸಿದ್ಧಾರ್ಥ ಬಡಾವಣೆಯಲ್ಲಿ 5 ಲಕ್ಷ ಲೀಟರ್ ಸಾಮರ್ಥ್ಯದ ಆರ್.ಸಿ.ಸಿ. ಜಲಸಂಗ್ರಹಾಗಾರ ಪೂರ್ಣಗೊಂಡಿದ್ದು ಬೇಸಿಗೆಯಲ್ಲಿ ನೀರಿನ ಕೊರತೆ ಇದ್ದುದರಿಂದ ನೀರು ತುಂಬಿಸಿರಲಿಲ್ಲ. ಈಗ ನೀರನ್ನು ಹಂತ ಹಂತವಾಗಿ ತುಂಬಿಸಲಾಗುತ್ತಿದೆ.

2) ಈ ಬಡಾವಣೆಗಳಲ್ಲಿ ಜಲಸಂಗ್ರಹಾಗಾರಗಳನ್ನು ಕಟ್ಟುವ ಕಾಮಗಾರಿಯನ್ನು ಶ್ರೀ ಆರ್. ಸತ್ಯನಾರಾಯಣ ಎಂಬ ಗುತ್ತಿಗೆದಾರರಿಗೆ ವಹಿಸಿದ್ದು, ಸದರಿ ಗುತ್ತಿಗೆದಾರರು ಅರ್ಧಕ್ಕೆ ಕೆಲಸವನ್ನು ಬಿಟ್ಟು ಹೋದ ಕಾರಣ ಗುತ್ತಿಗೆ ರದ್ದುಪಡಿಸಿ ಅವರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸಲಾಯಿತು. ಕಣಿಯರ ರಾಮಮಂದಿರ ಜಲಸಂಗ್ರಹಾಗಾರ ಕಾಮಗಾರಿಯ ಉಳಿಕೆ ಕೆಲಸವನ್ನು ಕೈಗೊಳ್ಳಲು ಯಾವ ಗುತ್ತಿಗೆದಾರರು ಮುಂದೆ ಬಂದಿರುವುದಿಲ್ಲ. ಮತ್ತೆ ಟೆಂಡರ್ ಕರೆದು ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ನಾಯ್ಡುನಗರ, ಸುಭಾಶ್‌ನಗರದಲ್ಲಿ ಕಾಮಗಾರಿಯು ಬೇರೆ ಗುತ್ತಿಗೆದಾರರಿಗೆ ವಹಿಸಿದ್ದು ಕೆಲಸ ಪ್ರಗತಿಯಲ್ಲಿದೆ. ಕ್ರಮವಾಗಿ ಮಾರ್ಚ್ 97 ಮತ್ತು ಸೆಪ್ಟೆಂಬರ್ 96 ಕ್ಕೆ ಪೂರ್ಣಗೊಳಿಸಲಾಗುವುದು.

ಗಾಯತ್ರಿಪುರಂ ಬಡಾವಣೆಯಲ್ಲಿ ಜಲಸಂಗ್ರಹಾಗಾರದ ನಿವೇಶನದ ಮಾಲೀಕತ್ವದ ಬಗ್ಗೆ ಕೆ.ಇ.ಬಿ. ನ್ಯಾಯಾಲಯದಲ್ಲಿ ಮೊಕದ್ದಮೆ ಮಾಡಿರುವುದರಿಂದ ಕೆಲಸ ನಿಂತಿದ್ದು ಕೆಇಬಿಯವರು ಸದರಿ ನಿವೇಶನದಲ್ಲಿ ಕಾಮಗಾರಿಯನ್ನು ಮುಂದುವರಿಸಲು ಅನುಮತಿಸಲಾಗಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಇ. ಮಾರುತಿ ರಾವ್ ಪವಾರ್ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಪ್ರಕಾರ ಮೈಸೂರು ನಗರದ ಸಿದ್ಧಾರ್ಥ ಬಡಾವಣೆ ಜಲಸಂಗ್ರಹಾಲಯ 5 ಲಕ್ಷ ಲೀಟರ್ ನೀರು ತುಂಬತಕ್ಕಂಥ ಒಂದು ಸಂಗ್ರಹಾಲಯ ಈಗ ಬೇಸಿಗೆ ಇರುವುದರಿಂದ ಅಲ್ಲಿ ನಾವು ನೀರು ತುಂಬಲಿಕ್ಕೆ ಸಾಧ್ಯವಾಗಲಿಲ್ಲ ಎನ್ನುವ ಉತ್ತರವನ್ನು ಅವರು ಕೊಟ್ಟಿದ್ದಾರೆ. ಇದು ಸಮಂಜಸವಾದಂಥ ಉತ್ತರವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಾನು ಕಳೆದ ಏಳೆಂಟು ತಿಂಗಳ ಹಿಂದೆ ಇದೇ ಒಂದು ಕಛೇರಿಗೆ ಹೋಗಿ ಭೇಟಿ ನೀಡಿ, ಅಲ್ಲಿ ತಿಂಗಳ ಹಿಂದೆ ಇದೇ ಒಂದು ಕಛೇರಿಗೆ ಹೋಗಿ ಭೇಟಿ ನೀಡಿ, ಅಲ್ಲಿ ಡಿವಿಜನ್ (1) ಮತ್ತು ಡಿವಿಜನ್ (2) ಏನಿವೆ, ಈ ಎರಡೂ ಕಛೇರಿಯವರು ಇಲ್ಲಾ ಅವರು ನಮಗೆ ವಹಿಸಿಕೊಟ್ಟಿಲ್ಲ ಆದಕ್ಕೋಸ್ಕರ ನಾವು ತುಂಬುತ್ತಿಲ್ಲ ಎನ್ನುವ ಮಾತನ್ನು ಡಿವಿಜನ್ (1) ರವರು ಹೇಳುತ್ತಿದ್ದರು. ಹೀಗೆ ಅವರವರಲ್ಲಿ ಒಗ್ಗಟ್ಟಿಲ್ಲದೆ ಇಲ್ಲಾ ನಮಗೆ ಅವರು ವಹಿಸಿಕೊಡಬೇಕು, ಅವರು ತುಂಬಿ ತೋರಿಸಿಕೊಡಬೇಕು ಎನ್ನುವ ಮಾತನ್ನು ಹೇಳಿದಾಗ ನಾನು ಅವರ ಜೊತೆಯಲ್ಲಿ ಪತ್ರ ಬರೆದು ಉತ್ತರವನ್ನು ಪಡೆದಿದ್ದೇನೆ. 16-9-95 ರಲ್ಲಿಯೇ ಡಿವಿಜನ್ (1) ಗೆ ಹ್ಯಾಂಡ್‌ಓವರ್ ಮಾಡಿ ನೀರು ತುಂಬುವ ವ್ಯವಸ್ಥೆ

ವರು ಅನುವು ಮಾಡಿಕೊಟ್ಟಿದ್ದಾರೆ. ಇವರು ಕೊಟ್ಟಿರುವ ಉತ್ತರ ಬೇಸಿಗೆ ಪ್ರಶ್ನೆ ುರುವುದಿಲ್ಲ. ಸಿದ್ದಾರ್ಥ ಬಡಾವಣೆ ಟ್ಯಾಂಕ್ ಪೂರ್ತಿಯಾಗಿ ಸುಮಾರು ಐದಾರು ರ್ಷವಾಗಿದೆ. ಕೆಲಸ ಸಂಪೂರ್ಣ ಪೂರ್ತಿಯಾಗಿ ಐದಾರು ವರ್ಷಗಳಾದರೂ ನೀರು ುಂಬುವ ಕೆಲಸವನ್ನು ಮಾಡಿಲ್ಲ. ನಾನು ಕಛೇರಿಗಳಿಗೆ ಹೋಗಿ ಹೋಗಿ ಸಾಕಾಗಿ ೂನೆಗೆ ಡಿವಿಜನ್ (2) ರವರು ನಮಗೆ ಹ್ಯಾಂಡ್‌ಓವರ್ ಮಾಡಬೇಕೆಂದರು. ನಾನು ತ್ರ ಬರೆದ ಮೇಲೆ ಅವರು 16-9-95 ರಲ್ಲಿ ಹ್ಯಾಂಡ್‌ಓವರ್ ಮಾಡಿದ್ದೇವೆ ಎಂದು ತ್ರ ಕೊಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರಿಗೆ ತಮ್ಮೂಲಕ ತಲುಪಿಸುವುದಕ್ಕೆ ನಾನು ುಚ್ಛೆಪಡುತ್ತೇನೆ. ಮತ್ತೆ ಹಾಗೆಯೇ ನನ್ನ ಇನ್ನೂ ಒಂದು ಪ್ರಶ್ನೆಯಲ್ಲಿ ನಮ್ಮ ಸನ್ಮಾನ್ಯ ಚಿವರು ಉತ್ತರ ಕೊಟ್ಟಿದ್ದಾರೆ. ಕಣೆಯರ್ ರಾಮಮಂದಿರದ ಒಂದು ಟ್ಯಾಂಕನ್ನು ಟ್ಟಲು ಟೆಂಡರ್ ಹಾಕಿದಂಥ ವ್ಯಕ್ತಿ ಕೆಲಸ ಬಿಟ್ಟಿದ್ದರಿಂದ ನಾವು ಇನ್ನೊಬ್ಬರಿಗೆ ಟೆಂಡರ್ ೂಡಲಿಕ್ಕೆ ಸಾಧ್ಯವಾಗಲಿಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನನಗನಿಸುತ್ತದೆ, ಎರಡು ರ್ಷಗಳಿಂದ ಇನ್ನೊಂದು ಟೆಂಡರನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲವೇ? ನಾನು ಅದರ ೂೋಟೊಗಳನ್ನು ತೆಗೆದು ತಂದಿದ್ದೇನೆ. ಇದು ಹೀಗೆ ಇದ್ದರೆ ಜನಗಳಿಗೆ ಕುಡಿಯುವ ೀರನ್ನು ಒದಗಿಸುವುದು ಹೇಗೆ?

ಅಧ್ಯಕ್ಷರು :- ಉತ್ತರವನ್ನು ಪೂರ್ಣ ಓದಿಕೊಂಡುಬಿಡಿ.

ಶ್ರೀ ಇ. ಮಾರುತಿರಾವ್ ಪವಾರ್ :- ಅದೇ ಸತ್ಯನಾರಾಯಣ ಎಂಬುವ ವರಿಗೆ ಕೊಟ್ಟಿದ್ದೆವು. ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಹಾಕಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಮಧ್ಯದಲ್ಲಿ ಟೆಂಡರನ್ನು ಕೂಗಿದರು. ಅಲ್ಲಿ ಟೆಂಡರ್‌ದಾರರು ಏಕೆ ಬರುತ್ತಿಲ್ಲ ಬೇರೆ ಗುತ್ತಿಗೆದಾರರು ಎಂದರೆ ಅವರು ಹಳೆಯ ರೇಟ್‌ನಲ್ಲಿ ಎನಿದೆ, ಅದೇ ರೇಟಿಗೆ ಇವತ್ತು ಸಹಾ ಗುತ್ತಿಗೆದಾರರಿಗೆ ಕೊಡಲಿಕ್ಕೆ ಮಾಡುತ್ತಿರುವುದರಿಂದ ಇನ್ನು ಬೇರೆ ಗುತ್ತಿಗೆದಾರರು ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಕೆಲಸ ಯಾರೂ ತೆಗೆದುಕೊಳ್ಳುವುದಕ್ಕೆ ಇಷ್ಟ ಪಡುತ್ತಿಲ್ಲ. ಈಗಾಗಲೇ ಇಷ್ಟು ಕೆಲಸ ಆಗಿರುವುದರಿಂದ ಇದರ ಮೇಲೆ ಅವರೆಲ್ಲಾ ಪೂರ್ತಿ ಕಟ್ಟಬೇಕು ಮಾಡಬೇಕು, ಅವರಿಗೆ ಹೆಚ್ಚಿನ ಹಣದ ಅವಶ್ಯಕತೆ ಇದೆ. ಇದರಿಂದ ಹೆಚ್ಚಿನ ಟೆಂಡರ್‌ಗೆ ಒಂದು ಅವಕಾಶವನ್ನು ಮಾಡಿದರೆ ಬೇರೆಯವರು ಟೆಂಡರ್ ತೆಗೆದುಕೊಂಡು ಬೇಗ ಕೆಲಸ ಮುಗಿಸಲಿಕ್ಕೆ ಅವಕಾಶ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮತ್ತೆ ನಮ್ಮ ಗಾಯತ್ರಿಪುರಂ ಬಡಾವಣೆ ಒಂದು ಟ್ಯಾಂಕಿನ ವಿಚಾರದಲ್ಲಿ ಕೆಇಬಿಯವರ ಸ್ಥಳದಲ್ಲಿ ಅದು ಇರುವು ದರಿಂದ, ಅವರಿಗೂ ನಮಗೂ ವ್ಯತ್ಯಾಸ ಇರುವುದರಿಂದ ಅವರು ಯಾವಾಗ ಪರ್ಮಿಷನ್ ಕೊಡುತ್ತಾರೆ. ಆಗಿನಿಂದಲೇ ನಾವು ಕೆಲಸ ಪ್ರಾರಂಭ ಮಾಡುತ್ತೇವೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ನಾನು ಅದರ ಫೋಟೋ ಸಹ ತಂದಿದ್ದೇನೆ. ಅದು ಕೆಇಬಿಯವರ ಅಧೀನದಲ್ಲಿರತಕ್ಕ ಸ್ಥಳ ಆದ್ದರಿಂದ ನಮ್ಮ ಜಲಮಂಡಲಿಯವರು ಮತ್ತು ಕೆಇಬಿಯವರು ಕುಳಿತು ಮಾತನಾಡಿ ತೀರ್ಮಾನಿಸಬೇಕು. ಅವರುಗಳು ಕೋರ್ಟು ಕಛೇರಿಗಳಿಗೆ ಹೋಗಿದ್ದಾರೆ. ಅವರ ಫೋಟೋ ತಂದಿದ್ದೇನೆ. ಇಷ್ಟು ಕೆಲಸ ಆಗಿ ಅದು

ಹೆಚ್ಚು ಕಡಿಮೆ ಐದಾರು ವರ್ಷದಿಂದ ನಿಂತಿದೆ. ಈಗ ಕೆಇಬಿ ನಮ್ಮದ್ದೇ ಏಜೆನ್ಸಿ ಆದ್ದರಿಂದ ಅವರು ತಾವು ಕುಳಿತು ಮಾತನಾಡಿ ಜನಗಳಿಗೆ ಅನುಕೂಲ ಮಾಡಿಕೊಡಿ ನಮ್ಮ ಸರ್ಕಾರದ ಎರಡು ಕಛೇರಿಗಳಲ್ಲೇ ವ್ಯಾಜ್ಯ ಹಾಕಿಕೊಂಡು ಕುಳಿತುಕೊಳ್ಳುವುದಕ್ಕೆ ಬದಲಾಗಿ ಅವರನ್ನು ಕರೆಯಿಸಿ ಕುಳಿತುಕೊಂಡು ಒಂದು ತೀರ್ಮಾನ ತೆಗೆದುಕೊಂಡು ಜನಕ್ಕೆ ಅನುಕೂಲ ಆಗುವಂತಹ ಕೆಲಸ ಮಾಡಬೇಕು. ಇಷ್ಟು ಕೆಲಸ ಆಗಿದೆ, ಇನ್ನು ಸ್ವಲ್ಪ ಕೆಲಸದಲ್ಲಿ ಅದು ನಿಂತಿದೆ. ಆ ಫೋಟೋಗಳನ್ನೆಲ್ಲಾ ನಾನು ತಮ್ಮ ಮೂಲಕ ಸಚಿವರಿಗೆ ತಲುಪಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಐದಾರು ಸ್ಥಳ ಇವೆ. ಸುಭಾಷ್‌ನಗರ ಮತ್ತೆ ನಾಯ್ಡುನಗರಗಳ ಬಗ್ಗೆ ನಾನು ಪ್ರಶ್ನೆ ಹಾಕಿದ ಮೇಲೆ ಈ ಕೆಲಸಗಳನ್ನು ಪ್ರಾರಂಭಮಾಡಿದ್ದಾರೆ. ಅವರದ್ದೂ ಫೋಟೋ ತಂದಿದ್ದೇನೆ. ಇದೆಲ್ಲಾ ಕಟ್ಟಿದ್ದಾರೆ. ಇದನ್ನೂ ಸಹ ಜವಾಬ್ದಾರಿಯಿಂದ ಕೆಲಸ ಮಾಡಿಸಿ, ಅಲ್ಲಿರತಕ್ಕ ವ್ಯವಸ್ಥೆಗೆ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಸಚಿವರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿದ ಹಾಗೆ ಈಗ ಒಂದು ಕೆಲಸ ಬಹಳ ತಡ ಆಗಿದೆ. 1976 ರಲ್ಲಿ ಇದನ್ನು ಮೆಸಸ್ ಬಿ. ಸತ್ಯನಾರಾಯಣ್‌ರಾವ್ ಎನ್ನುವವರಿಗೆ ಒಟ್ಟಾರೆ ಇವೆಲ್ಲಾ ಗುತ್ತಿಗೆ ಕೊಟ್ಟಿದ್ದಾರೆ. ಸಿದ್ಧಾರ್ಥ ನಗರ ಮತ್ತು ಕಣಿಯರ ರಾಮ ಮಂದಿರ...

ಅಧ್ಯಕ್ಷರ :- ಕ್ರಮಾಂಕದಲ್ಲಿ ಹೇಳಿ ಬಿಡಿ. ಮೊದಲನೆಯದು ಆ ಡಿವಿಜನ್ ಅನ್ನು ಹ್ಯಾಂಡ್ ಓವರ್ ಮಾಡುವ ವಿಚಾರ.

ಶ್ರೀ ಬಿ. ಎನ್. ಬಚ್ಚೇಗೌಡ :- ಈಗಾಗಲೇ ಅವರು ತಿಳಿಸಿದ ಹಾಗೆ ಇದು ಸಿದ್ಧಾರ್ಥನಗರ ಬಡಾವಣೆಯಲ್ಲಿ ಆಗಿರತಕ್ಕದ್ದು ಕೆಲಸ. ಅಲ್ಲಿ ಐದು ಲಕ್ಷ ಲೀಟರ್ ಸಾಮರ್ಥ್ಯದ ಜಲ ಸಂಗ್ರಹ. ಓವರ್‌ಹೆಡ್ ಟ್ಯಾಂಕ್ ಆಗಿದೆ. ಕಳೆದ 10-15 ದಿವಸಗಳಿಂದ ಒಂದೊಂದು ಅಡಿ ನೀರನ್ನೇ ತುಂಬಬೇಕಾಗುತ್ತದೆ. ಆಟ್ ಎ ಸ್ಟ್ರೆಚ್ ನಾವು ಫುಲ್ ತುಂಬುವುದಕ್ಕೆ ಆಗುವುದಿಲ್ಲ. ಈಗ ಕೆಲಸ ಪ್ರಾರಂಭ ಮಾಡಿದ್ದೇವೆ. ಜೊತೆಗೆ ಆ ಸತ್ಯನಾರಾಯಣ್‌ರಾವ್ ಎನ್ನುವವರನ್ನು ಬ್ಲಾಕ್ ಲಿಸ್ಟ್ ಮಾಡಿ ಅವನು ತಡ ಮಾಡಿದ್ದರಿಂದ ತೆಗೆದು ಹಾಕಿ, ಅವನು ಮಾಡಿರತಕ್ಕ ಅರ್ಧ ಮುಕ್ಕಾಲು ಕೆಲಸ ಈ ತರಹ ಮಾಡಿ ಕೆಲಸ ನಿಂತು ಹೋಗಿರುವುದರಿಂದ ಅವನ ಇಎಂಡಿಯನ್ನು ಮತ್ತು ಸೆಕ್ಯೂರಿಟಿ ಡಿಪಾಸಿಟ್ ಎರಡೂ ಏಳೂವರೆ ಪರ್ಸೆಂಟ್ ಏನು ಇದೆ, ಅದನ್ನು ಮುಟ್ಟುಗೋಲು ಹಾಕಿಕೊಂಡು ಈಗ ಅದನ್ನು ಬೇರೆ ಬೇರೆ ಏಜೆಂಟ್ಸ್‌ಗೆ ಕೊಡುವಂತಹ, ಕೆಲಸವನ್ನು ಮಾಡಿದ್ದೇವೆ. ಈಗ ಅವರು ಹೇಳಿರತಕ್ಕಂಥ ಸಿದ್ಧಾರ್ಥ ನಗರದ ಓವರ್ ಹೆಡ್ ಟ್ಯಾಂಕ್ ಕೆಲಸ ಪೂರ್ಣ ಆಗಿದೆ. ಅದಕ್ಕೆ ಈಗ ಕಳೆದ 10-15 ದಿವಸದಿಂದ ಹಂತ ಹಂತವಾಗಿ ಒಂದು ಅಡಿ, ಎರಡು ಅಡಿ ಹೀಗೆ ತೆಗೆದುಕೊಂಡು ನೀರು ತುಂಬಿಕೊಂಡು ಅದನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕಣಿಯರ್ ರಾಮ ಮಂದಿರ ಟ್ಯಾಂಕ್ ಎಂದು ಹೇಳುತ್ತಿದ್ದಾರೆ. ಅದು ಹತ್ತು ಲಕ್ಷ ಲೀಟರ್ ಸಾಮರ್ಥ್ಯವನ್ನೂ ಹೊಂದಿದೆ. ಆ ಹತ್ತು

ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗೆ ಸುಮಾರು ಏಳು ಲಕ್ಷ ರೂಪಾಯಿಗಳಲ್ಲಿ ಐದು ಲಕ್ಷ ರೂ.ಗಳ ಕೆಲಸ ಮಾಡಿ ಗುತ್ತಿಗೆದಾರರು ಬಿಟ್ಟು ಹೋಗಿದ್ದಾರೆ. ಅದಕ್ಕೂ ಈಗ ನಾವು ಡೈರೆಕ್ಟ್‌ಆಗಿ ಎನ್‌ಟ್ರಸ್ಟ್ ಮಾಡಬೇಕು ಎಂಬ ಯೋಚನೆ ಇದೆ. ಆದರೆ ಯಾರೂ ಮುಂದೆ ಬರಲಿಲ್ಲ. ಟೆಂಡರ್ಸ್ ಅರ್ಧ ಮಾಡಿ ಬಿಟ್ಟು ಹೋದ ಕೆಲಸ ಮಾಡಲಿಕ್ಕೆ ಯಾರು ಮುಂದೆ ಬರಲಿಲ್ಲ ಅದಕ್ಕೆ ನೇರವಾಗಿ ಇವತ್ತು ಡೈರೆಕ್ಟ್ ಎನ್‌ಟ್ರಸ್ಟ್ ಮಾಡಿ ಯಾರಿಗಾದರೂ ಕೆಲಸ ಮಾಡುವುದಕ್ಕೆ ಒಪ್ಪಿಸಿ ಆ ಕೆಲಸ ಪ್ರಾರಂಭಿಸಿದ್ದೇವೆ. ಮತ್ತೊಂದು ನಾಯುಡು ನಗರದ ಟ್ಯಾಂಕ್ ಬಗ್ಗೆ ಹೇಳಿದ್ದಾರೆ. ಐದು ಲಕ್ಷ ಲೀಟರ್ ಸಾಮರ್ಥ್ಯದ್ದು. ಅದನ್ನೂ ಇದೇ ಸತ್ಯನಾರಾ ಯಣ್‌ರಾವ್ ತೆಗೆದುಕೊಂಡು 1989 ರಿಂದ ಅದನ್ನು ಪೂರ್ಣಗೊಳಿಸದೇ, ಅದನ್ನು 1990 ರಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಸದರಿ ಗುತ್ತಿಗೆದಾರರು ಕೆಲಸ ಮಾಡದೇ ಇರುವುದರಿಂದ ಬೇರೆ ಟೆಂಡರ್ ಕರೆದು ಮೆಸರ್ಸ್ ರಾಮಯ್ಯ ಅಂಡ್ ಸನ್ಸ್ ಅಂತ, ಆ ಕಂಪನಿಗೆ ಈಗಾಗಲೇ 4-9-96 ರಲ್ಲಿ ಕೊಟ್ಟಿದ್ದೇವೆ. ಆ ಜಲ ಸಂಗ್ರಹ ಕಾರ್ಯವನ್ನು 1997 ರ ಮಾರ್ಚ್‌ನಲ್ಲಿ ಪೂರ್ಣ ಮಾಡಿಕೊಡುತ್ತೇವೆ. ಇನ್ನೊಂದು ಸುಭಾಷ್‌ನಗರ ಟ್ಯಾಂಕ್‌ನ ಬಗ್ಗೆ ಹೇಳಿದ್ದಾರೆ. ಅದು ನಾಲ್ಕನೇ ಒಂದು ಟ್ಯಾಂಕ್ ಮೈಸೂರು ನಗರದಲ್ಲಿ. ಅದು ಸುಮಾರು ಐದು ಲಕ್ಷ ಲೀಟರ್‌ನ ಒಂದು ಮೇಲ್ಮಟ್ಟದ ಜಲ ಸಂಗ್ರಹಾಗಾರ. ಅದನ್ನು ಇದೇ ಸತ್ಯನಾರಾಯಣ್ ರಾವ್ ಅವರು ತೆಗೆದುಕೊಂಡು ಬಿಟ್ಟು ಹೋದ್ದರಿಂದ ಶೇಕಡ 75 ರ ಭಾಗದ ಕೆಲಸ ಇವತ್ತು ನಿಲ್ಲಿಸಿದ್ದರಿಂದ, ಆ ಸಂಬಂಧ ಗುತ್ತಿಗೆದಾರರ ಕಾಮಗಾರಿಯನ್ನು ಮಾಡಬೇಕು ಎಂದು ವಿಚಾರ ಮಾಡಿದ್ದೇವೆ. ತುಂಡು ಗುತ್ತಿಗೆ ಕೊಟ್ಟು ಪೀಸ್ ವರ್ಕ್ ಆಧಾರದ ಮೇಲೆ ಅದನ್ನೂ ಪ್ರಾರಂಭಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ತಾವು ಐದನೆಯದು ಕೇಳಿರತಕ್ಕದ್ದು ಗಾಯತ್ರಿಪುರಂನಲ್ಲಿ ಕೆಇಬಿಯವರ ಹೈಟೆನ್ಷನ್ ವೈರ್ ಬರುವುದರಿಂದ ಅವರು ಅಲ್ಲಿನ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಮಾಡಿ ಅದನ್ನು ಮಾಡಿಕೂಡದು ಎನ್ನುವುದು, ಅದು ಇನ್ನೂ ತೀರ್ಮಾನ ಆಗಿಲ್ಲ. ಸಿವಿಲ್ ಕೋರ್ಟ್‌ನಲ್ಲಿ ಆ ಅರ್ಜಿ ಬಾಕಿ ಉಳಿದಿದೆ. ಅದು ಕೆಇಬಿಯವರ ಜೊತೆ ಮಾತುಕತೆ ನಡೆದು ಆ ನಿವೇಶನ ಕಾಮಗಾರಿ ನಡೆದುದು ಸೂಕ್ತ ಆದಾಗ ಮತ್ತು ಸ್ಥಳದ ತನಿಖೆ ನಾನೂ ಮಾಡಿ, ನಾನು ಯಾವುದನ್ನೂ ನೋಡಿಲ್ಲ. ತಾವು ಇವೆಲ್ಲಾ ತಿಳಿಸಿದ್ದೀರಿ. ಮತ್ತು ಮೈಸೂರು ಶಾಸಕರು ತಮ್ಮನ್ನು ಬರಮಾಡಿಕೊಂಡು ನನ್ನ ಕಛೇರಿಯಲ್ಲಿ ಈ ಬಗ್ಗೆ ಎಲ್ಲಾ ಮಾತನಾಡಬೇಕೆಂದು ತೀರ್ಮಾನ ಮಾಡಿ ದ್ದೇನೆ. ನಾನೂ ಸ್ಥಳಕ್ಕೆ ಬಂದು ಆಗಿರತಕ್ಕ ಕೆಲಸ ಅರ್ಧಂಬರ್ಧ ಬಿಟ್ಟಿರತಕ್ಕದ್ದು ಏತಕ್ಕೆ, ಹಾಗೂ ತಡಮಾಡಿದವರ ಮೇಲೆ ಕ್ರಮ ಕೈಗೊಂಡು ಮುಂದೆ ಆದಷ್ಟು ಬೇಗ ಮಾಡುತ್ತೇವೆ. ಮುಂದಿನ ಮಾರ್ಚ್ ಒಳಗೆ ಕೆಲಸಗಳನ್ನು ಮುಗಿಸುವಂತ ಹದು. ಹಾಗೂ ಈ ವರ್ಷದ ಸೆಪ್ಟೆಂಬರ್‌ನಲ್ಲಿಯೇ ಕೆಲವು ಮುಗಿಸುವಂತಹ ಹಂತದಲ್ಲಿರತಕ್ಕದ್ದನ್ನೆಲ್ಲಾ ಮುಗಿಸಿ ಕೊಡುತ್ತೇವೆ.

ಶ್ರೀ ಇ. ಮಾರುತಿ ರಾವ್ ಪವಾರ್ :- ಗಾಯತ್ರಿಪುರಂ ಕೆಲಸದ ಬಗ್ಗೆ ಕೋರ್ಟಿಗೆ ಕೆಐಬಿಯವರೇ ಹೋಗಿರುವುದರಿಂದ ಕೋರ್ಟಿನಿಂದ ವಾಪಸ್ ತರಿಸಿ ಕುಳಿತು ಮಾತನಾಡಿ ಬಗೆಹರಿಸಿದರೆ ಬೇಗ ಕೆಲಸ ಆಗುತ್ತದೆಯಲ್ಲ.

ಅಧ್ಯಕ್ಷರು :- ಕೋ-ಆರ್ಡಿನೇಟ್ ಮಾಡುತ್ತೇನೆಂದು ಹೇಳಿದರಲ್ಲ ಸ್ಥಳಕ್ಕೂ ಬರುತ್ತೇನೆ ನಿಮ್ಮನ್ನೆಲ್ಲಾ ಕರೆಯಿಸಿ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೇ, ದಯಮಾಡಿ ಸಚಿವರಲ್ಲಿ ಒಂದು ವಿಚಾರ ಸಿದ್ಧಾರ್ಥನಗರದ ಟ್ಯಾಂಕಿನ ವಿಚಾರ ಇಡೀ ಮೈಸೂರು ನಗರಕ್ಕೇ ಗೊತ್ತಿರುವಂತಹದು. ಟ್ಯಾಂಕ್ ಕಂಪ್ಲೀಟ್ ಆಗಿದೆ ಎನ್ನುವಂತಹ ವಿಚಾರದಲ್ಲಿ ಟ್ಯಾಂಕ್ ಆಗಲೇ ಕುಸಿದು ಬಿದ್ದು ಇಡೀ ಪ್ರದೇಶದವರಿಗೆಲ್ಲಾ ಇದು ಗೊತ್ತು. ಆ ಟ್ಯಾಂಕಿನಲ್ಲಿ ನೀರು ತುಂಬಲಿಕ್ಕೆ ಸಾಧ್ಯ ಇಲ್ಲ ಎನ್ನುವಂತಹ ಒಂದು ಪರಿಸ್ಥಿತಿ ಬಂದು ನೀರು ತುಂಬಿ ಆ ನೀರು ಹರಿದು ಹೋಗಿ ಸುಮಾರು ಎರಡು ವರ್ಷಗಳ ಕಾಲದಿಂದ ಅದು ಫಿಟ್ ಇಲ್ಲ ಎಂದು ಹೇಳಿ ಇವತ್ತು ನಿಲ್ಲಿಸಿದ್ದಾರೆ. ಆದರೆ ಉತ್ತರದಲ್ಲಿ ಏಕೆ ಆ ತರಹ ವಿಚಾರಗಳು ಬಂದಿದೆ. ಏಕೆ ಅಧಿಕಾರಿಗಳು ಈ ರೀತಿಯಾದಂತಹ ಮಾಹಿತಿ ಕೊಟ್ಟಿದ್ದಾರೆಂದು ನನಗೆ ಸಂಪೂರ್ಣವಾದ ಮಾಹಿತಿ ಗೊತ್ತಿರುವುದರಿಂದ ಹೇಳುತ್ತಿದ್ದೇನೆ. ಸುಮಾರು ಎರಡು ವರ್ಷಗಳ ಕಾಲದಿಂದ ಅದು ನೀರು ತುಂಬುವುದಕ್ಕೆ ಯೋಗ್ಯವಾಗಿಲ್ಲ ಎನ್ನುವಂತಹ ವಿಚಾರ ಎಲ್ಲರಿಗೂ ಗೊತ್ತಿರುವಂತಹ ವಿಚಾರ.

ಶ್ರೀ ಇ. ಮಾರುತಿ ರಾವ್ ಪವಾರ್ :- ಅಧಿಕಾರಿಗಳು ತುಂಬಾ ಸುಳ್ಳು ಹೇಳಿದ್ದಾರೆ. ನಾನಂತು ಆ ಕಛೇರಿಗೆ ಎಷ್ಟೋ ಸಾರಿ ಸುತ್ತಿದ್ದೇನೆ. ಸಿದ್ಧಾರ್ಥನಗರ ಟ್ಯಾಂಕಿಗೆ ಹದಿನೈದು ದಿವಸದಿಂದ ನೀರು ತುಂಬುತ್ತಿದ್ದಾರೆಂದು ನನಗೆ ಈ ಮಾತು ಒಂದು ವರ್ಷದಿಂದ ಹೇಳುತ್ತಿದ್ದಾರೆ. ತುಂಬುತ್ತಿದ್ದೇವೆ, ಒಂದು ಅಡಿ ತುಂಬುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಕಾರಣ ಏನೋ ಗೊತ್ತಿಲ್ಲ, ಆ ಟ್ಯಾಂಕ್ ಸರಿ ಇದೆಯೋ ಇಲ್ಲವೋ ಏನೋ? ಅಂತೂ ಅಧಿಕಾರಿಗಳನ್ನು ಕೇಳಿದರೆ ತುಂಬಬಹುದು ಚೆನ್ನಾಗಿದೆ ಏನೂ ತೊಂದರೆ ಇಲ್ಲ, ಎಂದು ಹೇಳುತ್ತಾರೆ. ಆದರಿಂದ ದಯಮಾಡಿ ಅಧಿಕಾರಿಗಳಿಗೆ ಇವರ ಬಗ್ಗೆ ಸರಿಯಾದಂತಹ ತಾಕೀತು ಮಾಡಬೇಕು ಎಂದು ಹೇಳಿ ಕೇಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ :- ನಾನೂ ಸ್ಥಳಕ್ಕೆ ಹೋಗಿ ನೋಡುತ್ತೇನೆ. ಅವರು ಕೊಟ್ಟಿರತಕ್ಕಂಥಹ ವರದಿಯಲ್ಲಿ ಈ ರೀತಿ ಇದೆ. ಮಾನ್ಯ ಸದಸ್ಯರಾದ ರಾಮದಾಸ್ ಅವರ ಮನೆಯ ಹತ್ತಿರ ಇದು ಇರುವುದರಿಂದ ಅವರಿಗೆ ಸರಿಯಾದಂತಹ ಮಾಹಿತಿ ಇರುತ್ತದೆ. ಅದು ಉಪಯೋಗಕ್ಕೆ ಬರುತ್ತದೆಯೋ ಅಥವಾ ಇಲ್ಲವೋ, ನೀರು ತುಂಬಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೊ ಹೇಗೆ ಎನ್ನುವ ಬಗ್ಗೆ ಆ ಸ್ಥಳಕ್ಕೆ ಹೋಗಿ ನೋಡಿ ಯಾರು ಆ ರೀತಿ ಮಾಡಿದ್ದಾರೆ ಅಧಿಕಾರಿಗಳಾಗಲೀ ಅಥವಾ ಟೆಂಡರ್ ತೆಗೆದುಕೊಂಡಿರುವಂತಹವರು ಆಗಲೀ ಸರಿಯಾಗಿ ಕೆಲಸ ಮಾಡದೇ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕಾರ್ಯವನ್ನು ಮಾಡುತ್ತೇನೆ.

ವಿಷಯ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 219 (1419)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಸಣ್ಣ ಪ್ರಮಾಣದ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಯೋಜನೆ ಯಡಿಯಲ್ಲಿ 1994-95 ಮತ್ತು 1995-96 ರಲ್ಲಿ ಪ್ರಾರಂಭಿಸಲಾದ ಘಟಕಗಳೆಷ್ಟು ; ಮತ್ತು ವಿವಿಧ ಯೋಜನೆಗಳೆಷ್ಟು ; ವೆಚ್ಚ ಮಾಡಿದ ಮೊತ್ತವೆಷ್ಟು?

ಆ) ಇವುಗಳಲ್ಲಿ ಮುಚ್ಚಲ್ಪಟ್ಟ ಘಟಕಗಳೆಷ್ಟು? ಮುಚ್ಚಲ್ಪಡಲು ಕಾರಣಗಳೇನು?

ಶ್ರೀ ಬಿ. ಎ. ಮೊಯ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ)

ಸಾಲು	ಪ್ರಾರಂಬಿಸಲಾದ ಘಟಕಗಳು	ವಿವಿಧ ಯೋಜನೆಗಳ ಸಂಖ್ಯೆ	ವೆಚ್ಚ ಮಾಡಿದ ಮೊತ್ತ
1994-95	76	16	ರೂ.5236460-00
1995-96	46	12	ರೂ.2733000-00

ಆ) ಯಾವುದೂ ಇಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ :- ಮಾನ್ಯ ಅಧ್ಯಕ್ಷರೆ, ನಾನು ಮೂರು ಪ್ರಶ್ನೆಗಳನ್ನು ಕಳಿಸಿದ್ದೆ. ಆದರೆ ಉತ್ತರ ಎರಡಕ್ಕೆ ಮಾತ್ರ ಕೊಟ್ಟಿದ್ದಾರೆ. ಒಂದು ಪ್ರಶ್ನೆಯನ್ನು ಪ್ರಿಂಟಿಂಗ್‌ನಲ್ಲಿ ಕೂಡ ಬಿಟ್ಟಿದ್ದಾರೆ. ಏಕೋ ವ್ಯತ್ಯಾಸ ಆಗಿದೆ ಎಂದು ನನ್ನ ಗಮನಕ್ಕೆ ಬರುತ್ತಾ ಇಲ್ಲ ಕೊಟ್ಟ ಉತ್ತರದಲ್ಲಿ 1994-95 ರಲ್ಲಿ 76 ಘಟಕಗಳನ್ನು ಮತ್ತು 16 ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. 1995-96 ರಲ್ಲಿ 46 ಮತ್ತು 12. 1994-95 ಕ್ಕೆ ಮತ್ತು 95-96 ಕ್ಕೆ ಏಕೆ ಕಡಿಮೆ ಆಯಿತು? ಯಾವ ಕಾರಣಕ್ಕೋಸ್ಕರ ಎಂದು ಮಂತ್ರಿಗಳನ್ನು ಕೇಳುತ್ತಿದ್ದೇನೆ. ಮತ್ತು ಈ ವರ್ಷ 1996-97 ರಲ್ಲಿ ಯಾವ ಟಾರ್ಗೆಟನ್ನು ಇಟ್ಟುಕೊಂಡಿದ್ದಿರಿ? ಎಷ್ಟು ಪ್ರಪೋಸಲ್‌ಗಳನ್ನು ಕಳಿಸಿದ್ದೀರಿ? ಅವುಗಳಲ್ಲಿ ಎಷ್ಟು ಸ್ಯಾಂಷನ್ ಆಗಿದೆ? ಮತ್ತೆ ಇವು ಇಷ್ಟು ಸಮಯ ಲೇಟಾಗಲಿಕ್ಕೆ ಕಾರಣ ಏನು ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್ :– ಮಾನ್ಯ ಅಧ್ಯಕ್ಷರೆ, ನಾವು ಈಗ ಲೆಂಡಿಂ ಪಾಲಿಸಿ ಏನು ಇದೆ, ಅದನ್ನು ಛೇಂಜ್ ಮಾಡಿದ್ದೇವೆ. ಕೇಂದ್ರ ಸರ್ಕಾರ ಪ್ಯಾಟರ್ನ್ ಟೈಪ್ ಲೆಂಡಿಂಗ್ ಏನು ಇತ್ತು ಅದನ್ನು ಬದಲಾವಣೆ ಮಾಡಿ ಕನ್ಸೋರ್ಟಿಯ ಲೆಂಡಿಂಗ್ ಎಂದು ಮಾಡಿದ್ದಾರೆ. ಅಂದರೆ ಬ್ಯಾಂಕುಗಳ ಸಮೂಹದ ಮೂಲಕವಾ ಲೆಂಡಿಂಗ್ ಮಾಡತಕ್ಕಂತಹ ಯೋಜನೆ ಈ ವರ್ಷದಿಂದ ಜಾರಿಗೆ ಬಂದಿದೆ. ಅದನ ನಾವು ಮಾರ್ಚ್ 1996 ರಿಂದ ಶುರು ಮಾಡಿದ್ದೇವೆ. ಶುರು ಮಾಡಿ ಆದ ಮೇ ಈ ಒಂದು ಲೆಂಡಿಂಗ್ ಮಾಡಲಿಕ್ಕೆ ನಮಗೆ ಇದರ ಆಫೀಸ್ ಬಾಂಬೆಯಲ್ಲಿದೆ. ಹತ ಲಕ್ಷಕ್ಕಿಂತ ಮೇಲ್ಪಟ್ಟು ಅಥವಾ ಹತ್ತು ಲಕ್ಷದವರೆಗಿನ ಅಪ್ರೈಸಲ್ ಇಲ್ಲಿ ಮಾಡಿ ಮೇಲೆ ಪುನಃ ಬಾಂಬೆಗೆ ಹೋಗಬೇಕು. ಬಾಂಬೆಯಿಂದ ಅದು ಇಲ್ಲಿಗೆ ಸ್ಯಾಂಷನ್ ಆ ಬರಬೇಕು. ಆಮೇಲೆ ನಾವು ಕೊಡತಕ್ಕದ್ದು ಇದೆ. ಇದನ್ನು ಸರಳೀಕರಣಗೊಳಿಸತಕ್ಕಂ ಕೆಲಸವನ್ನು ನಾವ ಈಗ ಮಾಡುತ್ತಿದ್ದೇವೆ. ಈ ನಮ್ಮ ಖಾದೀ ಬೋರ್ಡಿನಿಂದಲ ಅಪ್ರೈಸಲ್ ಮಾಡಲ್ಪಟ್ಟು ಹತ್ತು ಲಕ್ಷದ ಒಳಗಿರತಕ್ಕಂತಹ ಯಾವುದೇ ಪ್ರಪೋಸ ಅನ್ನು ನಾವು ಇಲ್ಲೇ ಸ್ಯಾಂಷನ್ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಅದ ಜೊತೆಗೆ ಒಂದು ಲಕ್ಷದ ವರೆಗೆ ಇರತಕ್ಕ ಲೆಂಡಿಂಗ್ ಏನು ಇದೆ, ಅದು ಹಿಂ ನಾವು ಖಾದಿ ಬೋರ್ಡಿನಿಂದ ಹೇಗೆ ಪ್ಯಾಟರ್ನ್ ಟೈಪ್ ಏನು ಇತ್ತು, ಆ ಪ್ಯಾಟರ್ನ್ ಟೈಪ್‌ನಲ್ಲಿಯೇ ನಾವು ಒಂದು ಲಕ್ಷದವರೆಗಿನ ಲೆಂಡಿಂಗನ್ನು ಮಾಡುತ್ತೇವೆ. ತಾವು ತಮ ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಗೆ ಈ ವರ್ಷದ ನಮ್ಮ ಎಷ್ಟು ಅಲೋಕೇಶನ್ ಇದೆ ಎಂದ ಕೇಳಿದ್ದೀರಿ. ಅದು ನಾಲ್ಕು ಕೋಟಿ 59 ಲಕ್ಷ ರೂಪಾಯಿಗಳು. ಅದರಲ್ಲಿ ಈಗಾಗಲೇ ಅಲ್ಲಿಂದ ಸುಮಾರು 2 ಕೋಟಿ 70 ಲಕ್ಷದ ಪ್ರಾಜೆಕ್ಟ್ ಈಗಾಗಲೇ ಖಾದಿ ಬೋರ್ಡಿ ಬಂದು ತಲುಪಿದೆ. ಆದರಲ್ಲಿ ನಾವು ಇಷ್ಟರವರೆಗೆ ಸ್ಯಾಂಷನ್ ಮಾಡಿರತಕ್ಕ ಹ ಬಹಳ ಕಡಿಮೆ. ಟೆಕ್ನಿಕಲ್ ಪ್ರಾಬ್ಲಮ್‌ನಿಂದಾಗಿ ಕಡಿಮೆ ಆಗಿದೆ. ಕೇವಲ 58 ಲಕ್ಷ ರು ಗಳನ್ನು ಮಾತ್ರ ಸ್ಯಾಂಕ್ಷನ್ ಮಾಡಿದ್ದೇವೆ. ಅದರಲ್ಲೂ ಕೂಡ ಮೂರು ಕೇಸ್‌ಗಳು ಇ ಬಾಕಿ ಉಳಿದಿರತಕ್ಕಂತಹ ಈ ಹಣ ಏನು ಇದೆ ಇದನ್ನು ಬರುವ ಸೆಪ್ಟೆಂಬರ್ ಒಳ ಇದನ್ನು ನಾವು ಡಿಸ್ಬರ್ಸ್ ಮಾಡಬೇಕಾಗಿದೆ. ಅದಕ್ಕಾಗಿ ನಾವು ತ್ವರಿತವಾದಂತ ಕ್ರಮವನ್ನು ಜರುಗಿಸುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದ ಇಚ್ಛಿಪಡುತ್ತೇನೆ.

10-40 ಎ.ಎಂ.

ಶ್ರೀ ಕೆ. ಜಯರಾಮಶೆಟ್ಟಿ :– ಹೊಸ ಘಟಕಗಳನ್ನು ತೆರೆಯಬೇಕಾದರೆ ಯಾ ಮಾನದಂಡವಿಟ್ಟುಕೊಂಡು ಮಂಜೂರು ಮಾಡುತ್ತೀರಿ? ಮತ್ತು ಈ ಕುರಿತು ಏನು ಕಾಯ ಕ್ರಮ ಅಳವಡಿಸಿಕೊಂಡಿದ್ದೀರಿ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಖಾದಿ ಮತ್ತು ಗ್ರಾಮೆ ದ್ಯೋಗ ಮಂಡಳಿಯಲ್ಲಿ ಬಹಳಷ್ಟು ಸ್ವಜನಪಕ್ಷಪಾತಗಳಾಗುತ್ತಿರುವುದಲ್ಲದೆ ಭ್ರಷ್ಟಾಚಾರ ಕೂ ನಡೆಯುತ್ತಿದ್ದು, ಮೊನ್ನೆ ನಡೆದಂಥ ಕೆ.ಡಿ.ಪಿ. ಸಭೆಯಲ್ಲೂ ಕೂಡ ಈ ವಿಷ ಪ್ರಸ್ತಾಪಕ್ಕೆ ಬಂದಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಛೀಮಾರಿ ಹಾಕಿದ್ದಾರೆ. ಆದುದರಿಂ ಈ ಯೋಜನೆ ನಿರೀಕ್ಷಿತ ಫಲಿತಾಂಶ ಕೊಡುತ್ತಿಲ್ಲ ಹಾಗೂ ಗ್ರಾಮೀಣ ಪ್ರದೇಶಗಳ

ವ್ಯವಸ್ಥಿತವಾಗಿ ಕಾರ್ಯಾಚರಣೆ ಮಾಡದೆ ಕೇವಲ ಹಣವನ್ನು ದುರುಪಯೋಗಪಡಿಸಿ ಕೊಳ್ಳುವುದಕ್ಕಷ್ಟೆ ಈ ಘಟಕಗಳನ್ನು ತೆರೆಯುತ್ತಿರುವುದರ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದು, ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕು.

ಶ್ರೀ ಬಿ. ಎ. ಮೊಹಿದ್ದೀನ್ :- ಈ ಕುರಿತು ನಿರ್ದಿಷ್ಟ ಆರೋಪಗಳೇನಾದರೂ ಇದ್ದರೆ ಅದರ ಬಗ್ಗೆ ಮಾನ್ಯ ಸದಸ್ಯರು ನನಗೆ ಮಾಹಿತಿ ಕೊಟ್ಟರೆ ತಕ್ಷಣ ಆ ಬಗ್ಗೆ ಕೂಲಂಕುಷವಾದ ತನಿಖೆ ನಡೆಸುತ್ತೇನೆ ಮತ್ತು ತಪ್ಪಿತಸ್ಥರು ಯಾರಿದ್ದಾರೋ ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇದರ ಜೊತೆಗೆ 1994-95 ನೇ ಸಾಲಿಗೆ ಸಂಬಂಧಿಸಿದಂತೆ ತಾವು ವಿವರವಾದ ಪಟ್ಟಿಯನ್ನು ಕೇಳಿದ್ದೀರಿ. ತಮ್ಮ ಕ್ಷೇತ್ರದಲ್ಲೂ ಕೆಲವು ಉದ್ಯಮಗಳಿದ್ದು ತಾವು ಕೇಳಿರುವ ಮಾಹಿತಿಯನ್ನು ತಮಗೆ ಒದಗಿಸಿಕೊಡುತ್ತೇನೆ. ತಮಗೆ ಅದರ ಬಗ್ಗೆ ಒಂದು ಇಣುಕು ನೋಟ ಸಿಗಬಹುದೆಂದು ತಿಳಿದುಕೊಂಡಿದ್ದೇನೆ. 1994-95 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 651 ಘಟಕಗಳಿಗೆ ಒಟ್ಟು 389 ಲಕ್ಷ ರೂಪಾಯಿಗಳ ಧನ ಸಹಾಯ ನೀಡ ಲಾಗಿದ್ದು, ಆ ಪೈಕಿ ಇಲ್ಲಿಯವರೆವಿಗೂ ಮರು ಪಾವತಿಯಾಗಿರುವುದು 50 ಲಕ್ಷ 84 ಸಾವಿರ ರೂಪಾಯಿಗಳು ಮಾತ್ರ. ಉಳಿದ 338 ಲಕ್ಷ ರೂಪಾಯಿಗಳಷ್ಟು ಬಾಕಿ ಹಣ ಬರಬೇಕಾದ ಅವಶ್ಯಕತೆಯಿದೆ. ತಾವು ಹೇಳಿದಂತೆ ಎಲ್ಲಿಯೋ ಲೋಪ-ದೋಷವಿರಬಹುದೆಂದು ಕಾಣುತ್ತದೆ. ಆದುದರಿಂದ, ಇದರ ಬಗ್ಗೆ ಖಂಡಿತವಾಗಿಯೂ ಉನ್ನತಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಕೂಲಂಕುಷವಾಗಿ ತನಿಖೆ ನಡೆಸಿ ಏಕೆ ಹೀಗಾಗಿದೆ ಎಂಬುದರ ಬಗ್ಗೆ ತಮಗೆ ವಿವರವಾದ ಒಂದು ವರದಿ ಕೊಡಬಯಸುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ :- ಅಲ್ಲಿನ ಘಟಕಗಳು ಮುಚ್ಚಲ್ಪಟ್ಟಿರುವುದರಿಂದ ಸರ್ಕಾರಕ್ಕೆ ಹಣದ ಮರುಪಾವತಿಯಾಗುತ್ತಿಲ್ಲ. ಅದಕ್ಕೋಸ್ಕರ ಯಾವ ಮಾನದಂಡವಿಟ್ಟು ಕೊಳ್ಳುತ್ತೀರೆಂದು ಕೇಳುತ್ತಿದ್ದೇನೆ. ಘಟಕಗಳನ್ನು ತೆರೆಯುವಾಗ ಯಾವ ಮಾನದಂಡದ ಆಧಾರದ ಮೇಲೆ ಹಾಗೂ ಹೇಗೆ ಕೊಡುತ್ತೀರಿ? ಅದನ್ನು ಸರಿಪಡಿಸಿಕೊಟ್ಟರೆ ಈ ತರಹ ಆಗುವುದಿಲ್ಲ. ಎಲ್ಲಾ ಘಟಕಗಳು ನಷ್ಟವನ್ನು ಅನುಭವಿಸುತ್ತಿದ್ದು, ಹಣ ಮರುಪಾವತಿಯಾಗುತ್ತಿಲ್ಲ.

ಶ್ರೀ ಬಿ. ಎ. ಮೊಹಿದ್ದೀನ್ :- ಅದಕ್ಕೋಸ್ಕರವೇ ಈಗ ಲೆಂಡಿಂಗ್ ಸಿಸ್ಟಮ್ ಅನ್ನು ಬದಲಾಯಿಸಿದ್ದೇವೆ. ಈಗ ನಮ್ಮ ಯೋಜನೆಗಳನ್ನು ಟೆಕ್ನಾಕ್‌ರವರು ಅಪ್ರೈಸಲ್ ಮಾಡುತ್ತಿದ್ದಾರೆ. ಹಿಂದಿನ ಲೆಂಡಿಂಗ್ ಪ್ಯಾಟ್ರನ್‌ನಲ್ಲಿ ತಾವು ಹೇಳಿದಂತೆ ಲೋಪ-ದೋಷಗಳಿದ್ದವು. ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಇವೊತ್ತು ಟೆಕ್ನಾಕ್‌ನಿಂದ ನಾವು ಅಪ್ರೈಸಲ್ ಮಾಡಿಸುತ್ತಿದ್ದೇವೆ. ನಂತರ, ಕನ್‌ಸಾರ್‌ಟಿಯಂ ಲೆಂಡಿಂಗ್ ಪ್ರಕಾರ ಬ್ಯಾಂಕಿನ ಮೂಲಕ ಫಂಡ್ ಮಾಡುತ್ತಿದ್ದು, ಬ್ಯಾಂಕಿನವರು ಶೇಕಡ 75 ರಷ್ಟು ಕೊಡುತ್ತಿದ್ದು, ನಾವು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಯಿಂದ ಕೊಡುತ್ತೇವೆ. ಎಂಟ್ರಿಪ್ರನಾರ್ ಯೋಜನೆಯನ್ನು ಪೂರ್ತಿಗೊಳಿಸಿದ ನಂತರ ಬೀಜಧನವನ್ನು ಸಹಾಯಧನವನ್ನಾಗಿ ಪರಿವರ್ತಿಸಲಾಗುವುದು.

ಈ ತರಹದ ಏರ್ಪಾಟಿರುವುದರಿಂದ ಮುಂದೆ ಇಂತಹ ಯಾವುದಾದರೂ ಲೋಪ-ದೋಷಗಳಿಗೆ ಅವಕಾಶ ವಿರುವುದಿಲ್ಲವೆನ್ನುವ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಕೊಡಲಿಚ್ಛಿಸುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ :– ಈ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಸರ್ಕಾರ ಪಡೆದುಕೊಳ್ಳುವ ಪ್ರಯೋಜನವೇನಿದೆ, ಅದನ್ನು ಪೂರ್ತಿ ಪಡೆದುಕೊಳ್ಳಬೇಕು. ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಿ ನಷ್ಟವಾಯಿತೆಂದು ಮಧ್ಯದಲ್ಲೆ ಮುಚ್ಚಲ್ಪಟ್ಟರೆ ಅಂತಹವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಪುನಃ ಅವರು ಸರ್ಕಾರದಿಂದ ಏನಾದರೂ ಸೌಲಭ್ಯ ಪಡೆಯುವ ವ್ಯವಸ್ಥೆ ಇದೆಯೇ?

ಶ್ರೀ ಬಿ. ಎ. ಮೊಹಿದ್ದೀನ್ :– ರಾಜ್ಯದಲ್ಲಿ ನೀವೇ ಮಾಡಿರುವಂಥ ಕಾನೂನುಗಳಿರುವುದರಿಂದ ಕಾನೂನಿನ ಪ್ರಕಾರ ಹಣ ಮರುಪಾವತಿ ಮಾಡಬೇಕಾಗುತ್ತದೆ.

ವಿಷಯ :– ಚಿಕ್ಕನಾಯಕನಹಳ್ಳಿಯಲ್ಲಿ ಸ್ವಯಂ ಉದ್ಯೋಗ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 220 (1632)

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) :- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕನಾಯಕನಹಳ್ಳಿ ಚುನಾವಣಾ ಕ್ಷೇತ್ರದಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಪ್ರತಿ ಸಾಲಿನಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಸಾಲ ಕೊಡಲಾಗಿದೆ?

ಆ) ಇದರಲ್ಲಿ ಎಷ್ಟು ಜನ ಉದ್ಯೋಗ ಮಾಡುತ್ತಿರುವರು?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ ಅಡಿಯಲ್ಲಿ ಚಿಕ್ಕನಾಯಕನಹಳ್ಳಿ ಚುನಾವಣಾ ಕ್ಷೇತ್ರದಲ್ಲಿ 89 ಜನವರಿಗೆ ಸ್ವಂತ ಉದ್ಯೋಗ ಮಾಡಲು ಈ ಕೆಳಗಿನಂತೆ ಸಾಲ ಮಂಜೂರು ಮಾಡಲಾಗಿದೆ.

93-94	94-95	95-96	ಒಟ್ಟು
3	47	36	86

ಆ) ಈ 86 ಫಲಾನುಭವಿಗಳಲ್ಲಿ ಎಲ್ಲರೂ ಉತ್ಪಾದನೆ ಸೇವಾ ಘಟಕ ಗಳನ್ನು ಸ್ಥಾಪಿಸಿರುತ್ತಾರೆ. ಈ ಯೋಜನೆಯಡಿ ಪ್ರಾರಂಭವಾದ ಘಟಕಗಳಲ್ಲಿ ಒಟ್ಟು 172 ಜನರು ಉದ್ಯೋಗ ಮಾಡುತ್ತಿದ್ದಾರೆ. ವಿವರಗಳು ಈ ಕೆಳಕಂಡಂತಿವೆ.

93-94	94-95	95-96	ಒಟ್ಟು
6	94	72	172

ಶ್ರೀ ಎನ್. ಬಸವಯ್ಯ :- ಪುನಃ ಏನಾದರೂ ವ್ಯವಸ್ಥೆ ಮಾಡಿ ದುಡಿಯುವ ಬಂಡವಾಳವನ್ನು ಒದಗಿಸುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಿರೋ?

ಶ್ರೀ ಬಿ. ಎ. ಮೊಹಿದ್ದೀನ್ :- ಮಾನ್ಯ ಅಧ್ಯಕ್ಷರೆ, ದುಡಿಯುವ ಬಂಡವಾಳ ಒದಗಿಸುವುದು ಬ್ಯಾಂಕಿನವರ ಕೈಯಲ್ಲಿದೆ. ಉತ್ಪಾದನಾ ಸೇವಾ ಘಟಕ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ, ಮತ್ತು ಅದರ ಅವಶ್ಯಕತೆಯೇನಿದೆ ಎಂಬುದನ್ನು ನೋಡಿಕೊಂಡು ದುಡಿಯುವ ಬಂಡವಾಳವನ್ನು ಒದಗಿಸಲಾಗುತ್ತದೆ. ಆದರೆ, ಪ್ರಧಾನಮಂತ್ರಿಗಳ ರೋಜಗಾರ ಯೋಜನೆಯಡಿ ಬಂಡವಾಳವನ್ನು ಒದಗಿಸುವ ಬಗ್ಗೆ ಯೋಜನೆ ಅಳವಡಿಸಿ ಕೊಂಡು, ಮುಂದೆ ಅವರು ಏನು ಏಕ್ಸ್‌ಪ್ಯಾನ್‌ಶನ್ ಮಾಡುತ್ತಾರೆ, ಈಗ ಕುಮಟಾದಲ್ಲಿ ಒಬ್ಬರು ಒಂದು ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಸುಮಾರು 10-15 ಲಕ್ಷ ರೂಪಾಯಿಗಳ ಒಂದು ಘಟಕ ಪ್ರಾರಂಭಿಸಿದ್ದಾರೆ. ಅದು ಬೇರೆ ರೀತಿಯದ್ದಾಗುತ್ತದ್ದಾತ್ತದ್ದಾದ್ದರಿಂದ ಎಕ್ಸ್‌ಪ್ಯಾನ್‌ಶನ್‌ಗೂ ಸಾಲ ಕೊಡುತ್ತೇವೆ. ಆದುದರಿಂದ, ತಾವು ಕೇಳಿರುವಂತೆ ಇಷ್ಟಕ್ಕೆ ಮಾತ್ರ ದುಡಿಯುವು ಬಂಡವಾಳವನ್ನು ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಬಸವಯ್ಯ :- ಅಂದಾಜು ಮಾಡಿ ಸಾಲ ಕೊಟ್ಟಿರುತ್ತಾರೆ, ಆದರೆ, ಸಾಲ ಸಾಕಾಗುವುದಿಲ್ಲವಾದ್ದರಿಂದ ಇವೊತ್ತು ಅವುಗಳನ್ನು ಬಾಗಿಲು ಹಾಕುವ ಸ್ಥಿತಿಗೆ ಬಂದಿದೆ. ಅಂತಹ ಯೋಜನೆಗಳನ್ನು ತಾವು ಪುನಃ ಪರಿಶೀಲನೆ ಮಾಡಿ ಸಾಲ ಕೊಟ್ಟರೆ ಆ ಯೋಜನೆಯಿಂದ ಪ್ರಯೋಜನ ಪಡೆಯತಕ್ಕಂಥ ಅವಕಾಶವುಂಟಾಗಬಹುದು. ಆದುದರಿಂದ, ದಯಮಾಡಿ ಪುನರ್ ಪರಿಶೀಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್ :- ಅದನ್ನು ಪರಿಶೀಲಿಸೋಣ. ಅದರ ಜೊತೆಗೆ ತಾವೂ ಕೂಡ ಅಲ್ಲಿ ಇರುವುದರಿಂದ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಲೀಡ್ ಬ್ಯಾಂಕ್ ಮತ್ತು ಪಿ.ಎಲ್.ಡಿ. ಬ್ಯಾಂಕನ್ನು ಮಾನಿಟರ್ ಮಾಡುವಂಥಾದ್ದು ಇದೆ. ನಿಮ್ಮ ಜಿಲ್ಲೆಯ ನಿಮ್ಮ ತಾಲ್ಲೂಕಿನಲ್ಲಿರುವ ಎಲ್ಲಾ ಫಲಾನುಭವಿಗಳಿಗೂ ನಾವು ಹಣ ಸೌಲಭ್ಯ ಒದಗಿಸಿದ್ದೇವೆ. ಇದರ ಪ್ರಗತಿ ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ವಿಷಯ :- ಸಿಂದಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ- ಶಾಶ್ವತ ಪರಿಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 221 (1076)

ಶ್ರೀ ಬಸವನ ಗೌಡ ರಾ. ಪಾಟೀಲ (ಬಿಜಾಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂದಗಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸಿಂದಗಿ ಕುಡಿಯುವ ನೀರಿನ ಸಮಸ್ಯೆ ಶಾಶ್ವತ ಪರಿಹಾರಕ್ಕೆ ಸರ್ಕಾರ ದವರು ಹಮ್ಮಿಕ್ಕೊಂಡಿರುವ ಯೋಜನೆಗಳಾವುವು?

ಇ) ಈ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು, ಇದಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ, ಯಾವಾಗ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ದಿ ಸಚಿವರು) :-

ಅ) ಬಂದಿದೆ.

ಆ) ಶಾಶ್ವತ ಪರಿಹಾರ ಒದಗಿಸಲು, ಇಂಡಿ ಶಾಖಾ ಕಾಲುವೆಯ ನೀರಿನ ಮೂಲದಿಂದ ಸರಬರಾಜು ಮಾಡುವ ಯೋಜನೆಯ ರೂ. 610-00 ಲಕ್ಷ ಮೊತ್ತದ ಅಂದಾಜಿಗೆ ಸರ್ಕಾರ ದಿನಾಂಕ 25-11-95 ರಲ್ಲಿ 29 ಯೋಜನೆಗಳಿಗೆ ಅನುಮೋದನೆ ನೀಡಿರುವ ಪಟ್ಟಿಯಲ್ಲಿ ಸೇರಿದೆ. ಈ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಅನುದಾನದ ಲಭ್ಯತೆಯನ್ನು ಅವ ಲಂಬಿಸಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಬಸವನಗೌಡ ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಸಿಂಧಗಿ ನಗರ ದಲ್ಲಿ ಕುಡಿಯುವ ನೀರಿನ ಸಮಸ್ಯೆರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ 'ಬಂದಿದೆ' ಎಂದು ಒಪ್ಪಿಕೊಂಡಿದ್ದಾರೆ. ಸಿಂಧಗಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರದವರು ಹಮ್ಮಿಕ್ಕೊಂಡಿರುರ ಯೋಜನೆಗಳಿಗೆ ಇನ್ನೂ ಆಡಳಿತಾತ್ಮಕ ಅನುಮೋದನೆ ನೀಡಿಲ್ಲವೆಂದು ಹೇಳಿದ್ದಾರೆ. ಸದರಿ ನಗರದಲ್ಲಿ ಇವೊತ್ತು ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾಗಿ ಉದ್ಭವ ವಾಗಿದೆ. ಪುರಸಭೆಯಿಂದ ಕೊಳವೆ ಬಾವಿಗಳನ್ನು ಕೊರೆಸಿ ನೀರು ಪೂರೈಸುವ ವ್ಯವಸ್ಥೆ ಏನಿದೆ, ಸುಮಾರು 400 ಅಡಿಗಳಷ್ಟು ಆಳದವರೆಗೆ ಕೊಳವೆಬಾವಿಗಳನ್ನು ಕೊರೆದರೂ ಸಹ ನೀರು ಸಿಗುತ್ತಿಲ್ಲವಾದ್ದರಿಂದ ವಿಫಲವಾಗುತ್ತಿದೆ. ಸರ್ಕಾರ ಹಮ್ಮಿಕ್ಕೊಂಡಿರುವ ಈ ಕುಡಿಯುವ ನೀರಿನ ಯೋಜನೆ ಬಗ್ಗೆ ಏನು ಕಾಯುತ್ತಿದ್ದೇವೆ, ಯೋಜನೆಯನ್ನು ಆದಷ್ಟು ಬೇಗ ಕಾರ್ಯಗಾತಗೊಳಿಸುವಂಥ ಕೆಲಸ ಮಾಡಬೇಕು. ಏಕೆಂದರೆ, ಬಿಜಾಪುರಕ್ಕೆ ಕುಡಿಯುವ ನೀರನ್ನು ಪೂರೈಸಲು 1991 ರಲ್ಲಿ ಸುಮಾರು 15 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಲಾಗಿದ್ದು, ಇವೊತ್ತು ಅದು 35 ಕೋಟಿ ರೂಪಾಯಿಗಳಿಗೆ ಒಂದು ನಿಂತಿದೆ. ಆದುದರಿಂದ, ಕುಡಿಯುವ ನೀರಿನ ಯೋಜನೆಗೆ ತಾತ್ಕೂರ್ತಿಕವಾಗಿ ಏನು ವ್ಯವಸ್ಥೆ

ಮಾಡಿದ್ದೀರಿ? ಸಿಂಧಗಿ ನಗರದ 5-6 ಕಿಲೋಮೀಟರ್ ದೂರದಲ್ಲಿ ಅಂತ[illegible]ಂಗೆ ಪ್ರದೇಶದಲ್ಲಿ ನೀರು ಸಿಗುತ್ತದೆಂದು ಅನೇಕ ಜನರು ಹೇಳುತ್ತಿದ್ದು, ಸರ್ಕಾ[illegible] ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತಾ ಕುಡಿಯುವ ನೀರಿನ ಸಮಸ್ಯೆಗೆ ತಾತ್ಕಾಲಿಕವಾದ ಪರಿಹಾರವನ್ನು ಯಾವಾಗ ಕಂಡುಹಿಡಿಯುತ್ತೀರಿ? ಸದರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಎಂಬುದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ :– ಸನ್ಮಾನ್ಯ ಅಧ್ಯಕ್ಷರೆ, ಸಿಂಧಗಿ ಪಟ್ಟಣ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಪಟ್ಟಣವಾಗಿದ್ದು, ಅಲ್ಲದೆ, ಇಲ್ಲಿನ ಅಂತರ್ಜಲದ ಮಟ್ಟ ಕಡಿಮೆಯಾಗಿರುವುದರಿಂದ ಕೊರೆಸಲಾದ ಎಲ್ಲಾ ಕೊಳವೆ ಬಾವಿಗಳು ನೀರು ಸಿಗದೆ ವಿಫಲವಾಗುತ್ತಿದೆಯೆಂದು ಮಾನ್ಯ ಸದಸ್ಯರು ತಿಳಿಸಿದರು. ಈಗಾಗಲೇ ಅಲ್ಲಿ ಸುಮಾರು 25 ಬೋರ್‌ವೆಲ್‌ಗಳಿದ್ದು, ಅವುಗಳ ಪೈಕಿ 15 ಬೋರ್‌ವೆಲ್‌ಗಳಿಗೆ ಪವರ್ ಪಂಪುಗಳು ಮತ್ತು 10 ಬೋರ್‌ವೆಲ್‌ಗಳಿಗೆ ಹ್ಯಾಂಡ್ ಪಂಪುಗಳನ್ನು ಅಳವಡಿಸಿ ಇವೊತ್ತು ನೀರನ್ನು ಒದಗಿಸಲಾಗುತ್ತಿದೆ. ಸಿಂಧಗಿ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯವನ್ನು ಇಂಡಿ ಶಾಖಾ ಕಾಲುವೆಯಿಂದ ಒದಗಿಸಲು ಈಗಾಗಲೇ ಸುಮಾರು 610 ಲಕ್ಷ ರೂಪಾಯಿಗಳ ಯೋಜನೆ ಸಿದ್ಧವಾಗಿದೆ. ರಾಜ್ಯದಲ್ಲಿ 29 ಪಟ್ಟಣಗಳು, ಅಂದರೆ 20 ಸಾವಿರ ಜನಸಂಖ್ಯೆಗಿಂತ ಮೇಲ್ಪಟ್ಟಿರತಕ್ಕ 20 ಪಟ್ಟಣಗಳು ಮತ್ತು ಇಪ್ಪತ್ತು ಸಾವಿರ ಜನಸಂಖ್ಯೆ ಒಳಗಿರತಕ್ಕ ಒಂಭತ್ತು ಪಟ್ಟಣಗಳಿಗೆ, ಒಟ್ಟು 29 ಪಟ್ಟಗಳಿಗೆ ಪೈಪುಗಳ ಮೂಲಕ ನೀರನ್ನು ಸರಬರಾಜು ಮಾಡಲು 86 ಕೋಟಿ ರೂಪಾಯಿಗಳ ಒಂದು ಯೋಜನೆ ಸಿದ್ಧಗೊಳಿಸಿದ್ದೇವೆ. ಅಂದಿನ ಮುಖ್ಯಮಂತ್ರಿಗಳು ಹಾಗೂ ಇಂದಿನ ಪ್ರಧಾನ ಮಂತ್ರಿಗಳಾಗಿರುವವರು ಈ 29 ಯೋಜನೆಗಳಿಗೂ ಮಂಜೂರಾತಿ ಕೊಡಬೇಕೆಂದು ಸದರಿ ಯೋಜನೆಗಳಿಗೆ 27 ಲಕ್ಷದ 25 ಸಾವಿರ ರೂಪಾಯಿಗಳ ಟೋಕನ್ ಗ್ರಾಂಟ್‌ನ್ನು ಈಗಾಗಲೇ ಒದಗಿಸಿದ್ದೇವೆ. ಪ್ರತ್ಯೇಕ ಪ್ರತ್ಯೇಕವಾಗಿರುವ ಈ 29 ಯೋಜನೆಗಳನ್ನು ತಾತ್ಕಾಲಿಕವಾಗಿ ಒಪ್ಪಿದ್ದು ಮಂಜುರಾತಿಯಾಗಬೇಕಾಗಿರುವುದರಿಂದ ಎಲ್‌ಐ.ಸಿ., ಹುಡ್ಕೋ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆದು 86 ಕೋಟಿ ರೂಪಾಯಿಗಳ ಈ ಯೋಜನೆಗೆ ಹಣದ ಮೂಲದ ಲಭ್ಯತೆ ನೋಡಿಕೊಂಡು ನಾವು ಯೋಜನೆಯನ್ನು ಪೂರ್ತಿಗೊಳಿಸುತ್ತೇವೆ.

ಶ್ರೀ ಬಸವನಗೌಡ ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಈಗಿನ ಸ್ಥಿತಿಯಲ್ಲಿ ನಗರಸಭೆ ಮತ್ತು ಪುರಸಭೆಗಳು ಆರ್ಥಿಕವಾಗಿ ಸದೃಢವಾಗಿಲ್ಲ. ರಾಜಾಸ್ಥಾನ, ಮಹಾರಾಷ್ಟ್ರ, ಮತ್ತು ಗುಜರಾತ್ ನಲ್ಲಿ ಯಾವ ರೀತಿ ಸರ್ಕಾರವೇ ಕುಡಿಯುವ ನೀರಿನ ಯೋಜನೆಗಳಿಗೆ ನೂರಕ್ಕೆ ನೂರರಷ್ಟು ಹಣವನ್ನು ಒದಗಿಸಿ ಕೆಲಸವನ್ನು ಪೂರೈಸುತ್ತಿವೆ ಅದೇ ರೀತಿ ನಮ್ಮಲ್ಲೂ ಮಾಡಿದಾಗ ಮಾತ್ರ ಈ ಯೋಜನೆಗಳು ಪೂರ್ತಿಯಾಗುತ್ತದೆ. ಆದರೆ 29 ಯೋಜನೆಗಳಿಗೆ 27 ಲಕ್ಷ ರೂಪಾಯಿಗಳನ್ನಿಟ್ಟರೆ ಈ ಯೋಜನೆಗಳು ಮುಗಿಯುವುದು ಯಾವಾಗ ಎನ್ನತಕ್ಕ ಗಂಭೀರವಾದ ಪ್ರಶ್ನೆ ನಮ್ಮ ಮುಂದಿದೆ. ಆದ್ದರಿಂದ ಸರ್ಕಾರ ಕುಡಿಯುವ ನೀರಿನ ಯೋಜನೆಗಾಗಿಯೇ ನೂರು ಇಲ್ಲವೆ ಇನ್ನೂರು ಕೋಟಿ ರೂಪಾಯಿಗಳನ್ನಿಟ್ಟು ಅದನ್ನು ಪೂರ್ತಿಮಾಡುವವರೆಗೆ ಸರ್ಕಾರವೇ ಹೊಣೆಯನ್ನು

ಹೊತ್ತುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು. 1991 ರಲ್ಲಿ ಬಿಜಾಪುರ ಕುಡಿಯುವ ನೀರಿನ ಯೋಜನೆಯು 15 ಕೋಟಿ 41 ಲಕ್ಷದ ಯೋಜನೆಯಾಗಿತ್ತು. ಆದರೆ ಇವತ್ತು 35 ಕೋಟಿ ರೂಪಾಯಿಗಳನ್ನು ಮೀರುತ್ತಿದೆ. ನಗರಸಭೆಯಿಂದ ಹಣವನ್ನು ಕೊಡಬೇಕೆಂದರೆ ಅದರ ಹತ್ತಿರ ಹಣವಿಲ್ಲ, ನಗರಾಭಿವೃದ್ಧಿ ಇಲಾಖೆಯವರೂ ಹಣವನ್ನು ಕೊಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಬಿಜಾಪುರದ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರ್ಣ ಮಾಡುತ್ತೀರೆಂಬ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಅದನ್ನು ತಾತ್ವಿಕವಾಗಿ ಒಪ್ಪಿಕೊಂಡು 86 ಕೋಟಿ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಮಹಾರಾಷ್ಟ್ರದಲ್ಲಿರುವಂತೆ ಇಪ್ಪತ್ತು ಸಾವಿರ ಜನಸಂಖ್ಯೆಗೆ ನಳಗಳ ಮೂಲಕ ಉಚಿತವಾಗಿ ನೀರನ್ನು ಒದಗಿಸಲು ಸರ್ಕಾರ ಐವತ್ತು ಪರ್‌ಸೆಂಟ್ ಹಣವನ್ನು ಹಣಕಾಸು ಸಂಸ್ಥೆಗಳಿಂದ ಐವತ್ತು ಪರ್‌ಸೆಂಟ್ ಹಣವನ್ನು ತೊಡಗಿಸಿ ಕೆಲಸ ಮಾಡತಕ್ಕದ್ದು. ಇವತ್ತು ಬಹುತೇಕ ಪುರಸಭೆಗಳು ತಾವೇನು ಹಣದ ಪಾಲನ್ನು ಕೊಡಬೇಕೋ ಅದನ್ನು ಕೊಡುವ ಶಕ್ತಿಯಿಲ್ಲವೆನ್ನುವ ವಿಚಾರ ತಿಳಿದುಬಂದಿದ್ದು ಏಕರೂಪದ ನೀರಿನ ದರವನ್ನು ಹಾಕುವ ವಿಚಾರ ಸಚಿವಸಂಪುಟದ ಮುಂದಿದೆ. ಐವತ್ತು ಸಾವಿರದಿಂದ ಒಂದು ಲಕ್ಷದವರೆಗೆ ಜನಸಂಖ್ಯೆಯುಳ್ಳ ಪಟ್ಟಣಗಳಿಗೆ ನೀರನ್ನು ಒದಗಿಸುವಲ್ಲಿ ಅಲ್ಲಿನ ಪುರಸಭೆಗಳು ಹಣವನ್ನು ಕೊಡಲು ಶಕ್ತಿಯಿಲ್ಲದಿರುವುದರಿಂದ ಸರ್ಕಾರವೇ ಉಚಿತವಾಗಿ ನೀರನ್ನು ಒದಗಿಸಲು ಆ ಹಣಕ್ಕೆ ವಿನಾಯಿತಿಯನ್ನು ಕೊಡುವ ವಿಚಾರವು ಸಚಿವ ಸಂಪುಟದ ಮುಂದಿದೆ. ಅದರ ಬಗ್ಗೆ ತೀರ್ಮಾನವಾಗಬೇಕಾಗಿದೆ. ಆಕ್ಟ್ರಾಯನ್ನು ತೆಗೆದ ಮೇಲೆ ಪುರಸಭೆಗಳು, ಪಟ್ಟಣ ಪ್ರದೇಶದ ನಗರ ಪಾಲಿಕೆಗಳು ನೌಕರರಿಗೆ ಸಂಬಳವನ್ನು ಕೊಡಲೂ ಹಣವಿಲ್ಲದಂಥ ಆರ್ಥಿಕ ಪರಿಸ್ಥಿತಿಯನ್ನು ಹೊಂದಿರುವುದು ನಮಗೆ ಗೊತ್ತಿದೆ. ಅವುಗಳ ಆರ್ಥಿಕ ದುಸ್ಥಿತಿಯಿಂದಾಗಿ ನೀರಿಗೆ ಕೊಡಬೇಕಾಗಿದ್ದ ಹಣವನ್ನು ಹಲವಾರು ಪುರಸಭೆಗಳು ಸರ್ಕಾರಕ್ಕೆ ತುಂಬಿಲ್ಲ. ತಾವೇ ಹೇಳಿದಂತೆ ಬಿಜಾಪುರದ ನಗರ ಪಾಲಿಕೆಯವರು 6 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ತುಂಬಿಲ್ಲ. ಈ ವಿಷಯದ ಬಗ್ಗೆ ಸಮಗ್ರವಾಗಿ ಅರಿತು ಸಚಿವ ಸಂಪುಟದ ಮುಂದೆ ಇದನ್ನು ತಂದು ಒಂದು ಪಾಲಿಸಿ ಡಿಸಿಷನ್‌ನ್ನು ತೆಗೆದುಕೊಳ್ಳಬೇಕಾಗಿದೆ. ಆ ದೃಷ್ಟಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಸಿ. ಮನಗೋಳಿ (ಸಿಂಧಗಿ) :- ಮಾನ್ಯ ಅಧ್ಯಕ್ಷರೆ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳು ಬರಗಾಲದ ತಾಲ್ಲೂಕುಗಳಾಗಿವೆ. ಇಲ್ಲಿನ ಅಂತರ್‌ಜಲದ ಮಟ್ಟ ಬಹಳ ಕೆಳಗೆ ಹೋಗಿದೆ. ಸಿಂಧಗಿಯಲ್ಲಿ 33 ಬೋರ್‌ವೆಲ್‌ಗಳನ್ನು ಹಾಕಲಾಗಿದ್ದರೂ ಎಲ್ಲವೂ ವಿಫಲವಾಗಿದೆ. ನಾಲ್ಕು ನೂರು ಅಡಿಯವರೆಗೆ ಕೊರೆದರೂ ನೀರು ಬರುವುದಿಲ್ಲ. ಅಂಥ ಸ್ಥಿತಿ ಇದ್ದಾಗಲೂ ಸರ್ಕಾರ ಕಳೆದ ವರ್ಷ 15 ರಿಂದ 20 ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ಆದರೂ ನೀರು ಸಿಕ್ಕಿಲ್ಲ ಅದಕ್ಕಾಗಿ ಇಲ್ಲಿಗೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆಯನ್ನು ಕೊಡಬೇಕಾಗಿದೆ. ಸಿಂಧಗಿ ಪಟ್ಟಣದ ಎಂಟು

ಕಿಲೋಮೀಟರ್ ದೂರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಮುಖ ನಾಲೆ ಬರುತ್ತಿದೆ. ಅಲ್ಲಿಂದ ಸಿಂಧಗಿ ಪಟ್ಟಣದಲ್ಲಿ ನೀರನ್ನು ಒದಗಿಸಬೇಕೆಂದು ಯೋಜನೆ ಮಾಡಿ ಅದಕ್ಕೆ 6 ಕೋಟಿ 10 ಲಕ್ಷದ ಪ್ಲಾನ್ ಎಸ್ಟಿಮೇಟನ್ನು ಅಧಿಕಾರಿಗಳು ಮಾಡಿ ಈಗಾಗಲೇ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರ ಬಗ್ಗೆ ಸಚಿವ ಸಂಪುಟದಲ್ಲಿ ಮಂಜೂರಾದರೆ ಸಿಂಧಗಿ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆ ಯಾಗುತ್ತದೆ. ಆ ಉದ್ದೇಶದಿಂದ ಶಾಶ್ವತವಾಗಿ ಒಂದು ಕೆರೆಯನ್ನು ಮಾಡಬೇಕು, ಕೆರೆಯಲ್ಲಿ ನೀರನ್ನು ಸಂಗ್ರಹ ಮಾಡಬೇಕು, ಕೆರೆಯಿಂದ ಮೂರು ತಿಂಗಳು ನೀರನ್ನು ತೆಗೆದುಕೊಂಡು ಉಳಿದ ಒಂಭತ್ತು ತಿಂಗಳು ನಾಲೆಯಿಂದ ನೀರನ್ನು ತೆಗೆದುಕೊಳ್ಳ ಬೇಕೆಂದು ಯೋಜನೆಯನ್ನು ತಯಾರು ಮಾಡಿ ಈಗಾಗಲೇ ಕಳಿಸಿಕೊಡಲಾಗಿದೆ. ಅದಕ್ಕೆ ಮಂಜೂರಾತಿ ಸಿಗತಕ್ಕ ಹಂತದಲ್ಲಿದೆ. ಅದಲ್ಲದೆ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಆದರೆ ಪುರಸಭೆಯವರು ಸರಿಯಾಗಿ ಕೆಲಸಮಾಡದೆ, ಸರಯಾಗಿ ನೀರನ್ನು ಬಿಡದಿರುವುದರಿಂದ ನೀರು ನಷ್ಟವಾಗುವುದರಿಂದ ಎಷ್ಟೋ ರೈತರಿಗೆ, ಜನರಿಗೆ ತೊಂದರೆಯಾಗುತ್ತಿದೆ ಎಂಬುವ ವಿಚಾರವನ್ನು ಮುಂದಿ ಡುತ್ತಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಬಿಜಾಪುರ ನಗರ ಕುಡಿಯುವ ನೀರಿನ ಯೋಜನೆಯ ಅಡಿಯಲ್ಲಿ ಬಿಜಾಪುರ ನಗರಪಾಲಿಕೆಯವರು ಅವರ ವಂತಿಕೆಯಾಗಿ ಆರು ಕೋಟಿ ರೂಪಾಯಿಗಳನ್ನು ತುಂಬಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಅಲ್ಲಿನ ನಗರಾಭಿವೃದ್ಧಿ ಇಲಾಖೆಯಲ್ಲಿ ಹಣವಿತ್ತು. ಅವರು ಇವತ್ತು ಒಂದು ಕೋಟಿ ರೂಪಾಯಿಗಳನ್ನು ಈಜುಕೊಳಕ್ಕೆ ಮತ್ತು ಮೂವತ್ತೇಳು ಲಕ್ಷ ರೂಪಾಯಿಗಳನ್ನು ಗಾರ್ಡನ್‌ಗೆ ಖರ್ಚು ಮಾಡುತ್ತಿದ್ದಾರೆ. ಇದು ಸಚಿವರ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಈಜುಕೊಳ ಮತ್ತು ಗಾರ್ಡನ್‌ಗೆ ಕುಡಿಯುವ ನೀರಿಗಿಂತ ಅಗತ್ಯತೆ ಇತ್ತೇ? ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ಇದರ ಬಗ್ಗೆ ಸ್ಥಳೀಯ ಶಾಸಕರು ಲೋಕಾಯುಕ್ತಕ್ಕೆ ವಿಚಾರಣೆ ಮಾಡಲು ಒತ್ತಾಯ ಮಾಡಿ ಲೋಕಾಯುಕ್ತದಿಂದ ಆದರ ಬಗ್ಗೆ ಪರಿಶೀಲನೆ ಮಾಡಿ ಇನ್ನೂ ವರದಿ ಬಂದಿಲ್ಲ. ನಗರಸಭೆಯವರು ಒಂದು ಕಾರಣವನ್ನು ಬೇಡಿದರೆ ಎರಡು ವರ್ಷವಾದರೂ ಅದಕ್ಕೆ ಹೆಚ್.ಯು.ಡಿ.ಯವರು ಅನುಮತಿ ಕೊಡಲಿಲ್ಲ. ಆದರೆ ಐವತ್ತು ಲಕ್ಷ ರೂಪಾಯಿ ಗಳ ಈಜುಕೊಳಕ್ಕೆ ಒಂದೇ ದಿನದಲ್ಲಿ ಮಂಜೂರಾತಿ ಕೊಡುತ್ತಾರೆ. 1995-96 ರ ಬಜೆಟ್‌ನಲ್ಲಿ ಅವರು ಇದನ್ನು ಪ್ರಾವಿಜನ್ ಮಾಡಿಕೊಂಡಿದ್ದರೆ? ಈಜುಕೊಳಕ್ಕೆ ಐವತ್ತು ಲಕ್ಷ ನಗರಾಭಿವೃದ್ಧಿಯವರು ನಲವತ್ತು ಲಕ್ಷ ರೂಪಾಯಿಗಳನ್ನು ಕೇಂದ್ರದವರು ಕೊಡ ಬೇಕಾಗಿತ್ತು. ಕೇಂದ್ರ ಸರ್ಕಾರದವರು ನಲವತ್ತು ಲಕ್ಷ ರೂಪಾಯಿಗಳನ್ನು ಕೊಡುವುದಿಲ್ಲ ವೆಂದು ಹೇಳಿದ್ದರೂ ಇವರು ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳೂ ಇದರಲ್ಲಿ ಶಾಮೀಲಾಗಿದ್ದಾರೆ. ಮತ್ತು ಹೆಚ್.ಯು.ಡಿ. ಕಾರ್ಯದರ್ಶಿ-(2) ರವರು ಒಂದೇ ದಿವಸದಲ್ಲಿ ಮಂಜೂರಾತಿ ನೀಡಿದ್ದಾರೆ. ಕೇಂದ್ರ ಸರ್ಕಾರ ನಮಗೆ ನಲವತ್ತು ಲಕ್ಷ ರೂಪಾಯಿಗಳನ್ನು ಕೊಡಲು ಆಗುವುದಿಲ್ಲ, ತಾವು ಈ ಕೆಲಸವನ್ನು

ಕೈಗೆತ್ತಿಕೊಳ್ಳಬೇಡಿ ಎಂದಿದ್ದಾರೆ. ಆದರೂ ಇವರು ಮಂಜೂರಾತಿ ಕೊಡುತ್ತಾರೆ. ಆದ್ದರಿಂದ ನಗರಾಭಿವೃದ್ಧಿ ಇಲಾಖೆಯಲ್ಲಿ ಎಂಥ ತಪ್ಪು ನಡೆಯುತ್ತದೆ ಎಂಬ ಬಗ್ಗೆ ಪರಿಶೀಲನೆ ಮಾಡಿ ನೋಡಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶಿವಾನಂದರವರು ಅಲ್ಲಿನ ಈಜುಕೊಳದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಯಾವ ಮಾಹಿತಿ ಇಲ್ಲ ಅವರು ಪ್ರತ್ಯೇಕವಾಗಿ ಅಲ್ಲಾಗಿರುವ ಲೋಪದೋಷದ ಬಗ್ಗೆ ಬರವಣಿಗೆಯಲ್ಲಿ ಕೊಟ್ಟರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇಂಡಿ ತಾಲ್ಲೂಕಿಗೆ ನಾಲೆಯಿಂದ ನೀರನ್ನು ಕೊಡುವ ಬಗ್ಗೆ ಮಾನ್ಯ ಮನಗೋಳಿಯವರು ಕೇಳಿದ್ದಾರೆ ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ 86 ಕೋಟಿ ಯೋಜನೆಯನ್ನು ಸರ್ಕಾರದಿಂದ ಕೊಡುವ ಸಹಾಯಧನ ಮತ್ತು ಫಂಡಿಂಗ್ ಪ್ಯಾಟ್ರನ್ ಸಂಸ್ಥೆಗಳು ನೀಡುವ ಹಣವನ್ನು ಒಟ್ಟಾಗಿ ಸೇರಿಸಿ ಟೋಕನ್ ಹಣವನ್ನು ಇಟ್ಟಿರುವುದರಿಂದ ಈ ಕೆಲಸವಾಗುತ್ತದೆ, ತಡವಾಗುವುದಿಲ್ಲ. ಇಂಡಿ ಮತ್ತು ಸಿಂಧಗಿ ತಾಲ್ಲೂಕಿನ ನೀರಿನ ಸಮಸ್ಯೆ ನನಗೆ ಗೊತ್ತಿದೆ 29 ಪಟ್ಟಣಗಳಿಗೆ ಇಂಡಿವಿಜ್ಯುಯಲ್‌ಆಗಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡತಕ್ಕ ಕೆಲಸವನ್ನು ಮಾಡಿ ಆ ಯೋಜನೆಯನ್ನು ಪೂರ್ಣಗೊಳಿಸಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಆ ಈಜುಕೊಳದ ಬಗ್ಗೆ ಕೊನೆಪಕ್ಷ ತನಿಖೆಯನ್ನು ಮಾಡಿಸಬೇಕು.

ವಿಷಯ :- ಹುಬ್ಬಳ್ಳಿಯ ಅಶೋಕ ನಗರದ ಅಂಡರ್ ಬ್ರಿಡ್ಜ್ ನಿರ್ಮಾಣ ಕಾಮಗಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 222 (896)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) :- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯ ಅಶೋಕ ನಗರದ 'ಅಂಡರ್ ಬ್ರಿಡ್ಜ್' ಕಾರ್ಯ ಯಾವ ಹಂತದಲ್ಲಿದೆ?

ಆ) ಇದಕ್ಕಾಗಿ ಸರಕಾರದವರು ಯಾವ ಯಾವ ಮೂಲಗಳಿಂದ ಹಣ ಸಂಗ್ರಹಿಸಲು ನಿರ್ಧರಿಸಿದ್ದಾರೆ (ವಿವರ ನೀಡುವುದು)

ಶ್ರೀ ಮಿರಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

ಅ) ಅಶೋಕ ನಗರ ರೈಲ್ವೆ ಸೇತುವೆ ಕೆಲಸವು ರೈಲ್ವೆ ಇಲಾಖೆಯಿಂದ ಕೈಗೊಳ್ಳಲು ಯೋಚಿಸಲಾಗಿದೆ. ಸರ್ವೆ ಮಾಡುವ ಕೆಲಸವು ರೈಲ್ವೆ ಇಲಾಖೆಯಿಂದ

ಪ್ರಗತಿಯಲ್ಲಿದ್ದು, ವಿವರವಾದ ಕಾಮಗಾರಿಯ ನಕ್ಷೆಗಳನ್ನು ತಯಾರಿಸುವುದನ್ನು ರೈಲ್ವೆ ಇಲಾಖೆಯವರು ನಿರ್ವಹಿಸುತ್ತಿದ್ದಾರೆ.

ಆ) ಈ ಕೆಳಗೆ ವಿವರಿಸಿದಂತೆ ಹಣ ಸಂಗ್ರಹಿಸಲು ನಿರ್ಧರಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ ರೂ. 94,62,000.

1) ರೈಲ್ವೆ ಇಲಾಖೆ ಭರಿಸುವ ಮೊತ್ತ	- 34,50,500
2) ಹುಬ್ಬಳ್ಳಿ-ಧಾರವಾಡ ಮಹಾ ನಗರಪಾಲಿಕೆ ಭರಿಸುವ ಮೊತ್ತ	- 35,11,500
3) ನಗರಾಭಿವೃದ್ಧಿ ಪ್ರಾಧಿಕಾರದಿಂದ ಭರಿಸಲು ವಿನಂತಿಸಿದ ಮೊತ್ತ	- 25,00,000
ಒಟ್ಟು ಮೊತ್ತ	- 94,62,000

ಶ್ರೀ ಅಶೋಕ ಕಾಟವೆ :- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ನಗರದ ಅಶೋಕ ನಗರದ 'ಅಂಡರ್ ಬ್ರಿಡ್ಜ್' ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಕಳೆದ ಇಪ್ಪತ್ತು ವರ್ಷಗಳಿಂದ ಆ ಬ್ರಿಡ್ಜ್‌ನ ಗೇಟಿನ ಮತ್ತೊಂದು ಭಾಗದಲ್ಲಿರುವ ಪ್ರಮುಖವಾದ ವಿಶ್ವೇಶ್ವರನಗರ, ಅಶೋಕ ನಗರ, ವಿಜಯನಗರ, ಭವಾನಿನಗರ ಮುಂತಾದವುಗಳಿಗೆ ಸಂಬಂಧಪಡುವಂಥ ಬ್ರಿಡ್ಜ್ ಇದೆ. ರೈಲ್ವೆನವರು ಬ್ರಾಡ್‌ಗೇಜ್ ಮಾಡಿದ್ದಾರೆ. ರೈಲುಗಳು ಮೇಲೆ ಹೋಗುವುದರಿಂದ ಗಂಟೆಗಟ್ಟಲೆ ಜನರು ನಿಲ್ಲಬೇಕಾದ ಪ್ರಸಂಗವಾಗಿರುತ್ತದೆ. ಆ ಸೇತುವೆಯ ಕೆಲಸವನ್ನು ಸಂಪೂರ್ಣ ಮಾಡಲು ರೈಲ್ವೆಯವರು 34,50,500 ರೂ. ಹುಬ್ಬಳ್ಳಿ ಮಹಾ ನಗರ ಪಾಲಿಕೆಯವರು 35,11,500 ರೂ. ನಗರಾಭಿವೃದ್ಧಿ ಪ್ರಾಧಿಕಾರದವರು 25,00,000 ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಕೆಲಸ ಆದಷ್ಟು ಬೇಗ ಮಾಡಲು ಪಾಲಿಕೆಗೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ :- ಮಾನ್ಯ ಅಧ್ಯಕ್ಷರೇ, ಅಶೋಕ ನಗರ ಅಂಡರ್ ಬ್ರಿಡ್ಜ್‌ನ್ನು ಮೂರು ಏಜೆನ್ಸಿ ಸೇರಿ ಮಾಡಬೇಕಾದ ಕೆಲಸವಾಗಿದೆ. ಪ್ರಾರಂಭಿಕ ಕೆಲಸವನ್ನು ರೈಲ್ವೆ ಇಲಾಖೆಯವರು ಮಾಡಬೇಕಾಗಿದೆ. ಅವರು ಕೆಲಸ ಪ್ರಾರಂಭ ಮಾಡಿದ ಮೇಲೆ ನಗರಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದವರು ಶೇರು ಹಣವನ್ನು ಕೊಟ್ಟು ಕೆಲಸ ಮಾಡಬೇಕಾಗಿದೆ. ರೈಲ್ವೆಯವರು ಪ್ರಾರಂಭಿಕ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಪ್ಲಾನ್, ಎಸ್ಟಿಮೇಟ್ ಮಾಡುವಲ್ಲಿ ವಿಳಂಬವಾಗಿತ್ತು, ಅದನ್ನು ಮಾಡಲಾಗಿದೆ. ನಗರಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರವೇನು ತನ್ನ ಪಾಲಿನ ಹಣವನ್ನು ಕೊಡಬೇಕೋ ಅದನ್ನು ಬಿಡುಗಡೆ ಮಾಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಸಿ. ಸಿದ್ಧನಗೌಡರ್ :- ಮಾನ್ಯ ಅಧ್ಯಕ್ಷರೇ, ಈ ಅಂಡರ್ ಬ್ರಿಡ್ಜ್ ಮಾಡುವುದು ಡಿಲೇ ಆಗುವುದಕ್ಕಿಂತ ಪೂರ್ವದಲ್ಲಿ ಅಲ್ಲಿ ಕಾರ್ಪೋರೇಷನ್‌ರವರು ಇರತಕ್ಕಂತಹ ಜಾಗದಲ್ಲಿ ಬಿಲ್ಡಿಂಗ್ ಕಟ್ಟಲು ಪರ್ಮಿಷನ್ ಕೊಡುವುದರಿಂದ ತೊಂದರೆ ಯಾಗುತ್ತದೆ. ನಾನು ಶಾಸಕರು, ಅಧಿಕಾರಿಗಳು ಜೊತೆಯಲ್ಲಿ ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೇನೆ. ಸನ್ಮಾನ್ಯ ಸಚಿವರು ಆದಷ್ಟು ಬೇಗನೇ ಆ ಸ್ಥಳಕ್ಕೆ ಭೇಟಿ ಕೊಟ್ಟು ಕ್ರಮ ಕೈಗೊಳ್ಳಬೇಕು. ಡಿಲೇ ಮಾಡುವುದರಿಂದ ಅಲ್ಲಿ ಬಿಲ್ಡಿಂಗ್ ಬರುತ್ತದೆ. ಆ ಮೇಲೆ ಬ್ರಿಡ್ಜ್ ಮಾಡುವುದಕ್ಕೆ ಬರುವುದಿಲ್ಲ. ಕೆ.ಎಂ.ಸಿ. ಇರುವುದರಿಂದ ವೆಹಿಕಲ್ಸ್ ಎಲ್ಲಾ ಹಾಸ್ಪಿಟಲ್‌ನಲ್ಲೇ ನಿಲ್ಲುತ್ತವೆ. ರೈಟ್ ಸೈಡ್ ಸ್ಕೂಲ್ ಕೂಡ ಇರುವುದರಿಂದ, ಆ ಮಕ್ಕಳಿಗೆ ತೊಂದರೆಯಾಗುತ್ತದೆ. ತಾವು ತಕ್ಷಣ ಒಂದು ಮೀಟಿಂಗ್ ಮಾಡಿ ಕ್ರಮ ತೆಗೆದುಕೊಂಡರೆ ತೀವ್ರಗತಿಯಲ್ಲಿ ಈ ಕೆಲಸ ಆಗುತ್ತದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ಧನಗೌಡರ್‌ರವರು ನೀಡಿದ ಸಲಹೆಯ ಪ್ರಕಾರ ನಾನು ಆ ಸ್ಥಳಕ್ಕೆ ಭೇಟಿ ನೀಡಿ, ಕಾರ್ಪೋರೇಷನ್‌ರವರನ್ನು ಕರೆಯಿಸಿ, ಯಾವ ಕಾರಣಕ್ಕೆ ಅಲ್ಲಿ ಡಿಲೇ ಆಗುತ್ತಿದೆ ಎಂಬುದನ್ನು ತಿಳಿದು, ಅದನ್ನು ಕ್ಷಿಪ್ರಗತಿಯಲ್ಲಿ ಕೈಗೊಳ್ಳಲು ಒತ್ತಡ ತರುತ್ತೇನೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಈ ರೈಲ್ವೆದವರು ಈಗಾಗಲೇ ಸರ್ವೆ ಎಲ್ಲಾ ಮಾಡಿ ಬಿಟ್ಟಿದ್ದಾರೆ. ಸರ್ವೆಯಾದ ಮೇಲೆ ಅವರು ಸುಮಾರು 94 ಲಕ್ಷ ಎಂದು ಕಾಸ್ಟು ಸಹಿತ ಎಸ್ಟಿಮೇಟ್ ಮಾಡಿದ್ದಾರೆ. ಈಗ ಟೆಂಡರ್ ಕರೆದು ಕೆಲಸ ಮಾಡುವುದೊಂದೇ ಬಾಕಿಯಿದೆ. ರೈಲ್ವೆದವರು ಕಾರ್ಪೋರೇಷನ್‌ಗೆ ಮತ್ತು ಡೆವಲಪ್‌ಮೆಂಟ್ ಅಥಾರಿಟಿಗೆ ದಿನಾಂಕ 12.12.95 ಕ್ಕೆ ಪತ್ರ ಬರೆದಿದ್ದಾರೆ. ನಮ್ಮದ್ದೆಲ್ಲಾ ಸರ್ವೆ ಮಾಡುವುದು ಎಲ್ಲಾ ಮುಗಿದುಹೋಗಿದೆ, ಕಾಸ್ಟ್ ಕೂಡ ಎಸ್ಟಿಮೇಟ್ ಮಾಡಿ ದ್ದೇವೆ. ಅದಕ್ಕೆ ಶೇಕಡ 80 ರಷ್ಟು ಹಣವಾದ 48 ಲಕ್ಷ ರೂ. ಗಳನ್ನು ನಿಮ್ಮ ಪಾಲಿನದು ತುಂಬಿ ಬಿಡಿ, ನಾವು ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ದಿನಾಂಕ 12.12 .95 ಕ್ಕೆ ರೈಲ್ವೆದವರು ಪತ್ರ ಬರೆದಿದ್ದಾರೆ. ಆದರೆ ಇದುವರೆವಿಗೂ ಕಾರ್ಪೋರೇಷನ್‌ರವರು ಆ ಹಣವನ್ನು ತುಂಬಲಿಲ್ಲ. ಈಗಾಗಲೇ ಏಳು ತಿಂಗಳಾಯಿತು. ಇನ್ನೂ ಒಂದೆರಡು ವರ್ಷ ಇದು ಮುಂದಕ್ಕೆ ಹೋದರೆ ಕಾಸ್ಟ್ ಸಹಿತ ಏರಿಕೊಂಡು ಹೋಗುತ್ತದೆ. ಆಗ ಇದು ಕಾರ್ಯಗತವಾಗುವುದೇ ಇಲ್ಲ. ಈ ಬ್ರಿಡ್ಜ ಸಲುವಾಗಿ ಮಾನ್ಯ ಸಿದ್ಧನಗೌಡರ್‌ರವರು ನಮಗೆ ಬಹಳ ಸಹಕಾರ ನೀಡಿದ್ದಾರೆ. ಈ ಅಶೋಕನಗರ ಗೇಟ್‌ಅನ್ನು ದಾಟಿಯೇ ಮಾನ್ಯ ಸಿದ್ಧನಗೌಡರ್‌ರವರು ತಮ್ಮ ಮನೆಗೆ ಹೋಗಬೇಕು. ಕೇಂದ್ರ ಸಚಿವರಾದ ಮಾನ್ಯ ಬೊಮ್ಮಾಯಿಯವರೂ ಸಹಿತ ತಮ್ಮ ಮನೆಗೆ ಈ ಗೇಟ್ ದಾಟಿಯೇ ಹೋಗಬೇಕಾಗಿದೆ.

ಅಲ್ಲದೆ ಲಕ್ಷಗಟ್ಟಲೆ ಜನರು ದಿನವೂ ಆ ಗೇಟಿನ ಮುಖಾಂತರವೇ ಹಾದು ಹೋಗ ಬೇಕಾಗುತ್ತದೆ. ತಾಸುಗಟ್ಟಲೆ ವಾಹನಗಳು ನಿಲ್ಲಬೇಕಾಗುತ್ತದೆ. ಬ್ರಾಡ್‌ಗೇಜ್ ಆಗಿರುವುದ ರಿಂದ ಬಹಳಷ್ಟು ಜನರಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ತಕ್ಷಣ ಒಂದು ಕ್ರಮವನ್ನು ಕೈಗೊಳ್ಳಬೇಕು. ಮಹಾನಗರ ಪಾಲಿಕೆ ತಕ್ಷಣ ತನ್ನ ಪಾಲಿನ ಅಮೌಂಟ್ ರಿಲೀಸ್ ಮಾಡಲಿಕ್ಕೆ ಮಾನ್ಯ ಸಚಿವರು ದಯವಿಟ್ಟು ಆದೇಶ ನೀಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :- ಮಾನ್ಯ ಅಧ್ಯಕ್ಷರೇ, ಇದೇ ಪ್ರಕಾರ ಧಾರವಾಡದ ಅತ್ತಿಕೊಳ್ಳದಲ್ಲಿ ಒಂದು ರೈಲ್ವೆ ಬ್ರಿಡ್ಜ್ ಆಗುವುದು ತಡವಾಗುತ್ತಿದೆ. ಆದಕ್ಕಾಗಿ ಜನ ಬೇಕಾದಷ್ಟು ಹೋರಾಟ ಮಾಡುತ್ತಿದ್ದಾರೆ. ರೈಲ್ವೇಸ್‌ನವರು ಇದನ್ನೂ ಸಹಿತ ಬಂದ್ ಮಾಡಿದ್ದಾರೆ.

ಅಧ್ಯಕ್ಷರು :- ಈಗ ನಮ್ಮ ಮುಂದೆ ಇರುವ ಪ್ರಶ್ನೆ ಅಶೋಕ್ ನಗರದ ಬ್ರಿಡ್ಜ್ ನಿರ್ಮಿಸುವ ಕುರಿತದ್ದಾಗಿದೆ. ತಾವು ಪ್ರಸ್ತಾಪಿಸುತ್ತಿರುವ ವಿಷಯ ನಮ್ಮ ಮುಂದಿಲ್ಲ. ಅದನ್ನೇಕೆ ಇಲ್ಲಿ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಚಂದ್ರಕಾಂತ್ ಬೆಲ್ಲದ್ :- ಇದೂ ಕೂಡ ರೈಲ್ವೆ ಮತ್ತು ಮಹಾ ನಗರಪಾಲಿಕೆಗೆ ಸಂಬಂಧಪಟ್ಟ ವಿಚಾರವಾಗಿದೆ.

ಅಧ್ಯಕ್ಷರು :- ತಾವು ಹೇಳುವುದು ಸರಿ, ಆದರೆ ಇವರು ರೈಲ್ವೆ ಮಂತ್ರಿಯಲ್ಲ, ಇವರು ಪೌರಾಡಳಿತ ಮಂತ್ರಿಗಳಾಗಿದ್ದಾರೆ. ಅಶೋಕ್‌ನಗರ ಬ್ರಿಡ್ಜ್‌ಗೆ ಪೌರಾಡಳಿತ ಇಲಾಖೆಯಿಂದ ವಂತಿಕೆಗೆ ಕೊಡುವುದನ್ನು ಮಾತ್ರ ನಾವಿಲ್ಲಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :- ಮಾನ್ಯ ಅಧ್ಯಕ್ಷರೇ, ಧಾರವಾಡದ ಅತ್ತಿಕೊಳ್ಳದ ಬ್ರಿಡ್ಜ್‌ಗೂ ಸಹಿತ ನಗರಸಭೆಯವರು ತಮ್ಮ ನಗರಸಭೆಯವರು ತಮ್ಮ ವಂತಿಕೆಗೆ ಹಣವನ್ನು ಕೊಡಬೇಕಾಗಿದೆ.

ಶ್ರೀ ಮಿರಾಜುದ್ದೀನ್ ಎಸ್ ಪಟೇಲ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲಿ ಬ್ರಿಡ್ಜ್ ನಿರ್ಮಿಸುವ ಬಗ್ಗೆ ರೈಲ್ವೆ ಇಲಾಖೆ, ನಗರಸಭೆ ಮತ್ತು ಅರ್ಬನ್ ಡೆವಲಪ್‌ಮೆಂಟ್ ಇಲಾಖೆ ಈ ಮೂವರ ನಡುವೆ ಒಂದು ಜಂಟಿ ಒಪ್ಪಂದವಾಗಿದೆ. ಅದರ ಪ್ರಕಾರ ರೈಲ್ವೆಯವರು 34 ಲಕ್ಷ 50 ಸಾವಿರ ದುಡ್ಡು ಸ್ಪೆಂಡ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಕಾರ್ಪೋರೇಷನ್ನಿನವರೂ ಸಹ ಒಪ್ಪಂದದ ಪ್ರಕಾರ ಅವರು ಎಷ್ಟು ದುಡ್ಡು ಕೊಡಬೇಕೋ ಅಷ್ಟು ದುಡ್ಡನ್ನು ಕೊಡುತ್ತಾರೆ. ಮಾನ್ಯ ಸದಸ್ಯರು ಹಾಗೂ ಮಾನ್ಯ ಸಿದ್ಧನಗೌಡರ್‌ರವರು ಸಲಹೆ ನೀಡಿದ ಪ್ರಕಾರ ನಾನು ತಮ್ಮೆಲ್ಲರನ್ನೂ ಕರೆದು ಈ ಬಗ್ಗೆ ಚರ್ಚಿಸಿ ಕಾರ್ಪೋರೇಷನ್ ವತಿಯಿಂದ ಏನು ವಂತಿಗೆ ಕೊಡಬೇಕೋ ಅದನ್ನು ನೀಡಲು ಆದಷ್ಟು ಬೇಗ ಕ್ರಮ ಕೈಗೊಂಡು ತುರ್ತಾಗಿ ಕೆಲಸ ಪ್ರಾರಂಭಿಸಲು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು :- ಯಾರಾದರೂ ಸದಸ್ಯರು ಗೈರು ಹಾಜರಾಗುವುದಿದ್ದರೆ ಅವರು ನನಗೆ ಮೊದಲೇ ಬರೆದು ತಿಳಿಸಬೇಕು. ನಾನು ಇಂತಹ ದಿವಸ ಬರುವುದಕ್ಕೆ ಆಗುವುದಿಲ್ಲ. ನನ್ನ ಪರವಾಗಿ ಪ್ರಶ್ನೆಯನ್ನು ಕೇಳಲು ನಾನು ಇಂತಹವರಿಗೆ ಅಥರೈಸ್ ಮಾಡುತ್ತಿದ್ದೇನೆ ಎಂದು ಅವರು ಮೊದಲೇ ನನಗೆ ತಿಳಿಸಿದ್ದಲ್ಲಿ ಮಾತ್ರ, ನಾನು ಅವರ ಹೆಸರಿನಲ್ಲಿರತಕ್ಕಂತಹ ಪ್ರಶ್ನೆಯನ್ನು ಬೇರೆಯವರು ಕೇಳುವುದಕ್ಕೆ ಅನುಮತಿ ಕೊಡುತ್ತೇನೆ. ಮಾನ್ಯ ಸದಸ್ಯರು ಈ ಪ್ರೋಸೀಜರ್ ತಿಳಿದುಕೊಂಡಿದ್ದರೆ ಒಳ್ಳೆಯದು. ಪ್ರೋಸೀಜರ್ ಗೊತ್ತಾಗಲಿ ಎಂಬ ದೃಷ್ಟಿಯಿಂದ ನಾನಿದನ್ನು ಹೇಳಬೇಕಾಯಿತು.

ವಿಷಯ :- ಹುಬ್ಬಳ್ಳಿ ಮಹಾನಗರದ ಸ್ಮಶಾನ ಭೂಮಿ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 225 (756)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಮಹಾನಗರದ ನಾಗಶೆಟ್ಟಿಕೊಪ್ಪ ಮತ್ತು ಬೆಂಗೇರಿ ಭಾಗದಲ್ಲಿ ಕೇಶ್ವಾಪುರ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಆ ಭಾಗದಲ್ಲಿ ಹೊಸ ಸ್ಮಶಾನ ಪ್ರದೇಶ ನಿರ್ಮಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

ಅ) ಬಂದಿದೆ.

ಆ) ಹುಬ್ಬಳ್ಳಿ ಮಹಾನಗರದ ನಾಗಶೆಟ್ಟಿ ಕೊಪ್ಪ ಮತ್ತು ಬೆಂಗೇರಿ ಭಾಗದಲ್ಲಿಯ ನಾಗರೀಕರಿಗೆ ಪ್ರತ್ಯೇಕವಾದ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದನ್ನು ಮನಗಂಡು ಈಗಾಗಲೇ ಬೆಂಗೇರಿ ಗ್ರಾಮದ ರಿಸ ಸಂ. 27 ಜಮೀನು ಪೈಕಿ 4 ಎಕರೆ ವಿಸ್ತೀರ್ಣವುಳ್ಳ ಖಾಸಗಿ ಮಾಲಿಕತ್ವದ ಪ್ರದೇಶವನ್ನು ಕಡ್ಡಾಯವಾಗಿ ಭೂಸ್ವಾಧೀನ ಮಾಡಿಕೊಳ್ಳುವ ಕುರಿತು ನಿರ್ಣಯಿಸಿದ್ದು, ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ಬೆಂಗೇರಿ ಮತ್ತು ನಾಗಶೆಟ್ಟಿಕೊಪ್ಪ ಗ್ರಾಮದ ಹಾದಿಯಲ್ಲಿರತಕ್ಕಂತಹ ಜನರಿಗೆ ಸ್ಮಶಾನ ಪ್ರದೇಶದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಂಡು ಸರ್ವೆ ನಂಬರ್ 27 ನ್ನು ಅಕ್ವೈರ್ ಮಾಡುವ ಸಲುವಾಗಿ ಪ್ರೋಸೀಡಿಂಗ್ಸ್ ಶುರು ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅಲ್ಲಿ

ಸ್ಮಶಾನ ಅತ್ಯಾವಶ್ಯಕವಾಗಿದೆ. ಈಗಾಗಲೇ ಅಲ್ಲಿ ನೂರಾರು ಬಡಾವಣೆಗಳು ಬಂದು ಲಕ್ಷಾಂತರ ಜನ ವಾಸವಾಗಿದ್ದಾರೆ. ಇದರಿಂದ ಸ್ಮಶಾನ ಇಲ್ಲದೇ ಅಲ್ಲಿ ಬಹಳ ತೊಂದರೆಯಾಗಿರುತ್ತದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಆದಷ್ಟು ಜಾಗ್ರತೆ ಸರ್ವೆ ನಂಬರ್ 27 ಅನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಆದಷ್ಟು ಬೇಗ ಅಲ್ಲಿ ಸ್ಮಶಾನ ಭೂಮಿ ಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ನಾಗಶೆಟ್ಟಿ ಕೊಪ್ಪ ಬೆಂಗೇರಿ ಕೇಶ್ವಾಪುರ ಭಾಗದಲ್ಲಿ ಯಾವುದೇ ಸ್ಮಶಾನ ಇಲ್ಲದ ಕಾರಣ ಜನರು ಪ್ರೈವೇಟ್ ಲ್ಯಾಂಡ್‌ಗಳಲ್ಲಿ ಹೆಣಗಳನ್ನು ದಫನ್ ಮಾಡುತ್ತಿದ್ದಾರೆ. ಆದರೆ ಪ್ರೈವೇಟ್ ಲ್ಯಾಂಡ್‌ಗಳ ಓನರ್‌ಗಳು ಇದಕ್ಕೆ ತಕರಾರು ಮಾಡುತ್ತಿದ್ದಾರೆ. ಆದ ಕಾರಣ ಕಾರ್ಪೊರೇಷನ್ ಸರ್ವೆ ನಂಬರ್ 27 ರಲ್ಲಿ ಜಾಗವನ್ನು ಸ್ಮಶಾನದ ಸಲುವಾಗಿ ನಾನು ಒಮ್ಮೆ ಅಲ್ಲಿಗೆ ಭೇಟಿ ಕೊಟ್ಟು ಈ ಕೆಲಸವನ್ನು ಜಾಗ್ರತೆ ಮಾಡಿಸುತ್ತೇನೆ.

ವಿಷಯ :- ಅಂಕೋಲ ಪುರಸಭೆಗೆ ಅನುದಾನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 213 (1307)

ಶ್ರೀ ಕೆ. ವಿಶ್ವೇಶ್ವರ ಹೆಗಡೆ, (ಅಂಕೋಲಾ) :- ಮಾನ್ಯ ಪೌರಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಅಂಕೋಲಾ ಪುರಸಭೆಗೆ 94-95, 95-96 ಕ್ಕೆ ನೀಡಿದ ಅನುದಾನವೆಷ್ಟು?

2) ಅನುದಾನ ಯಾವ ಯಾವ ಬಾಬ್ತಿಗಾಗಿ ನೀಡಲಾಗಿದೆ. (ವಿವರ ನೀಡುವುದು)

3) 1996-97 ಅಂಕೋಲಾ ಪುರಸಭೆಗೆ ಯಾವ ಯಾವ ಯೋಜನೆಗೆ ಹಣ ಮಂಜೂರಾಗಿದೆ?

4) ಬೆಳೆಯುತ್ತಿರುವ ಅಂಕೋಲಾಕ್ಕೆ ಹೆಚ್ಚಿಗೆ ಅನುದಾನ ನೀಡುವ ಬಗ್ಗೆ ಸರ್ಕಾರ ದವರು ಕ್ರಮ ಕೈಗೊಳ್ಳುವರೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1)	1994-95	-	ರೂ. 17.02 ಲಕ್ಷಗಳು
	1995-96	-	ರೂ. 25.39 ಲಕ್ಷಗಳು

2.

ಬಾಬ್ತು	ರೂ. ಲಕ್ಷಗಳಲ್ಲಿ 94-95	95-96
1) ನೆಹರು ರೋಜ್‌ಗಾರ್ ಯೋಜನೆ	3.34	0.53
2) ಅಭಿವೃದ್ಧಿ ಅನುದಾನ	3.34	0.53
3) ಜಕಾತಿ ಅನುದಾನ	4.41	8.94
4) ಮನರಂಜನೆ ಕರ ಅನುದಾನ	1.10	0.35
5) ವಾಹನ ಕರ ಅನುದಾನ	3.40	6.80
6) ಬರ ಪರಿಹಾರ ನಿಧಿಯಿಂದ	1.50	-
7) ಸ್ಥಾವರ ಆಸ್ತಿ ವರ್ಗಾವಣೆ ಸ್ಟಾಂಪ್ ಡ್ಯೂಟಿ	0.27	0.44
ಒಟ್ಟು	17.02	25.39

3) 1) ಆಕ್ಟ್ರಾಯ್ ಅನುದಾನ	ರೂ.	9,32,000.00
2) ನೆಹರು ರೋಜ್‌ಗಾರ್ ಯೋಜನೆ		59,000.00
3) ಸ್ಟಾಂಪ್ ಶುಲ್ಕದ ಮೇಲೆ ಸರ್‌ಛಾರ್ಜ		11,766.00
4) ವಾಹನ ತೆರಿಗೆ ಅನುದಾನ		3,40,000.00
5) ಬರ ಪರಿಹಾರ ನಿಧಿ		2,74,000.00
6) ಮನರಂಜನೆ ತೆರಿಗೆ ಅನುದಾನ		1,10,000.00
7) ಹತ್ತನೆ ಹಣಕಾಸು ಆಯೋಗದ ಶಿಫಾರಸ್ಸು		4,00,000.00
	ಒಟ್ಟು	21,26,000.00

4) ರಾಜ್ಯ ಹಣಕಾಸು ಆಯೋಗವು ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹೆಚ್ಚಿಸುವ ಬಗ್ಗೆ ತನ್ನ ವರದಿಯನ್ನು ನೀಡಿದೆ. ರಾಜ್ಯ ಹಣಕಾಸು ಆಯೋಗದ ವರದಿಯನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ಮಾನ್ಯ ಅಧ್ಯಕ್ಷರೇ, 1995-96 ಮತ್ತು 1994-95 ಹಾಗೂ ಈ ವರ್ಷಕ್ಕೆ ಅನುದಾನ ಕೊಟ್ಟಿರುವುದನ್ನು ವಿವರ ಕೊಟ್ಟಿದ್ದಾರೆ. 1994-95 ಕ್ಕೆ 17 ಲಕ್ಷ, 1995-96 ಕ್ಕೆ 26 ಲಕ್ಷ ಎಂದು ವಿವರ ಕೊಟ್ಟಿದ್ದಾರೆ. ಆದರೆ

ಈ ವರ್ಷ 1996-97 ಕ್ಕೆ 21 ಲಕ್ಷ ಆಗಿದೆ. ಈ ವರ್ಷ ಅಂಕೋಲಾ ಪುರಸಭೆಗೆ ಅನುದಾನ ಕಡಿಮೆ ಆಗಲಿಕ್ಕೆ ಕಾರಣವೇನು? ಮುನಿಸಿಪಾಲಿಟಿಗಳ ಪರಿಸ್ಥಿತಿಯಂತೂ ಎಲ್ಲರಿಗೂ ಗೊತ್ತೇ ಇದೆ, ಇಡೀ ರಾಜ್ಯದಲ್ಲಿರುವಂತಹ ಪರಿಸ್ಥಿತಿಯೇ ಅಲ್ಲಿಯೂ ಇದೆ. ಎಲ್ಲಾ ಸಿಕ್ ಮುನಿಸಿಪಾಲಿಟಿ ಆಗಿರುವುದರಿಂದ, ಅಲ್ಲಿ ನೌಕರರಿಗೆ ಪಗಾರ ಕೊಡಲಿಕ್ಕೆ ಅವಕ್ಕೆ ಆಗುತ್ತಿಲ್ಲ, ಕರೆಂಟ್ ಮತ್ತು ನೀರಿನ ಬಿಲ್ಲುಗಳನ್ನು ಅವುಗಳಿಗೆ ಪಾವತಿಸ ಲಾಗುತ್ತಿಲ್ಲ; ಸ್ವಚ್ಛತೆ ಕಾಪಾಡುವುದಕ್ಕಾಗುತ್ತಿಲ್ಲ, ರಸ್ತೆ ಹೊಂಡಗಳನ್ನು ತುಂಬಲಿಕ್ಕೆ ಆಗು ತ್ತಿಲ್ಲ ಇತ್ಯಾದಿ ಎಲ್ಲಾ ರೀತಿಯ ತೊಂದರೆಗಳೂ ಅಲ್ಲಿವೆ. ಹಾಗಾಗಿ ಅನುದಾನವನ್ನು ಹೆಚ್ಚು ಮಾಡುವುದಕ್ಕೆ 10 ನೇ ಹಣಕಾಸು ಆಯೋಗ ಏನು ಶಿಫಾರಸ್ಸು ಮಾಡಿದೆ, ಅದನ್ನು ಯಾವಾಗ ಅನುಷ್ಠಾನಕ್ಕೆ ತರಬೇಕು ಎನ್ನುವಂಥಾದ್ದು ಸರ್ಕಾರದ ಮುಂದಿದೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಮಾನ್ಯ ಅಧ್ಯಕ್ಷರೇ, 1994-95 ರಲ್ಲಿ 17.20 ಲಕ್ಷ, 1995-96 ರಲ್ಲಿ 25.39 ಲಕ್ಷ ಮತ್ತು ಈ ವರ್ಷ 1996-97 ರಲ್ಲಿ 21.26 ಲಕ್ಷ ಅನುದಾನವನ್ನು ಅಂಕೋಲಾ ಪುರಸಭೆಗೆ ನೀಡಲಾಗಿದೆ. ಈ ಅನುದಾನದ ಹಣ ಈ ವರ್ಷ ಏಕೆ ಕಡಿಮೆಯಾಗಿದೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. 1995-96 ನೇ ಸಾಲಿನಲ್ಲಿ ಎಲ್ಲಾ ಮುನಿಸಿಪಾಲಿಟಿಗಳಿಗೆ, ಕಾರ್ಪೊರೇಷನ್ ಗಳಿಗೆ ಸ್ಪೆಷಲ್ ಡೆವಲಪ್‌ಮೆಂಟ್ ಗ್ರಾಂಟ್ ಎಂದು ಕೊಟ್ಟಿದ್ದೇವೆ. ಆದ್ದರಿಂದ 1995-96 ನಲ್ಲಿ ಅನುದಾನ ಮೊತ್ತ ಜಾಸ್ತಿ ಇದೆ. ಎಷ್ಟೋ ಮುನಿಸಿಪಾಲಿಟಿಗಳಿಗೆ ಅಲ್ಲಿ ಕೆಲಸ ಮಾಡುವಂತಹ ನೌಕರರಿಗೆ ಸಂಬಳ ಕೊಡುವಂತಹ ಸ್ಥಿತಿಯಲ್ಲಿ ಅವು ಇಲ್ಲ, ಎಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲಿನ ಪುರಸಭೆಯ ನೌಕರರ ಸಂಬಳ ಡಿಮ್ಯಾಂಡ್ ಗಿಂತ ಜಾಸ್ತಿ ಇದೆ. ಸರ್ಕಾರದಿಂದ ಅಕ್ಟ್ರಾಯ್, ಮೋಟಾರ್ ವೆಹಿಕಲ್ ಟ್ಯಾಕ್ಸ್ ಮತ್ತು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನ ಹಣವನ್ನು ರಿಲೀಸ್ ಮಾಡದ ಕಾರಣ ಅಲ್ಲಿನ ನೌಕರರ ಸಂಬಳ ಕೊಡ ಲಾಗುತ್ತಿಲ್ಲ. ಅಲ್ಲಿ ಟ್ಯಾಕ್ಸ್ ಅಸೆಸ್‌ಮೆಂಟ್ ಸರಿಯಾಗಿ ಮಾಡದ ಕಾರಣ ಮತ್ತು ಸರ್ಕಾರದ ನಾರ್ಮ್ಸ್ ಪ್ರಕಾರ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಟ್ಯಾಕ್ಸ್ ರಿವೈಸ್ ಮಾಡಬೇಕಾಗಿತ್ತು. ಆದರೆ ಎಷ್ಟೋ ಮುನಿಸಿಪಾಲಿಟಿಗಳಲ್ಲಿ ಟ್ಯಾಕ್ಸ್‌ನ ರಿವೈಸ್ ಮಾಡಿಲ್ಲ. ಆದ ಕಾರಣ ಅಲ್ಲಿ ನೌಕರರಿಗೆ ಸಂಬಳ ಪಾವತಿಸುವ ಬಗ್ಗೆ ಸಮಸ್ಯೆ ಇದೆ.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ :- 10 ನೇ ಹಣಕಾಸು ಆಯೋಗವು ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಜಾಸ್ತಿ ಮಾಡಬೇಕೆನ್ನುವುದರ ಬಗ್ಗೆ ಒಂದು ಶಿಫಾರಸ್ಸು ಮಾಡಿದೆ. ಆಯೋಗದ ವರದಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಸರ್ಕಾರ ಉತ್ತರ ಹೇಳಿದೆ. ಯಾವಾಗ ಸರ್ಕಾರದ ಪರಿಶೀಲನೆ ಮುಗಿಯುತ್ತದೆ? ಯಾವಾಗ ಅನುದಾನ ಗಳನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ? ಅದಿಲ್ಲದಿದ್ದರೆ ಆ ಮುನಿಸಿಪಾಲಿಟಿಗಳೆಲ್ಲವೂ ಸತ್ತು ಹೋಗುತ್ತವೆ. ಯಾವಾಗ ಮಾಡುತ್ತೀರಿ ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಮಾನ್ಯ ಅಧ್ಯಕ್ಷರೇ, ಡಾ. ತಿಮ್ಮಯ್ಯನವರ ಒಂದು ವರದಿ ಇದೆ. ಅದರಲ್ಲಿ ಏನಿದೆ ಅಂದರೆ, ಸ್ಥಳೀಯ ಸಂಸ್ಥೆಗಳಿಗೆ ಶೇಕಡ 40 ರಷ್ಟು ಗ್ರಾಂಟ್ ಹೆಚ್ಚಿಸಬೇಕೆಂದು ಅದರಲ್ಲಿ ಶಿಫಾರಸ್ಸು ಮಾಡಲಾಗಿದೆ. ಅದು ಸರ್ಕಾರದ ಮುಂದಿದೆ, ಸರ್ಕಾರ ಇನ್ನೂ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ :- ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ನಾನು ಒಂದು ಟೈಮ್ ಬಾಂಡ್ ಕೇಳುತ್ತಿದ್ದೇನೆ. ಆದರೆ ಮಾನ್ಯ ಸಚಿವರು ಉತ್ತರದಲ್ಲಿ ಇದ್ದದ್ದನ್ನೇ ಈಗ ಹೇಳಿದರು.

ಅಧ್ಯಕ್ಷರು :- ಪರಿಶೀಲನೆಗೆ ಏನು ಟೈಮ್ ಬಾಂಡ್? ಸಮುದ್ರಕ್ಕೆ ಆಳ ಎಲ್ಲಿ?

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ :- ಅನುದಾನ ಕೊಡದಿದ್ದರೆ ಮುನಿಸಿಪಾಲಿಟಿಗಳ ಪರಿಸ್ಥಿತಿ ಏನಾಗಬೇಕು? ಮಾನ್ಯ ಅಧ್ಯಕ್ಷರೇ, ಇದೆಲ್ಲಾ ತಮಗೆ ಗೊತ್ತಿದೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಇಂತಿಷ್ಟು ಸಮಯದಲ್ಲಿ ನಾವು ಮಾಡುತ್ತೇವೆ ಎಂದು ಹೇಗೆ ಹೇಳಲಿಕ್ಕೆ ಸಾಧ್ಯ? ನಾವು ಆದಷ್ಟು ಬೇಗ ಮಾಡುತ್ತೇವೆ.

11-10 ಎ. ಎಂ.

ಅಧ್ಯಕ್ಷರು :- ಕೆಲವು ಸಮಸ್ಯೆಗಳು ಹಾಗೆ ಇವೆ, ಅದು ಏನೂ ಮಾಡುವುದಕ್ಕಾಗುವುದಿಲ್ಲ. ಅಧ್ಯಯನ ಮಾಡವವರು ಎಷ್ಟು ಹಣ ಕೊಡಬೇಕೆಂದು ಹೇಳುತ್ತಾರೆ, ಹಣ ಇರಬೇಕಲ್ಲ, ಹಣ ಯಾವಾಗ ಇರುವುದಿಲ್ಲ ಪರಿಶೀಲನೆ ಎಂದು ಹೇಳುತ್ತಾರೆ. ನಾಳೆ ನೀವು ಇಲ್ಲಿ ಬಂದು ಕುಳಿತರೂ ಪರಿಶೀಲನೆ ಎಂದು ಹೇಳುತ್ತೀರಿ. ಇದು ನಿರಂತರವಾಗಿ ನಡೆಯುತ್ತದೆ. ಪರಿಶೀಲನಾ ಇಲಾಖೆ ಇದು.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಇದನ್ನು ನಮ್ಮ ಪ್ರಧಾನಿಗಳು ಮುಖ್ಯ ಮಂತ್ರಿಗಳಾಗಿದ್ದಾಗ ಪ್ರಥಮ ಬಾರಿಗೆ ಸುಮಾರು 30 ಕೋಟಿ ರೂಪಾಯಿಗಳಲ್ಲಿ ಎಲ್ಲಾ ನಗರಸಭೆ ಮತ್ತು ಪುರಸಭೆಗಳಿಗೂ ಚುನಾವಣೆ ಮೊದಲು, ಮೊದಲನೇ ಬಾರಿಗೆ ಬಿಡುಗಡೆ ಮಾಡಿದ್ದರು.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ :- ಅದು ಬೇರೆಯಾಗುತ್ತದೆ. ಚುನಾವಣೆಗೋಸ್ಕರ ಬಿಡುಗಡೆ ಮಾಡಿದ್ದು ಎಂದು ನಾವು ಹೇಳಬೇಕಾಗುತ್ತದೆ. ಅದೆಲ್ಲಾ ಬೇಡ.

ಶ್ರೀ ಬಿ. ಎನ್. ಬಚ್ಚೇಗೌಡ :- ಕೆಲಸ ಆಗಿದೆ. ಯಾರೂ ಮಾಡಿಲ್ಲ, 30 ಕೋಟಿ ರೂಪಾಯಿ ಪ್ರಥಮ ಬಾರಿಗೆ ಮುನಿಸಿಪಾಲಿಟಿ ಮತ್ತು ನಗರಸಭೆಗಳಿಗೆ ಕೊಟ್ಟಿದ್ದೇವೆ.

ಶ್ರೀ ಧರ್ಮ್‌ಸಿಂಗ್ :- ಮಾನ್ಯ ಬಚ್ಚೇಗೌಡರೇ ಮೊದಲು ಮುಖ್ಯಮಂತ್ರಿಗಳಾಗಿ ಈಗ ಪ್ರಧಾನಿಗಳು ಏನಾಗಿದ್ದಾರೆ, ಅವರು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು ಎಂದರೆ ಅದರ ಅರ್ಥ ಬೇರೆ ಆಗುತ್ತದೆ. ಈಗ ಚುನಾವಣೆ ಸಮಯ, ಅದಕ್ಕೆ ನಾವು ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ, ನಾಣಯ್ಯನವರೇ 1978 ರಲ್ಲಿ ಅಕ್ಟ್ರಾಯ್ ಅಬಾಲಿಶ್ ಆದ ಮೇಲೆ ಎಲ್ಲಾ ಕಡೆ ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿಯಾಗಿ ಆರ್ಥಿಕ ಭದ್ರತೆ ಮಾಡಬೇಕೆಂಬ ದೃಷ್ಟಿಯಿಂದ ಸರ್ಕಾರ ಗುಲ್ವಾಟಿ ಕಮಿಷನ್ ನೇಮಕ ಮಾಡಿದೆ. ಜಾಕಬ್ ಎಂದು ಮಾಡಿದೆ. ಲಕ್ಷ್ಮಣರಾವ್ ಕಮಿಟಿ ಆಗಿದೆ. ಆ ಕಮಿಟಿ ರಿಪೋರ್ಟ್‌ಗಳು ಏನಿದೆ, ಅವುಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತಿಲ್ಲ. ಇವತ್ತಿನ ದಿವಸ ಅಕ್ಟ್ರಾಯ್ ಅಬಾಲಿಶ್ ಮಾಡಿದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿಯಾಗಿ ನಾವು ನೆರವು ನೀಡಬೇಕೆಂಬ ವಕ್ರ ದೃಷ್ಟಿಯಿಂದ ತಜ್ಞರ ಸಮಿತಿ ಏನಾಗಿದೆ, ಅದರ ಬಗ್ಗೆ ಸರ್ಕಾರ ಏನು ಆಲೋಚನೆ ಮಾಡುತ್ತಿದೆ. ಅನ್ನತಕ್ಕಂಥದ್ದು ಕೂಡ ಸದನದ ಮುಂದೆ ಹೇಳಿ.

ಅಧ್ಯಕ್ಷರು :- ನಿಮ್ಮ ಮಾರ್ಗದರ್ಶನದಲ್ಲಿ ಮುಂದುವರೆದಿದ್ದೇವೆಂದು ಹೇಳಿ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿಕೆ ಮಾಡುವಂತಹ ಸಂದರ್ಭದಲ್ಲಿ 30 ಕೋಟಿ ನಗರಸಭೆ ಮತ್ತು ಪುರಸಭೆಗಳಿಗೆ ಬಿಡುಗಡೆ ಮಾಡುತ್ತೇವೆಂದು ಹೇಳಿದರು..... 30 ಕೋಟಿ ರೂಪಾಯಿ ಬಿಡುಗಡೆ ಮಾಡಿರುವಂಥದ್ದು ಇದು ವಿಶೇಷ ಅನುದಾನ ಅಲ್ಲ. ಏನಿದ್ದರೂ ನಮ್ಮ ಅಕ್ಟ್ರಾಯ್ ಗ್ರ್ಯಾಂಟ್‌ನಲ್ಲಿ ಬಿಡುಗಡೆ ಮಾಡಿ ಮಾಹೆಯಾನ ಅದರಲ್ಲಿ ವಜ ಮಾಡತಕ್ಕಂಥದ್ದು. ಇವತ್ತು ಸರ್ಕಾರ ವಜಾ ಮಾಡಿಕೊಳ್ಳುತ್ತಿದೆ. ವಿಶೇಷ ಅನುದಾನ ಅಂತೂ ಬಿಡುಗಡೆ ಮಾಡಿಲ್ಲ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್:- ಟೋಟಲ್ ಅಕ್ಟ್ರಾಯ್ ಗ್ರ್ಯಾಂಟ್ ಇಲ್ಲ, ಅಕ್ಟ್ರಾಯ್ ಗ್ರ್ಯಾಂಟ್ ಬರೀ 12 ಕೋಟಿ ಇದೆ, 16 ಕೋಟಿ ಏನು ಇದೆ, ಅದು ಸ್ಪೆಷಲ್ ಗ್ರ್ಯಾಂಟ್ ರಿಲೀಸ್ ಮಾಡಿದ್ದೇವೆ. ಟೋಟಲಿ ಅಕ್ಟ್ರಾಯ್‌ನಲ್ಲಿ ಗ್ರ್ಯಾಂಟ್ ಇಲ್ಲ. 16 ಕೋಟಿ ಬೇರೆ ಗ್ರ್ಯಾಂಟ್‌ನಲ್ಲಿ ಕೊಟ್ಟಿದ್ದೇವೆ.

ಶ್ರೀ ಧರ್ಮ್‌ಸಿಂಗ್ :- ಇವರ ಕಾಲದಲ್ಲಿ ಮಾಡುತ್ತಿಲ್ಲ ಅದು. 1978 ರಿಂದ ಮಾಡುತ್ತಿದ್ದೇವೆ. ಎಲ್ಲಾಕಡೆ ಕೊಡುತ್ತಿದ್ದೇವೆ, ತಾವೇನು ಹೊಸದಾಗಿ ಮಾಡುತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- 1978 ರಲ್ಲಿ ಮಾಡಿದ್ದುದು ನಿಜ. ಆಗ 50 ಲಕ್ಷ ಕೋಟಿ ಯಾರಿಗೂ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇರತಕ್ಕಂತಹ ಗ್ರ್ಯಾಂಟ್‌ನಲ್ಲಿ ಡಿಡಕ್ಟ್ ಮಾಡಿಕೊಂಡು ಕೊಡುವುದು ದೊಡ್ಡ ಮಾತೇ? ಸಾಮಾನ್ಯವಾಗಿ 10 ಕೋಟಿ 11 ಕೋಟಿ ಕೊಡುತ್ತಿದ್ದೀರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇನ್ನು ಅಧ್ಯಕ್ಷರೇ, ಮೊದಲನೆಯದಾಗಿ ಏನು ಮಾಡುತ್ತಿದ್ದರು ಎಂದರೆ 10 ಕೋಟಿ, 15 ಕೋಟಿ ಡೆವಲಪ್‌ಮೆಂಟ್ ಫಂಡ್ ನಿಂದ ರಿಲೀಸ್ ಮಾಡುತ್ತಿದ್ದರು. depending on Corporation, Municipality. ನೋಡಿಕೊಂಡು ನೀವು ಏನು ಮಾಡಿದಿರಿ, ಆಕ್ಟ್ರಾಯ್ ಗ್ರ್ಯಾಂಟ್‌ನಲ್ಲಿ ಡೆವಲಪ್‌ಮೆಂಟ್‌ಗೆ ಎಂದು ರಿಲೀಸ್ ಮಾಡಿ ಈಗ ಅದನ್ನು ಪ್ರತಿ ತಿಂಗಳು ಡಿಡಕ್ಟ್ ಮಾಡಿಕೊಳ್ಳುತ್ತಾ ಹೋಗುತ್ತಿದ್ದೀರಿ. ಅವರಿಗೆ ಕೊಡತಕ್ಕಂತಹ ಗ್ರ್ಯಾಂಟ್‌ನಲ್ಲಿ 10 ಲಕ್ಷ ಕೊಡಬೇಕಾದರೆ 9 ಲಕ್ಷ ಕೊಡುತ್ತಿದ್ದಾರೆ, ಒಂದು ಲಕ್ಷ ಹಿಡಿಯುತ್ತಿದ್ದಾರೆ. ಏಕೆಂದರೆ, ಆಟ್ ಎ ಟೈಮ್ ಚುನಾವಣೆ ಮುಂದೆ ಡೆವಲಪ್‌ಮೆಂಟ್‌ಗೆ ಕೊಟ್ಟದಲ್ಲ ಅದು ಡಿಡಕ್ಟ್ ಆಗುತ್ತಿದೆ. ಅದು ಈಗ ಅವರು ಒಪ್ಪಿಕೊಂಡರು. 16 ಕೋಟಿ ಅದು 12 ಕೋಟಿ ಆಕ್ಟ್ರಾಯ್ ಗ್ರ್ಯಾಂಟ್ ಅದಕ್ಕೆ ಒಂದೇ ಸಾರಿ 30 ಕೋಟಿ ಕೊಟ್ಟಿದ್ದರಲ್ಲ, 16 ಕೋಟಿ ಆದರೂ ಕೊಟ್ಟಿದ್ದೇವೆ ಅದನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದಾರೆ ಅವರು.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- 18 ಕೋಟಿ ರಿಲೀಸ್ ಮಾಡಿ 16 ಕೋಟಿ ಸ್ಪೆಷಲ್ ಡೆವಲಪ್‌ಮೆಂಟ್ ಗ್ರ್ಯಾಂಟ್ ಫಂಡ್ ಇದೆ. ತಾವು ಹೇಳಿದ ಪ್ರಕಾರ ನಾವು ಡೆವಲಪ್‌ಮೆಂಟ್ ಫಂಡ್ ಡಿಡಕ್ಷನ್ ಮಾಡುತ್ತಿಲ್ಲ. ಬೇರೆ ಯಾವುದು ಗವರ್ನ್‌ಮೆಂಟ್‌ನಲ್ಲಿ ಲೋನ್ ಕೊಟ್ಟಿದ್ದೇವೆ, ಅದನ್ನು ಡಿಡಕ್ಟ್ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :- ಪೇಪರ್‌ನಲ್ಲಿ ಅನೌನ್ಸ್ ಮಾಡಿದ್ದುದು 300 ಕೋಟಿ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ಆಕ್ಟ್ರಾಯ್ ಗ್ರ್ಯಾಂಟ್ ಇದ್ದರೆ, ಜನತಾದಳ ಎಮ್.ಎಲ್.ಎ. ಇರದೆ ಅಪೋಸಿಷನ್ ಕಡೆಯವರಿದ್ದರೆ ಆರು ಲಕ್ಷ, ಐದು ಲಕ್ಷ ಕೊಟ್ಟಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ. ಹೀಗೆ ತಾರತಮ್ಯ ಏಕೆ ಮಾಡುತ್ತಾರೆ ಇವರು. ಜನಸಂಖ್ಯೆ ಒಂದೇ ಇದೆ. ನಮಗಿಂತ ಕಡಿಮೆ ಜನಸಂಖ್ಯೆ ಇದ್ದರೂ ಸಹಿತ 15 ಲಕ್ಷ, 20 ಲಕ್ಷ ಕೊಟ್ಟಿದ್ದಾರೆ. ಹೀಗೆ ತಾರತಮ್ಯ ಪ್ರತಿ ಸಲ ಮಾಡುತ್ತಾರೆ ಅವರು. ಪ್ರತಿಯೊಂದು ಕಡೆ ರೂಲಿಂಗ್ ಇದ್ದವರಿಗೆ ಒಂದು ತರಹ, ಅಪೋಸಿಷನ್ ನವರಿಗೆ ಒಂದು ತರಹ. ಈ ತರಹ ತಾರತಮ್ಯ ಏಕೆ ಮಾಡುತ್ತಾರೆ? ರೆಕಾರ್ಡ್ ತೆಗೆದು ನೋಡಿ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ತಮಗೆ ಒಂದು ಎಕ್ಸಾಂಪಲ್ ಕೊಡುತ್ತೇನೆ, ಬೀದರ್‌ನಲ್ಲಿ ಏನಿದೆ ಎಂದರೆ, ಜನತಾದಳ ಮೂರು ಶಾಸಕರಿದ್ದಾರೆ. ಬರೀ ಅದು ಕಾನ್‌ಸ್ಟಿಟ್ಯೂಯನ್ಸಿಗಳಲ್ಲಿ ಮೂರು ಜನ ಶಾಸಕರು ಜನತಾದಳದವರು, ಇದ್ದರೆ, ಒಂದು ಬಿಜೆಪಿ, ಒಂದು ಬಿ.ಎಸ್.ಪಿ. ಮತ್ತು ಒಂದು ಕಾಂಗ್ರೆಸ್. ಅಂದರೆ ಎಲ್ಲರಿಗೂ ನಾವು ಸರಿಯಾಗಿ ಹಂಚಿದ್ದೇವೆ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ರೂಲಿಂಗ್ ಎಮ್.ಎಲ್.ಎ. ಇದ್ದ ಕಾನ್ಸ್ಟಿಟ್ಯೂಯನ್ಸಿಗೆ ಎಷ್ಟು ಕೊಟ್ಟಿದ್ದೀರಿ, ಅಪೋಸಿಷನ್ ಎಮ್.ಎಲ್.ಎ ಇದ್ದಲ್ಲಿ ಎಷ್ಟು ಕೊಟ್ಟಿದ್ದೀರಿ ತೆಗೆದು ತೋರಿಸಿ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಏತಕ್ಕೆ ಇಷ್ಟು ಹೆಚ್ಚು ಒತ್ತು ಕೊಟ್ಟು ಪ್ರಶ್ನೆ ಕೇಳುತ್ತಿದ್ದೇನೆಂದರೆ, ಇಡೀ ರಾಜ್ಯದಲ್ಲಿ ಪುರಸಭೆ ನಗರಸಭೆಗಳಲ್ಲಿ ಕುಡಿಯುವ ನೀರಿನ ಅಭಾವ ಇರುವಂತಹ ಕಡೆ ತಾವು ಮಂಜೂರು ಮಾಡಿದ್ದೀರಿ. ಕಳೆದ ಎರಡು ವರ್ಷಗಳಿಂದ ಇದು ದಾಖಲೆಗಳಲ್ಲಿ ಬರುತ್ತಿದೆ ಆದರೆ ತಾವು ಏನು ಪುರಸಭೆ ನಗರಸಭೆಯವರು ಮ್ಯಾಚಿಂಗ್ ಗ್ರ್ಯಾಂಟ್ ಕೊಡಬೇಕೆಂದು ಹೇಳಿದಿರಿ ಅದನ್ನು ಯಾರೂ ಕೊಡುವುದಕ್ಕಾಗುತ್ತಿಲ್ಲ. ಹಣಕಾಸಿನ ಪರಿಸ್ಥಿತಿ ಸರಿ ಇಲ್ಲ. ಹಾಗಾಗಿ ನೀವು ಏನಾದರೂ ಸ್ಪೆಷಲ್ ಗ್ರ್ಯಾಂಟ್ ಕೊಟ್ಟು ಆ ಪುರಸಬೆ ನಗರಸಭೆ ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಲ್ಲುವಂತಹ ವ್ಯವಸ್ಥೆ ಮಾಡದೆ ಇದ್ದರೆ ಬಹುಶಃ ಈ ಯೋಜನೆಗಳು ಏನಿದೆ ಡ್ರಿಂಕಿಂಗ್ ವಾಟರ್ ಯೋಜನೆಗಳು ನೀವು ಕೊಟ್ಟಿದ್ದೀರಿ, ಅವರು ಆ ದುಡ್ಡು ಕಟ್ಟುವ ಹಾಗಿಲ್ಲ, ಆ ಸ್ಕೀಮ್ ಮುಂದೆ ಹೋಗುವ ಹಾಗೆ ಇಲ್ಲ. ದಯಮಾಡಿ ಈಗಲಾದರೂ ಕೊನೆಯಪಕ್ಷ ಡ್ರಿಂಕಿಂಗ್ ವಾಟರ್‌ಗೆ ಸಂಬಂಧಪಟ್ಟ ಹಾಗೆ ರಿಲ್ಯಾಕ್ಸ್ ಮಾಡಿ ಆ ಯೋಜನೆಗಳು ಪ್ರಾರಂಭ ಆಗುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರೋ?

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹೇಳಿರುವುದಕ್ಕೆ, ಯಾರೂ ಕೊಡುತ್ತಿಲ್ಲ, 205 ಯೋಜನೆಗಳಲ್ಲಿ 204 ಯೋಜನೆಗಳನ್ನು ನಾವು ಕಾರ್ಯಗತ ಮಾಡಿದ್ದೇವೆ. ಒಂದು ಬಿಟ್ಟು, ನಮ್ಮ ವ್ಯಾಪ್ತಿಗೆ ಬರುವುದು ಕೆ.ಯು.ಡಬ್ಲ್ಯು.ಎಸ್. ಅದರಲ್ಲಿ 10 ಪರ್ಸೆಂಟ್ 15 ಪರ್ಸೆಂಟ್ ಮತ್ತು 20 ಪರ್ಸೆಂಟ್ ವರೆಗೆ ಕೊಡುವವರು ಯಾರೂ ಕೊಟ್ಟಿಲ್ಲ. ಅವೆಲ್ಲಾ ಸಹಾಯಧನವಾಗಿ ಮಾಡಿಕೊಂಡು ಹೋಗುತ್ತಿದ್ದೇವೆ. ಈ ರೀತಿ ಪರಿಸ್ಥಿತಿ ಇದೆ. ಗೊತ್ತಿದೆ. ಅದಕ್ಕೆ ನಾನು ಹೇಳಿದೆ, ಈಗ ಅದು ಸಚಿವ ಸಂಪುಟದ ಮುಂದೆ ಇದೆ, ಯೂನಿಫಾರಂ ಆಗಿ water rate in the State--- ನಮ್ಮ ಇಲಾಖೆಯಲ್ಲಿ 50,000 ಲಕ್ಷದವರೆಗೂ ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಸಂಪೂರ್ಣ ವಿನಾಯಿತಿ ಕೊಟ್ಟು ಸರ್ಕಾರವೇ ಗ್ರ್ಯಾಂಟ್ ರೂಪದಲ್ಲಿ ಭರಿಸುವಂಥದ್ದು ಇವತ್ತು ನಮ್ಮ ಮುಂದೆ ಇರತಕ್ಕಂತಹ it is a policy decision. It is pending before the Government.

ವಿಷಯ :-ಮೈಸೂರು ನಗರದ ಮಯೂರ ಕಾಂಪ್ಲೆಕ್ಸ್ ಕಾಮಗಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214 (1141)

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರಪಾಲಿಕೆ ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಯೂರ ಕಾಂಪ್ಲೆಕ್ಸ್ ಎಂದು ಪ್ರಾರಂಭವಾಯಿತು. ಎಷ್ಟು ಖರ್ಚಾಗಿದೆ, ಇದರ ಅಂದಾಜು ವೆಚ್ಚವೆಷ್ಟು;

ಆ) ಈಗ ಈ ಕಾಮಗಾರಿಯು ಯಾವ ಹಂತದಲ್ಲಿದೆ, ಈ ಕಾಮಗಾರಿಯನ್ನು ಯಾವ ಕಂಟ್ರಾಕ್ಟರಿಗೆ ನೀಡಲಾಗಿತ್ತು. ಈ ಯೋಜನೆಗೆ ಸಾಲ ಪಡೆಯಲಾಗಿತ್ತೆ, ಎಷ್ಟು ಸಾಲ ಪಡೆಯಲಾಗಿದೆ, ಎಷ್ಟು ವಾರ್ಷಿಕ ಬಡ್ಡಿ ನೀಡಲಾಗುತ್ತಿದೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :-

ಅ) ದಿನಾಂಕ 28-5-1988 ರಂದು ಪ್ರಾರಂಭವಾಯಿತು. 25 ಲಕ್ಷ ರೂ.ಗಳು ಖರ್ಚಾಗಿದೆ. ಇದರ ಅಂದಾಜು ವೆಚ್ಚ ರೂ.275 ಲಕ್ಷಗಳು.

ಆ) ಅಡಿಪಾಯ ಪೂರ್ಣಗೊಂಡಿದ್ದು, ಪಿಲ್ಲರ್‌ಗಳು ಅರ್ಧ ಮಟ್ಟಕ್ಕೆ ಬಂದಿವೆ. ಖೋಡೇಸ್ ಇಂಜಿನಿಯರಿಂಗ್ ಕಂಪನಿರವರಿಗೆ ಗುತ್ತಿಗೆ ನೀಡಲಾಗಿತ್ತು. ರೂ.39.23 ಲಕ್ಷ ಸಾಲ ಪಡೆಯಲಾಗಿದ್ದು, ಸಾಲವನ್ನು ಸಂಪೂರ್ಣವಾಗಿ ಹುಡ್ಕೋಗೆ ಮರುಪಾವತಿ ಮಾಡಲಾಗಿದೆ. ಅದಕ್ಕೆ ಒಟ್ಟು ರೂ.5.71 ಲಕ್ಷ ಬಡ್ಡಿ ಕೊಡಲಾಗಿದೆ.

ಶ್ರೀ ಎ. ರಾಮದಾಸ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳುವುದಕ್ಕೆ ಮುಂಚೆ ಇದಕ್ಕೆ ಪರಿಶೀಲಿಸುತ್ತೇನೆಂದು ಹೇಳುವಂತಹ ಅವಶ್ಯಕತೆ ಇಲ್ಲ. ಏಕೆಂದರೆ ಸರ್ಕಾರದಿಂದ ಹಣ ಕೊಡಬೇಕಾದಂತಹ ಅವಶ್ಯಕತೆ ಇಲ್ಲ. ಪ್ರಮುಖವಾಗಿ ಸುಮಾರು ಎಂಟು ವರ್ಷಗಳ ಹಿಂದೆ ಪ್ರಾರಂಭಮಾಡಿದ ಈ ಕಾಂಪ್ಲೆಕ್ಸ್ ಇವತ್ತಿನವರೆಗೂ ಮುಗಿಯದೆ ಉಳಿಯುವುದಕ್ಕೆ ಕಾರಣ ಏನು? ಜೊತೆಗೆ ಇದು ಯಾವಾಗ ಕಂಪ್ಲೀಟ್ ಆಗುತ್ತದೆ? ಕಂಟ್ರ್ಯಾಕ್ಟರ್ ಖೋಡೇಸ್‌ನವರಿಗೆ ಕೊಟ್ಟಂತಹ ಮುಂಗಡ ಹಣ ಏನಾಯಿತು? ಜೊತೆಗೆ ಆ ಕಂಟ್ರ್ಯಾಕ್ಟರ್ ಮೇಲೆ ಇವತ್ತಿನವರೆಗೂ ಕೆಲಸ ಕಂಪ್ಲೀಟ್ ಮಾಡದೆ ಇರುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ, ಜೊತೆಗೆ ಪ್ರತಿ ತಿಂಗಳು ಟ್ಯಾಕ್ಸ್ ಪೇಯರ್ಸ್ ಹಣವನ್ನು ಪ್ರತಿ ತಿಂಗಳು ಐದು ಲಕ್ಷ ರೂಪಾಯಿ ಬಡ್ಡಿಯನ್ನು ಕೊಡುತ್ತಿರುವಂಥದ್ದು ಎಷ್ಟು ಸಮಂಜಸವಾದ ವಿಚಾರ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ಖೋಡೇಸ್ ಬ್ರೀವರಿ ಏಜೆನ್ಸಿಗೆ ನಾವು ಕೆಲಸ ಕೊಟ್ಟಿದ್ದೇವೆ, ಆ ಮೇಲೆ ಇನ್ ಟೈಮ್ ಅವರು ಕೆಲಸ ಮಾಡದೆ ಇದ್ದ ಕಾರಣ ಅಗ್ರಿಮೆಂಟ್ ಟೆಂಡರ್ ಏನಿತ್ತು, ಅದು ಕ್ಯಾನ್ಸಲ್ ಮಾಡಿ, ಕಾರ್ಪೋರೇಷನ್‌ನವರಿಗೆ ಬೇರೆಯವರಿಗೆ ಕೆಲಸ ಕೊಟ್ಟಿದ್ದ ಕಾರಣದಿಂದ ಸ್ವಲ್ಪ ತಡವಾಗಿದೆ.

ಶ್ರೀ ಎ. ರಾಮ್‌ದಾಸ್ :- ಎಂಟು ವರ್ಷಗಳ ಕಾಲ ಜನತಾ ಪಕ್ಷದ ಸರ್ಕಾರ ಇದ್ದಾಗ ಇದಕ್ಕೆ ಅಡಿಗಲ್ಲು ಇಟ್ಟರು. ಅದಕ್ಕೆ ಆಗಲೇ ಅವರಿಗೆ ಮುಂಗಡ ಹಣ ಕೊಟ್ಟರೆ ಹುಡ್ಕೋದಿಂದ ಸಾಲ ತೆಗೆದುಕೊಂಡು ಬಂದಿರಿ, ಆದರೆ, ಎಂಟು ವರ್ಷಗಳ ಕಾಲದಿಂದ ಕೆಲಸ ಕಂಪ್ಲೀಟ್ ಆಗದೆ ಉಳಿಯುವುದಕ್ಕೆ ಪ್ರಮುಖವಾದ ಕಾರಣ ಏನು? ಇವತ್ತಿನವರೆಗೆ ಮುಂಗಡ ಕೊಟ್ಟಿದ್ದ ಹಣ ರಿಕವರಿ ಮಾಡುವುದಕ್ಕೆ

ಏನು ಕ್ರಮ ಕೈಗೊಂಡಿದ್ದೀರಿ? ಇದನ್ನು ಯಾವಾಗ ನೀವು ಕಂಪ್ಲೀಟ್ ಮಾಡುತ್ತೀರಿ? ಜೊತೆಗೆ ಟ್ಯಾಕ್ಸ್ ಪೇಯರ್ ಹಣವನ್ನು ಪ್ರತಿ ತಿಂಗಳಲ್ಲೂ ಐದು ಲಕ್ಷ ರೂಪಾಯಿ ಬಡ್ಡಿಯನ್ನು ಕೊಡುವಂಥದಕ್ಕೆ ಏನು ಮುಖ್ಯ ಕಾರಣ?

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ಮಾನ್ಯ ಅಧ್ಯಕ್ಷರೇ, ಆ ದುಡ್ಡು ರಿಕವರಿ ಮಾಡುವ ಸಲುವಾಗಿ ಅಲ್ಲಿನ ಕಾರ್ಪೋರೇಷನ್ ಒಂದು ರೆಸಲ್ಯೂಷನ್ ಪಾಸ್ ಮಾಡಿ ಕೊಟ್ಟಿದ್ದಾರೆ, ಅವರ ಮೇಲೆ ಲೀಗಲ್ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಬೇರೆ ಏನಿದೆ ಎಂದರೆ, ಬೇರೆ ಏಜೆನ್ಸಿಗೆ ಬಡ್ಜೆಟೆಡ್ ಅಲಾಟೆಡ್ ಅಮೌಂಟ್ ಏನಿತ್ತು ಆ ಪ್ರಕಾರ ಕೆಲಸ ನಡೆಯುತ್ತಿದೆ.

ಶ್ರೀ ಎ. ರಾಮದಾಸ್ :- ಕೆಲಸ ನಡೆಯುತ್ತಿಲ್ಲ, ಇವತ್ತು ಅಲ್ಲಿ ಹಳ್ಳ ಆಗಿ ಎಂಟು ವರ್ಷಗಳ ಕಾಲದಿಂದ ಮೂರು ಕೊಲೆಗಳು ಆಗುವಂತಹ ಒಂದು ಜಾಗ ಆಗಿದೆ ಈಗಾಗಲೇ ಫೌಂಡೇಷನ್ ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಆ ಹಳ್ಳ ಬಿಟ್ಟು ಬೇರೆ ಇನ್ನು ಏನೂ ಇಲ್ಲ. ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ. ಎಲ್ಲಿ ಖರ್ಚಾಗಿದೆಯೆಂದು ದಯಮಾಡಿ ಇದು ತನಿಖೆ ಮುಖಾಂತರ ಗೊತ್ತಾಗಬೇಕಾಗಿದೆ ಹೊರತು ಬೇರೆ ಇನ್ನು ಏನೂ ಅಲ್ಲ. ಆದರೆ ಸಚಿವರು ಯಾವ ರೀತಿಯಾಗಿ ಉತ್ತರವನ್ನು ಇಲ್ಲಿ ಕೊಟ್ಟರು ಎಂದು ಆಶ್ಚರ್ಯವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು :- ಬರೀ ಪಿಲ್ಲರ್ಸ್ ಮಾತ್ರ ನಿಂತಿದೆ. ಏನೂ ಅಲ್ಲಿ ಇಲ್ಲ ಪ್ರತಿ ತಿಂಗಳು 60 ಲಕ್ಷ ರೂಪಾಯಿ ಸಂಬಳ ಕೊಡಬೇಕು. ತೆರಿಗೆ ಹಣ ಹೀಗೆ ಮಿಸ್‌ಯೂಸ್ ಆದರೆ......

ಅಧ್ಯಕ್ಷರು :- ಉತ್ತರ ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ನೋಡಿ ಅವರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಅಲ್ಲಿ ಏನೂ ಕೆಲಸ ನಡೆಯುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಆಫೀಸರ್ಸ್ ಸರಿಯಾಗಿ ಇನ್‌ಫಾರ್ಮೇಷನ್ ಕೊಟ್ಟಿದ್ದಾರೋ ಅಥವಾ ಇಲ್ಲ ಎಂದು etc. ಎಂದು ನೋಡಿ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ಸ್ವಲ್ಪ ನೋಡಿ ಆನ್ಸರ್ ಹೇಳುತ್ತೇನೆ.

Mr. SPEAKER :- I will ask him to come with proper answers.... **ಈ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ, ಸ್ಪಷ್ಟವಾಗಿ ಎಲ್ಲಾ ಉತ್ತರ ತೆಗೆದು ಕೊಂಡು ಬಂದು ಹೇಳಿ.** The Question is held over. Mr. Patil please come back with proper answer for the next week.

(ಪ್ರಶ್ನೆಯನ್ನು ತಡೆಹಿಡಿಯಲಾಯಿತು.)

ವಿಷಯ :- ಕುಂದಾಪುರ ಪುರಸಭೆಯ ಕಾಮಗಾರಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 216 (1624)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ, (ಕುಂದಾಪುರ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ನಡೆದ ವಿವಿಧ ಕಾಮಗಾರಿಗಳಾವುವು?

2) ಯಾವ ಆದ್ಯತೆಯ ಮೇರೆಗೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

3) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು? ಕಾಮಗಾರಿಗಳ ಪೂರ್ಣ ವಿವರ ಅಂದಾಜು ವೆಚ್ಚ

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1) ಅ) ಕುಡಿಯುವ ನೀರಿನ ಸರಬರಾಜು ಕಾಮಗಾರಿ
ಆ) ಚರಂಡಿ ಕಾಮಗಾರಿ
ಇ) ರಸ್ತೆ ಕಾಮಗಾರಿ

2) ನೀರು ಸರಬರಾಜು ಮತ್ತು ಜನಾರೋಗ್ಯದ ಆದ್ಯತೆಯ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

3) ರೂ. 9,40,000-00

ಕ್ರ. ನಂ.	ಕಾಮಗಾರಿಗಳ ವಿವರ	ಅಂದಾಜು ವೆಚ್ಚ
1.	ಪುರಸಭೆಯ ಮುಖ್ಯರಸ್ತೆ ಚರಂಡಿ ಕಟ್ಟಿಸುವುದು	1,00,000-00
2.	ಭಗವಾನ್ ಬಿಲ್ಡಿಂಗ್ ರಸ್ತೆಯಲ್ಲಿ ಚರಂಡಿ ವ್ಯವಸ್ಥೆ.	1,00,000-00
3.	ಕಾಲೇಜ್ ಕಾಂಪೌಂಡ್ ಬಳಿ ತೆರೆದ ಬಾವಿ ನಿರ್ಮಾಣ	1,80,000-00
4.	ಖಾರ್ವೆಕೇರಿಯಲ್ಲಿ ಚರಂಡಿ ವ್ಯವಸ್ಥೆ	1,00,000-00
5.	ದೇವಿ ನರ್ಸಿಂಗ್ ಹೋಂ ಹತ್ತಿರ ಚರಂಡಿ ವ್ಯವಸ್ಥೆ	1,00,000-00

6.	ದಾರಿದೀಪಗಳ ಅಭಿವೃದ್ಧಿ	1,00,000-00
7.	ಕುಂಡೇಶ್ವರ ದೇವಸ್ಥಾನದ ಬಳಿ ರಸ್ತೆ ಕಾಮಗಾರಿ	30,000-00
8.	ಡ್ಯಾಗ್ ಫೆರಿ ರಸ್ತೆಯಲ್ಲಿ ಪಿ.ವಿ.ಸಿ. ಪೈಪ್ ಲೈನ್	40,000-00
9.	ಡರ್ಗ್ ರಸ್ತೆಯಲ್ಲಿ ಪಿವಿಸಿ ಪೈಪ್ ಲೈನ್ ಅಳವಡಿಕೆ	50,000-00
10.	ಕೋಡಿಯಲ್ಲಿ ಕುಡಿಯುವ ನೀರಿನ ಮತ್ತು ಪಂಪ್ ಅಳವಡಿಕೆ	40,000-00
11.	ಖಾರ್ವೆ ಕೇರಿಯಲ್ಲಿ ಡಕ್ ನಿರ್ಮಾಣ	50,000-00
12.	ಖಾರ್ವೆ ಕೇರಿಯಲ್ಲಿ ನೀರು ಸರಬರಾಜು ಅಭಿವೃದ್ಧಿ	50,000-00
	ಒಟ್ಟು	9,40,000-00

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸುವಂಥ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಇರಬೇಕು. ಬಹುಶಃ ಅವರು ಕೊಟ್ಟಂಥ ಮಾಹಿತಿಯನ್ನು ತಂದು ಇಲ್ಲಿ ಉತ್ತರ ಕೊಡುತ್ತಾರೆ. ಬಹುಶಃ ಆ ಮಾಹಿತಿ ಎಷ್ಟು ಅಸಮರ್ಪಕವಾಗಿ ಇದೆ ಎನ್ನುವುದು ನಿಮಗೆ ಗೊತ್ತಿರುವುದಿಲ್ಲ. ಈ ಹಿಂದೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಕುಂದಾಪುರ ಪುರಸಭೆ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಲ್ಲಿ ಮಂಜೂರು ನಿಜವೇ ಎಂದು ಕೇಳಿದ್ದೆ. ಅದೇ ರೀತಿಯಲ್ಲಿ ಎಷ್ಟು ಹಣ ಅದಕ್ಕೆ ವೆಚ್ಚವಾಗಿದೆ, ಬಿಡುಗಡೆಯಾಗಿದೆ ಎನ್ನತಕ್ಕಂಥದ್ದನ್ನು ಕೂಡ ಕೇಳಿದ್ದೆ. 38.33 ಲಕ್ಷ ಬಿಡುಗಡೆಯಾಗಿದೆ ಆದರೆ ಯಾವುದೇ ಹಣ ಇದುವರೆಗೆ ವೆಚ್ಚ ಮಾಡಲಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಕೇವಲ ಒಂಭತ್ತು ಲಕ್ಷ ನಲವತ್ತು ಸಾವಿರ ಕೆಲಸವನ್ನು ತಾವು ನಮೂದಿಸಿದ್ದೀರಿ, ಅದರ ಅರ್ಥ ಏಕೆ ಹಿಂದೆ ಇಟ್ಟಂಥ ಹಣವನ್ನು ಖರ್ಚು ಮಾಡಿಲ್ಲ? ಮತ್ತು ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು? ಮತ್ತು ಕೆಲವು ಕೆಲಸಗಳನ್ನು ತಾವು ತೆಗೆದುಕೊಂಡಿರತಕ್ಕಂಥ ವಿಚಾರವನ್ನು ಹೇಳಿದ್ದೀರಿ ಬಹುಶಃ ಅದರಲ್ಲಿ ಹೆಚ್ಚಿನ ಕೆಲಸಗಳು ಪೂರ್ಣ ಆಗಿಲ್ಲ. ಸಂಪೂರ್ಣವಾದ ಮಾಹಿತಿ ತಮಗೂ ಸಹಿತ ಇಲ್ಲ ಏಕೆಂದರೆ ಅಧಿಕಾರಿಗಳು ಒಂದು ಕಡೆ ಒಂದು ಉತ್ತರ ಕೊಡುತ್ತಾರೆ, ಮತ್ತೊಂದು ಕಡೆ ಮತ್ತೊಂದು ಉತ್ತರ ಕೊಡುತ್ತಾರೆ, ಅದನ್ನು ತಾವು ಇಲ್ಲಿ ಹೇಳುತ್ತೀರಿ, ಇದರ ಬಗ್ಗೆ ತಾವು ಪರಿಶೀಲನೆ ಮಾಡುತ್ತೀರೋ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ವರ್ಕ್ಸ್ ಏನು ಇದೆ, ಅದರ ಎಸ್ಟಿಮೇಟ್ ಕಾಸ್ಟ್ ಏನು ಇದೆ ಅದನ್ನೆಲ್ಲಾ ಕೊಟ್ಟಿದ್ದೇನೆ.

ಎಲ್ಲಾದರೂ ತಪ್ಪಾಗಿದೆ ಎಂದು ತಾವು ಹೇಳಿದರೆ ಅದಕ್ಕೆ ನಾನು ಸ್ವಲ್ಪ ಸರಿಪಡಿಸಿ ಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಕೇಳಿರುವಂಥ ಪ್ರಶ್ನೆ ಕುಂದಾಪುರ ಪುರಸಭೆ ವ್ಯಾಪ್ತಿಯೊಳಗೆ ನಡೆದಿರತಕ್ಕಂಥ ಕಾಮಗಾರಿಗಳು ಯಾವು ಯಾವುದು? ಮತ್ತು ಯಾವ ಯಾವ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು ಎಂದು ನಾನು ಕೇಳಿದ್ದೇನೆ. ಮತ್ತು ಅವುಗಳನ್ನು ಯಾವ ಆದ್ಯತೆಯ ಮೇಲೆ ತೆಗೆದುಕೊಂಡಿದ್ದೀರಿ? ಅದರಲ್ಲಿ ಒಂದು ವಿಚಾರವನ್ನು ಮುಚ್ಚಿಟ್ಟಿದ್ದಾರೆ. ಕುಂದಾಪುರಕ್ಕೆ ಮಧ್ಯಮ ಪಟ್ಟಣಗಳ ಮತ್ತು ಸಮಗ್ರ ಪಟ್ಟಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಣ ಮಂಜೂರಾತಿಯಾದದ್ದು ಒಂದು ಕೋಟಿ ರೂಪಾಯಿ. ಅದರಲ್ಲಿ 38.33 ಲಕ್ಷ ಹಣ ಬಿಡುಗಡೆಯಾಗಿದೆ. ಅದನ್ನು ಏಕೆ ಖರ್ಚು ಮಾಡಲಿಲ್ಲ? ಅದನ್ನು ಏಕೆ ಮುಚ್ಚಿಡಲು ಪ್ರಯತ್ನ ಮಾಡುತ್ತಿದ್ದೀರಿ? ಇದರಲ್ಲಿ ಆ ವಿವರಗಳು ಇಲ್ಲ, ಹಿಂದೆ ಕೊಟ್ಟಂಥ ಉತ್ತರದಲ್ಲಿ ಇದು ಇತ್ತು. ಅದನ್ನು ಏಕೆ ಮುಚ್ಚಿಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ?

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, 38.33 ಲಕ್ಷ ರೂಪಾಯಿ ಬಿಡುಗಡೆಯಾದ ಬಗ್ಗೆ ಈ ಉತ್ತರದಲ್ಲಿ ಇಲ್ಲ. ತಮ್ಮಲ್ಲಿ ಬೇರೆ ಯಾವುದು ಉತ್ತರ ಇದೆ ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಮಾನ್ಯ ಅಧ್ಯಕ್ಷರೇ, ದಯಮಾಡಿ ತಾವು ಅರ್ಥ ಮಾಡಿಕೊಂಡರೆ ಒಳ್ಳೆಯದು. ಏಕೆಂದರೆ ನನಗೆ ಅವರನ್ನೂ ಕನ್ವಿನ್ಸ್ ಮಾಡುವುದಕ್ಕೆ ಆಗುತ್ತಿಲ್ಲ. ತಾವು ಗಮನಿಸಿದರೆ ಒಳ್ಳೆಯದು. ತಮಗೆ ಅರ್ಥ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು :- ನಾನು ಅರ್ಥಮಾಡಿಕೊಂಡು ಏನು ಮಾಡಲಿ?

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಸನ್ಮಾನ್ಯ ಅಧ್ಯಕ್ಷರೇ, 291 ನೇ ಪ್ರಶ್ನೆ 11-7-1996 ರಲ್ಲಿ ನಾನು ಕೇಳಿದ್ದೆ. ಹಾಗೆ ಕೇಳಿದ ಸಂದರ್ಭದಲ್ಲಿ ಅದಕ್ಕೆ ಲಿಖಿತವಾಗಿ ಉತ್ತರ ಬಂದಿದೆ. ಈಗಾಗಲೇ ಕುಂದಾಪುರ ಪುರಸಭೆಗೆ ಬಿಡುಗಡೆಯಾದ ಹಣ 38.33 ಲಕ್ಷ ರೂಪಾಯಿಗಳು ಎಂದು ಆದರೆ ಯಾವುದೇ ಹಣವನ್ನು ಇದುವರೆಗೆ ವೆಚ್ಚ ಮಾಡಿಲ್ಲ. ಎನ್ನತಕ್ಕಂಥ ಉತ್ತರವನ್ನು ಆ ದಿವಸ ಕೊಟ್ಟಿದ್ದಾರೆ. ಇವೊತ್ತು ಕೇಳಿರತಕ್ಕಂಥ ಪ್ರಶ್ನೆಗೆ ಆ ವಿಚಾರಗಳನ್ನು ಸಂಪೂರ್ಣವಾಗಿ ಮುಚ್ಚಿಟ್ಟು ಉತ್ತರವನ್ನು ಕೊಟ್ಟಿದ್ದಾರೆ. ಆದರ ಹಿನ್ನೆಲೆ ಏನು? ಈ 38.33 ಲಕ್ಷ ರೂಪಾಯಿಗಳು ಕುಂದಾಪುರ ಪುರಸಭೆಗೆ ಬಿಡುಗಡೆಯಾದದ್ದು ಇದುವರೆಗೆ ಏಕೆ ಕೆಲಸ ಆಗಿಲ್ಲ? ಏಕೆ ಖರ್ಚು ಮಾಡಿಲ್ಲ? ಆ ಹಣ ಏನಾಯಿತು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್:- ಈ ಹಿಂದೆ ಉತ್ತರ ಕೊಟ್ಟಿದ್ದರೆ ಅದನ್ನು ಸ್ವಲ್ಪ ಪರಿಶೀಲನೆ ಮಾಡಿ ನಾನು ಅವರಿಗೆ ಕರೆಕ್ಟಾಗಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :- ಅವರ ಹತ್ತಿರ ಡೀಟೇಲ್ಸ್ ಇಲ್ಲ. He is also new to the Dept. ಟೈಮ್ ಕೊಡೋಣ. ನಿಮಗೆ ಗೊತ್ತಿದ್ದರೆ ನೀವೇ ಹೇಳಿ, ತಿಳಿದುಕೊಳ್ಳೋಣ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ನನಗೆ ಬಂದಿರುವ ಮಾಹಿತಿ ಪ್ರಕಾರ ಆ ಹಣವನ್ನು ಯಾವುದೋ ಒಂದು ಬೆಂಗಳೂರಿನ ಅರ್ಬನ್ ಬ್ಯಾಂಕಿನಲ್ಲಿಟ್ಟಿದ್ದರು, ಆ ಬ್ಯಾಂಕ್ ದಿವಾಳಿಯಾಗಿದೆ. 38.33 ಲಕ್ಷ ಕುಂದಾಪುರ ಪುರಸಭೆಗೆ ಖರ್ಚು ಮಾಡಲಿಕ್ಕೆ ಬಂದಿಲ್ಲ. ಹಣ ಖರ್ಚು ಮಾಡಲು ಆಗದೇ ಇರುವುದರಿಂದ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಡಲಿಕ್ಕೆ ಆಗದೇ ಇರುವ ಕಾರಣ ಸಂಪೂರ್ಣವಾಗಿ ಆ ಯೋಜನೆ ಬಿದ್ದು ಹೋಗುವ ಪರಿಸ್ಥಿತಿಗೆ ತಾವು ತಂದಿದ್ದೀರಿ. ಆದ ಕಾರಣ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಅವರು ಏನು ವರದಿ ಕೊಟ್ಟಿದ್ದಾರೆ ಅದನ್ನು ತಾವು ಇಲ್ಲಿ ಓದಿ ಹೇಳುತ್ತಿದ್ದೀರಿ. ಈ ಬಗ್ಗೆ ತನಿಖೆ ಮಾಡಬೇಕು. ಈ ವಿಚಾರವನ್ನು ಕಾಲಿಂಗ್ ಅಟೆನ್‌ಶನೆಗೂ ಕೂಡ ಕೊಟ್ಟಿದ್ದೆ. ಬಹುಶಃ ಅದು ಬಂದಿಲ್ಲ. ಅದು ಸಂಪೂರ್ಣವಾಗಿ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ.

ಅಧ್ಯಕ್ಷರು :- ನೋಡಿ ಅದನ್ನು ಎಕ್ಸಾಮಿನ್ ಮಾಡಿ. ಆ ತರಹ ಆಗಿದ್ದರೆ you please take action immediately.

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್ :- ಅದು ಏನೇ ಇರಲಿ ಅದನ್ನು ಪರಿಶೀಲಿಸಿ ಬೇಕಾದರೆ ಅವರನ್ನು ಕೂಡ ಕರೆಯಿಸಿ ನನ್ನ ಜೊತೆ ಚರ್ಚೆ ಮಾಡಿ ತನಿಖೆ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಅಧ್ಯಕ್ಷರೇ ಈ ಪ್ರಶ್ನೆಯನ್ನು ಮುಂದು ವರೆಸಿದರೆ ಒಳ್ಳೆಯದು. ಅಥವಾ ಕಾಲಿಂಗ್ ಅಟೆನ್‌ಶನ್‌ಗೆ ಅವಕಾಶ ಕೊಟ್ಟರೂ ಒಳ್ಳೆಯದು.

ಅಧ್ಯಕ್ಷರು :- ಮಾನ್ಯ ಸದಸ್ಯರು ಏನು ಮೆನ್‌ಶನ್ ಮಾಡಿದ್ದಾರೆ ಅದರ ಬಗ್ಗೆ ತಕ್ಷಣ ಎನ್‌ಕ್ವಾಯರಿ ಮಾಡಿಸಿ I will get you proper answer. I have noted down. ಕಾಲಿಂಗ್ ಅಟೆನ್‌ಶನ್ ನೋಡೋಣ. ಬಿಸ್‌ನೆಸ್ ನೋಡಿಕೊಂಡು ಯಾವ ರೀತಿ ಇದೆ ಅದನ್ನು ಮಾಡೋಣ.

2) **ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.**

ಶ್ರೀ ಎಂ. ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, 15 ನೇ ಪಟ್ಟಿಯಲ್ಲಿರುವ 45 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ :- ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ನಿಗಧಿಯಾದ ಹಣ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 806 (156)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ- ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ಯಾವ ಯಾವ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಿಲಾಗಿದೆ.

ಆ) 31-3-96 ರ ಒಳಗಾಗಿ ಬಿಡುಗಡೆ ಆದ ಹಣವೆಷ್ಟು; ಖರ್ಚಾದ ಹಣ ವೆಷ್ಟು?

ಶ್ರೀ ಮಾಲಿಕಯ್ಯ ಗುತ್ತೇದಾರ್ :- (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 1995-96 ರ ಸಾಲಿಗೆ ಕೆಳಕಂಡ ಯೋಜನೆಗಳಿಗೆ ನಿಗದಿ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ :-

ಕ್ರ. ಸಂ.	ಯೋಜನೆಯ ವಿವರ	ಪರಿಷ್ಕರಿಸಲ್ಪಟ್ಟ ಆಯವ್ಯಯದಲ್ಲಿ ನಿಗದಿಗೊಳಿಸಿದ ಹಣ ರೂ. ಲಕ್ಷಗಳಲ್ಲಿ
1)	ಮಾರ್ಜಿನ್ ಹಣ ಸಾಲದ ಯೋಜನೆ	335-00
2)	ಸ್ವಯಂ ಉದ್ಯೋಗ ಯೋಜನೆ (ವಾಹನ ಚಾಲನಾ ತರಬೇತಿ)	10-00
3)	ಪೋಸ್ಟ್ ಡಿಪ್ಲೊಮೋ ಇನ್ ಫೋರ್‌ಮನ್ ಶಿಪ್ ತರಬೇತಿ	3-00
4)	ವೃತ್ತಿಪರ ತರಬೇತಿ	15-00
5)	ಸಾಮೂಹಿಕ ನೀರಾವರಿ ಯೋಜನೆ	270-00
	ಒಟ್ಟು	683-00

31-3-96 ರ ಒಳಗೆ ಯೋಜನಾವಾರು ಬಿಡುಗಡೆ ಮಾಡಿದ ಮತ್ತು ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ. :-

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆ.	ಬಿಡುಗಡೆ ಮಾಡಿದ ಹಣ ರೂ.	ಖರ್ಚಾದ ಹಣ ರೂ.
1)	ಮಾರ್ಜಿನ್ ಹಣ ಸಾಲದ ಯೋಜನೆ	385-00	460.38
2)	ಸ್ವಯಂ ಉದ್ಯೋಗ ಯೋಜನೆ (ವಾಹನ ಚಾಲನಾ ತರಬೇತಿ)	10-00	11.14
4)	ವೃತ್ತಿಪರ ತರಬೇತಿ ಯೋಜನೆ	15-00	15.07
3)	ಪೋಸ್ಟ್ ಡಿಪ್ಲೊಮೋ ಇನ್ ಫೋರ್‌ಮನ್‌ಶಿಪ್ ಯೋಜನೆ	3.00	1.43
5)	ಸಾಮೂಹಿಕ ನೀರಾವರಿ ಯೋಜನೆ	270-00	200.00
	ಒಟ್ಟು	683-00	688.02

ವಿಷಯ :- 1995-96 ರಲ್ಲಿ ಬೆಳೆದ ಕಬ್ಬಿನ ಪ್ರಮಾಣ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 807 (155)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96 ನೇ ಸಾಲಿನ ಹಂಗಾಮಿನಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು?

ಆ) 15-6-96 ರವರೆಗೆ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಎಷ್ಟು ಪ್ರಮಾಣದ ಕಬ್ಬು ಅರೆದಿದೆ.

ಇ) ಅರೆಯಲು ಆಗದೇ ಉಳಿದ ಕಬ್ಬಿನ ಪ್ರಮಾಣವೆಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) ಸುಮಾರು 200.00 ಲಕ್ಷ ಟನ್ ಕಬ್ಬಿನ ಉತ್ಪಾದನೆ ಆಗಿರುವ ಅಂದಾಜು ಮಾಡಲಾಗಿದೆ.

ಆ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ದಿನಾಂಕ 15-6-96 ಕ್ಕೆ ಇದ್ದಂತೆ ಸುಮಾರು 10.4 ಲಕ್ಷ ಟನ್ ಕಬ್ಬು ಅರೆಯದೆ ಉಳಿದಿರುತ್ತದೆ.

CRUSHING PERFORMANCE OF SUGAR FACTORIES DURING 1995-96

CRUSHING PERFORMANCE

(in MTs.)

Sl. No.	Name of the Sugar Factory	Date of start	Date of closure	In the crushing season(from the date of starting till 15-6-96)			In the sugars sason 1-10-95 till 15-6-1996		
				Cane crushed	Sugar produced	Recovery	Cane crushed	Sugar produced	Recovery
1	2	3	4	5	6	7	8	9	10
I. Co-op Sector :									
1.	Bhadra	04.09.95	30-4-96	3,14,154	31,477	10.02	2,78,477	28,335	10.05
2.	Bidar	04.12.95	01-5-96	2,97,126	27,672	9.34	2,97,126	27,672	9.34
3.	Dakshina Kannada	26-11-95	12-05-96	1,43,008	12,012	8.38	1,43,008	12,012	8.38
4.	Dhoodhganga Krishne	31-10-95		5,60,250	61,653	11.00	5,60,250	61,653	11.00
5.	Ghataprabha	20-09-95	13-06-96	3,85,578	42,032	10.90	3,81,391	41,615	10.75
6.	Halasiddanatha	04-11-95	19-09-96	3,01,985	30,815	10.22	3,01,905	30,815	10.22
7.	Hemavathy	06-08-95	08-08-95	3,14,633	27,957	8.88	2,63,735	22,851	8.61

1	2	3	4	5	6	7	8	9	10
8.	Hiranya Keshi	17-10-95	22-06-96	10,07,019	99,800	9.90	10,07,019	99,800	9.90
9.	Malaprabha	09-11-95		7,30,570	77,013	10.77	7,30,570	77,013	10.77
10.	Nandi	20-11-95		3,59,300	40,028	11.42	3,59,300	40,028	11.42
11.	Pandavapura	16-06-95	15-06-96	3,32,245	31,770	9.56	2,30;242	22,258	9.18
12.	Raibag	03-10-95	22-06-96	5,21,345	52,200	10.01	5,21,345	52,200	10.01
13.	Sri. Srirama	09-08-95	28-05-96	2,75,880	25,055	9.08	2,22,222	20,147	9.07
14.	SSK Aland	09-01-96	06-06-96	1,30,100	11,657	9.38	1,30,100	11,657	9.38
15.	Vanivilasa	06-10-95	15-05-96	2,15,820	21,216	9.81	2,15,820	21,216	9.81
16.	Karnataka	09-12-95	27-06-96	2,45,917	21,451	8.72	2,45,917	21,451	8.72
17.	Kampli				-Not working-				
			Total	61,34,930	6,13,808	10.00	58,88,507	5,90,723	9.24
II Public Sector :									
18.	M.P.M Sugar	11-09-95	31-05-96	5,42,388	52,754	9.73	5,07,165	50,086	9.79
19.	Mysore Sugar Co.	12-07-95	18-06-96	9,00,428	78,374	8.70	6,45,199	54,086	8.24
			Total	14,42,816	1,31,128	9.09	11,52,364	1,04,172	9.01

1	2	3	4	5	6	7	8	9	10
III Joint Sector :									
20.	Davangere Sugars	08-09-95	07-05-96	2,96,739	28,279	9.53	2,75,691	24,408	9.42
21.	Gangavathi	07-12-95	12-05-96	2,39,913	22,852	9.48	2,39,913	22,852	9.48
			Total	5,36,652	51,131	9.53	5,12,604	49,260	9.45
IV private Sector :									
22.	Bannari Amman	27-07-95	24-05-96	6,86,370	68,670	10.00	5,73,598	58,266	10.10
23.	Chamundeshwari	03-09-95		5,57,146	46,066	8.27	5,17,720	43,195	8.34
24.	I.S.R	13-11-95	27-06-96	3,17,420	27,920	8.80	3,17,420	27,920	8.8θ
25.	Godavari	27-11-95		9,28,240	1,09,625	11.83	9,28,240	1,09,625	11.83
26.	Siruguppa (Gowri)	20-10-95	06-06-96	2,30,271	21,758	9.47	2,30,271	21,758	9.47
27.	Siruguppa (Desnur)	23-12-95	16-05-96	1,85,146	17,969	9.75	1,85,146	17,969	9.75
28.	Tungabhadra	06-01-96	17-04-96	98,463	7,952	8.30	98,463	7,952	8.30
29.	Mahadeshwara	02-11-95	31-05-96	1,84,197	13,374	7.27	1,84,197	13,374	7.27
30.	Ugar Sugars	21-09-95		12,48,797	1,41,596	11.34	12,31,575	1,39,812	11.29
			Total	44,36,050	4,54,930	10.25	42,66,630	4,39,871	9.46
		Grand	Total	125,50,448	12,50,997	9.97	1,18,23,105	11,84,026	10,01

ವಿಷಯ :- ವಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ಗ್ರಾನೈಟ್ ಸಿಗುವ ಪ್ರದೇಶದ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 811 (1551)

ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ) :- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಇಳಕಲ್ಲಿನಲ್ಲಿರುವ ಗ್ರಾನೈಟ್ ಸಿಗುವ ಒಟ್ಟು ಪ್ರದೇಶ ಎಷ್ಟು ; ಈಗಾಗಲೇ ಗಣಿಗಳಿಂದ ತೆಗೆದ ಗ್ರಾನೈಟ್ ಎಷ್ಟು ಎಕರೆ, ಉಳಿದ ಭಾಗ ಎಷ್ಟು ;

ಆ) ವರ್ಷಕ್ಕೆ ಈ ಗಣಿಗಳಿಂದ ಬರುವ ರಾಜಧನ ಎಷ್ಟು ;

ಇ) ದಿನಾಂಕ 5-8-95 ರಂದು ಜಿಲ್ಲಾಧಿಕಾರಿಗಳು ಮಾಡಿದ ಆದೇಶದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬ್ಯಾಂಕ್ ಗ್ಯಾರೆಂಟಿ ಮುಖಾಂತರ ಸಂದಾಯವಾದ ಹಣವೆಷ್ಟು ;

ಈ) ದಿನಾಂಕ 27-6-96 ರ ಉಚ್ಚ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇಲೆ ರಿಟ್ ಹೋದ ಪರಿಸ್ಥಿತಿಯಲ್ಲಿ ಉಚ್ಚ ನ್ಯಾಯಾಲಯವು ನೀಡಿದ ತೀರ್ಪು ಏನು ;

ಉ) ಈ ತೀರ್ಪಿನಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ರಾಜಧನದ ಮೂಲಕ ಸಂದಾಯವಾಗುತ್ತದೆ (ವಿವರ ನೀಡುವುದು)

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :-

ಅ) ವಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ಗ್ರಾನೈಟ್ ಶಿಲೆಯು 1490 ಎಕರೆಯಲ್ಲಿ ದೊರಕುತ್ತದೆ. ಇದರಲ್ಲಿ 388 ಎಕರೆಗಳ ಕ್ಷೇತ್ರದಲ್ಲಿ ಗ್ರಾನೈಟ್ ತೆಗೆಯಲಾಗಿದ್ದು, 1102 ಎಕರೆ ಪ್ರದೇಶವು ಉಳಿದಿದೆ.

ಆ) 1995-96 ನೇ ಸಾಲಿಗೆ ಈ ಗಣಿಗಳಿಂದ ರೂ. 871.42 ಲಕ್ಷಗಳ ರಾಜಧನ ಸರ್ಕಾರಕ್ಕೆ ಸಂದಿದೆ.

ಇ) ವಿಜಾಪುರ ಜಿಲ್ಲಾಧಿಕಾರಿಗಳ ಆದೇಶ ದಿನಾಂಕ 5-8-95 ರ ಪ್ರಕಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಬ್ಯಾಂಕ್ ಗ್ಯಾರೆಂಟಿ ಮೂಲಕ ರೂ. 23.92 ಕೋಟಿಗಳನ್ನು ಪಡೆದಿದೆ. ಆದರೆ ಈ ಹಣವು ಇನ್ನೂ ರಾಜ್ಯ ಬೊಕ್ಕಸಕ್ಕೆ ಸಂದಾಯವಾಗಬೇಕಾಗಿದೆ. ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಈ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡಿರುವುದಿಲ್ಲ.

ಈ) ಅನುಸೂಚಿತ ಜಮೀನು ಸರ್ಕಾರಕ್ಕೆ ಸೇರಿರುವುದಾಗಿ ತೀರ್ಪು ನೀಡಿ ಈ ಪ್ರಕರಣವು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಬಾಧಿತರಾದ ಅರ್ಜಿದಾರರು ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಮಾಡಲು ಅವಕಾಶ ಒದಗಿಸಿರುತ್ತದೆ. ಮೇಲ್ಕಂಡ ತೀರ್ಪನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿ. 27-6-96 ರಂದು ಮುಕ್ತ ನ್ಯಾಯಾಲಯದಲ್ಲಿ ನೀಡಿರುತ್ತದೆ. ದೃಢೀಕೃತ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನಿರೀಕ್ಷಿಸಲಾಗಿದೆ.

ಉ) ಹೆಚ್ಚುವರಿ ರಾಜಧನ ಬರುವ ನಿರೀಕ್ಷಣೆ ಇಲ್ಲ.

ವಿಷಯ :- ರಾಜ್ಯದಲ್ಲಿ ಕಬ್ಬು ಬೆಳೆಯುವ ಕ್ಷೇತ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 813 (716)

ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಕಬ್ಬು ಬೆಳೆಯುವ ಕ್ಷೇತ್ರವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) ; ಬಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಕಬ್ಬು ಬೆಳೆಯುವ ಕ್ಷೇತ್ರದ ತಾಲ್ಲೂಕುವಾರು ವಿವರ ನೀಡುವುದು ;

ಆ) ರಾಜ್ಯದಲ್ಲಿ ಕಬ್ಬು ಕಾರ್ಖಾನೆಗೆ ಹೋಗದೆ ಒಣಗಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ಅಂತಹ ಒಣಗಿದ ಕಬ್ಬಿನ ಕ್ಷೇತ್ರವೆಷ್ಟು ; ಜಿಲ್ಲಾವಾರು ವಿವರ ನೀಡುವುದು) ;

ಇ) ಹಾನಿಗೊಳಗಾದ ರೈತರಿಗೆ ಪರಿಹಾರ ಅಥವಾ ಸಹಾಯ ಧನ ನೀಡುವ ಪ್ರಸ್ತಾಪ ಸರ್ಕಾರದವರ ಮುಂದಿದೆಯೇ, ಹಾಗಿಲ್ಲದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) 1995-96 ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 2.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿನ ಬೆಳೆ ಇರುವ ಅಂದಾಜಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ- ಅ ದಲ್ಲಿ ಒದಗಿಸಲಾಗಿದೆ. ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ಕಬ್ಬು ಬೆಳೆದಿರುವ ಕ್ಷೇತ್ರದ ಅಂದಾಜು ವಿವರ ಕೆಳಕಂಡಂತೆ ಇರುತ್ತದೆ.

	ತಾಲ್ಲೂಕು	ಕಬ್ಬಿನ ಕ್ಷೇತ್ರ (ಹೆಕ್ಟೇರ್‌ನಲ್ಲಿ)
1)	ಬಾದಾಮಿ	72
2)	ಬಾಗಲಕೋಟೆ	134
3)	ಬಸವನ ಬಾಗೇವಾಡಿ	24
4)	ಬಿಜಾಪುರ	1000
5)	ಬೀಳಗಿ	450
6)	ಹುನಗುಂದ	-
7)	ಇಂಡಿ	4040
8)	ಜಮಖಂಡಿ	12010
9)	ಮುದ್ದೇಬಿಹಾಳ	-
10)	ಮುಧೋಳ	15091
11)	ಸಿಂಧಗಿ	1050
	ಒಟ್ಟು	33871

ಆ) ರಾಜ್ಯದಲ್ಲಿ ಹೆಚ್ಚುವರಿ ಕಬ್ಬು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಒಣಗಿದ ಕಬ್ಬಿನ ಕ್ಷೇತ್ರದ ಬಗ್ಗೆ ಬಂದಿರುವುದಿಲ್ಲ.

ಇ) ಇಲ್ಲ.

ESTIMATED CANE PRODUCTION IN KARNATAKA DURING 1995-96

(DISTRICTWISE INFORMATION)

Sl. No.	District name	Cane area (in hectres)	Estimated cane production (in lakh MTs.)
1.	Bangalore Urban	150	0.15
2.	Bangalore Rural	1790	1.30
3.	Belgaum	89000	70.00
4.	Bellary	8752	5.40
5.	Bidar	19035	10.16
6.	Bijapur	33871	26.00
7.	Chikmagalur	2000	1.50
8.	Chitradurga	6850	6.00
9.	Dakshina Kannada	2601	1.45
10.	Dharwad	5715	4.00
11.	Gulbarga	4500	3.50
12.	Hassan	7430	7.43
13.	Kodagu	24	0.01
14.	Kolar	3480	2.90
15.	Mandya	36508	38.50
16.	Mysore	16000	16.50
17.	Raichur	3120	2.02
18.	Shimoga	13429	15.00
19.	Tumkur	1086	1.08
20.	Uttara Kannada	1999	1.50
	Total	257340	214.40

ವಿಷಯ :- ಬಸವಕಲ್ಯಾಣಕ್ಕೆ ಒಳಚರಂಡಿ ಯೋಜನೆ ಜಾರಿಗೆ ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 815 (749)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದ ಒಟ್ಟು ಜನಸಂಖ್ಯೆ ಎಷ್ಟು?

ಆ) ಈ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಬಸವಕಲ್ಯಾಣ ಪಟ್ಟಣದಲ್ಲಿ ಒಳಚರಂಡಿ ಯೋಜನೆಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಒಳಚರಂಡಿ ವ್ಯವಸ್ಥೆ ಇಲ್ಲದ ನಾಗರೀಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) 1996-97 ರಲ್ಲಿ ಬಸವಕಲ್ಯಾಣ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಹೆಚ್ಚಿನ ಹಣಕಾಸಿನ ನೆರವನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :-

ಅ) 1991 ರ ಜನಗಣತಿ ಪ್ರಕಾರ ಪಟ್ಟಣದ ಜನಸಂಖ್ಯೆ 42774 ಈಗಿನ ಜನಸಂಖ್ಯೆ ಸುಮಾರು 48000 ಸಾವಿರ.

ಆ) ಬಂದಿದೆ.

ಇ) ಸದ್ಯಕ್ಕೆ ಒಳಚರಂಡಿ ಯೋಜನೆಯನ್ನು ಜಾರಿಗೊಳಿಸಲು ಯಾವ ಪ್ರಸ್ತಾವನೆ ಇರುವುದಿಲ್ಲ. ಸಾಕಷ್ಟು ಕುಡಿಯುವ ನೀರನ್ನು ಒದಗಿಸಿದ ನಂತರ ಒಳಚರಂಡಿ ಯೋಜನೆಯ ಪ್ರಸ್ತಾವನೆ ಮಾಡಬೇಕಾಗುತ್ತದೆ.

ಈ) ಗಮನಕ್ಕೆ ಬಂದಿರುವುದಿಲ್ಲ.

ಉ) ಈ ಪಟ್ಟಣದಲ್ಲಿ ಸಾಕಷ್ಟು (ಕನಿಷ್ಟ 113 ಲೀಟರ್) ನೀರು ಸರಬರಾಜು ಇಲ್ಲದಿರುವುದರಿಂದ ಇಲ್ಲಿ ಒಳಚರಂಡಿ ವ್ಯವಸ್ಥೆಯ ಕೆಲಸವನ್ನು ಕೈಗೊಳ್ಳಲು ಯಾವ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ವಿಷಯ :- ರಾಜ್ಯದಲ್ಲಿರುವ ಸರ್ಕಾರಿ ವಸತಿ ನಿಲಯಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 818 (1352)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಸರ್ಕಾರಿ ವಸತಿ ಪ್ರಸಾದ ನಿಲಯಗಳು ಎಷ್ಟು?

(ವಿಭಾಗವಾರು ಅಂಕಿ-ಅಂಶಗಳನ್ನೊದಗಿಸುವುದು) ಮತ್ತು ಪ್ರತ್ಯೇಕ ಸಂಖ್ಯೆ ತಿಳಿಸುವುದು.

ಆ) ಪ್ರತಿಯೊಂದು ಸರ್ಕಾರದ ವರ್ಗೀಕರಿಸಿರುವ ವಸತಿ ಪ್ರಸಾದ ನಿಲಯಗಳಿಗೆ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಸಿಗುವ ಅನುದಾನವೆಷ್ಟು (ವಿವರ ನೀಡುವುದು)

ಇ) ಪ್ರತಿಯೊಂದು ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :-

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಒಟ್ಟು 1099 ಸರ್ಕಾರಿ ವಸತಿ ನಿಲಯಗಳಿವೆ. ವಿಭಾಗವಾರು ವಿದ್ಯಾರ್ಥಿ ನಿಲಯಗಳು ಹಾಗೂ ಆದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತಿವೆ :-

ವಿಭಾಗ	ವಿ. ನಿಲಯಗಳ ಸಂಖ್ಯೆ		ವಿ. ನಿಲಯದಲ್ಲಿರುವ ವಸತಿದಾರರ ಸಂಖ್ಯೆ	
	ಮೆ : ಪೂರ್ವ	ಮೆ : ನಂತರ	ಮೆ : ಪೂರ್ವ	ಮೆ : ನಂತರ
1) ಬೆಂಗಳೂರು	285	18	15,323	6,100
2) ಮೈಸೂರು	247	34	14,178	2,750
3) ಬೆಳಗಾವಿ	217	14	10,133	1,000
4) ಗುಲ್ಬರ್ಗಾ	207	47	11,938	2,930
ಒಟ್ಟು	956	143	51,572	12,780

ಆ) ಪ್ರತಿಯೊಬ್ಬ ಮೆ. ಪೂರ್ವ ವಿ. ನಿಲಯದ ವಸತಿದಾರರಿಗೆ ಮಾಹೆಯಾನ ನೀಡುವ ಅನುದಾನದ ವಿವರ ಕೆಳಕಂಡಂತಿದೆ :-

1) ಆಹಾರ ವೆಚ್ಚ - ರೂ. 250-00
2) ಇತರೆ ವೆಚ್ಚ - ರೂ. 25-00
3) ಉಡುಪು (ವಾರ್ಷಿಕ) - ರೂ. 30-00
4) ಕ್ಷೌರದ ವೆಚ್ಚ (ವಾರ್ಷಿಕ) - ರೂ. 30-00
5) ಪಠ್ಯಪುಸ್ತಕ ಲೇಖನ ಸಾಮಗ್ರಿ (ವಾರ್ಷಿಕ) - ರೂ.100-000
6) ಹಾಸಿಗೆ ಹೊದಿಕೆ (3 ವರ್ಷಕ್ಕೊಮ್ಮೆ) - ರೂ. 300-00

ಮೆ. ನಂತರದ ವಿ. ನಿಲಯದ ವಸತಿದಾರರಿಗೆ ಮಂಜೂರಾಗುವ ಭಾರತ ಸರ್ಕಾರದ ವಿ. ವೇತನ ಮತ್ತು ಹೆಚ್ಚಿನ ಬೋಜನವೆಚ್ಚ ಸೇರಿದಂತೆ ಪ್ರತಿ ವಿದ್ಯಾರ್ಥಿಗೆ ಮಾಸಿಕ ಗರಿಷ್ಟ ರೂ. 300-00 ರಂತೆ ಭೋಜನ ವೆಚ್ಚ ಮಂಜೂರು ಮಾಡಲಾಗುತ್ತಿದೆ.

ಇ) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಇರುವ ವಸತಿದಾರರ ಪಟ್ಟಿಯನ್ನು ತಯಾರಿಸಿ ಲಗತ್ತಿಸಲಾಗಿದೆ.

ಘೋಷ್ವಾರೆ

ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು (15-04-96 ರವರೆಗೆ)

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು ವಿದ್ಯಾರ್ಥಿನಿಲಯಗಳ			ಒಟ್ಟು ನಿಲಯ ವಾಸಿಗಳ ಸಂಖ್ಯೆ		
		ಪ. ಜಾತಿ	ಪ. ವರ್ಗ	ಒಟ್ಟು	ಪ. ಜಾತಿ	ಪ. ವರ್ಗ	ಒಟ್ಟು
1.	ಬೆಂಗಳೂರು (ನ)	30	-	30	1,715	-	1,715
2.	ಬೆಂಗಳೂರು (ಗ್ರಾ)	42	1	43	2,520	75	2,595
3.	ಕೋಲಾರ	62	-	62	3,599	-	3,599
4.	ತುಮಕೂರು	50	1	51	2,418	50	2,468
5.	ಚಿತ್ರದುರ್ಗ	51	3	54	2,545	150	2,695
6.	ಶಿವಮೊಗ್ಗ	44	1	45	2,216	35	2,251
7.	ಮೈಸೂರು	54	9	63	3,403	467	3,870
8.	ಮಂಡ್ಯ	38	-	38	2,227	-	2,227
9.	ಹಾಸನ	47	-	47	2,538	-	2,538
10.	ಚಿಕ್ಕಮಗಳೂರು	27	3	30	1,795	127	1,922
11.	ದಕ್ಷಿಣ ಕನ್ನಡ	33	9	42	1,933	417	2,350
12.	ಕೊಡಗು	18	9	27	783	488	1,271
13.	ಬೆಳಗಾಂ	47	3	50	2,110	150	2,260
14.	ಧಾರವಾಡ	68	1	69	3,337	50	3,387
15.	ಬಿಜಾಪುರ	71	-	71	3,301	-	3,301
16.	ಉತ್ತರ ಕನ್ನಡ	27	-	27	1,185	-	1,185
17.	ಗುಲ್ಬರ್ಗಾ	73	2	75	4,483	100	4,583
18.	ರಾಯಚೂರು	50	-	50	2,397	-	2,397
19.	ಬೀದರ್	34	-	34	2,304	-	2,304
20.	ಬಳ್ಳಾರಿ	46	2	48	2,554	100	2,654
	ಒಟ್ಟು	912	44	956	49,363	2209	51,572

ಅನುಬಂಧ

ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರಗಳು

ಕ್ರ. ಸಂ.	ಜಿಲ್ಲೆಗಳು	ಬಾಲಕರ ವಿ.ನಿ. ಸಂಖ್ಯೆ	ಬಾಲಕರ ನಿಲಯ ವಾಸಿಗಳ ಸಂಖ್ಯೆ	ಬಾಲಕಿ ವಿ.ನಿ. ಸಂಖ್ಯೆ	ಬಾಲಕಿ ನಿಲಯ ವಾಸಿಗಳ ಸಂಖ್ಯೆ	ಒಟ್ಟು ಯೋಜನಾ ವಿ.ನಿ ಗಳ ಸಂಖ್ಯೆ	ಒಟ್ಟು ಯೋಜನಾ ವಿ.ನಿ. ವಾಸಿಗಳ ಸಂಖ್ಯೆ	ಒಟ್ಟು ಪ.ಜಾತಿ ವಿ.ನಿ.ಗಳು	ಒಟ್ಟು ಪ. ಜಾತಿ ನಿಲಯ ವಾಸಿಗಳು
1	2	3	4	5	6	7	8	9	10
1.	ಬೆಂಗಳೂರು (ನ)	24	1,395	6	350	7	250	30	1,715
2.	ಬೆಂಗಳೂರು (ಗ್ರಾ)	33	2,100	9	420	13	550	42	2,520
3.	ಕೋಲಾರ	47	3,033	15	566	18	750	62	3,599
4.	ತುಮಕೂರು	39	2,028	11	390	17	725	50	2,418
5.	ಚಿತ್ರದುರ್ಗ	40	2,100	11	445	15	600	51	2,545
6.	ಶಿವಮೊಗ್ಗ	30	1,631	14	585	13	525	44	2,216
7.	ಮೈಸೂರು	38	2,410	16	993	9	350	54	3,403
8.	ಮಂಡ್ಯ	25	1,532	13	695	12	500	38	2,227
9.	ಹಾಸನ	35	1,896	12	642	16	706	47	2,538
10.	ಚಿಕ್ಕಮಗಳೂರು	19	1,280	8	515	4	175	27	1,795
11.	ದಕ್ಷಿಣ ಕನ್ನಡ	19	1,005	14	928	7	300	33	1,933
12.	ಕೊಡಗು	11	526	7	257	2	75	18	783
13.	ಬೆಳಗಾಂ	36	1,710	11	400	17	775	47	2,110
14.	ಧಾರವಾಡ	51	2,568	17	769	14	550	68	3,337
15.	ಬಿಜಾಪುರ	55	2,616	16	685	36	1,175	71	3,301
16.	ಉತ್ತರ ಕನ್ನಡ	17	775	10	410	5	200	27	1,185
17.	ಗುಲ್ಬರ್ಗಾ	60	3,848	13	635	19	775	73	4,483
18.	ರಾಯಚೂರು	38	1,867	12	530	18	750	50	2,397
19.	ಬೀದರ್	26	1,850	8	454	8	300	34	2,304
20.	ಬಳ್ಳಾರಿ	34	2,039	12	515	11	450	46	2,554
	ಒಟ್ಟು	677	38,179	235	11,184	262	11,131	912	49,363

ಘೋಷ್ವಾರೆ

ಸರ್ಕಾರಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು (ದಿನಾಂಕ 15-04-96 ರಂತೆ)

ಕ್ರ. ಸಂ.	ಜಿಲ್ಲೆಗಳು	ಬಾಲಕರ ವಿ.ನಿ.ಗಳ ಸಂಖ್ಯೆ	ನಿಲಯ ವಾಸಿಗಳ ಸಂಖ್ಯೆ	ಬಾಲಕಿಯರ ವಿ.ನಿ. ಗಳ ಸಂಖ್ಯೆ	ನಿಲಯ ವಾಸಿಗಳ ಸಂಖ್ಯೆ	ಒಟ್ಟು ಯೋಜನೆಯ ವಿ.ನಿ.ಗಳು	ಒಟ್ಟು ಯೋಜನೆಯ ವಿ.ನಿ.ದ. ನಿಲಯಾ-ರ್ಥಿಗಳ ಸಂ.	ಒಟ್ಟು ಪ.ವರ್ಗದ ವಿ.ನಿ.ಗಳು	ಒಟ್ಟು ಪ.ವರ್ಗದ ನಿಲಯಾರ್ಥಿಗಳು
1.	ಬೆಂಗಳೂರು (ನ)	–	–	–	–	–	–	–	–
2.	ಬೆಂಗಳೂರು (ಗ್ರಾ)	1	75	–	–	–	–	1	75
3.	ಕೋಲಾರ	–	–	–	–	–	–	–	–
4.	ತುಮಕೂರು	1	50	–	–	1	50	1	50
5.	ಚಿತ್ರದುರ್ಗ	2	100	1	50	3	150	3	150
6.	ಶಿವಮೊಗ್ಗ	1	35	–	–	–	–	1	35
7.	ಮೈಸೂರು	5	292	4	175	5	225	9	467
8.	ಮಂಡ್ಯ	–	–	–	–	–	–	–	–
9.	ಹಾಸನ	–	–	–	–	–	–	–	–
10.	ಚಿಕ್ಕಮಗಳೂರು	2	77	1	50	3	127	3	127
11.	ದಕ್ಷಿಣ ಕನ್ನಡ	8	367	1	50	1	50	9	417
12.	ಕೊಡಗು	5	328	4	160	2	50	9	488
13.	ಬೆಳಗಾಂ	3	150	–	–	3	150	3	150
14.	ಧಾರವಾಡ	1	50	–	–	1	50	1	50
15.	ಬಿಜಾಪುರ	–	–	–	–	–	–	–	–
16.	ಉತ್ತರ ಕನ್ನಡ	–	–	–	–	–	–	–	–
17.	ಗುಲ್ಬರ್ಗಾ	2	100	–	–	2	100	2	100
18.	ರಾಯಚೂರು	–	–	–	–	–	–	–	–
19.	ಬೀದರ್	–	–	–	–	–	–	–	–
20.	ಬಳ್ಳಾರಿ	2	100	–	–	2	100	2	100
	ಒಟ್ಟು	33	1724	11	485	23	1052	44	2209

ಪ. ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪಟ್ಟಿ

		ಮಂಜೂರಾತಿ ಸಂಖ್ಯೆ	ಯೋಜನೆ
1. ಬೆಂಗಳೂರು (ಗ್ರಾ) ಜಿಲ್ಲೆ			
1) ಸ: ಬಾಲಕರ ವಿ.ನಿಲಯ	ರಾಮನಗರಂ ತಾಲ್ಲೂಕು	75	–
2. ಶಿವಮೊಗ್ಗ ಜಿಲ್ಲೆ			
1) ಸ: ಬಾಲಕರ ವಿ.ನಿಲಯ	ತಾಳಗುಪ್ಪ, ಸಾಗರ ತಾಲ್ಲೂಕು	35	–
3. ಮೈಸೂರು ಜಿಲ್ಲೆ			
1) ಸ: ಬಾಲಕರ ವಿ.ನಿಲಯ	ಚಾಮರಾಜನಗರ, ಚಾಮರಾಜನಗರ	50	–
2) -"-	ಕೊಳೇಗಾಲ, ಕೊಳ್ಳೇಗಾಲ ತಾ :	50	–
3) -"-	ಬೀಗೂರು, ಹೆಚ್.ಡಿ ಕೋಟೆ ತಾ :	92	–
4) -"-	ಪಿರಿಯಾಪಟ್ಟಣ	50 ಪಿ	
5) -"-	ಕನಕಲೂರು, ಪಿರಿಯಾಪಟ್ಟಣ ತಾ :	50 "	
6) ಸ:ಬಾಲಕಿಯರ ವಿ.ನಿಲಯ	ಪಿರಿಯಾಪಟ್ಟಣ ಟೌನ್	25	ಯೋ
7) -"-	ಹುಣಸೂರು	50	–
8) -"-	ಅಂತರಸಂತೆ, ಹೆಚ್.ಡಿ ಕೋಟೆ ತಾ :	50 ಪಿ	
9) -"-	ಗುಂಡ್ಲುಪೇಟೆ	50 ಪಿ	
		467	
4. ಚಿಕ್ಕಮಗಳೂರು ಜಿಲ್ಲೆ			
1) ಸ: ಬಾಲಕರ ವಿ.ನಿಲಯ	ಬಸರಿಕಟ್ಟೆ, ಕೊಪ್ಪ ತಾ :	27	ಯೋ
2) -"-	ಸಿಂಗಟಗೆರೆ, ಕಡೂರು ತಾ :	50 ಪಿ	
3) ಸ: ಬಾಲಕಿಯರ ವಿ.ನಿಲಯ	ಕೆಳಗೂರು, ಚಿಕ್ಕಮಗಳೂರು ತಾ :	50 ಪಿ	
		127	

5. ಕೊಡಗು ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಕಲ್ಲೊಹಳ್ಳಿ, ಸೋಮವಾರಪೇಟೆ ತಾ:	120
2)	-"-	ಗೋಣಿಮರೂರು -"-	25
3)	-"-	ಕುಟ್ಟ, ವಿರಾಜಪೇಟೆ ತಾ :	85
4)	-"-	ತಿಥಿಮತಿ, ವಿರಾಜಪೇಟೆ ತಾ :	73
5)	-"-	ಪೆರಾಜೆ, ಮಡಕೇರಿ ತಾ :	25 ಪಿ
6)	ಸ: ಬಾಲಕಿಯರ ವಿ.ನಿಲಯ	ಕುಟ್ಟ, ವಿರಾಜಪೇಟೆ ತಾ :	60
7)	-"-	ತಿಥಿಮತಿ, ವಿರಾಜಪೇಟೆ ತಾ :	50
8)	-"-	ಕರ್ಮಾಡು ವಿರಾಜಪೇಟೆ ತಾ :	25 ಪಿ
9)	-"-	ಕುಶಾಲನಗರ	25
			488

5. ದಕ್ಷಿಣ ಕನ್ನಡ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಮುಂಡಾಜೆ, ಬೆಳ್ತಂಗಡಿ ತಾ:	45
2)	-"-	ಬೆಳ್ತಂಗಡಿ	72
3)	-"-	ಆಡ್ಯಾನಡ್ಕೈ, ಬಂಟ್ವಾಳ ತಾ :	25
4)	-"-	ಬಾಡಲಾ ಸೂಳ್ಯಾ ತಾ :	25
5)	-"-	ಶಂಕರ್ನಾರಾಯಣ ಕುಂದಾಪುರ ತಾ :	50
6)	-"-	ಪಾಳ್ಯ ತಡಕ ಬಂಟ್ವಾಳ ತಾ :	25
7)	-"-	ವಿಟಾಲ, ಬಂಟ್ವಾಳ ತಾ :	75
8)	-"-	ಅಜೆಕರ, ಕಾರ್ಕಳ ತಾ :	50
9)	ಸ: ಬಾಲಕಿಯರ ವಿ.ನಿಲಯ	ಬೆಳ್ತಂಗಡಿ	50 ಪಿ
			417

7. ತುಮಕೂರು ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಚಿಕ್ಕಮಾಲೂರು, ಮಧುಗಿರಿ ತಾ:	50

8. ಚಿತ್ರದುರ್ಗ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ದೇವನಾಮರಗುಂಟೆ, ಚಳ್ಳಕೆರೆ ತಾ :	50 ಪಿ
2) -"-	ಹುಚ್ಚಂಗಿಪುರ, ಜಗಳೂರು ತಾ :	50 ಪಿ
3) -"-	ನಲಗತಚಿ, ಚಳ್ಳಕೆರೆ ತಾ :	50 ಪಿ

9. ಬೆಳಗಾಂ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ನೇಗಿಲಹಾಳ, ಬೈಲಹೊಂಗಲ ತಾ :	50 ಪಿ
2) -"-	ಚಂಚಣಿ, ಚಿಕ್ಕೋಡಿ ತಾ :	50 ಪಿ
3) -"-	ಮಸ್ತಿಮರಡಿ, ಬೈಲಹೊಂಗಲ ತಾ :	50 ಪಿ

10.ಧಾರವಾಡ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ಹಿರೇಬೆಂಡಿಗೆರೆ, ಶಿಗ್ಗಾಂವ ತಾ :	50 ಪಿ

11.ಗುಲ್ಬರ್ಗಾ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ಭೀಮನಹಳ್ಳಿ, ಚಿತ್ತಾಪುರ ತಾ :	50 ಪಿ
2) -"-	ಸುಲೇಪೇತೆ, ಸೇಡಂ ತಾ :	50 ಪಿ

12. ಬಳ್ಳಾರಿ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ಗುಂಡಗತ್ತಿ, ಹರಪನಹಳ್ಳಿ ತಾ :	50 ಪಿ
2) -"-	ಕಾಲ್ವಿ ಗ್ರಾಮ, ಹೂವಿನಹಡಗಲಿ ತಾ :	50 ಪಿ

ಪರಿಶಿಷ್ಟ ಜಾತಿಯ

ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪಟ್ಟಿ

(15-4-1996 ರಂತೆ)

1. ಬೆಂಗಳೂರು (ನಗರ) ಜಿಲ್ಲೆ

		ಮಂಜೂರಾತಿ ಯೋಜನೆ ಸಂಖ್ಯೆ
1) ಸ: ಬಾಲಕರ ವಿ.ನಿಲಯ	(ಇ) ಚಾಮರಾಜಪೇಟೆ	70
2) -"-	ವಿಜಯನಗರ 1ನೇ ಫ್ಲೋರ್, ಬೆಂಗಳೂರು (ನಗರ)	70

3) ಸ: ಬಾಲಕರ ವಿ.ನಿಲಯ		ವಿಜಯನಗರ 2ನೇ ಫ್ಲೋರ್, ಬೆಂಗಳೂರು (ನಗರ)	70
4)	-"-	ಆರ್.ಪಿ.ಸಿ ಬಡಾವಣೆ ಬೆಂಗಳೂರು	70
5)	-"-	ವರ್ತೂರು, ಬೆಂಗಳೂರು ದಕ್ಷಿಣ ತಾ:	100
6)	-"-	ಯಲಹಂಕ, ಬೆಂಗಳೂರು ಉತ್ತರ ತಾ:	75
7) ಎ.ಕೆ. ಬೋರ್ಡಿಂಗ್ ಹೋಮ್		ಫೋರ್ಟ್ ಸಿಟಿ (ಎನ್.ಆರ್ ಹಾಸ್ಟಲ್) ಚಾಮರಾಜಪೇಟೆ	150
8) ಸ: ಬಾಲಕರ ವಿ.ನಿಲಯ		ಗೌತಮಪುರ, ಲಿಂಗರಾಜಪುರ	50
9)	-"-	ಬೇಗೂರು, ಬೆಂಗಳೂರು ದಕ್ಷಿಣ ತಾ:	50
10)	-"-	ಕೋಡಿಗೆಹಳ್ಳಿ, ಬೆಂಗಳೂರು ಉತ್ತರ ತಾ:	50
11)	-"-	ಕೋದಂಡರಾಮನಗರ, ಬೆಂಗಳೂರು	50
12)	-"-	ಜ್ಞಾನಭಾರತಿ, ಮಲ್ಲತ್ತಹಳ್ಳಿ,	60
13)	-"-	ಆನೇಕಲ್	100
14)	-"-	ಸರ್ಜಾಪುರ, ಆನೇಕಲ್ ತಾ :	25
15)	-"-	ದೊಮ್ಮಸಂದ್ರ, ಆನೇಕಲ್ ತಾ :	50
16)	-"-	ಆನೇಕಲ್ ಟೌನ್	50
17)	-"-	ಸೊಂಡೆಕೊಪ್ಪ ಬೆಂಗಳೂರು ಉತ್ತರ	25
18)	-"-	ಮಾರತ್‌ಹಳ್ಳಿ ಬೆಂಗಳೂರು ದಕ್ಷಿಣ ತಾ:	50
19)	-"-	ಅತ್ತಿಬೆಲೆ, ಆನೇಕಲ್ ತಾ :	25 ಪಿ
20)	-"-	ತಾವರೆಕೆರೆ, ಬೆಂ: ದ : ತಾಲ್ಲೂಕು	25 ಪಿ
21)	-"-	ಕೆ. ನಾರಾಯಣಪುರ ದಕ್ಷಿಣ ತಾ :	25 ಪಿ
22)	-"-	ಮಾಚೋಹಳ್ಳಿ, ಬೆಂ: ಉ: ತಾಲ್ಲೂಕು	25 ಪಿ
23)	-"-	ವಿದ್ಯಾನಗರ, ಬೆಂಗಳೂರು ಉ : ತಾ :	50 ಪಿ
24)	-"-	ಜಿಗಣಿ, ಆನೇಕಲ್ ತಾ :	50 ಪಿ
25) ಸ : ಬಾಲಕಿಯರ ವಿ.ನಿಲಯ		ಜಯನಗರ 7 ನೇ ಬ್ಲಾಕ್ 1ನೇ ಫ್ಲೋರ್, ಬೆಂಗಳೂರು	60
26)	-"-	ಜಯನಗರ 7 ನೇ ಬ್ಲಾಕ್ ಗ್ರೌಂಡ್ ಫ್ಲೋರ್, ಬೆಂಗಳೂರು	125

27) ಸ : ಬಾಲಕಿಯರ ವಿ.ನಿಲಯ	ಮಾರತ್‌ಹಳ್ಳಿ, ಬೆಂಗಳೂರು ದ : ತಾ :		25
28) -"-	ಯಲಹಂಕ, ಬೆಂ: ಉ: ತಾಲ್ಲೂಕು		50
29) -"-	ಆನೇಕಲ್		40
30) -"-	ವರ್ತೂರು ಬೆಂ: ದ : ತಾಲ್ಲೂಕು		50 ಪಿ
	ಒಟ್ಟು	1715	

ಬಾಲಕರ ವಿ.ನಿಲಯಗಳ ಸಂಖ್ಯೆ	24	1365	ವಸತಿನಿಲಯ	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂ:	06	350	"	7	250
ಒಟ್ಟು	30	1715	"	7	250

2. ಬೆಂಗಳೂರು ಗ್ರಾಮಾಂತರ ಜಿಲ್ಲೆ

1) ಸ: ಬಾಲಕರ ವಿ.ನಿಲಯ	ದೇವನಹಳ್ಳಿ	90
2) -"-	ವಿಜಯಪುರ ದೇವನಹಳ್ಳಿ ತಾ :	35
3) -"-	ಹೊಸಕೋಟೆ	100
4) -"-	ಸೂಲಿಬೆಲೆ, ಹೊಸಕೋಟೆ ತಾ :	50
5) -"-	ಚನ್ನಪಟ್ಟಣ ಟೌನ್	90
6) -"-	ನಾಗವಾರ, ಚನ್ನಪಟ್ಟಣ ತಾ :	50
7) -"-	ಕೋಡಂಬಳ್ಳಿ, ಚನ್ನಪಟ್ಟಣ ತಾ :	50
8) -"-	ಮತ್ತಿಕೆರೆ, ಚನ್ನಪಟ್ಟಣ ತಾ :	50
9) -"-	ತ್ಯಾಮಗೊಂಡ್ಲು ನೆಲಮಂಗಲ ತಾ :	85
10) -"-	ನೆಲಮಂಗಲ	50
11) -"-	ಜಾಲಮಂಗಲ, ರಾಮನಗರಂ ತಾ :	80
12) -"-	ರಾಮನಗರಂ	50
13) -"-	ಮಾಗಡಿ	165
14) -"-	ಕುದೂರು, ಮಾಗಡಿ ತಾ :	70
15) -"-	ಗುಡೇಮಾರನಹಳ್ಳಿ, ಮಾಗಡಿ ತಾ :	25
16) -"-	ಹಾರೋಹಳ್ಳಿ, ಕನಕಪುರ ತಾ :	110

17)	ಸ.ಬಾಲಕರ ವಿ.ನಿಲಯ	ಹೊಸದುರ್ಗ, ಕನಕಪುರ ತಾ :	100
18)	-"-	ಸಾತನೂರು, ಕನಕಪುರ ತಾ :	50
19)	-"-	ದೊಡ್ಡಬಳ್ಳಾಪುರ	200
20)	-"-	ಹೊಸಕಬಾಳ, ಕನಕಪುರ ತಾ :	25 ಪಿ
21)	-"-	ಬಾಳೇನಹಟ್ಟಿ, ಮಾಡಬಾಳ, ಮಾಗಡಿ ತಾ:	50 ಪಿ
22)	-"-	ಜಡಿಗೇನಹಳ್ಳಿ, ಹೊಸಕೋಟೆ ತಾ :	50 ಪಿ
23)	-"-	ಆರೂಡಿ, ದೊಡ್ಡಬಳ್ಳಾಪುರ ತಾ :	25 ಪಿ
24)	-"-	ದೊಡ್ಡಮರಳವಾಡಿ, ಕನಕಪುರ ತಾ :	50 ಪಿ
25)	-"-	ಕನಕಪುರ	50
26)	-"-	ತಿಪ್ಪಸಂದ್ರ, ಮಾಗಡಿ	50 ಪಿ
27)	-"-	ಹುಣಸೇನಹಳ್ಳಿ, ಕನಕಪುರ ತಾ :	50 ಪಿ
28)	-"-	ದೇವಲಾಪುರ ಹೊಸಕೋಟೆ ತಾ :	50 ಪಿ
29)	-"-	ಶಿವನಹಳ್ಳಿ, ಕನಕಪುರ ತಾ :	50 ಪಿ
30)	-"-	ದೊಡ್ಡಗಂಗವಾಡ, ರಾಮನಗರ ತಾ :	50 ಪಿ
31)	-"-	ಕೂನ್ನ, ರಾಮನಗರ ತಾ :	50 ಪಿ
32)	-"-	ಬೂದಿಗೆರೆ, ದೇವನಹಳ್ಳಿ ತಾ :	50 ಪಿ
33)	-"-	ಚನ್ನಪಟ್ಟಣ	50 ಪಿ
34)	ಸ.ಬಾಲಕಿಯರ ವಿ.ನಿಲಯ	ದೇವನಹಳ್ಳಿ ಟೌನ್	50
35)	-"-	ಹೊಸಕೋಟೆ	50
36)	-"-	ಚನ್ನಪಟ್ಟಣ	40
37)	-"-	ನೆಲಮಂಗಲ	50
38)	-"-	ರಾಮನಗರಂ	25
39)	-"-	ಮಾಗಡಿ	65
40)	-"-	ಕನಕಪುರ	75
41)	-"-	ದೊಡ್ಡಬಳ್ಳಾಪುರ	40
42)	-"-	ಶೆಟ್ಟಿಹಳ್ಳಿ, ಚನ್ನಪಟ್ಟಣ ತಾ :	25
		ಒಟ್ಟು	2520

ಬಾಲಕರ ವಿ.ನಿಲಯಗಳ ಸಂಖ್ಯೆ	33 -	2100	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂ:	9 -	420	13	550
ಒಟ್ಟು	42	2520	13	550

3. ಕೋಲಾರ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಬಾಗೇಪಲ್ಲಿ	100
2)	-"-	ಚೇಳೂರು ಬಾಗೇಪಲ್ಲಿ ತಾ :	50
3)	-"-	ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್. ಬಂಗಾರಪೇಟೆ	66
4)	-"-	ಬಂಗಾರಪೇಟೆ	50
5)	-"-	ಬೇತಮಂಗಲ, ಬಂಗಾರಪೇಟೆ ತಾ :	35
6)	-"-	ಆಂಡರ್‌ಸನ್‌ಪೇಟೆ ಕೆ.ಜಿ.ಎಫ್. ಬಂಗಾರಪೇಟೆ ತಾ :	35
7)	-"-	ಬೂಗಿಕೋಟೆ ಟೌನ್ ಬಂಗಾರಪೇಟೆ ತಾ :	50
8)	-"-	ಚಿಕ್ಕಬಳ್ಳಾಪುರ	80
9)	-"-	ಚಿಂತಾಮಣಿ	95
10)	-"-	ಇರಗಾಂಪಲ್ಲಿ, ಚಿಂತಾಮಣಿ ತಾ :	50
11)	-"-	ಗೌರಿಬಿದನೂರು	90
12)	-"-	ಹೊಸೂರು	25
13)	-"-	ನಗರಗೆರೆ	50
14)	-"-	ಗುಡಿಬಂಡೆ	50
15)	-"-	ಯಲ್ದೋಡು	50
16)	-"-	ವೇಮಗಲ, ಕೋಲಾರ ತಾ :	35
17)	ಎ.ಕೆ. ಬೋರ್ಡಿಂಗ್ ಹೋಂ	ಕೋಲಾರ ಟೌನ್ ನಚಿಕೇತ ನಿಲಯ	250
18)	ಸ: ಬಾಲಕರ ವಿ.ನಿಲಯ	ಕೋಲಾರ ಟೌನ್	50
19)	-"-	ಕೆಂಬೋಡಿ, ಕೋಲಾರ ತಾ :	50
20)	-"-	ಮಾಲೂರು	150
21)	-"-	ಟೇಕಲ್, ಮಾಲೂರು ತಾ :	25
22)	-"-	ಶಿವಾರಪಟ್ನ, ಮಾಲೂರು ತಾ :	50
23)	-"-	ಚಿಕ್ಕಂಟೂರ, ಮಾಲೂರು ತಾ :	50

24)	ಸ: ಬಾಲಕರ ವಿ.ನಿಲಯ	ಮುಳಬಾಗಲ	150
25)	-"-	ಅವಾನಿ, ಮುಳಬಾಗಲ್ ತಾ :	50
26)	-"-	ಶಿಡ್ಲಘಟ್ಟ	47
27)	-"-	ಶ್ರೀನಿವಾಸಪುರ	100
28)	-"-	ಗೌನಪಲ್ಲಿ, ಶ್ರೀನಿವಾಸಪುರ ತಾ :	50
29)	-"-	ಹರಟಿ, ಕೋಲಾರ ತಾ :	50
30)	-"-	ಬೈರಕೂರು, ಮುಳಬಾಗಲ ತಾ :	50
31)	-"-	ಸಂತೆಕಾಲಹಳ್ಳಿ, ಚಿಂತಾಮಣಿ ತಾ :	25 ಪಿ
32)	-"-	ಮದ್ದೇರಿ, ಕೋಲಾರ ತಾ :	25 ಪಿ
33)	-"-	ಮಂಚೇನಹಳ್ಳಿ, ಗೌರಿಬಿದನೂರು	25 ಪಿ
34)	-"-	ಜಂಗಮಕೋಟೆ, ಶಿಡ್ಲಘಟ್ಟ ತಾ :	25 ಪಿ
35)	-"-	ಕೆ.ಜಿ.ಎಫ್. ಬಂಗಾರಪೇಟೆ ತಾ :	20 ಪಿ
36)	-"-	ಉತ್ತನೂರು, ಮುಳಬಾಗಿಲು ತಾ :	25 ಪಿ
37)	-"-	ವಿದುರಾಶ್ವತ್ಥ, ಗೌರಿಬಿದನೂರು ತಾ :	50 ಪಿ
38)	-"-	ನಂಗಲಿ, ಮುಳಬಾಗಿಲು ತಾ :	50 ಪಿ
39)	-"-	ಚಿಕ್ಕತಿರುಪತಿ, ಮಾಲೂರು ತಾ :	50 ಪಿ
40)	-"-	ಅಮ್ಮನಲ್ಲೂರು, ಕೋಲಾರ ತಾ :	50
41)	-"-	ಮುರುಗಮಲ್ಲಾ, ಚಿಂತಾಮಣಿ ತಾ :	50
42)	-"-	ಸೋಮಯಾಜಲಹಳ್ಳಿ, ಶ್ರೀನಿವಾಸಪುರ	50
43)	-"-	ದಳಸನೂರು ಶ್ರೀನಿವಾಸಪುರ ತಾ :	50 ಪಿ
44)	-"-	ರಘುತ್ತನಹಳ್ಳಿ, ಚಿಂತಾಮಣಿ ತಾ :	50 ಪಿ
45)	-"-	ಲಕ್ಷ್ಮಿಸಾಗರ ಗ್ರಾಮ, ಶ್ರೀನಿವಾಸಪುರ ತಾ :	50 ಪಿ
46)	-"-	ಕೈಸಂಬಳ್ಳಿ, ಬಂಗಾರುಪೇಟೆ ತಾ :	50 ಪಿ
47)	-"-	ಹನೂರು, ಚಿಂತಾಮಣಿ ತಾ :	50 ಪಿ
48)	ಸ: ಬಾಲಕಿಯರ ವಿ.ನಿಲಯ	ಬಾಗೇಪಲ್ಲಿ	25
49)	-"-	ಬಂಗಾರಪೇಟೆ	35
50)	-"-	ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್. ಬಂಗಾರಪೇಟೆ	40

51) ಸ: ಬಾಲಕಿಯರ ವಿ.ನಿಲಯ	ಕಾಮಸಂದ್ರ, ಬಂಗಾರಪೇಟೆ ತಾ :	35
52) -”-	ಬೇತಮಂಗಲ, ಬಂಗಾರಪೇಟೆ ತಾ :	50
53) -”-	ಚಿಕ್ಕಬಳ್ಳಾಪುರ	35
54) -”-	ಚಿಂತಾಮಣಿ	25
55) -”-	ಗೌರಿಬಿದನೂರು	40
56) -”-	ಕೋಲಾರ ಟೌನ್	61
57) -”-	ಗುಡಿಬಂಡೆ	35
58) -”-	ಮಾಲೂರು	35
59) -”-	ಮುಳಬಾಗಿಲು	25
60) -”-	ಶಿಡ್ಲಘಟ್ಟ	50
61) -”-	ಶ್ರೀನಿವಾಸಪುರ	25
62) -”-	ಮಾದನಹಳ್ಳಿ, ಕೋಲಾರ ತಾ :	25 ಪಿ
	ಒಟ್ಟು	3599

ಬಾಲಕರ ವಿ.ನಿಲಯಗಳ ಸಂಖ್ಯೆ	47 -	3033 ವಸತಿನಿಲಯ		ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂ:	15 -	566	”	18	750
ಒಟ್ಟು	62	3599	"	18	750

4. ತುಮಕೂರು ಜಿಲ್ಲೆ

1) ಸ: ಬಾಲಕರ ವಿ.ನಿಲಯ	ಚಿಕ್ಕನಾಯಕನಹಳ್ಳಿ	53
2) -”-	ಗುಬ್ಬಿ	50
3) -”-	ನಾಗಸಂದ್ರ, ಗುಬ್ಬಿ ತಾ :	50
4) -”-	ಕೊರಟಗೆರೆ, ಕೊರಟಗೆರೆ ತಾ :	65
5) -”-	ಅಮ್ಮತೂರು, ಕುಣಿಗಲ್ ತಾ :	85
6) -”-	ಯಡಿಯೂರು, ಕುಣಿಗಲ್ ತಾ :	50
7) -”-	ಐ.ಡಿ. ಹಳ್ಳಿ, ಮಧುಗಿರಿ ತಾ :	35
8) -”-	ಕುಣಿಗಲ್	75

9)	ಸ: ಬಾಲಕರ ವಿ.ನಿಲಯ	ಮಿಡಿಗೇಶಿ, ಮಧುಗಿರಿ ತಾ :	50
10)	-”-	ಪಾವಗಡ	110
11)	-”-	ವೈ.ಎನ್. ಹೊಸಕೋಟೆ, ಪಾವಗಡ ತಾ :	90
12)	-”-	ತಿರುಮಣಿ	50
13)	-”-	ಶಿರಾ	117
14)	-”-	ಕಳ್ಳಂಬೆಳ್ಳ, ಶಿರಾ ತಾ :	40
15)	-”-	ಚಂಗವಾರ	50
16)	-”-	ತಿಪಟೂರು	50
17)	-”-	ಹೊನ್ನುಡಿಕೆ, ತುಮಕೂರು ತಾ :	25
18)	ಎ.ಕೆ. ಬೋರ್ಡಿಂಗ್ ಹೋಂ	ತುಮಕೂರು, ತುಮಕೂರು ಟೌನ್	183
19)	ಸ: ಬಾಲಕರ ವಿ.ನಿಲಯ	ತುರುವೇಕೆರೆ	75
20)	-”-	ಬ್ಯಾಲ್ಯ, ಮಧುಗಿರಿ ತಾ :	50
21)	-”-	ಹುಯಿಲುದೊರೈ, ಶಿರಾ	50
22)	-”-	ಮಧುಗಿರಿ ಟೌನ್	50
23)	-”-	ಬೇಡತ್ತೂರು, ಮಧುಗಿರಿ	25 ಪಿ
24)	-”-	ವೂಲ್ಲೂರು, ಪಾವಗಡ ತಾ :	25 ಪಿ
25)	-”-	ಹೊಳವನಹಳ್ಳಿ, ಕೊರಟಗೆರೆ ತಾ :	25 ಪಿ
26)	-”-	ಚೇಳೂರು, ಗುಬ್ಬಿ ತಾ :	25 ಪಿ
27)	-”-	ಬೆಳ್ಳಾರ, ಸಿ.ಎನ್. ಹಳ್ಳಿ	25 ಪಿ
28)	-”-	ಮಂಚಲದೊರೆ ಗುಬ್ಬಿ ತಾ :	50 ಪಿ
29)	-”-	ಪಲವಳ್ಳಿ, ಪಾವಗಡ ತಾ :	50 ಪಿ
30)	-”-	ಹೆಗ್ಗೆರೆ, ತುಮಕೂರು ತಾ :	50 ಪಿ
31)	-”-	ಕೋಡ್ಲಾಪುರ, ಮಧುಗಿರಿ ತಾ :	50 ಪಿ
32)	-”-	ಲಕ್ಕನಹಳ್ಳಿ, ಶಿರಾ ತಾ :	50 ಪಿ
33)	-”-	ದಂಡಿನ ದಿಬ್ಬ, ಮಧುಗಿರಿ ತಾ :	50 ಪಿ
34)	-”-	ಗರಣಿ, ಮಧುಗಿರಿ ತಾ :	50 ಪಿ
35)	-”-	ಬೆಳಗುಲಿ, ಚಿಕ್ಕನಾಯಕನಹಳ್ಳಿ ತಾ :	50 ಪಿ

36)	ಸ: ಬಾಲಕರ ವಿ.ನಿಲಯ	ಹಂಚಿಹಳ್ಳಿ, ತುರುವೇಕೆರೆ ತಾ :	50 ಪಿ
37)	-"-	ಬೆಳ್ಳಾವೆ, ತುಮಕೂರು ತಾ :	50 ಪಿ
38)	-"-	ಬರಗೂರು, ಶಿರಾ ತಾ :	50 ಪಿ
39)	-"-	ಅಕ್ಕಿರಾಂಪುರ, ಕೊರಟಗೆರೆ ತಾ :	50 ಪಿ
40)	ಸ: ಬಾಲಕಿಯರ ವಿ.ನಿಲಯ	ಸಿ. ಎನ್. ಹಳ್ಳಿ	50
41)	-"-	ಹುಲಿಯೂರು	25
42)	-"-	ಗುಬ್ಬಿ	35
43)	-"-	ಕೊರಟಗೆರೆ	40
44)	-"-	ಕುಣಿಗಲ್	30
45)	-"-	ಮಧುಗಿರಿ	60
46)	-"-	ಪಾವಗಡ	40
47)	-"-	ಶಿರಾ	50
48)	-"-	ತಿಪಟೂರು	80
49)	-"-	ತುಮಕೂರು	100
50)	-"-	ತುರುವೇಕೆರೆ	30
		ಒಟ್ಟು	2418

ಬಾಲಕರ ವಿ.ನಿಲಯಗಳ ಸಂಖ್ಯೆ	39	2028	ವಸತಿನಿಲಯ	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂಖ್ಯೆ	11	390	"	17	725
ಒಟ್ಟು	50	2418	"	17	725

5. ಚಿತ್ರದುರ್ಗ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಪರಶುರಾಮಪುರ, ಚಳ್ಳಕೆರೆ ತಾ :	60
2)	-"-	ಮೀರಸಾಬನ ಚಳ್ಳಕೆರೆ ತಾ :	50
3)	-"-	ದೊಡ್ಡ ಸಿಂಗವನಹಳ್ಳಿ, ಚಿತ್ರದುರ್ಗ ತಾ :	50
4)	-"-	ತುರುವನೂರು ಚಿತ್ರದುರ್ಗ ತಾ :	50
5)	ಎ.ಕೆ. ಬೋಡಿಂಗ್ ಹೋಂ	ಚಿತ್ರದುರ್ಗ	150

6)	ಸ: ಬಾಲಕರ ವಿ.ನಿಲಯ	ಬ್ರಹ್ಮಸಾರು ಚಿತ್ರದುರ್ಗ ತಾ:	50
7)	-"-	ವಾಣಿವಿಲಾಸಪುರ ಹಿರಿಯೂರು	50
8)	-"-	ಭೀಮ ಸಮುದ್ರ, ಚಿತ್ರದುರ್ಗ ತಾ :	50
9)	-"-	ಆನಗೋಡು, ದಾವಣಗೆರೆ ತಾ :	75
10)	-"-	ಮಾಯಕೊಂಡ, ದಾವಣಗೆರೆ ತಾ :	50
11	-"-	ಆರಸೀಪುರ, ದಾವಣಗೆರೆ ತಾ :	50
12)	-"-	ಮಲೆಬೆನ್ನೂರು, ಹರಿಹರ ತಾ :	50
13)	-"-	ಹಿರಿಯೂರು	100
14)	-"-	ಗಣನಾಯಕನಹಳ್ಳಿ, ಹಿರಿಯೂರು ತಾ :	100
15)	-"-	ಹರಿಯುಬ್ಬೆ, ಹಿರಿಯೂರು ತಾ :	40
16)	-"-	ಹೊರಕೆರೆ ದೇವಪುರ, ಹೊಳ್ಳಕೆರೆ ತಾ :	50
17)	-"-	ಯಲ್ಲಡಕೆರೆ, ಹಿರಿಯೂರು ತಾ :	50
18)	-"-	ಹೊಳಲ್ಕೆರೆ ಟೌನ್	50
19)	-"-	ಹೊಸದುರ್ಗ	25
20)	-"-	ಜಗಳೂರು ಟೌನ್	50
21)	-"-	ಮೊಳಕಾಲ್ಮೂರು	75
22)	-"-	ಹರಿಹರ ಟೌನ್	80
23)	-"-	ನಾಗಸಮುದ್ರ, ಮೊಳಕಾಲ್ಮೂರು ತಾ :	50
24)	-"-	ರಾಂಪುರ -"-	50
25)	-"-	ಆಳಗವಾಡಿ, ಚಿತ್ರದುರ್ಗ ತಾ :	50
26)	-"-	ಗುಯಲಾಳು, ಹಿರಿಯೂರು ತಾ :	50
27)	-"-	ಮೀರಸಾಬನಹಳ್ಳಿ, ಚಳ್ಳಕೆರೆ, ತಾ :	25 ಪಿ
28)	-"-	ಆಲೂರು, ಹಿರಿಯೂರು ತಾ :	25 ಪಿ
29)	-"-	ತೋರಂಗಟ್ಟೆ, ಜಗಳೂರು ತಾ :	25 ಪಿ
30)	-"-	ಬೆಳ್ಳೂಡಿ, ಹರಿಹರ ತಾ :	25 ಪಿ
31)	-"-	ಕಾಲಿಮೇಡಳ್ಳಿ, ಚಳ್ಳಕೆರೆ ತಾ :	50 ಪಿ

32)	ಸ: ಬಾಲಕರ ವಿ.ನಿಲಯ	ಧರ್ಮಪುರ, ಹಿರಿಯೂರು ತಾ :	50 ಪಿ
33)	-"-	ಬುರಜನಕೊಪ್ಪ, ಹಿರಿಯೂರು ತಾ :	50 ಪಿ
34)	-"-	ಗೋಪನಾಳ, ದಾವಣಗೆರೆ ತಾ :	50 ಪಿ
35)	-"-	ಆಲೂರು-ಲಂಬಾಣಿಹಟ್ಟಿ, ದಾವಣಗೆರೆ ತಾ :	50 ಪಿ
36)	-"-	ಚಳ್ಳಕೆರೆ	50 ಪಿ
37)	-"-	ಗಿಂಡಾಪುರ, ಹಿರಿಯೂರು ತಾ :	50 ಪಿ
38)	-"-	ಶಾಮನೂರು ರಸ್ತೆ, ದಾವಣಗೆರೆ ತಾ :	50 ಪಿ
39)	-"-	ರಾಂಗಿರಿ, ಹೊಳಲ್ಕೆರೆ	50 ಪಿ
40)	-"-	ದೇವರುಕೊಟ್ಟ ಗ್ರಾಮ, ಹಿರಿಯೂರು ತಾ :	50 ಪಿ
41)	ಸ: ಬಾಲಕಿಯರ ವಿ.ನಿಲಯ	ಚಳ್ಳಕೆರೆ	40
42)	-"-	ಪರಶುರಾಂಪುರ, ಚಳ್ಳಕೆರೆ ತಾ :	40
43)	-"-	ಚಿತ್ರದುರ್ಗ	60
44)	-"-	ದಾವಣಗೆರೆ	50
45)	-"-	ಹರಿಹರ	40
46)	-"-	ಹಿರಿಯೂರು	40
47)	-"-	ಹೊಳಲ್ಕೆರೆ	40
48)	-"-	ಹೊಸದುರ್ಗ	25
49)	-"-	ಜಗಳೂರು	35
50)	-"-	ಮೊಳಕಾಲ್ಮೂರು ಟೌನ್	50
51)	-"-	ನಾರಾಯಣಗೊಂಡನಹಳ್ಳಿ, ಹೊಳಲ್ಕೆರೆ ತಾ :	25 ಪಿ
		ಒಟ್ಟು	2545

ಬಾಲಕರ ವಿ.ನಿಲಯಗಳ ಸಂಖ್ಯೆ	- 40	2100	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂಖ್ಯೆ	-11	445	15	600
ಒಟ್ಟು	51	2545	15	600

6. ಶಿವಮೊಗ್ಗ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಸೀಗೆಬಾಗಿ, ಭದ್ರಾವತಿ ತಾ :	60
2)	-"-	ಹೊಳೆಹೊನ್ನೂರು, ಭದ್ರವತಿ ತಾ :	50
3)	-"-	ಚನ್ನಗಿರಿ	75
4)	-"-	ಸಂತೆಬೆನ್ನೂರು, ಚನ್ನಗಿರಿ ತಾ :	41
5)	-"-	ನಲ್ಲೂರು, ಚನ್ನಗಿರಿ ತಾ :	50
6)	-"-	ಬಸವಾಪಟ್ನಾ, ಚನ್ನಗಿರಿ ತಾ :	50
7)	-"-	ಹೊನ್ನಾಳಿ	75
8)	-"-	ನ್ಯಾಮತಿ, ಹೊನ್ನಾಳಿ ತಾ :	25
9)	-"-	ಸಾಲಂಗ, ಹೊನ್ನಾಳಿ ತಾ :	50
10)	-"-	ರಿಪ್ಪನ್‌ಪೇಟೆ, ಹೊಸನಗರ ತಾ :	60
11)	-"-	ಸಾಗರ	75
12)	-"-	ತ್ಯಾಗರ್ತಿ ಸಾಗರ ತಾ :	50
13)	-"-	ಶಿಕಾರಿಪುರ	75
14)	ಎ.ಕೆ. ಬೋರ್ಡಿಂಗ್ ಹೋಂ	ಶಿವಮೊಗ್ಗ	145
15)	ಸ: ಬಾಲಕರ ವಿ.ನಿಲಯ	ಕುಂಸಿ, ಶಿವಮೊಗ್ಗ ತಾ:	50
16)	-"-	ಸೊರಬ	75
17)	-"-	ಅನ್ನವಟ್ಟಿ, ಸೊರಬ ತಾ :	25
18)	-"-	ತೀರ್ಥಹಳ್ಳಿ	75
19)	-"-	ದಾಗಿನಕಟ್ಟೆ, ಚನ್ನಗಿರಿ ತಾ :	50
20)	-"-	ತಾಳಗುಂದ, ಶಿಕಾರಿಪುರ ತಾ :	50
21)	-"-	ತತ್ತೂರು, ಸೊರಬ ತಾ :	50
22)	-"-	ಸಕುನವಳ್ಳಿ, ಸೊರಬ ತಾ :	25 ಪಿ
23)	-"-	ಭದ್ರಾವತಿ	25 ಪಿ
24)	-"-	ಜಡೆ, ಸೊರಬ ತಾ :	25 ಪಿ
25)	-"-	ಅನ್ವೇರಿ, ಭದ್ರಾವತಿ ತಾ :	50 ಪಿ

26)	ಸ: ಬಾಲಕರ ವಿ.ನಿಲಯ	ಬೆಳಗಟ್ಟೆ, ಹೊನ್ನಾಳಿ ತಾ :	50 ಪಿ
27)	-”-	ಬೀಳಕಿ, ಶಿಕಾರಿಪುರ ತಾ :	50 ಪಿ
28)	-”-	ಉದ್ರಿ, ಸೊರಬ ತಾ :	50 ಪಿ
29)	-”-	ಚಂದ್ರಗುತ್ತಿ, ಸೊರಬ ತಾ :	50 ಪಿ
30)	-”-	ಭದ್ರಾಪುರ, ಶಿಕಾರಿಪುರ ತಾ :	50 ಪಿ
31)	ಸ: ಬಾಲಕಿಯರ ವಿ.ನಿಲಯ	ಶಿರಾಳಕೊಪ್ಪ, ಶಿಕಾರಿಪುರ ತಾ:	25 ಪಿ
32)	ಸ: ಬಾಲಕರ ವಿ.ನಿಲಯ	ಕಾರ್ಗಲ್, ಸಾಗರ ತಾ :	25 ಪಿ
33)	ಸ: ಬಾಲಕಿಯರ ವಿ.ನಿಲಯ	ಭದ್ರಾವತಿ	30
34)	-”-	ಚಂದ್ರಗಿರಿ	50
35)	-”-	ಹೊನ್ನಾಳಿ	50
36)	-”-	ಹೊಸನಗರ	25
37)	-”-	ಸಾಗರ	50
38)	-”-	ಶಿಕಾರಿಪುರ	35
39)	-”-	ಶಿವಮೊಗ್ಗ	65
40)	-”-	ಆನವಟ್ಟಿ. ಸೊರಬ ತಾ :	25
41)	-”-	ಸೊರಬ	30
42)	-”-	ತೀರ್ಥಹಳ್ಳಿ	75
43)	-”-	ಆನಂದಪುರ, ಸಾಗರ ತಾ :	50 ಪಿ
44)	-”-	ಬಸವಪಟ್ಟಣ, ಚನ್ನಗಿರಿ ತಾ :	50 ಪಿ
		ಒಟ್ಟು	2216

ಬಾಲಕರ ವಿ.ನಿಲಯಗಳ ಸಂಖ್ಯೆ	- 30	1631	ಬೋರ್ಡಿಂಗ್ಸ್	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳ ಸಂಖ್ಯೆ	- 14	585	”	13	525
ಒಟ್ಟು	44	2216	”	13	525

7. **ಮೈಸೂರು ಜಿಲ್ಲೆ**

1)	ಸ: ಬಾಲಕರ ವಿ.ನಿಲಯ	ಸಂತೇಮರಹಳ್ಳಿ, ಸಿ.ಆರ್.ನಗರ ತಾ :	40
2)	-"-	ಕೊಡಿಗನೆ, ಸಿ.ಆರ್.ನಗರ ತಾ :	60
3)	-"-	ಚಂದಕವಾಡಿ, ಸಿ.ಆರ್.ನಗರ ತಾ :	50
4)	-"-	ಚಾಮರಾಜನಗರ ಟೌನ್	50
5)	-"-	ಕುದೇರು, ಚಾಮರಾಜನಗರ ತಾ :	25
6)	-"-	ಗುಂಡ್ಲುಪೇಟೆ	25
7)	-"-	ಬಾಡಹಳ್ಳಿ, ಗುಂಡ್ಲುಪೇಟೆ	50
8)	-"-	ಹೆಚ್.ಡಿ. ಕೋಟೆ.	100
9)	-"-	ಸರಗುರ್, ಹೆಚ್.ಡಿ. ಕೋಟೆ ತಾ :	50
10)	-"-	ಹುಣಸೂರು	70
11)	-"-	ಬೆಳಿಕೆರೆ, ಹುಣಸೂರು ತಾ :	40
12)	-"-	ಗೌಡಗೆರೆ, ಹುಣಸೂರು ತಾ :	50
13)	-"-	ಚಿಲ್ಕುಂದ, ಹುಣಸೂರು ತಾ :	40
14)	-"-	ಸಾರ್ವಜನಿಕ ವಿದ್ಯಾರ್ಥಿನಿಲಯ, ಕೊಳ್ಳೇಗಾಲ	300
15)	-"-	ಪಾಲ್ಯ, ಕೊಳ್ಳೇಗಾಲ ತಾ :	50
16)	-"-	ಹನೂರ್, ಕೊಳ್ಳೆಗಾಲ ತಾ :	75
17)	-"-	ಕಾಮಗೆರೆ, ಕೊಳ್ಳೆಗಾಲ ತಾ :	100
18)	-"-	ಸಾಲಿಗ್ರಾಮ, ಕೆ.ಆರ್. ನಗರ ತಾ :	40
19)	-"-	ಕೆ.ಆರ್. ನಗರ ತಾ : ಕೆ.ಆರ್. ತಾ :	75
20)	ಎ.ಕೆ. ಬೋರ್ಡಿಂಗ್ ಹೋಂ	ಮೈಸೂರು ತಾ :	250
21)	ಸ: ಬಾಲಕರ ವಿ.ನಿಲಯ	ಕಲ್ಯಾಣಪುರ, ಮೈಸೂರು ಜಿಲ್ಲೆ	50
22)	-"-	ನಾಗರ್ಲೆ, ನಂಜನಗೂಡು ತಾ :	95
23)	-"-	ಹೆಜ್ಜಿಗೆ, ನಂಜನಗೂಡು ತಾ :	25
24)	-"-	ಹುರ, ನಂಜನಗೂಡು ತಾ :	50
25)	-"-	ಟಗಡೂರ್, ನಂಜನಗೂಡು	50

26)	ಸ: ಬಾಲಕರ ವಿ.ನಿಲಯ	ಪಿರಿಯಾಪಟ್ಟಣ, ಪಿರಿಯಾಪಟ್ಟಣ ತಾ :	50
27)	-"-	ಟಿ. ನರಸೀಪುರ ತಾ :	50
28)	-"-	ವ್ಯಾಸರಾಜರಪುರ, ಟಿ.ಎನ್.ಪುರ ತಾ :	50
29)	-"-	ಮುಗೂರು, ಟಿ.ಎನ್.ಪುರ ತಾ :	50
30)	-"-	ಯಳಂದೂರು	75
31)	-"-	ಹೊನ್ನೂರು, ಯಳಂದೂರು ತಾ :	50
32)	-"-	ದಿನ್ನಹಳ್ಳಿ, ಕೊಳ್ಳೆಗಾಲ ತಾ :	25 ಪಿ
33)	-"-	ಆಗ್ರರ, ಯಳಂದೂರು ತಾ :	25 ಪಿ
34)	-"-	ರಾಂಪುರ, ಕೊಳ್ಳೇಗಾಲ ತಾ :	50 ಪಿ
35)	-"-	ಹರವೆ, ಚಾಮರಾಜನಗರ ತಾ :	50 ಪಿ
36)	-"-	ಯಡಿಯಾಳ ಗ್ರಾಮ, ನಂಜನಗೂಡು ತಾ :	25 ಪಿ
37)	-"-	ಬದನವಾಳು, ನಂಜನಗೂಡು ತಾ :	50 ಪಿ
38)	-"-	ಹೊಂಗನೂರು ಚಾಮರಾಜನಗರ ತಾ :	50 ಪಿ
39)	ಸ: ಬಾಲಕಿಯರ ವಿ.ನಿಲಯ	ಚಾಮರಾಜನಗರ	90
40)	-"-	ಕಬ್ಬಹಳ್ಳಿ, ಗುಂಡ್ಲುಪೇಟೆ ತಾ :	25
41)	-"-	ಗುಂಡ್ಲುಪೇಟೆ	33
42)	-"-	ಹೆಚ್.ಡಿ.ಕೋಟೆ	50
43)	-"-	ಹುಣಸೂರು	30
44)	-"-	ಕೊಳ್ಳೇಗಾಲ	100
45)	-"-	ಕೆ.ಆರ್.ನಗರ	50
46)	-"-	ಸಾಲಿಗ್ರಾಮ, ಕೆ.ಆರ್.ನಗರ ತಾ :	25
47)	-"-	ಮೈಸೂರು, ಮೈಸೂರು ತಾ :	50
48)	ಬಾಲಕಿಯರ ಎ.ಕೆ. ಬೋರ್ಡಿಂಗ್ ಹೋಂ	ಮೈಸೂರು ತಾ :	150
49)	ಸ: ಬಾಲಕರ ವಿ.ನಿಲಯ	ಪಿರಿಯಾಪಟ್ಟಣ, ಪಿರಿಯಾಪಟ್ಟಣ ತಾ :	25
50)	-"-	ನಂಜನಗೂಡು, ನಂಜನಗೂಡು ತಾ :	125

51)	ಸ: ಬಾಲಕಿಯರ ವಿ.ನಿಲಯ	ಟಿ. ನರಸೀಪುರ	125
52)	-”-	ಯಳಂದೂರು, ಯಳಂದೂರು	40
53)	-”-	ಹೊಮ್ಮರಗಹಳ್ಳಿ, ಹೆಚ್.ಡಿ.ಕೋಟೆ ತಾ :	25 ಪಿ
54)	-”-	ದೊಡ್ಡಕವಾಲೆಂದೆ, ನಂಜನಗೂಡು ತಾ :	50 ಪಿ
		ಒಟ್ಟು	3403

ಬಾಲಕರ ವಿ.ನಿಲಯಗಳ ಸಂಖ್ಯೆ	38	2410	ನಿಲಯವಾಸಿಗಳು	ಯೋಜನೆ	ಸಂಖ್ಯಾಬಲ
ಬಾಲಕಿಯರ ವಿ.ನಿಲಯಗಳ ಸಂಖ್ಯೆ	16	993	”	9	350
ಒಟ್ಟು	44	3403	”	9	350

8 ಮಂಡ್ಯ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಸೀಲನರೆ, ಕೆ.ಆರ್. ಪೇಟೆ. ತಾ :	25
2)	-”-	ಮದ್ದೂರು	150
3)	-”-	ಕೆ.ಎಂ. ದೊಡ್ಡಿ, ಮದ್ದೂರು ತಾ :	50
4)	-”-	ಜಿಗಣಳಲೆ, ಮದ್ದೂರು ತಾ :	50
5)	-”-	ಬೆಳಕವಾಡಿ, ಮಳವಳ್ಳಿ ತಾ :	60
6)	-”-	ಮಳವಳ್ಳಿ ಟೌನ್	50
7)	-”-	ದೊಡ್ಡಬುವಳ್ಳಿ, ಮಳವಳ್ಳಿ ತಾ :	50
8)	ಎ.ಕೆ. ಬೋಡಿಂಗ್ ಹೋಂ	ಮಂಡ್ಯ	225
9)	ಸ: ಬಾಲಕರ ವಿ.ನಿಲಯ	ಕೆರೆಗೋಡು, ಮಂಡ್ಯ ತಾ :	50
10)	-”-	ಮಂಗಳ, ಮಂಡ್ಯ	50
11)	-”-	ನಾಗಮಂಗಲ	87
12)	-”-	ಹೊನಕೆರೆ, ನಾಗಮಂಗಲ ತಾ :	60
13)	-”-	ಪಾಂಡವಪುರ	100
14)	-”-	ಬಣ್ಣಗಡಿ, ಪಾಂಡವಪುರ ತಾ :	50

15)	ಸ: ಬಾಲಕರ ವಿ.ನಿಲಯ	ಶ್ರೀರಂಗಪಟ್ಟಣ, ಶ್ರೀರಂಗಪಟ್ಟಣ ತಾ :	60
16)	-"-	ಕಾಡುಕೊತ್ತನಹಳ್ಳಿ, ಮದ್ದೂರು ತಾ :	25 ಪಿ
17)	-"-	ಪೂರಿಗಾಲಿ, ಮಳವಳ್ಳಿ ತಾ :	25 ಪಿ
18)	-"-	ಕೆ.ಆರ್.ಪೇಟೆ	25 ಪಿ
19)	-"-	ದಳವಾಯಿ ಕೋಡಿಹಳ್ಳಿ, ಮಳವಳ್ಳಿ ತಾ :	25 ಪಿ
20)	-"-	ಬಸರಾಳು, ಮಂಡ್ಯ ತಾ :	50 ಪಿ
21)	-"-	ಕೊತ್ತತ್ತಿ, ಮಂಡ್ಯ ತಾ :	50 ಪಿ
22)	-"-	ಹಿಟ್ಟನಹಳ್ಳಿ, ಕೊಪ್ಪಲು, ಮಂಡ್ಯ ತಾ :	50 ಪಿ
23)	-"-	ಶಿವಪುರ, ಮಂಡ್ಯ ತಾ :	50 ಪಿ
24)	-"-	ಬ್ಯಾಡರಹಳ್ಳಿ, ಮಳವಳ್ಳಿ ತಾ :	50 ಪಿ
25)	-"-	ಸಂತೆಬಾಡಹಳ್ಳಿ, ಕೆ.ಆರ್.ಪೇಟೆ ತಾ :	50 ಪಿ
26)	ಸ: ಬಾಲಕಿಯರ ವಿ.ನಿಲಯ	ಕೆ.ಆರ್.ಪೇಟೆ	25
27)	-"-	ಮದ್ದೂರು	85
28)	-"-	ಮಳವಳ್ಳಿ	85
29)	-"-	ಪೂರಿಗಾರಿ, ಮಳವಳ್ಳಿ ತಾ :	60
30)	-"-	ಬೆಳಕವಾಡಿ, ಮಳವಳ್ಳಿ ತಾ :	60
31)	-"-	ಬೆಳ್ಳೂರು, ನಾಗಮಂಗಲ ತಾ.	25
32)	-"-	ಮಂಡ್ಯ	100
33)	-"-	ನಾಗಮಂಗಲ	50
34)	-"-	ಪಾಂಡವಪುರ	50
35)	-"-	ಗಂಜಾಮ್, ಶ್ರೀರಂಗಪಟ್ಟಣ	40
36)	-"-	ಹಲಗೂರು, ಮಳವಳ್ಳಿ ತಾ :	50
37)	-"-	ಬೆಳಗೊಳ, ಶ್ರೀರಂಗಪಟ್ಟಣ ತಾ :	50 ಪಿ
38)	-"-	ಮಣ್ಣೂರು, ಮದ್ದೂರು ತಾ :	50 ಪಿ
		ಒಟ್ಟು	2227

ಬಾಲಕರ ವಿ.ನಿಲಯಗಳು	25	1532	ನಿವಾಸಿಗಳು	ಯೋಜನೆ	ಸಂಖ್ಯೆ
ಬಾಲಕಿಯರ ವಿ.ನಿಲಯಗಳು	13	695	ನಿವಾಸಿಗಳು	12	500
ಒಟ್ಟು	38	2227	"	12	500

9. ಹಾಸನ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಆಲೂರು	60
2)	-"-	ಅರಕಲಗೂಡು	100
3)	-"-	ಕೊಣನೂರು, ಅರಕಲಗೂಡು ತಾ :	50
4)	-"-	ಗಂಡಸಿ, ಅರಕಲಗೂಡು ತಾ :	25
5)	-"-	ಅರಸೀಕೆರೆ ಟೌನ್	80
6)	-"-	ಜಾವಗಲ್, ಅರಸೀಕೆರೆ ತಾ.	30
7)	-"-	ಬಾಣಾವಾರ, ಅರಸೀಕೆರೆ ತಾ.	35
8)	-"-	ಬೇಲೂರು, ಬೇಲೂರು ತಾ.	75
9)	-"-	ಹಳೇಬೀಡು, ಬೇಲೂರು ತಾ :	50
10)	-"-	ಚನ್ನರಾಯಪಟ್ಟಣ, ಚನ್ನರಾಯಪಟ್ಟಣ ತಾ :	80
11)	-"-	ಕಾಂತರಾಜಪುರ, ಚನ್ನರಾಯಪಟ್ಟಣ ತಾ :	50
12)	-"-	ಶಾಂತಿಗ್ರಾಮ, ಹಾಸನ ತಾ.	25
13)	ಎ.ಕೆ. ಬೋರ್ಡಿಂಗ್ ಹೋಂ	ಮಾಧ್ಯಮಿಕ ಶಾಲೆ, ಹಾಸನ	150
14)	-"-	ಪ್ರೌಢಶಾಲೆ, ಹಾಸನ	78
15)	ಸ: ಬಾಲಕರ ವಿ.ನಿಲಯ	ಬೈರದಹಳ್ಳಿ, ಹಾಸನ ತಾ.	50
16)	-"-	ಹೊಳೆನರಸೀಪುರ, ಹೊಳೆನರಸೀಪುರ, ತಾ.	75
17)	-"-	ಹಳ್ಳಿ ಮೈಸೂರು, ಹೆಚ್.ಎನ್.ಪುರ ತಾ :	50
18)	-"-	ಚೌಡನಹಳ್ಳಿ, ಹೆಚ್.ಎನ್.ಪುರ ತಾ :	50
19)	-"-	ಸಕಲೇಶಪುರ	63
20)	-"-	ಹಗ್ರೆ, ಬೇಲೂರು ತಾ.	25
21)	-"-	ಹೆಟ್ಟೂರು, ಸಕಲೇಶಪುರ ತಾ.	50
22)	-"-	ಹಡವಹಳ್ಳಿ, ಹೆಚ್.ಎನ್.ಪುರ ತಾ :	50
23)	-"-	ಹೆಣಬಾಳು, ಸಕಲೇಶಪುರ ತಾ :	25 ಪಿ
24)	-"-	ಅರೇಹಳ್ಳಿ, ಬೇಲೂರು ತಾ :	50 ಪಿ
25)	-"-	ಬೆಣ್ಣೂರು, ಅರಕಲಗೂಡು ತಾ :	25 ಪಿ

26)	ಸ: ಬಾಲಕರ ವಿ.ನಿಲಯ	ಬಾಗೇವಾಳ, ಅರಸೀಕೆರೆ ತಾ :	25 ಪಿ
27)	-”-	ದೊಡ್ಡಬೆಮ್ಮಟ್ಟಿ, ಅರಕಲಗೂಡು ತಾ :	50 ಪಿ
28)	-”-	ಮುಡದಿ, ಅರಸೀಕೆರೆ ತಾ :	50 ಪಿ
29)	-”-	ಕಂಡಲಿ, ಹಾಸನ ತಾ :	50 ಪಿ
30)	-”-	ಬಿಕ್ಕೋಡು, ಬೇಲೂರು ತಾ :	50 ಪಿ
31)	-”-	ಹರಪನಹಳ್ಳಿ, ಅರಸೀಕೆರೆ ತಾ :	50 ಪಿ
32)	-”-	ಬಾಡ..ಪೇಟೆ, ಸಕಲೇಶಪುರ ತಾ :	50 ಪಿ
33)	-”-	ದೊಡ್ಡಕುಂಬೆ, ಹೊಳೇನರಸಿಪುರ ತಾ :	50 ಪಿ
34)	-”-	ನಿಡುವಾಣೆ, ಹೊಳೇನರಸಿಪುರ ತಾ :	50 ಪಿ
35)	-”-	ಕಬ್ಬಳ್ಳಿ, ಚನ್ನರಾಯಪಟ್ಟಣ ತಾ :	50 ಪಿ
36)	ಸ:ಬಾಲಕಿಯರ ವಿ.ನಿಲಯ	ಆಲೂರು ಟೌನ್	65
37)	-”-	ಅರಕಲಗೂಡು	50
38)	-”-	ಅರಸೀಕೆರೆ	60
39)	-”-	ಬೇಲೂರು	55
40)	-”-	ಚನ್ನರಾಯಪಟ್ಟಣ	50
41)	-”-	ಹಾಸನ	100
42)	-”-	ಕಾರ್ಲೆ, ಹಾಸನ ತಾ.	25
43)	-”-	ಸಕಲೇಶಪುರ	60
44)	-”-	ಹೊಳೇನರಸೀಪುರ	52
45)	-”-	ಸಾರಾಪುರ, ಹಾಸನ ತಾ :	25 ಪಿ
46)	-”-	ಸಾಲಿಗ್ರಾಮ, ಹಾಸನ ತಾ :	50 ಪಿ
47)	-”-	ದೊಡ್ಡಮೇಟಿಕುರ್ಕೆ, ಅರಸೀಕೆರೆ ತಾ.	50 ಪಿ
		ಒಟ್ಟು	2538

ಒಟ್ಟು ಬಾಲಕರ ವಿದ್ಯಾರ್ಥಿನಿಲಯಗಳು	35	1896	ನಿವಾಸಿಗಳು	ಯೋಜನೆ	ಸಂಖ್ಯಾಬಲ
ಒಟ್ಟು ಬಾಲಕಿಯರ ವಿದ್ಯಾರ್ಥಿನಿಲಯಗಳು	12	642	ನಿವಾಸಿಗಳು	16	706
ಒಟ್ಟು	47	2538		16	706

10. ಚಿಕ್ಕಮಗಳೂರು ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಆನೂರು, ಚಿಕ್ಕಮಗಳೂರು ತಾ.	50
2)	ಎ.ಕೆ. ಬೋರ್ಡಿಂಗ್ ಹೊಂ	ಚಿಕ್ಕಮಗಳೂರು ಟೌನ್	200
3)	-"-	ಕುರುಬರಬೂದಿಹಾಳ್, ಚಿಕ್ಕಮಗಳೂರು ತಾ :	50
4)	-"-	ಬೀರೂರು, ಕಡೂರು ತಾ .	60
5)	-"-	ಸಕರಾಯಪಟ್ಟಣ, ಕಡೂರು ತಾ .	60
6)	-"-	ಕಡೂರು	70
7)	-"-	ಕೊಪ್ಪ	60
8)	-"-	ಕಮರಡಗಿ, ಕೊಪ್ಪ ತಾ.	50
9)	-"-	ಮೂಡಿಗೆರೆ	175
10)	-"-	ಕಳಸ, ಮೂಡಿಗೆರೆ ತಾ.	50
11)	-"-	ಅಜಂಪುರ, ತರೀಕೆರೆ ತಾ.	60
12)	ಶ್ರೀಮತಿ ಗಂಗಮ್ಮ ತಲಕೂರು ಸಿದ್ದಪ್ಪ ಶೆಟ್ಟಿ ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ	ಎನ್.ಆರ್. ಪುರ	40
13)	ಸ: ಬಾಲಕರ ವಿ.ನಿಲಯ	ತರೀಕೆರೆ	70
14)	-"-	ಶಿವಾನೆ, ತರೀಕೆರೆ ತಾ.	60
15)	-"-	ಲಕ್ಕವಳ್ಳಿ, ತರೀಕೆರೆ ತಾ.	60
16)	-"-	ಲಕ್ಯ, ಚಿಕ್ಕಮಗಳೂರು ತಾ :	25 ಪಿ
17)	-"-	ಗೋಣಿಬೀಡು, ಮೂಡಿಗೆರೆ ತಾ.	50 ಪಿ
18)	-"-	ದಾರದಹಳ್ಳಿ, ಮೂಡಿಗೆರೆ ತಾ.	50 ಪಿ
19)	-"-	ಹರಿಹರಪುರ, ಕೊಪ್ಪ ತಾ.	60
20)	ಸ: ಬಾಲಕಿಯರ ವಿ.ನಿಲಯ	ಚಿಕ್ಕಮಗಳೂರು	135
21)	-"-	ಕಡೂರು	50
22)	-"-	ಕೊಪ್ಪ	35
23)	-"-	ಮೂಡಿಗೆರೆ	125
24)	-"-	ಎನ್.ಆರ್.ಪುರ	60

25)	ಸ: ಬಾಲಕರ ವಿ.ನಿಲಯ	ಶೃಂಗೇರಿ	50
26)	-"-	ತರೀಕೆರೆ	35
27)	-"-	ಹಿರೇನಲ್ಲೂರು, ಕಡೂರು ತಾ.	25
		ಒಟ್ಟು	1795

ಒಟ್ಟು ಬಾಲಕರ ವಿದ್ಯಾರ್ಥಿನಿಲಯಗಳು	19	1280	ನಿವಾಸಿಗಳು	ಯೋಜನೆ	ಸಂಖ್ಯಾಬಲ
ಒಟ್ಟು ಬಾಲಕಿಯರ ವಿದ್ಯಾರ್ಥಿನಿಲಯಗಳು	8	515	ನಿವಾಸಿಗಳು	4	175
ಒಟ್ಟು	27	1795	"	4	175

11. ದಕ್ಷಿಣ ಕನ್ನಡ ಜಿಲ್ಲೆ

1)	ಸ: ಬಾಲಕರ ವಿ.ನಿಲಯ	ಬಂಟ್ವಾಳ ಟೌನ್	50
2)	-"-	ಕುಂದಾಪುರ	65
3)	-"-	ಅಂಪರ್, ಕುಂದಾಪುರ ತಾ.	50
4)	-"-	ಕುಂದಾಪುರ ತಾ.	50
5)	-"-	ಮೂಡಬಿದ್ರಿ, ಕಾರ್ಕಾಳ ತಾ.	50
6)	-"-	ಹೆಬ್ರಿ, ಕಾರ್ಕಾಳ ತಾ.	50
7)	-"-	ಮುಲ್ಕಿ, ಮಂಗಳೂರು ತಾ.	50
8)	-"-	ಕದ್ರಿ, ಮಂಗಳೂರು ತಾ.	100
9)	-"-	ಬಾಜ್ಪೆ, ಮಂಗಳೂರು ತಾ.	50
10)	-"-	ಕೊಬ್ಬೆಟ್ಟ, ಪುತ್ತೂರು ತಾ :	115
11)	-"-	ಸುಳ್ಯ	75
12)	-"-	ಕಡಬಾ, ಸೂಳ್ಯಾ ತಾ.	50
13)	-"-	ಕುಜಿಬೆಟ್ಟು, ಉಡುಪಿ ತಾ.	50
14)	-"-	ಪಡುಬಿದ್ರಿ, ಉಡುಪಿ ತಾ.	50
15)	-"-	ಯದ್ತಡಿ, ಉಡುಪಿ ತಾ.	50

16)	ಸ: ಬಾಲಕಿಯರ ವಿ.ನಿಲಯ ಸುಳ್ಯ		50
17)	-"-	ಬಜಗೋಲಿ, ಕಾರ್ಕಳ	25 ಪಿ
18)	-"-	ಮುನಿಯಾಲು, ಕಾರ್ಕಳ	50 ಪಿ
19)	-"-	ಕೊನಲು, ಪುತ್ತೂರು ತಾ.	50 ಪಿ
20)	-"-	ಕುರಾಡಿ, ಉಡುಪಿ ತಾ.	50
21)	-"-	ಕಾಪು, ಉಡುಪಿ	50
22)	-"-	ಪಾಣೆ ಮಂಗಳೂರು, ಬಂಟ್ವಾಳ ತಾ.	50
23)	-"-	ಬೈಂದೂರು, ಕುಂದಾಪುರ ತಾ.	50
24)	-"-	ಕಾರ್ಕಳ	75
25)	-"-	ಕೊಡಿಯಾಲಬೈಲ್, ಮಂಗಳೂರು	125
26)	-"-	ಯದಿತಡಿ, ಉಡುಪಿ ತಾ.	50
27)	-"-	ಉಡುಪಿ	53
28)	-"-	ಬೆಳ್ತಂಗಡಿ	50
29)	-"-	ಕುರಾಡಿ, ಉಡುಪಿ ತಾ.	50 ಪಿ
30)	-"-	ವೇಣ್ಣೂರು, ಬೆಳ್ತಂಗಡಿ ತಾ.	25 ಪಿ
31)	-"-	ನಿಟ್ಟೆ, ಕಾರ್ಕಳ ತಾ.	50 ಪಿ
32)	-"-	ಮತ್ತೂರು	125
33)	-"-	ಮೂಡಬಿದ್ರೆ, ಕಾರ್ಕಳ ತಾ.	50 ಪಿ
		ಒಟ್ಟು	1933

ಒಟ್ಟು ಬಾಲಕರ ವಿದ್ಯಾರ್ಥಿನಿಲಯಗಳು	19	1005	ನಿವಾಸಿಗಳು	ಯೋಜನೆ	ಸಂಖ್ಯಾಬಲ
ಒಟ್ಟು ಬಾಲಕಿಯರ ವಿದ್ಯಾರ್ಥಿನಿಲಯಗಳು	14	928	ನಿವಾಸಿಗಳು	7	300
ಒಟ್ಟು	33	1933	ನಿವಾಸಿಗಳು	7	300

12. ಕೊಡಗು ಜಿಲ್ಲೆ

1) ಸ: ಬಾಲಕರ ವಿ.ನಿಲಯ		ಮಡಿಕೇರಿ	100
2)	-"-	ಚೆರಂಬಾನೆ, ಮಡಿಕೇರಿ ತಾ.	50
3)	-"-	ಕುಶಾಲನಗರ, ಸೋಮವಾರಪೇಟೆ	67
4)	-"-	ಕೊಡ್ಲಿಪೇಟೆ, ಸೋಮವಾರಪೇಟೆ ತಾ.	25
5)	-"-	ಸೋಮವಾರಪೇಟೆ	47
6)	-"-	ಶನಿವಾರಸಂತೆ, ಸೋಮವಾರಪೇಟೆ	25
7)	-"-	ಹೆಬ್ಬಾಲೆ, ಸೋಮವಾರಪೇಟೆ ತಾ.	25
8)	-"-	ವೀರಾಜಪೇಟೆ	47
9)	-"-	ಪೊನ್ನಂಪೇಟೆ, ವೀರಾಜಪೇಟೆ ತಾ.	40
10)	-"-	ಬಳಿಲೆ, ವೀರಾಜಪೇಟೆ ತಾ.	50 ಪಿ
11)	-"-	ಗೋಣಿಕೊಪ್ಪ, ವೀರಾಜಪೇಟೆ ತಾ.	50
12) ಸ: ಬಾಲಕಿಯರ ವಿ.ನಿಲಯ		ಮಡಿಕೇರಿ	67
13)	-"-	ಸೋಮವಾರಪೇಟೆ	15
14)	-"-	ಕುಶಾಲನಗರ, ಸೋಮವಾರಪೇಟೆ ತಾ.	25
15)	-"-	ಪೊನ್ನಂಪೇಟೆ, ವೀರಾಜಪೇಟೆ ತಾ.	60
3) ಆಯೋಧ್ಯ ಘಟನೆಯ ಸಂಬಂಧದಲ್ಲಿ ದಿನಾಂಕ 6-12-1992 ರಂದು ಹಾಗೂ ನಂತರ ಬೆಂಗಳೂರು ಮತ್ತು ಮೆಸೂರಿನಲ್ಲಿ ನಡೆದ ಕರ್ನಾಟಕ ಬಂದ್ ಮತ್ತು ನಂತರದ ಸಮಯದಲ್ಲಿ ಜರುಗಿದ ಗಲಭೆಗಳಿಂದಾಗಿ ಸಂಪೂರ್ಣ ಹಾಗೂ ಭಾಗಶಃ ಹಾನಿಗೊಳಗಾದ ಕೈಗಾರಿಕಾ ಘಟಕಗಳಿಂದ ಉತ್ಪಾದಿಸಲ್ಪಟ್ಟ ಸರಕುಗಳನ್ನು ರಾಜ್ಯದ ವರ್ತಕರು ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಮಾಡುವುದರ ಸಂಬಂಧದಲ್ಲಿ ನೀಡಬೇಕಾದ ತೆರಿಗೆಯ ವಿನಾಯಿತಿ ಬಗ್ಗೆ ದಿನಾಂಕ 12-6-1996 ರಂದು ಹೊರಡಿಸಲಾದ ಎಫ್‌ಡಿ 162 ಸಿಎಸ್‌ಎಲ್ 94 (4) ನೇ ಕ್ರಮಾಂಕದ ಅಧಿಸೂಚನೆ ;

1979 ರ ಕರ್ನಾಟಕ ಪ್ರವೇಶ ತೆರಿಗೆ ಅಧಿನಿಯಮದ 30 (5) ನೇ ಕಲಮಿನ ಮೇರೆಗೆ ;

4) ಆಯೋಧ್ಯಾ ಘಟನೆಯ ಸಂಬಂಧದಲ್ಲಿ ದಿನಾಂಕ 6-12-1992 ಮತ್ತು ನಂತರ ಬೆಂಗಳೂರು ಮತ್ತು ಮೈಸೂರಿನಲ್ಲಿ ಗಲಭೆಯಲ್ಲಿ ಹಾನಿಗೊಳಗಾದ ಕೈಗಾರಿಕಾ ಘಟಕಗಳೆಂದು ಘೋಷಿಸಲ್ಪಟ್ಟ ಉದ್ದಿಮೆಗಳು ಖರೀದಿಸಲಾಗುವ ಹೊಸ ಯಂತ್ರಗಳು ಮತ್ತು ಬಿಡಿಭಾಗಗಳ ಮೇಲೆ ನೀಡಬೇಕಾಗಿದ್ದ ತೆರಿಗೆ ವಿನಾಯಿತಿಯ ಬಗ್ಗೆ ದಿನಾಂಕ 11-11-1993 ರಿಂದ ಜಾರಿಗೆ ಬರುವಂತೆ ದಿನಾಂಕ 12-6-1996 ರಂದು ಹೊರಡಿಸಲಾದ ಎಫ್‌ಡಿ 162 ಸಿಎಸ್‌ಎಲ್ 94 (2) ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III **ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಅವರು :- ಅಧ್ಯಕ್ಷರೇ**

1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 262(3) ನೇ ಕಲಮಿನ ಮೇರೆಗೆ ;

1) 1993-94 ನೇ ಸಾಲಿನ ಮಂಡ್ಯ ಜಿಲ್ಲಾ ಪಂಚಾಯತ್‌ನ ಲೆಕ್ಕ ಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ ;

2) 1993-94 ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ;

1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 300 (5) ನೇ ಕಲಮಿನ ಮೇರೆಗೆ ;

3) 1994-95 ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾ ಪತ್ರದೊಂದಿಗೆ) ;

1956 ರ ಕಂಪೆನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ ;

4) 1990-91 ನೇ ಸಾಲಿನ ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 17 ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

IV ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯಗಳ ಮಂತ್ರಿ) ಅವರು :- ಅಧ್ಯಕ್ಷರೇ

1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 24 (4) ನೇ ಕಲಮಿನ ಮೇರೆಗೆ ;

1992-93 ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

V ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಮಂತ್ರಿ) ಅವರು :- ಅಧ್ಯಕ್ಷರೇ 1964 ನೇ ಇಸವಿಯ ಕರ್ನಾಟಕ ಭೂ ಕಂದಾಯ ಅಧಿನಿಯಮದ 194 (2) ನೇ ಕಲಮಿನ ಮೇರೆಗೆ ;

1) ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ 225 ಗ್ರಾಮಗಳಿಗೆ 1994-95 ನೇ ಸಾಲಿನ ಭೂ ಕಂದಾಯ ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 17-6-1996 ರಂದು ಹೊರಡಿಸಲಾದ ಆರ್‌ಡಿ 158 ಟಿಆರ್‌ಎಂ 95 ನೇ ಕ್ರಮಾಂಕದ ಅಧಿಸೂಚನೆ ;

2) ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 27 ಗ್ರಾಮಗಳಿಗೆ 1995-96 ನೇ ಸಾಲಿನ ಭೂ ಕಂದಾಯ ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 1-7-1996 ರಂದು ಹೊರಡಿಸಲಾದ ಆರ್‌ಡಿ 81 ಟಿಆರ್‌ಎಂ 96 ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VI ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಮಂತ್ರಿ) ಅವರು :-

1956ರ ಕಂಪೆನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ ;

1991-92 ನೇ ಸಾಲಿನ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

VII ಶ್ರೀಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿ) ಅವರು :- ಅಧ್ಯಕ್ಷರೇ,

1959 ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 130 ನೇ ಕಲಮಿನ ಮೇರೆಗೆ ;

1) 1960 ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 5-6-1996 ರಂದು ಹೊರಡಿಸಲಾದ ಸಿಎಂಡಬ್ಲ್ಯು 166 ಸಿಎಲ್‌ಎಂ 92 ನೇ ಕ್ರಮಾಂಕದ ಅಧಿಸೂಚನೆ ;

2) 1960 ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 1996 ರಂದು ಹೊರಡಿಸಲಾದ ಸಿಎಂಡಬ್ಲ್ಯು 64 ಸಿಎಲ್‌ಎಂ 91 ನೇ ಕ್ರಮಾಂಕದ ಅಧಿಸೂಚನೆ ;

1966 ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮದ 152 (ಎ) ಕಲಮಿನ ಮೇರೆಗೆ ;

3) 1966 ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ 152 (ಎ) ಗೆ ತಿದ್ದುಪಡಿ "11. ಸೋಯಾಬೀನ್" ಪದವನ್ನು ಸೇರಿಸುವ ಸಂಬಂಧದಲ್ಲಿ ದಿನಾಂಕ 211-3-1996 ರಂದು ಹೊರಡಿಸಲಾದ ಸಿಎಂಡಬ್ಲ್ಯು 233 ಎಂಆರ್‌ಇ 95 ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VIII ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಮಂತ್ರಿ) ಅವರು :- ಅಧ್ಯಕ್ಷರೇ,

1987 ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 48(5) ನೇ ಕಲಮಿನ ಮೇರೆಗೆ ;

1) 1988-89 ರಿಂದ 1994-95 ನೇ ಸಾಲುಗಳವರೆಗಿನ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳು ;

2) 1994-95 ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.

1987 ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 49 ನೇ ಕಲಮಿನ ಮೇರೆಗೆ ;

3) 1988-89 ರಿಂದ 1994-95 ನೇ ಸಾಲುಗಳವರೆಗಿನ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ;

4) 1995-96 ನೇ ಸಾಲಿನ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ ;

5) 1995-96 ನೇ ಸಾಲಿನ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ ;

6) 1995-96 ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

IX ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಮಂತ್ರಿ) ಅವರು :- ಅಧ್ಯಕ್ಷರೇ,

1976 ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 42 (3) ನೇ ಕಲಮಿನ ಮೇರೆಗೆ ;

1) 1993-94 ನೇ ಸಾಲಿನ ಕರ್ನಾಟಕ ವಿಶ್ವ ವಿದ್ಯಾನಿಲಯದ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಪರಿಶೋಧನಾ ವರದಿ ;

1976 ರ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಅಧಿನಿಯಮದ 45 (2) ನೇ ಕಲಮಿನ ಮೇರೆಗೆ ;

2) 1994-95 ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

X ಶ್ರೀ ಬಿ. ಎ. ಮೊಯಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿ) ಅವರು :- ಅಧ್ಯಕ್ಷರೇ,

1956 ರ ಕಂಪೆನಿಗಳ ಕಾಯ್ದೆಯ 619 ಕಲಮಿನ ಮೇರೆಗೆ ;

1993-94 ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 18 ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XI ಶ್ರೀ ಹೆಚ್. ಡಿ. ರೇವಣ್ಣ (ವಸತಿ ಮಂತ್ರಿ) ಅವರು :- ಅಧ್ಯಕ್ಷರು,

1962 ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಅಧಿನಿಯಮದ 55 (3) ನೇ ಕಲಮಿನ ಮೇರೆಗೆ ;

1993-94 ನೇ ಸಾಲಿನ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವಾರ್ಷಿಕ ಲೆಕ್ಕತಪಾಸಣಾ ವರದಿಯನ್ನು ಮಂಡಿಸುತ್ತೇನೆ.

XII ಶ್ರೀ ಕೆ. ಬಿ. ಶಾಣಪ್ಪ (ಅಬಕಾರಿ ಮಂತ್ರಿ) ಅವರು :- ಅಧ್ಯಕ್ಷರು,

1965 ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮದ 71(4) ನೇ ಕಲಮಿನ ಮೇರೆಗೆ ;

1) 1965 ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ್ ತಯಾರಿಸುವಿಕೆ) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (1) ನೇ ಕ್ರಮಾಂಕದ ಅಧಿಸೂಚನೆ ;

2) 1967ರ ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (2) ನೇ ಕ್ರಮಾಂಕದ ಅಧಿಸೂಚನೆ ;

3) 1967 ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (3) ನೇ ಕ್ರಮಾಂಕದ ಅಧಿಸೂಚನೆ ;

4) 1968 ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95(4) ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಕಾಗದ ಪತ್ರಗಳನ್ನು ಮಂಡಿಸಲಾಯಿತು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಆಲಮಟ್ಟಿ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನನ್ನನ್ನು ಅನುಮತಿ ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ನಾನು ಸ್ವಲ್ಪ ತಡವಾಗಿ ಬಂದೆ ತಮಗೆ ಕೇಳುವುದಕ್ಕೆ ಆಗಲಿಲ್ಲ. ನಾನು 11-00 ಗಂಟೆಗೆ ಸಭೆ ಇರುವುದು ಎಂದು ತಿಳಿದು ತಡವಾಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನನಗೂ ತಾವು ಆಲಮಟ್ಟಿ, ಜುರಾಲ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಆಯಿತು, ಈಗ ಚರ್ಚೆ ಇಲ್ಲ ತಾವು ಎರಡೆರಡು ನಿಮಿಷ ದಲ್ಲಿ ಪ್ರಸ್ತಾಪ ಮಾಡಿ, ಇದು ಶೂನ್ಯ ವೇಳೆ ಇದಕ್ಕೆ ಸರ್ಕಾರ ಉತ್ತರ ಕೊಡುತ್ತದೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಆಲಮಟ್ಟಿ ಡ್ಯಾಂ ಎತ್ತರಿಸುವ ಬಗ್ಗೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಆಲಮಟ್ಟಿ ಅಣೆಕಟ್ಟು ನಿರ್ಮಾಣದ ಬಗ್ಗೆ ಯಥಾ ಸ್ಥಿತಿ ಮುಂದು ವರೆಸಿಕೊಂಡು ಹೋಗುವಂತೆ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದವರು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆಂದು ತಿಳಿದುಬಂದಿದೆ. The Centre has asked to issue directive to the State of Andhra Pradesh to maintain statusquo.

``The orders were passed by the Bench comprising Chief Justice P.S. Mishra and Justice Syed Sadatuallah Hussaini, in a writ petition filed by Mr. R. Krishnaiah, president of the Andhra Pradesh Backward classes welfare Association". ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಸ್ಪಷ್ಟವಾಗಿ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಒಂದು ನಿರ್ದೇಶನ ಕೊಟ್ಟು ಈ ತಿಂಗಳ 30 ರವರೆಗೆ ಒಂದು ಅಬ್ಜೆಕ್ಷನ್‌ನನ್ನೂ ತಾವು ಹಾಕಬೇಕು, ಅಲ್ಲಿಯ ವರೆವಿಗೆ ಆಲಮಟ್ಟಿ ಡ್ಯಾಮ್‌ನ ನಿರ್ಮಾಣದ ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಆದೇಶ ಕೊಟ್ಟಿರುವ ಬಗ್ಗೆ ಎಲ್ಲಾ ನಮ್ಮ ಸರ್ಕಾರಕ್ಕೆ ಆಂಧ್ರ ಪ್ರದೇಶ್ ಹೈಕೋರ್ಟ್‌ನಿಂದ ಏನಾದರೂ ನೋಟೀಸ್ ಬಂದಿತ್ತೇ? ಬಂದಿದ್ದರೆ ತಾವೇನಾದರೂ ಪಿಟಿಶನ್ ಫೈಲ್ ಮಾಡಿದ್ದೀರಾ? ಅಥವಾ ಆ ರೀತಿ ಅವರು ಮಾಡಬಹುದು ಎನ್ನುವ ಊಹೆ ಮಾಡಿಕೊಂಡು ತಾವು ಕೇವಿಯಟ್ ಹಾಕಿದ್ದರೆ ಈ ಆರ್ಡರ್ ಬರದಂತೆ ತಡೆಯಬಹುದಾಗಿತ್ತು. ಇವೊತ್ತು ಪ್ಲಾನಿಂಗ್ ಕಮಿಶನ್ ಅಪ್ರೂವಲ್ ಪ್ರಕಾರ, ಬಚಾವತ್ ಆಯೋಗದ ತೀರ್ಮಾನದ ಪ್ರಕಾರ 528 ಮೀಟರ್ ಎತ್ತರ ಕಟ್ಟುವುದಕ್ಕೆ ನಾವು ಕಾರ್ಯ ಪ್ರವೃತ್ತರಾಗಿದ್ದೇವೆ, ಏಕೆಂದರೆ ಅದು ನಮ್ಮ ಹಕ್ಕು ಕೂಡ ಆಗಿದೆ. ಇದು ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಆಗಿರುವುದರಿಂದ ಜ್ಯುರಿಸ್‌ಡಿಕ್ಶನ್ ಅವರಿಗೆ ಬರುವುದಿಲ್ಲ ಎಂದು ಬಹಳ ಸ್ಪಷ್ಟವಾಗಿದೆ. ಹಿಂದೆ ಸನ್ಮಾನ್ಯ ನಂಜೇಗೌಡರು ಕಾವೇರಿ ಟ್ರಿಬ್ಯುನಲ್ ಬಗ್ಗೆ ಹೈ ಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಫೇಲ್ ಆದಾಗ ಅವರು ಸುಪ್ರೀಂ ಕೋರ್ಟಿಗೆ ಹಾಕಿದರು, ಏಕೆಂದರೆ ಜ್ಯುರಿಸ್ ಡಿಕ್ಶನ್ ಬರುವುದಿಲ್ಲ ಎನ್ನುವ ಕಾರಣಕ್ಕೋಸ್ಕರ. ಆದಕ್ಕೋಸ್ಕರ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಈ ರಿಟ್ ಪಿಟಿಶನ್ ನಾಟ್ ಮೇನ್‌ಟೇನಬಲ್ ಎಂದು ಹೇಳಿ ಸುಪ್ರೀಂ ಕೋರ್ಟಿಗೆ ನೇರವಾಗಿ ನಾವು ಹೋಗಬಹುದೇ ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. ಹೈಕೋರ್ಟ್ ಮುಂದೆ ಹೋಗದೇ ಇದನ್ನು ರಿಟ್ ಪಿಟಿಶನ್‌ನ್ನು ವಜಾ ಮಾಡಿ ಎಂದು ಹೋಗುವುದು ಸರಿ ಹೋಗುಬಹುದೇ ಎಂಬ ಬಗ್ಗೆ ಲಾ ಡಿಪಾರ್ಟಮೆಂಟಿನವರನ್ನು ತಾವು ಕನ್‌ಸಲ್ಟ್ ಮಾಡಿ ಬರುವುದು ಒಳ್ಳೆಯದು. ಅಧ್ಯಕ್ಷರೇ, ಒಂದಲ್ಲ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ಕಾವೇರಿ ಬೇಸಿನ್‌ನಲ್ಲಿರುವಂಥರಾಗಿರಬಹುದು, ಕೃಷ್ಣಾ ಬೇಸಿನ್‌ನಲ್ಲಿರುವಂಥವರಾಗಿರಬಹುದು, ಇವರಿಗೆ ಈ ರೀತಿಯ ಆತಂಕಕಾರಿ ವಿಷಯಗಳೇ ಹೆಚ್ಚಾಗಿ ಬರುತ್ತಿವೆ. ಬಹುಶಃ ಸೂಕ್ಷ್ಮವಾಗಿ

ಮತ್ತು ಸಮಯಕ್ಕೆ ಸರಿಯಾಗಿ ನಾವು ಆ್ಯಕ್ಟ್ ಮಾಡದೇ ಈ ರೀತಿಯ ಸಮಸ್ಯೆಗಳು ನಮಗೆ ಬರುತ್ತಿವೆಯೇನೋ ಎಂದು ನಮಗನ್ನಿಸುತ್ತಿದೆ. ಏಕೆಂದರೆ ಆಂಧ್ರಪ್ರದೇಶದವರು ಎಷ್ಟೊಂದು ಮುಂಜಾಗ್ರತೆಯಿಂದ ಬಜಾವತ್ ಆಯೋಗದ ತೀರ್ಮಾನದ ಪ್ರಕಾರ ಬಜಾವತ್ ಆಯೋಗದ ಅಪ್ರೂವಲ್ ಆದ ರೀತಿಯಲ್ಲಿಯೇ ನಾವು ಇವೊತ್ತು ಡ್ಯಾಮ್‌ನ್ನು 528 ಮೀಟರ್‌ಗೆ ಎತ್ತರಿಸಲು ಹೊರಟಿದ್ದೇವೆಯಾದರೂ ಇದಕ್ಕೆ ಅವರು ಅಬ್ಜೆಕ್ಷನ್ ಮಾಡಿ ಸ್ಟೇ ಮಾಡಿಸುವ ಮಟ್ಟಕ್ಕೆ ಅವರು ಹೋಗುತ್ತಿದ್ದಾರೆ. ಎಂದು ನಮಗನ್ನಿಸುತ್ತದೆ. ಏಕೆಂದರೆ ಆಂಧ್ರ ಪ್ರದೇಶದವರು ಎಷ್ಟೊಂದು ಮುಂಜಾಗ್ರತೆಯಿಂದ ಬಜಾವತ್ ಆಯೋಗದ ತೀರ್ಮಾನದ ಪ್ರಕಾರ ಬಜಾವತ್ ಆಯೋಗದ ಅಪ್ರೂವಲ್ ಆದ ರೀತಿಯಲ್ಲಿಯೇ ನಾವು ಇವೊತ್ತು ಡ್ಯಾಮ್‌ನ್ನು 528 ಮೀಟರ್‌ಗೆ ಎತ್ತರಿಸಲು ಹೊರಟ್ಟಿದ್ದೇವೆಯಾದರೂ ಇದಕ್ಕೆ ಅವರು ಅಬ್ಜೆಕ್ಷನ್ ಮಾಡಿ ಸ್ಟೇ ಮಾಡಿಸುವ ಮಟ್ಟಕ್ಕೆ ಅವರು ಹೋಗುತ್ತಿದ್ದಾರೆ. ಆದರೆ ನಾವು ಕಣ್ಣು ಮುಚ್ಚಿಕೊಂಡು ಜುರಾಲಾ ಅಣೆಕಟ್ಟನ್ನು ಎತ್ತರಿಸುವುದನ್ನು ನೋಡುತ್ತಿದ್ದೇವೆ. ಇವೊತ್ತು ಅಲ್ಲಿ ಹತ್ತಾರು ಹಳ್ಳಿಗಳು ಮತ್ತು ದೇವಸ್ಥಾನಗಳು ಮುಳುಗಡೆಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಅಂದರೆ ಯಾವ ರೀತಿಯಲ್ಲಿ ನಮ್ಮ ಸರ್ಕಾರ ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ ಮತ್ತು ಅಕ್ಕಪಕ್ಕದ ರಾಜ್ಯಗಳವರು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ ಎಂಬುದು ಇಲ್ಲಿ ಬಹಳ ಸ್ಪಷ್ಟವಾಗುತ್ತದೆ, ಈಗ ಜುರಾಲಾ ಬಗ್ಗೆ ಚರ್ಚೆ ಮಾಡುವ ಸಂದರ್ಭ ಅಲ್ಲ, ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟಗೊಂಡಿದ್ದು ಯಾವ ರೀತಿಯಲ್ಲಿ ಮುಳುಗಡೆಯಾಗುತ್ತದೆ ಮತ್ತು ದುಷ್ಪರಿಣಾಮಗಳು ಏನು ಎಂಬುದರ ಬಗ್ಗೆ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅದಕ್ಕೋಸ್ಕರ ಈ ಬಗ್ಗೆ ಸರ್ಕಾರ ಏಮನು ಸ್ಟ್ಯಾಂಡ್ ತೆಗೆದುಕೊಳ್ಳುತ್ತದೆ ಬೆಂಬಲ ಇರುವುದರಿಂದ ಎಲ್ಲೋ ಒಂದು ಕಡೆ ತಾವು ಸಮಯಕ್ಕೆ ಸರಿಯಾಗಿ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ ದೊಡ್ಡ ಆತಂಕ ಬರಬಹುದೇನೋ, ಗಂಡಾಂತರ ಆಗಬಹುದೇನೋ ಎನ್ನುವ ಭಯ ಜನರಲ್ಲಿ ಆವರಿಸಿದೆ. ಆದಕ್ಕಾಗಿ ನಾನು ವಿನಂತಿ ಮಾಡುತ್ತಿದ್ದೇನೆ, ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಮುಂದೆ ಏನು ಮಾಡಬೇಕು ಎಂದು ಇದೆ ಎಂದು ಉತ್ತರ ಕೊಟ್ಟರೆ ನಾವು ಕೆಲವು ಕ್ಲಾರಿಫಿಕೇಶನ್ ಕೇಳುವುದಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ಹೆಚ್ಚು ಸಮಯ ನಾನು ಇದರಲ್ಲಿ ಎಳೆಯುವುದಕ್ಕೆ ಇಚ್ಛೆಪಡುವುದಿಲ್ಲ.

+ **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) :-** ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಎತ್ತರಿಸುವ ಬಗ್ಗೆ ಈ ಸದನದಲ್ಲಿ ಹೋದ ವಾರವೇ ಚರ್ಚೆ ಮಾಡಿದ್ದೇವೆ. ಆದಕ್ಕೆ ಸರ್ಕಾರದವರು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದು ಆದದರಲ್ಲಿ ಯಾವುದೇ ಪರಿಸ್ಥಿತಿಯಲ್ಲಿ ನಮ್ಮ ಕೆಲಸವನ್ನು ನಾವು ನಿಲ್ಲಿಸುವ ಹಾಗಿಲ್ಲ ಮತ್ತು ಏನು ಪೌವರ್ ಪ್ರಾಜೆಕ್ಟ್ ಇದೆ ಮತ್ತು ನೀರಾವರಿಗೆ ಆಗತಕ್ಕಂಥ ಮತ್ತು ಮಾಡತಕ್ಕಂಥ ಸೌಲಭ್ಯಗಳು ಏನಿವೆ ಇವೆರಡನ್ನೂ ಕೂಡ ನಾವು ಮುಂದುವರಿಸುತ್ತೇವೆ, ಈ ನಿಟ್ಟಿನಲ್ಲಿ ಎಷ್ಟೇ ಒತ್ತಡ ಬಂದರೂ ಕೂಡ ನಾವು ಮಣಿಯುವುದಿಲ್ಲ ಎನ್ನತಕ್ಕಂಥ ಮಾತನ್ನು ಭಾರೀ ನೀರಾವರಿ ಮಂತ್ರಿಗಳಾದ ಶ್ರೀ ನಾಗೇಗೌಡರು ಸ್ಪಷ್ಟಪಡಿಸಿದ್ದಾರೆ. ಅವರು ಈಗ ಬಂದಿದ್ದರೆ

ಚೆನ್ನಾಗಿರುತ್ತಿತ್ತು. ಆದರೆ ಇವೊತ್ತು ಪರಿಸ್ಥಿತಿ ಏನಾಗಿದೆ ಎಂದರೆ ಆಂಧ್ರ ಪ್ರದೇಶದ ಹೈ ಕೋರ್ಟ್‌ನಲ್ಲಿ ನಿನ್ನೆ ಒಂದು ಕೇಸನ್ನು ನಮ್ಮದು ಹಿಂದುಳಿದಂಥ ಭಾಗ ಎಂದು ಹೇಳಿ ಕೊಂಡು ಬ್ಯಾಕ್‌ವರ್ಡ್ ಕ್ಲಾಸ್ ವೆಲ್‌ಫೇರ್ ಅಸೋಸಿಯೇಶನ್ ವತಿಯಿಂದ ಶ್ರೀಮಾನ್ ಆರ್. ಕೃಷ್ಣಯ್ಯ ಎನ್ನತಕ್ಕಂಥವರು ಆಂಧ್ರಪ್ರದೇಶದಲ್ಲಿ ಒಂದು ರಿಟ್ ಪಿಟಿಶನ್ ಹಾಕಿ ಅಲ್ಲಿ ಇಂಜೆಂಕ್ಶನ್ ಕೊಡಬೇಕೆಂದು ಹೇಳಿ ಅವರು ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು :– ರೆಸ್‌ಪಾಂಡೆಂಟ್ಸ್ ಯಾರು ಆ ಕೇಸ್‌ನಲ್ಲಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ರೆಸ್‌ಪಾಂಡೆಂಟ್ಸ್ ಅವರು ಈಗ ಏನು ಮಾಡಿದ್ದಾರೆಂದರೆ ಅಲ್ಲಿನ ಸ್ಟೇಟ್ ಗೌವರ್ನಮೆಂಟ್‌ಗೂ ಮಾಡಿದ್ದಾರೆ ಮತ್ತು ಸೆಂಟ್ರಲ್ ಗೌವರ್ನಮೆಂಟ್‌ಗೂ ಮಾಡಿದ್ದಾರೆ ಮತ್ತು ಅವರಿಗೆ ಏನು ಡೈರೆಕ್ಷನ್ ಕೊಟ್ಟಿದ್ದಾರೆಂದರೆ 30 ನೇ ಜುಲೈಗೆ ಏನು ಕೇಸ್‌ನ್ನು ಪೋಸ್ಟ್‌ಪೋನ್ ಮಾಡಿದ್ದಾರೆ ಆಗ ಕರ್ನಾಟಕ ಸರ್ಕಾರ, ಮಹಾರಾಷ್ಟ್ರ ಸರ್ಕಾರ ಮತ್ತು ಆಂಧ್ರಪ್ರದೇಶ್ ಸರ್ಕಾರ, ಈ ಮೂರು ಸರ್ಕಾರಗಳು ಬರಬೇಕೆಂದು ಮತ್ತು 30 ನೇ ತಾರೀಖಿನವರೆಗೆ ಆಲಮಟ್ಟಿ ಡ್ಯಾಮ್‌ನ್ನು ಎತ್ತರಿಸುವಂಥ ಕೆಲಸವನ್ನು ಸ್ಥಗಿತಗೊಳಿಸಬೇಕೆಂದು ಅವರು ಪ್ಲಾನಿಂಗ್ ಕಮಿಶನ್‌ಗೆ ಮತ್ತು ಕೇಂದ್ರ ಸರ್ಕಾರಕ್ಕೆ ಮತ್ತು ಮೂರು ರಾಜ್ಯಗಳಿಗೂ ಕೂಡ ಒಂದು ನಿರ್ದೇಶನವನ್ನು ಕೊಟ್ಟಿದ್ದಾರೆ. The planning Commission, Central Water & Power Commission and the Union Government, and he has directed them to file their counter affidavits, if any. ಅಂದರೆ 30 ನೇ ತಾರೀಖಿನವರೆಗೆ ಈಗ ಏನು ಅವರು ಸ್ಟೇ ಕೊಟ್ಟಿದ್ದಾರೆ ಅಲ್ಲಿಯವರೆಗೆ ನೀವು ಆಲಮಟ್ಟಿ ಡ್ಯಾಮ್‌ಗೆ ಸಂಬಂಧ ಪಟ್ಟಂತೆ ಯಾವ ಕೆಲಸವನ್ನೂ ಮಾಡಬಾರದು, ಕನ್‌ಸ್ಟ್ರಕ್ಶನ್ ನಿಲ್ಲಿಸಬೇಕೆಂದು ಹೇಳಿ ದ್ದಾರೆ. ಇದರ ಬಗ್ಗೆ ಏನಾದರೂ ಹೇಳಿಕೆ ಕೊಡಬೇಕಾದರೆ ಈ 30 ನೇ ತಾರೀಖಿ ನೊಳಗೆ ಕೊಡಬೇಕೆಂದು ಹೇಳಿದ್ದಾರೆ. ಈಗ ಪೊಲಿಟಿಕಲ್ ಲೆವೆಲ್‌ನಲ್ಲಿಯೇ ಶ್ರೀಮಾನ್ ಚಂದ್ರಬಾಬು ನಾಯ್ಡುರವರು ಮಾತನಾಡಿ ಇದನ್ನು ಬಗೆಹರಿಸುತ್ತಾರೆ, ಅದಕ್ಕಾಗಿ ಈ ವಿಚಾರವನ್ನು ತೆಗೆದುಕೊಳ್ಳಬಾರದು ಎಂದು ಕೇಳಿದಾಗ ಅವರು ಏನು ಹೇಳಿದ್ದಾರೆಂದರೆ, ಇದು ಗಮನಿಸಬೇಕಾದಂಥ ಬಹಳ ಮುಖ್ಯವಾದ ಅಂಶ. ಅವರು ಏನು ಹೇಳಿದ್ದಾ ರೆಂದರೆ serious doubt they have expressed about the Union Government, about the Karnataka Government and about all the Governments, including Andhra Pradesh Government.

ಅಧ್ಯಕ್ಷರು :– ಯಾರು ಪಿಟಿಶನರೋ, ಜಡ್ಜ್‌ಸೋ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– Judges themselves. ಅಧ್ಯಕ್ಷರೇ, ಅವರು ಆರ್ಟಿಕಲ್ 131 ಪ್ರಕಾರ ಜ್ಯುರಿಸ್‌ಡಿಕ್ಶನ್ ಇಲ್ಲದೇ ಇದ್ದರೂ ಕೂಡ, ಆರ್ಟಿಕಲ್ 131 ಏನು ಹೇಳುತ್ತದೆ ಎಂದರೆ ``Original jurisdiction of the Supreme Court.-- Subject to the provisions of this Constitution, the Supreme

Court shall, to the exclusion of any other court, have original jurisidctionn in any dispute--

(a) between the Government of India and one or more States

or

(b) between the Government of India and any State or States on one side and one or more other States on the other :

or

(c) between two or more States,

if and in so far as the dispute involves any question (whether of law or fact) on which the existence or extent of a legal right depends;" ಅಂದರೆ ಈ ಒಂದು ಪರ್ವ್ಯೂನಲ್ಲಿ ಬರತಕ್ಕಂಥ ಡಿಸ್‌ಪ್ಯೂಟ್‌ನ್ನು ಇವೊತ್ತಿನ ದಿವಸ ಅಲ್ಲಿನ ಆಂಧ್ರ ಪ್ರದೇಶದ ಚೀಫ್ ಜಸ್ಟೀಸ್‌ರವರು ಮತ್ತು ಶ್ರೀಮಾನ್ ಸೈಯದ್ ಹುಸೇನ್‌ರವರು ಇಬ್ಬರೂ ಸೇರಿ ಆ ಬೆಂಚ್‌ನಲ್ಲಿ ಈ ಒಂದು ಪಿಟಿಶನ್‌ನ್ನು ಅಡ್ಮಿಟ್ ಮಾಡಿಕೊಂಡು ಇವೊತ್ತಿನ ದಿವಸ ನೇರವಾಗಿ ಒಂದು ಆರ್ಡರ್‌ನ್ನು ಪಾಸ್ ಮಾಡಿ ಇವೊತ್ತು ಕರ್ನಾಟಕ ಸರ್ಕಾರಕ್ಕೂ ಕೂಡ ನೀವು ಅಪಿಯರ್ ಆಗುವಂಥದ್ದು ಎಂದು ಹೇಳಿದ್ದಾರೆ. ಅದು ಆರ್ಟಿಕಲ್ 131 ರ ಕೆಳಗಡೆಯಲ್ಲಿಯೂ ಕೂಡ ಅವರಿಗೆ ಜ್ಯುರಿಸ್‌ಡಿಕ್‌ಶನ್ ಇಲ್ಲದಿದ್ದರೂ ಆ ಕೆಲಸ ಮಾಡಿದ್ದಾರೆ. ಇನ್ನೊಂದು, ರಾಜಕೀಯವಾಗಿ ಇದನ್ನು ಬಗೆಹರಿಸುತ್ತೇವೆ ಎಂದು ಅವರು ಹೇಳಿಕೊಂಡರೂ ಕೂಡ ಇವೊತ್ತಿನ ದಿವಸ ಅಲ್ಲಿ ನಮಗೆ ಸಂಶಯ ಇದೆ. ಎಷ್ಟರಮಟ್ಟಿಗೆ ಈ ಕರ್ನಾಟಕ ಸರ್ಕಾರ ಮತ್ತು ಆಂಧ್ರ ಪ್ರದೇಶ್ ಸರ್ಕಾರ ಮ್ತತು ಯೂನಿಯನ್ ಗೌವರ್ನ್‌ಮೆಂಟ್ ಈ ಬಚಾವತ್ ಅವಾರ್ಡ್ ಪ್ರಕಾರ ಅವರು ನಡೆದುಕೊಳ್ಳುತ್ತಾರೆಯೇ ಎನ್ನುವ ಸಂಶಯ ಇದೆ ಎನ್ನುವ ಈ ಮಾತನ್ನೂ ಕೂಡ ಆ ಜಡ್ಜ್‌ಸೇ ಹೇಳುತ್ತಾರೆ. ತಮ್ಮ ಗಮನಕ್ಕೆ ಒಂದು ಮಾತನ್ನು ತರುತ್ತೇನೆ ಮಾನ್ಯ ಅಧ್ಯಕ್ಷರೇ, ``How can the issue be resolved when all the parties including Karnataka, Maharashtra and Andhra Pradesh are bound to the award of Bachawat Tribunal which has become a legal document with its publication in the official gazettee by the Union Government? The Court will like to know whether it is open to any one of the three States to introduce an irrigation, the Bench asked. Further, he said, "The Bench ruled out that at present the High Court's power to adjudicate the dispute pertaining to the dam was not ousted by application of Article 131 of the Constitution. However, the Bench would like to Respondent Governments of

Karntaka, Maharashtra and the Union Government to address the Court" ಅದಕ್ಕಾಗಿ ಮೂರು ರಾಜ್ಯಗಳು ಹೈಕೋರ್ಟ್ ಮುಂದೆ ಅಪಿಯರ್ ಆಗಬೇಕು ಎನ್ನುವ ವಾದವನ್ನು ಇಟ್ಟುಕೊಂಡು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಮುಂದೆ ಅಲ್ಲಿ ಇರತಕ್ಕಂಥ ಸರ್ಕಾರಕ್ಕೆ ಜನರಿಗೆ ಪ್ರಚೋದನೆ ಮಾಡತಕ್ಕಂಥ ರೀತಿಯಲ್ಲಿ ಕೂಡ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ತಮಗೆ ಉದಾಹರಣೆಗೆ ಇದನ್ನು ನಾನು ಓದಕೇಳುತ್ತೇನೆ. ಏಕೆಂದರೆ ಈ ಸದನದ ಗಮನಕ್ಕೆ ತರತಕ್ಕಂಥಾದ್ದು ನನ್ನ ಕರ್ತವ್ಯ ಎಂದು ಹೇಳಿ ತಿಳಿದಿದ್ದೇನೆ. ಜಡ್ಜ್‌ಸ್ ಸ್ಪಷ್ಟವಾಗಿ ಏನು ಹೇಳಿದ್ದಾರೆ ಎಂದರೆ,

11-40 ಎ. ಎಂ.

`` The Bench took serious note of the lethargy of the State Government in responding to the Notices issued in the Writ Petitions. Speaking on behalf of the Bench, the Chief Justice wondered whether the Union Government had divergent opinions on the issue pertaining to Almatti Dam. Justice Mishra remarked, we have serious doubts about the seriousness of the Government on this issue. When the standing Council of the Union Government sought? Weeks time to file the counter-affidavit, the Bench refused saying that if Karnataka's stand on present controversy appeared to be true, it would lead to a serious situation and street-fights among the people on either side of the Andhra Pradesh and Karnataka border. ಎಂದರೆ ಇದನ್ನು ಸರ್ಕಾರದವರು ಮಾಡಿಕೊಳ್ಳುತ್ತಾರೆ ಎಂದು ಹೇಳಿ ಸರ್ಕಾರದ ಪರವಾಗಿ ಇರತಕ್ಕಂಥ ಅಡ್ವೋಕೇಟ್ ಅಲ್ಲಿನ ಆಂಧ್ರಪ್ರದೇಶದ ಹೈ ಕೋರ್ಟ್ ಮುಂದೆ ಹೇಳಿದರೂ ಕೂಡ ಅವರು ಏನು ಹೇಳುತ್ತಾರೆ, ಕರ್ನಾಟಕ ಸರ್ಕಾರ ಈಗ ಕನ್ಸ್‌ಟ್ರಕ್ಟ್ ಮಾಡು ತ್ತಿರತಕ್ಕಂಥಾದ್ದು ಸರಿ ಇದ್ದರೆ ಈ ಕರ್ನಾಟಕ ರಾಜ್ಯದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಬೀದಿ ಜಗಳಗಳು ಆಗುತ್ತದೆ. ಏಕೆಂದರೆ ಕಾನೂನುಬಾಹಿರವಾಗಿ ಕರ್ನಾಟಕ ಡ್ಯಾಂ ಎತ್ತರವನ್ನೂ ಕಟ್ಟಿಸುತ್ತಿದೆ ಎನ್ನುವ ಮಾತನ್ನು ಅಲ್ಲಿ ಹೇಳಿ ಅಲ್ಲಿನ ಸರ್ಕಾರಕ್ಕೂ ಕೂಡ ಒಂದು ಪ್ರಚೋದನೆ ಕೊಡತಕ್ಕಂಥಾದ್ದು ಜನರಿಗೂ ಕೂಡ ಪ್ರಚೋದನಾಕಾರಿಯಾಗಿ ಈ ರೀತಿ ಮಾತನಾಡತಕ್ಕಂಥಾದ್ದು, ಈ ಜಡ್ಜ್‌ಮೆಂಟ್ ಆರ್ಡರ್‌ನಿಂದ ಉಂಟಾಗುತ್ತದೆ. ನಾನು ಹೇಳುತ್ತೇನೆ, ಇದು ಒಂದು ಪ್ರಚೋದನೆ ಅಷ್ಟೇ ಅಲ್ಲ, ನ್ಯಾಷನಲ್ ಡಿಸ್‌ಇಂಟಿಗ್ರೇಷನ್ ಮಾಡುವುದಕ್ಕೆ ಇವತ್ತಿನ ದಿವಸ ಜ್ಯುಡಿಷಿಯರಿ ಹೊರಟಿದೆ ಎನ್ನುವ ಮಾತನ್ನು ನಾನು ಆಪಾದನೆ ಮಾಡಬೇಕಾಗುತ್ತದೆ. ಎಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಇರಬೇಕು ಎಂದು ನಮ್ಮ ಸಂವಿಧಾನದಲ್ಲಿ ಅನೇಕ ಕಾನೂನುಗಳಿವೆ, ಅನೇಕ ಆರ್ಟಿಕಲ್ ಇದೆ, ನಮ್ಮ ರಕ್ಷಣೆಗಾಗಿ ಬೇರೆ ಪ್ರದೇಶಗಳ ರಕ್ಷಣೆಗಾಗಿ ಮತ್ತು ವಾಟರ್ ಡಿಸ್‌ಪ್ಯೂಟ್ ಸಾಲ್ವ್ ಮಾಡುವುದಕ್ಕಾಗಿ ಇವೆಲ್ಲಾ ಇದ್ದರೂ ಕೂಡ ಇವತ್ತಿನ ದಿವಸ ಜಡ್ಜ್‌ಸ್ ಖುದ್ದಾಗಿ ಆ

ಪಿಟಿಷನ್ ತೆಗೆದುಕೊಂಡು, ಅದನ್ನು ಒಂದನ್ನೇ ಅಡ್ಮಿಟ್ ಮಾಡಿಕೊಂಡು ಅವರಿಗೆ ಮತ್ತು ಎಲ್ಲಾ ರಾಜ್ಯಗಳಿಗೆ ನೇರವಾಗಿ ಇವತ್ತಿನ ದಿವಸ ಸಮನ್ಸ್ ಕೊಟ್ಟು, ನೀವು 30 ನೇ ತಾರೀಖಿನ ದಿವಸ ಬರಲೇಬೇಕು, ಬಾರದೇ ಹೋದರೆ ಮುಂದಿನ ಕಾರ್ಯ ಕ್ರಮ ಏನು ಮಾಡುತ್ತೇವೆ ಎನ್ನುವುದನ್ನು ನೋಡಿ ಎನ್ನತಕ್ಕಂಥ ಮಾತನ್ನು ಹೇಳಿ ಅಲ್ಲಿ ಇರತಕ್ಕಂಥ ರಾಜ್ಯ ಸರ್ಕಾರಕ್ಕೆ ಏನು ವಾರ್ನಿಂಗ್ ಕೊಟ್ಟಿದ್ದಾರೆ ಎಂದರೆ "They are lethargic." ಎಂದರೆ ನಾಳೆ ಎದ್ದೇಳಬೇಕು, ಗಲಾಟೆ ಮಾಡಬೇಕು Andra Pradesh Government is not interested. ಅವರಂತೂ ನಮಗಿಂತ ಜಾಸ್ತಿ ಇಂಟರೆಸ್ಟೆಡ್. ಜುರಾಲ ಪ್ರಾಜೆಕ್ಟ್‌ನಲ್ಲಿ ಈಗಾಗಲೇ ತಮಗೆ ಗೊತ್ತಿದೆ, ನಾವು ಇನ್ನು ನೋಡಿಕೊಂಡೇ ಇದ್ದೇವೆ. ರೀಹ್ಯಾಬಿಲಿಟೇಷನ್ ಪ್ರೋಗ್ರಾಂ ಕೇಳಿಕೊಂಡೇ ಇದ್ದೇವೆ. ಆದರೆ ಅವರು ಎರಡು ಫೀಟ್ ಜಾಸ್ತಿ ಮಾಡಿಯಾಯಿತು. ನೀರು ಇಂಪೌಂಡ್ ಮಾಡುವುದಕ್ಕೆ ಇನಾ ಗರೇಷನ್ ಮಾಡುವುದಕ್ಕೆ ರೆಡಿ ಇಟ್ಟುಕೊಂಡಿದ್ದಾರೆ. ಹೀಗಿರುವಾಗ ಪುನಃ ಇವತ್ತು ಜುಡಿಷಿಯರಿ ಕೂಡ ಒಂದು ಸೈಡ್ ಆಗಿ ಹೋಗಿದ್ದಾರೆ ಮತ್ತು ಅದಕ್ಕೆ ಕರ್ನಾಟಕ ಸರ್ಕಾರ ಸ್ಪಂದಿಸಿದರೆ, ಏಕೆಂದರೆ ಸ್ಟಾಟಸ್ಕ್ಕೋ ಇಡಬೇಕು ಎನ್ನುವುದರ ಬಗ್ಗೆ ನಮಗೆ ಗೊತ್ತಿದೆ ನಿನ್ನೆ ಸಿಂಧ್ಯಾರವರು ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕು ಎನ್ನುವುದನ್ನು ನಾವು ಯೋಚನೆ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆಗ ನಾಗೇಗೌಡರು ಇರಲಿಲ್ಲ. ಇದು ಬಹಳ ಸೀರಿಯಸ್ ಮ್ಯಾಟರ್ ಇದೆ, ಬಹಳ ಗಂಭೀರವಾದಂತಹ ವಿಷಯವಾಗಿದೆ, ಆದಕ್ಕಾಗಿ ದಯವಿಟ್ಟು ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡು ವುದಕ್ಕೆ ಅವಕಾಶ ಮಾಡಿಕೊಡಿ. ಏಕೆಂದರೆ ಶೂನ್ಯ ವೇಳೆಯಲ್ಲಿ ಬಹಳ ಹೊತ್ತು ಮಾತನಾಡಿದರೆ ತಮಗೂ ಕೂಡ ಬೇಸರವಾಗುತ್ತದೆ, ಯಾವ ಸಂದರ್ಭದಲ್ಲಿ ಇವತ್ತಿನ ದಿವಸ ಆಂಧ್ರ ಪ್ರದೇಶ ಹೈಕೋರ್ಟ್‌ನವರು ಒಂದು ಜಡ್ಜ್‌ಮೆಂಟ್ ಆರ್ಡರ್‌ನ್ನು ಪಾಸ್ ಮಾಡಿ ಇಡೀ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಗೊಂದಲವನ್ನು ಎಬ್ಬಿಸತಕ್ಕಂಥಾದ್ದು ಮತ್ತು ಜನರನ್ನು ಪ್ರಚೋದನೆ ಮಾಡತಕ್ಕಂಥ ಒಂದು ವಾತಾವರಣ ವನ್ನು ತಯಾರು ಮಾಡುತ್ತಿದ್ದಾರೆ. ಅದನ್ನು ನಾವು ಖಂಡಿಸಬೇಕಾಗುತ್ತದೆ. ಎಲ್ಲಾ ಸದಸ್ಯರ ಒಂದು ನಿರ್ಣಯವನ್ನು ಇವತ್ತಿನ ದಿವಸ ತರಬೇಕಾಗುತ್ತದೆ. ಏಕೆಂದರೆ ಈ ಸರ್ವ ಪಕ್ಷಗಳ ಇಡೀ ಸದನದ ನಿರ್ಣಯ ಆಗದೇಹೋದರೆ ಅವರಿಗೂ ಕೂಡ ಗೊತ್ತಾಗು ವುದಿಲ್ಲ. ಇಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದಾರೆ, ಈ ವಿಷಯದಲ್ಲಿ ಎಲ್ಲರೂ ಕೂಡ ಒಂದಾಗಿದ್ದಾರೆ, ಆದಕ್ಕಾಗಿ ಕೊನೆಯವರೆಗೂ ಕೂಡ ನಾವು ಫೈಟ್ ಮಾಡುತ್ತೇವೆ. ಯಾವುದೇ ಕಾರಣದಿಂದ ಎತ್ತರಿಸತಕ್ಕಂಥಾದ್ದು ಹಾಗೂ ನಾವು ಬಚಾವತ್ ಆರ್ಡರ್ ಪ್ರಕಾರ ನಮಗೆ ಕೊಟ್ಟಿರುವಂತಹ 734 ಟಿಎಂಸಿ ನೀರಿನ ಹಂಚಿಕೆಯಲ್ಲಿ ನಾವು ಕಾಲು ಚಾಚಿದ್ದೇವೆ ಹೊರತಾಗಿ ಅದರ ಮೇಲೆ ನಾವು ಯಾವುದನ್ನು ಕೂಡ ಮಾಡಿಲ್ಲ ಎನ್ನುವುದನ್ನು ಮನವರಿಕೆ ಮಾಡಿಕೊಡತಕ್ಕಂಥಾದ್ದು ಸರಿ. ಏಕೆಂದರೆ ಅವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ಪೊಲಿಟಿಕಲಿ ಸಾಲ್ವ್ ಮಾಡಿಕೊಳ್ಳುತ್ತೇವೆ, ಅಲ್ಲಿನ ಅಡ್ವೋಕೇಟ್ ಕೂಡ ಹೈಕೋರ್ಟ್ ನಲ್ಲಿ ಹೇಳಿದ್ದಾರೆ, ಎಂದಾಗ ನಾಳೆ ಇದನ್ನು ಪ್ರಧಾನ ಮಂತ್ರಿಗಳ ಮೂಲಕ ಪ್ರಭಾವ

ಬೀರತಕ್ಕಂಥಾದ್ದು ಆಗಬಹುದು. ಇದು ಒಂದು ಟ್ಯಾಕ್ಟಿಕ್ಸ್ ಇರಬಹುದು. ಒಂದುಕಡೆ ಜ್ಯುಡಿಷಿಯರಿ ಪ್ರೆಜರ್, ಇನ್ನೊಂದು ಕಡೆ ಪೊಲಿಟಿಕಲ್ ಪ್ರೆಜರ್. ಮೂರನೆಯದಾಗಿ ಪೀಪಲ್ ಅಜಿಟೇಷನ್ ಎಂದರೆ ನೀವು ಎದ್ದೇಳಿ ಎಂದು ಜನರಿಗೆ ಏನು ಪ್ರಚೋದನೆ ಕೊಟ್ಟಿದ್ದೀರಿ ಅದು. ಈ 3-4 ತಂತ್ರಗಳನ್ನು ಉಪಯೋಗಮಾಡಿ ನಮ್ಮನ್ನು ಸಮಾಧಿ ಮಾಡತಕ್ಕಂಥ ವ್ಯವಸ್ಥೆ ಆಂಧ್ರಪ್ರದೇಶ ಸರ್ಕಾರ ಮತ್ತು ಅಲ್ಲಿನ ಜ್ಯುಡಿಷಿಯರಿ ಮಾಡುತ್ತಿದೆ. ಅದಕ್ಕಾಗಿ ಇವತ್ತಿನ ದಿವಸ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಮಾನ್ಯ ಮಂತ್ರಿಗಳು ಬಂದಿದ್ದಾರೆ, ಇದರ ಬಗ್ಗೆ ಏನು ಹೇಳುತ್ತಾರೆ ಅಥವಾ ಲಾ ಮಂತ್ರಿಗಳು ಏನು ಹೇಳುತ್ತಾರೆ ಎಂದು ತಮ್ಮ ಮುಖಾಂತರ ನಾನು ಕೇಳ ಬಯಸುತ್ತೇನೆ.

+ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :-** ಮಾನ್ಯ ಅಧ್ಯಕ್ಷರೇ, ನಾನು ಇದನ್ನು ನಿನ್ನೆ ಸಂಜೆ ಪ್ರಸ್ತಾಪ ಮಾಡಿದೆ. ಆದರೆ ಸರ್ಕಾರಕ್ಕೆ ಇನ್ನು ಇದರ ಬಗ್ಗೆ ಯಾವುದೇ ತರಹವಾದ ವಿವರ ಬಂದಿರಲಿಲ್ಲ. ಈಗಲೂ ನಾವು ಪತ್ರಿಕೆಗಳ ಮುಖಾಂತರ ಇದನ್ನು ನಾವು ಪ್ರಸ್ತಾಪ ಮಾಡುತ್ತಿರತಕ್ಕಂಥಾದ್ದು. ಮತ್ತು ಸರ್ಕಾರಕ್ಕೆ ಇದರ ಬಗ್ಗೆ ಏನು ವಿಚಾರ ಬಂದಿದೆ ಎನ್ನುವುದನ್ನು ಸದನದ ಮುಂದೆ ಅವರು ಸ್ಪಷ್ಟಪಡಿಸಬೇಕು. ಬಹಳ ಅತ್ಯಂತ ಭಯಂಕರ ಮತ್ತು ದಿಗ್ಭ್ರಮೆ ಉಂಟುಮಾಡತಕ್ಕಂಥ ವಿಚಾರ ಎಂದರೆ ಆಂಧ್ರ ಹೈ ಕೋರ್ಟ್ ಈ ರೀತಿಯಾದಂತಹ ತೀರ್ಮಾನಕ್ಕೆ ಬಂದಿರ ತಕ್ಕಂಥಾದ್ದು ಮತ್ತು ಅದರ ಹಕ್ಕಿನ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಮತ್ತು ಹೈ ಕೋರ್ಟ್ ಕೊಟ್ಟಿರತಕ್ಕಂಥ ಆದೇಶವನ್ನು ಸಂಪೂರ್ಣವಾಗಿ ನಾವು ತಿರಸ್ಕರಿಸಬೇಕು. ಆ ಆದೇಶವನ್ನು ಯಾವುದೇ ಕಾರಣಕ್ಕೂ ಕೂಡ ಮನ್ನಣೆ ಇರತಕ್ಕಂಥಾದ್ದು ಅಲ್ಲ. ಈ ಸದನದಲ್ಲಿ ನಿರ್ಣಯ ಮಾಡುವ ಮೂಲಕ ಹೈಕೋರ್ಟ್ ಈ ರೀತಿಯಾದಂತಹ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಯಾವುದೋ ಒಂದು ರಾಜ್ಯದ ಪರ ವಾಗಿ ನ್ಯಾಯಾಲಯಗಳು ನಿಲ್ಲುತ್ತವೆ ಎಂದರೆ ಇದರಿಂದ ನ್ಯಾಯಾಲಯಕ್ಕೂ ಕೆಟ್ಟ ಹೆಸರು ಬರತಕ್ಕಂಥ ರೀತಿಯಲ್ಲಿ ವರ್ತನೆ ಮಾಡತಕ್ಕಂಥಾದ್ದು ಒಳ್ಳೆಯ ಸಂಪ್ರದಾಯವಲ್ಲ ಎನ್ನುವ ಮಾತನ್ನು ನಾನು ತಮಗೆ ಈ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಇದು ಅತ್ಯಂತ ಬಹಳ ಗಂಭೀರವಾದಂತಹ ಪ್ರಶ್ನೆ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಚಂದ್ರಶೇಖರ್ ಮಾಮನಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಇಂತಹ ಗಂಭೀರವಾದಂತಹ ಪ್ರಶ್ನೆಯ ಬಗ್ಗೆ ಎರಡು ರಾಜ್ಯಗಳ ಮುಖಂಡರುಗಳು ಹಾಗೂ ಎರಡು ರಾಜ್ಯದ ರಾಜಕಾರಣಿಗಳು ಮಾತುಕತೆ ಆಡುತ್ತಿರುವುದು ಒಂದು ಕಡೆ. ಮತ್ತೊಂದು ಕಡೆ ಬಚಾವತ್ ತೀರ್ಪು, ಆ ತೀರ್ಪಿನ ಅಡಿಯಲ್ಲಿ ನಾವು ಬಹಳ ಪ್ರಾಮಾಣಿಕವಾಗಿ ಹೋಗುತ್ತಿದ್ದೇವೆ. ನನ್ನ ದೃಷ್ಟಿಯಲ್ಲಿ ಬಚಾವತ್ ತೀರ್ಪನ್ನು ತಿರಸ್ಕರಿಸಬೇಕು ಎಂದು ನನ್ನ ವಾದ. ಬಚಾವತ್ ತೀರ್ಪಿನಿಂದ ನಮಗೆ ನ್ಯಾಯ ದೊರಕಬಹುದು, ಅಥವಾ ದೊರಕದೇ ಇರಬಹುದು.

ಈ ಸಂದರ್ಭದಲ್ಲಿ ಬಚಾವತ್ ತೀರ್ಪು ನಮಗೆ ಬೇಕಾಗಿಲ್ಲ. ಈ ಬಚಾವತ್ ತೀರ್ಪನ್ನು ತಿರಸ್ಕರಿಸುತ್ತೇವೆ ಎಂದು ಹೇಳುವುದಕ್ಕೋಸ್ಕರ ಕರ್ನಾಟಕ ಸರ್ಕಾರ ನಿಲ್ಲಬೇಕು ಎಂದು ನನ್ನ ವಾದ ಏಕೆಂದರೆ ಎರಡು ಸಾವಿರ ವರ್ಷದೊಳಗೆ ನಾವು ನೀರು ಕೊಡುತ್ತೇವೆ ಎನ್ನುವ ದೃಷ್ಟಿ ಏನಿದೆ ಅದರ ಬಗ್ಗೆ ಯೋಚನೆ ಮಾಡಿದರೆ ಆ ಎರಡು ಸಾವಿರ ವರ್ಷದೊಳಗೆ ನಾವು ಕೊಡುತ್ತೇವೆಯೋ ಬಿಡುತ್ತೇವೆಯೋ ನಿರ್ಧಾರವಾಗಬೇಕಲ್ಲ. ಎರಡು ಸಾವಿರ ವರ್ಷದಲ್ಲಿ ನಾವು ಸಂಪೂರ್ಣವಾಗಿ ನಮ್ಮ ನೀರನ್ನು ನಾವು ಹಂಚಿಕೊಳ್ಳುತ್ತೇವೆ ಎನ್ನುವುದರ ಬಗ್ಗೆ ನನಗೆ ಇನ್ನೂ ಸಂಶಯ ಕಾಡುತ್ತಿದೆ. ನಾವು ಪ್ರಾಮಾಣಿಕವಾಗಿ ಅದರ ಬಗ್ಗೆ ಒಂದು ಚಿಂತನೆ ಇರಬೇಕಾದ್ದು ಒಂದು ಆದರೆ ಈ ಆಂಧ್ರ ಹೈಕೋರ್ಟಿನವರು ಏನು ಅತಿರೇಕವಾದಂತಹ ಕ್ರಮವನ್ನು ಕೈಗೊಂಡಿದ್ದಾರೆ ಎನ್ನುವುದು ಇಲ್ಲಿ ಎದ್ದು ಕಾಣುತ್ತಿದೆ. ಇದು ಯಾವುದೇ ರೀತಿಯಲ್ಲಿ ನ್ಯಾಯಾಲಯ ಗಳಿಗೆ ಗೌರವ ತರತಕ್ಕಂಥಾದ್ದು ಅಲ್ಲ. ಹೈ ಕೋರ್ಟುಗಳು ಈ ರೀತಿ ಆಯಾಯ ರಾಜ್ಯದ ಹೈಕೋರ್ಟುಗಳು ಆಯಾಯ ರಾಜ್ಯಗಳ ಪರವಾಗಿ ಹೊರಟುಬಿಟ್ಟರೆ ನಾಳೆ ದೇಶದಲ್ಲಿ ಒಂದು ಅನಾಯಕತ್ವ ಪ್ರಾರಂಭವಾಗುತ್ತದೆ. ನಮ್ಮ ಹೈಕೋರ್ಟ್ ಅವರ ಮೇಲೆ, ಅವರ ಹೈಕೋರ್ಟ್ ನಮ್ಮ ರಾಜ್ಯದ ಮೇಲೆ ಮತ್ತು ಒಂದು ರಾಜ್ಯದ ಹೈಕೋರ್ಟ್ ಕೇಂದ್ರ ಸರ್ಕಾರದ ಮೇಲೆ ಆದೇಶ ಹೊರಡಿಸುವುದು. ನಾಳೆ ಸುಪ್ರೀಂ ಕೋರ್ಟಿನ ಮೇಲೆ ಹೈಕೋರ್ಟಿನವರು ಹೋಗುತ್ತಾರೆ. ನನಗೆ ಕೋರ್ಟುಗಳ ಬಗ್ಗೆ ಅಪಾರವಾದಂತಹ ಗೌರವವಿದೆ. ಆ ಗೌರವದಲ್ಲಿ ಕಿಂಚಿತ್ತೂ ಕಡಿಮೆ ಇಲ್ಲ. ಆದರೆ ಅವರು ನಡೆದುಕೊಳ್ಳತಕ್ಕಂಥ ರೀತಿನೀತಿಗಳನ್ನು ನೋಡಿದಾಗ ಗೌರವಕ್ಕೆ ಚ್ಯುತಿ ಬರತ ಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಆ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಪು ಏನು? ಸರ್ಕಾರ ಈ ಬಗ್ಗೆ ಕೈಗೊಂಡಿರತಕ್ಕಂಥ ಕ್ರಮವೇನು? ಕೋರ್ಟಿನ ಸಂಪೂರ್ಣವಾದಂತಹ ತೀರ್ಪಿನ ಪರಿಪಾಠ ಏನು ಎನ್ನುವುದನ್ನು ಸರ್ಕಾರ ಹೇಳಬೇಕು. ಮತ್ತು ಈ ಜುರಾಲ ಬಗ್ಗೆ ಹೇಳುವುದಾದರೆ ನಿಜವಾಗಲೂ ನಾನು ಅದಕ್ಕೆ ಈ ಸರ್ಕಾರ ಕಾರಣ ಎಂದು ಹೇಳುವುದಿಲ್ಲ. ಈ ವಿಚಾರ 14 ವರ್ಷಗಳಿಂದಲೂ ನನೆಗುದಿಗೆ ಬಿದ್ದರೆ. ಅವರು ಹಣ ಕೊಡುತ್ತಾರೆ ಎಂದರೂ ನಾವು ಖರ್ಚು ಮಾಡುವುದಕ್ಕೆ ತಯಾರಿಲ್ಲ. ಇದಕ್ಕೆ ಯಾರು ಹೊಣೆ? ಇದು ಇಬ್ಬರ ಒಂದು ಬೇಜವಾಬ್ದಾರಿತನದಿಂದ ಅಲ್ಲಿನ ಜನ ಕರ್ನಾಟಕ ರೈತರು, ಬಡ ಕುಟುಂಬದವರು ನಿರ್ವಸಿತರಾಗಿ, ಮುಳುಗಿ ಗೊಂದಲಕ್ಕೆ ಸಿಕ್ಕತಕ್ಕಂಥ ಪರಿಸ್ಥಿತಿ ಇವೊತ್ತು ನಿರ್ಮಾಣ ವಾಗಬೇಕಾದರೆ, ಕಾರಣ ನಮ್ಮ ಬೇಜವಾಬ್ದಾರಿತನದಿಂದ. ಈಗಲೂ ಕೂಡ, ಆ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು. ಇದನ್ನು ಈ 25 ನೇ ತಾರೀಖು ಉದ್ಘಾಟನೆ ಮಾಡುತ್ತೇವೆ ಎಂದು ಹೇಳಿದ್ದಾರೆ ಅದು ಏನು ಮಾಡುತ್ತಾರೆ ಎಂಬುದು ಗೊತ್ತಿಲ್ಲ ನಮಗೆ ಪತ್ರಿಕೆ ಮೂಲಕ ತಿಳಿದುಬಂದಿದೆ. ಅದಕ್ಕೆ ಈಗಾಗಲೇ ನಿನ್ನೆ ಮೊನ್ನೆ ವಿರೋಧಪಕ್ಷಗಳ ಸಭೆಯನ್ನು ಸಂಬಂಧಪಟ್ಟ ಸಚಿವರು ಕರೆದಿದ್ದರು. ಜುರಾಲ ಬಗ್ಗೆ ನಮ್ಮ ಸರ್ಕಾರದ ಸ್ಪಷ್ಟ ನಿಲುವು ಏನು? ಅದನ್ನು ಸ್ಪಷ್ಟಪಡಿಸಬೇಕು. ಮತ್ತು ಆಂಧ್ರ ಹೈ ಕೋರ್ಟಿನವರು ಏನು ಮಾಡಿದ್ದಾರೆ ಇದನ್ನು ಸಾರಸಗಟಾಗಿ ತಿರಸ್ಕರಿಸುವ ನಿರ್ಣಯವನ್ನು ಮಾಡಬೇಕು. ಮತ್ತು ಒಂದು ಹೆಜ್ಜೆ ಮುಂದೆ ಹೋಗಿ ಸೌಜನ್ಯ

ವಾಗಿಯಾದರು ಹೇಳಿದರು ಚಿಂತೆ ಇಲ್ಲ, ಹೈಕೋರ್ಟುಗಳು ಇಂತಹ ವಿಚಾರದಲ್ಲಿ ಒಂದು ರಾಜ್ಯದ ಮೇಲೆ ಇನ್ನೊಂದು ರಾಜ್ಯವನ್ನು ಎತ್ತಿಕೊಡತಕ್ಕಂಥ ಕೆಲಸಕ್ಕೆ ಹೋಗ ಬಾರದು. ಆ ರೀತಿ ಹೋದರೆ ನ್ಯಾಯಾಂಗದ ಬಗ್ಗೆ ಇರತಕ್ಕಂಥ ಪರಮಪವಿತ್ರವಾದಂಥ ಗೌರವ ನಾಶವಾಗುತ್ತದೆ ಎನ್ನತಕ್ಕಂಥ ತೀರ್ಮಾನಕ್ಕೆ ಬರಬೇಕಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮೊದಲು ಅವರು ಇದರ ಬಗ್ಗೆ ಉತ್ತರವನ್ನು ಹೇಳಲಿ, ಆದಾದಮೇಲೆ ಶೂನ್ಯವೇಳೆಯಲ್ಲಿ ಜೇವರ್ಗಿ ಆಕ್ಸಿಡೆಂಟ್ ಬಗ್ಗೆ ಹೇಳುವುದಿದೆ.

+ **ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :-** ಉಪಾಧ್ಯಕ್ಷರೇ, ಈಗ ಆಂಧ್ರದ ಹೈಕೋರ್ಟ್ ಏನು ಆದೇಶವನ್ನು ಕೊಟ್ಟಿದೆ ಅದಕ್ಕೆ ಆರ್ಟಿಕಲ್ 131 ಪ್ರಕಾರ ಅಧಿಕಾರ ಇಲ್ಲ ಅಥವಾ ಅದನ್ನು ಕೊಡಬೇಕು ಎಂದು ಆದರೆ ಬಚಾವತ್ ತೀರ್ಪು ಏನು ಇದೆ ಆ ತೀರ್ಪಿನಲ್ಲಿ ಮೂರು ರಾಜ್ಯಗಳು ಪಾರ್ಟಿಗಳು ಆಗಿರತಕ್ಕಂಥ ಹಿನ್ನೆಲೆಯಲ್ಲಿ ಕೊಡಬೇಕು. ಆದರೆ ಆ ತೀರ್ಪಿನ ಮೇಲೆ ಅವರು ಕೇಸನ್ನು ಹಾಕಿಲ್ಲ. ರಿಟ್ ಪಿಟಿಷನ್ ಹಾಕಿರತಕ್ಕಂಥದ್ದು ಬಚಾವತ್ ತೀರ್ಪಿನ ಮೇಲೆ ಅಲ್ಲ. ಅವರ ರಿಟ್ ಪಿಟಿಶನ್, ಯಾರೊ ಒಬ್ಬರು ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರೊಬ್ಬರು ರಿಟ್ ಪಿಟಿಷನ್ ಹಾಕಿರತಕ್ಕಂಥದ್ದು, ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸದಂತೆ ಆದೇಶವನ್ನು ಕೊಡಬೇಕು ಎಂದು. ಆಲಮಟ್ಟಿ ಅಣೆಕಟ್ಟನ್ನು ಕಟ್ಟುತ್ತಿರುವಂಥದ್ದು ಕರ್ನಾಟಕದಲ್ಲಿ. ಕರ್ನಾಟಕದಲ್ಲಿ ಕಟ್ಟುತ್ತಾ ಇರತಕ್ಕಂಥದ್ದು ಯೋಜನಾ ಆಯೋಗದ ಅನುಮತಿಯನ್ನು ಪಡೆದು, ಸಿ.ಡಬ್ಲ್ಯೂ.ಸಿ.ಎ.ಯ ಅನುಮತಿಯನ್ನು ಪಡೆದು, ಆಲಮಟ್ಟಿ ಅಣೆಕಟ್ಟನ್ನು ಕಟ್ಟುತ್ತಾ ಇರತಕ್ಕಂಥ ಸಂದರ್ಭದಲ್ಲಿ ಆಂಧ್ರದ ಹೈಕೋರ್ಟ್‌ಗೆ ಆದರ ವ್ಯಾಪ್ತಿಗೆ ಬರುವುದಿಲ್ಲ. ಅದನ್ನು ಸ್ಪಷ್ಟವಾಗಿ ನಾವು ಹೇಳಬೇಕು. ಈಗ ಒಂದುವೇಳೆ ಆಂಧ್ರದ ಹೈಕೋರ್ಟ್‌ನ ಆದೇಶದ ವಿರುದ್ಧ ನಾವು ಸುಪ್ರೀಂಕೋರ್ಟಿಗೆ ಹೋಗುವುದು ಎಂದು ಆದರೆ ನಾವಾಗಿ ನಾವು ಒಪ್ಪಿಕೊಂಡ ಹಾಗೆ ಆಗುತ್ತದೆ. ಅಂದರೆ ಆಂಧ್ರದ ಹೈಕೋರ್ಟಿನ ಆದೇಶವನ್ನು ನಾವು ಒಪ್ಪಿಕೊಂಡ ಹಾಗೆ ಆಗುತ್ತದೆ. ನನ್ನ ಅಭಿಪ್ರಾಯದಲ್ಲಿ ಸುಪ್ರಿಂ ಕೋರ್ಟ್‌ಗೆ ಆದರ ವಿರುದ್ಧ ಅಪೀಲ್ ಹೋಗತಕ್ಕಂಥ ಅವಶ್ಯಕತೆ ಇಲ್ಲ, ಏತಕ್ಕೆಂದು ಹೇಳಿದರೆ ಅವರ ವ್ಯಾಪ್ತಿಯನ್ನು ಬಿಟ್ಟು ಅವರು ಆದೇಶವನ್ನು ಹೊರಡಿಸಿರುವುದರಿಂದ ನಾವು ಸುಪ್ರೀಂಕೋರ್ಟಿಗೆ ಹೋದರೆ ಆಂಧ್ರದ ಹೈಕೋರ್ಟಿನ ಆದೇಶವನ್ನು ನಾವು ಪರಿಗಣಿಸುತ್ತೇವೆ ಅಥವಾ ಒಪ್ಪುತ್ತೇವೆ ಎಂಬ ಅರ್ಥ ಬರುತ್ತದೆ. ಎರಡನೆಯದಾಗಿ ಅಧ್ಯಕ್ಷರೇ, ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂಥ ವಿಷಯವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇವೊತ್ತು ನ್ಯಾಯಾಂಗ ಈ ಸ್ಥಿತಿಗೆ ಇಳಿದುಬಿಟ್ಟರೆ, ಒಂದು ರಾಜ್ಯದ ಮೇಲೆ ಇನ್ನೊಂದು ರಾಜ್ಯವನ್ನು ಎತ್ತಿಕಟ್ಟತಕ್ಕಂಥ ಪರಿಸ್ಥಿತಿ ನ್ಯಾಯಾಂಗವೇ ಪ್ರಾರಂಭಮಾಡಿದಾಗ ನಮ್ಮ ದೇಶದಲ್ಲಿ ಸಂಪೂರ್ಣವಾದಂಥ ಅರಾಜಕತೆ ಬರುತ್ತದೆ ಆ ಅರಾಜಕತೆಯನ್ನು ನ್ಯಾಯಾಂಗ ಸೂಚಿಸುವುದಾದರೆ ಆ ನ್ಯಾಯಾಂಗದ ವಿರುದ್ಧ

ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ನಾವು ಅದನ್ನು ಹಾಗೇ ಬಿಡುವುದಕ್ಕೆ ಆಗುವುದಿಲ್ಲ ನಮಗೆ ದೇಶದ ಐಕ್ಯತೆ, ಸಮಗ್ರತೆ ಮುಖ್ಯ. ಯಾರೋ ಪ್ರಚೋದನೆಯಿಂದ ನಮ್ಮ ದೇಶದ ಐಕ್ಯತೆ ಸಮಗ್ರತೆಯನ್ನು ಹಾಳು ಮಾಡಿಕೊಳ್ಳಲಿಕ್ಕೆ ನಮಗೆ ಸಾಧ್ಯವಿಲ್ಲ. ಇನ್ನು ಆಲಮಟ್ಟಿ ವಿಷಯಕ್ಕೆ ಬರುವುದಾದರೆ, ಸಮಸ್ಯೆ ಏನಾದರೂ ಇದ್ದರೆ, ಭಿನ್ನಾಭಿಪ್ರಾಯ ಗಳು ಏನಾದರೂ ಇದ್ದರೆ ಆ ಭಿನ್ನಾಭಿಪ್ರಾಯಗಳನ್ನೂ, ಸಮಸ್ಯೆಗಳನ್ನೂ ಎರಡೂ ರಾಜ್ಯಗಳು ಕುಳಿತು ಕೇಂದ್ರದ ಮಧ್ಯಸ್ಥಿತಿಕೆಯಿಂದ ಮಾತುಕತೆ ಮುಖಾಂತರ ಪರಿಹಾರ ಮಾಡಲಿಕ್ಕೆ ಅವಕಾಶ ಇದೆ. ಆ ವಾತಾವರಣವನ್ನು ಹಾಳುಗೆಡಹುವ ಪ್ರಯತ್ನವನ್ನೂ ಕೂಡ ನ್ಯಾಯಾಂಗ ಮಾಡುತ್ತಿದೆ ಎನ್ನತಕ್ಕಂಥದ್ದನ್ನು ನಾವು ಇವೊತ್ತು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಆಂಧ್ರ ರಾಜ್ಯ ಕರ್ನಾಟಕ ರಾಜ್ಯದ ಬಗ್ಗೆ ಸಮಸ್ಯೆ ಇದ್ದರೆ ಮಾತುಕತೆಗಳ ಮುಖಾಂತರ ಚರ್ಚೆಯನ್ನು ಮಾಡಿ ಪರಿಹಾರ ಮಾಡಿಕೊಳ್ಳೋಣ. ಈ ರೀತಿ ಕೋರ್ಟುಗಳು ಆದೇಶ ಕೊಡುವುದಾದರೆ, ಆ ಕೋರ್ಟುಗಳ ಆದೇಶವನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ ನಮಗೆ ರಾಷ್ಟ್ರದ ಸಮಗ್ರತೆ, ಐಕ್ಯತೆ ಮುಖ್ಯ. ಯಾವುದೋ ನ್ಯಾಯಾಂಗವೋ ಅಥವಾ ಇನ್ನೊಂದು ಸರ್ಕಾರ ರಾಷ್ಟ್ರದ ಐಕ್ಯತೆಯನ್ನು ಬುಡಮೇಲು ಮಾಡತಕ್ಕಂಥ ಅಭಿಪ್ರಾಯವನ್ನು ಹೊಂದಿದ್ದರೆ ಅದರ ವಿರುದ್ಧ ನಾವು ಪ್ರತಿಭಟನೆ ಮಾಡಬೇಕು ಎಂದು ಹೇಳತಕ್ಕಂಥದ್ದು ನನ್ನ ಅಭಿಪ್ರಾಯ.

+ **ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು)** :- ಮಾನ್ಯ ಉಪಾಧ್ಯಕ್ಷರೇ, ವಿರೋಧಪಕ್ಷದ ನಾಯಕರು ಹಾಗೂ ನಮ್ಮ ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ವಾಟಾಳ್‌ನಾಗರಾಜ್‌ರವರು ಮತ್ತು ಶ್ರೀರಾಂರೆಡ್ಡಿಯವರು ಎತ್ತಿರತಕ್ಕಂಥ ವಿಚಾರ ಅತ್ಯಂತ ಪ್ರಾಮುಖ್ಯವಾದಂಥ ವಿಚಾರ. ಎಲ್ಲರೂ ಸಹ ಈ ವಿಚಾರದಲ್ಲಿ ಬಹಳ ಗಂಭೀರದಿಂದ ಆಲೋಚನೆ ಮಾಡಬೇಕಾದಂಥ ಸಂದರ್ಭ ಒದಗಿಬಂದಿದೆ ಎಂಬುದನ್ನು ನಾವು ಈ ಸಂದರ್ಭದಲ್ಲಿ ಹೇಳಿದರೆ ಯಾರೂ ಅನ್ಯಥಾ ಭಾವಿಸ ಬಾರದು. ಆದರೆ ಈಗ ಆ ಜೆರಾಕ್ಸ್ ಕಾಪಿಯೊಳಗಡೆ ಫ್ಯಾಕ್ಸ್‌ನೊಳಗಡೆ ಸರಿಯಾಗಿ ಅಕ್ಷರಗಳು ಸರಿಯಾಗಿ ಕಾಣುತ್ತಿಲ್ಲ. ನಾನು ಹತ್ತುವರೆ ಗಂಟೆಗೂ ಸಹ ಆಂಧ್ರದ ಇರಿಗೇಷನ್ ಪ್ರಿನ್ಸಿಪಲ್ ಸೆಕ್ರೇಟರಿಯವರನ್ನು ನಮ್ಮ ಇರಿಗೇಷನ್ ಸೆಕ್ರೇಟರಿಯವರಿಗೆ ಕಾಪಿ ಕಳುಹಿಸುವಂತೆ ದೂರವಾಣಿಯಲ್ಲಿ ನನ್ನ ಕಛೇರಿಯಿಂದಲೇ ಫೋನ್ ಮಾಡಿಸಿದ್ದೆ. ಅದರಂತೆ ನಾನು ಕೌನ್ಸಿಲ್‌ನಲ್ಲಿ ಇರುವ ಸಂದರ್ಭದ ಮಧ್ಯದಲ್ಲಿ ಆ ಕಾಪಿ ಬಂದಿದೆ. ಆದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಇವೊತ್ತು ಆಂಧ್ರ ಹೈ ಕೋರ್ಟ್‌ನವರು ಕೇಂದ್ರಸರ್ಕಾರಕ್ಕೆ ಡೈರೆಕ್ಟ್ ಮಾಡಿದ್ದಾರೆಯೋ, ನೀವು ಹೇಳಿ ಕರ್ನಾಟಕದವರಿಗೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ನಮಗೆ ಅವರು ಯಾವುದೇ ಆ ರೀತಿಯಾದಂಥ ನಿರ್ದೇಶನವನ್ನು ಆಂಧ್ರ ಹೈಕೋರ್ಟ್‌ನವರು ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದೆಲ್ಲಾ ಪಿ.ಟಿ.ಐ. ನ್ಯೂಸ್‌ನಲ್ಲಿ ಇದೆ. ಈಗ ತಮಗೆ ಗೊತ್ತಿರುವ ಅಥೆಂಟಿಸಿಟಿ ಏನು? paper news, ಅಥವಾ ಪಿ.ಟಿ.ಐ. ನ್ಯೂಸೋ ಅಥವಾ ರೇಡಿಯೋನೆ.

ಶ್ರೀ ಕೆ. ಎನ್. ನಾಗೇಗೌಡ :- ಒಂದು ನಿಮಿಷ... ನಾನು ನಿಮ್ಮ ಮಾತಿಗೆ ಬರುತ್ತೇನೆ. ಲೀಗಲ್ ಎಕ್ಸ್‌ಪರ್ಟ್ಸ್ ಎಗ್ಸಾಮಿನ್ ಮಾಡುವುದಕ್ಕೆ, ಲಾ ಸೆಕ್ರೆಟ್ರೀಸ್‌ಗೆ ಈಗ ಕಾಪಿ ಬಂದಿದೆ ಇಲ್ಲಿ ಕಾನೂನು ಮಂತ್ರಿಗಳಿದ್ದಾರೆ, ಕಾನೂನು ಕಾರ್ಯದರ್ಶಿಗಳಿದ್ದಾರೆ, ನಮ್ಮ ಕೌನ್ಸಿಲ್ ಲೀಗಲ್ ಅಡ್ವೈಸರ್ ಇದ್ದಾರೆ. ಅವರೆಲ್ಲ ಸ್ವಲ್ಪ ಇದರ ಬಗ್ಗೆ ಡಿಟೇಲ್ ಆಗಿ ಎಗ್ಸಾಮಿನ್ ಮಾಡುವುದಕ್ಕೆ ಸಾಯಂಕಾಲದವರೆಗೆ ನಮಗೆ ಅವಕಾಶ ಕೊಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಪತ್ರಿಕೆಯಲ್ಲಿ ಇದೆ, ಕರ್ನಾಟಕ ಮಹಾರಾಷ್ಟ್ರಕ್ಕೆ ಅಫಿಡವಿಟ್ ಹಾಕಬಹುದು ಎಂದು ಹೇಳಿ ಅವಕಾಶ ಇದೆ...

ಶ್ರೀ ಕೆ. ಎನ್. ನಾಗೇಗೌಡ :- ಉಪಾಧ್ಯಕ್ಷರೇ, ಲೀಗಲ್ ಎಕ್ಸ್‌ಪರ್ಟ್ಸ್ ಕೈಯಲ್ಲಿ ಎಗ್ಸಾಮಿನ್ ಮಾಡಿಸುವುದು, ಇವೊತ್ತಿನ ದಿವಸ ಯಾವುದೇ ಕೋರ್ಟ್ ಮೇಲೆ ನಾನು ಈಗ ಮಾತನಾಡುವುದಕ್ಕೆ ಹೋಗದೆ, ಲೀಗಲ್ ಆಗಿ ನಮಗೆ ಏನು ಇದೆ ಎನ್ನತಕಂಕಥದ್ದನ್ನು ನೋಡಿ ಆ ಜೆರಾಕ್ಸ್ ಕಾಪಿಯೊಳಗಡೆ ಅಕ್ಷರಗಳೇ ಕಾಣುತ್ತಾ ಇಲ್ಲ ಅದನ್ನು ಲಾ ಸೆಕ್ರೇಟರಿಯವರು, ಲಾ ಮಿನಿಸ್ಟು ಅವನ್ನು ಎಗ್ಸಾಮಿನ್ ಮಾಡುತ್ತಿದ್ದಾರೆ, ಅದನ್ನು ಲೀಗಲ್ ಎಕ್ಸ್‌ಪರ್ಟ್ಸ್ ಕೈಯಲ್ಲಿ ಎಗ್ಸಾಮಿನ್ ಮಾಡಿಸೋಣ ಇದು ಒಂದು. ಎರಡನೆಯದು ನಾವು ಬಚಾವತ್ ತೀರ್ಪನ್ನು ಉಲ್ಲಂಘನೆ ಮಾಡಿಲ್ಲ. ನಮಗೆ ಏನು ಪ್ಲಾನಿಂಗ್ ಕಮಿಷನ್‌ನವರು ಕೊಟ್ಟಿದ್ದಾರೆ 528 ವರೆಗೆ ಹೋಗಬಹುದು You can invest ಎಂದು ಏನು ಹೇಳಿದ್ದಾರೆ ಅದರಂತೆ ನಾವು 528 ವರೆಗೆ ಹೋಗುತ್ತೇವೆ. ಬಚಾವತ್ ತೀರ್ಪನ್ನು ಉಲ್ಲಂಘನೆ ಮಾಡಿಲ್ಲ, ಯೋಜನಾ ಆಯೋಗದವರು ನಮಗೆ ಕೊಟ್ಟಿರತಕ್ಕಂಥ ಆದೇಶದಲ್ಲಿ ನಾವು ಕೆಲಸ ಮಾಡಿದ್ದೇವೆ. ಆದರಿಂದ ಲೀಗಲ್ ಆಸ್ಪಕ್ಟ್ ಇನ್ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಯಾವುದೇ ಅಂತಹ ಆದೇಶ ನಮಗೆ ಇದುವರೆಗೆ ಬಂದಿಲ್ಲ. ಆಂಧ್ರದ ಹೈಕೋರ್ಟಿನ ಕಾಪಿ ಇವೊತ್ತು ನಮ್ಮ ಹತ್ತಿರ ಇದೆ. ಅದು ರಿಟ್ ಪಿಟಿಷನ್ ಮೈನ್‌ಟೈನಬಲ್ಲ್ ಅಲ್ಲವೆ ಎನ್ನತಕ್ಕಂಥದ್ದು, ಅವರು ಯಾವರೀತಿ ಹೇಳಿದ್ದಾರೆ ಎನ್ನತಕ್ಕಂಥದ್ದುರ ಬಗ್ಗೆ ಡಿಟೇಲ್ ಎಗ್ಸಾಮಿನ್‌ಗೆ ಲೀಗಲ್ ಎಕ್ಸ್‌ಪರ್ಟ್ಸ್‌ನ್ನು ಕನ್ಸಲ್ಟ್ ಮಾಡೋಣ. ಮತ್ತೆ ನಮ್ಮ ಖರ್ಗೆಯವರು ಹೇಳಿದಂಥ ಒಂದು ಪದ ಯಾವುದು ಎಂದರೆ, ನಾವೆಲ್ಲ ಸೇರಿ ನಿರ್ಣಯ ಮಾಡಬೇಕೆಂದು ಏನು ಹೇಳಿದ್ದಾರೆ ಅದಕ್ಕೆ ಸ್ವಲ್ಪ ಹೊತ್ತು ನಾವು ನೀವೆಲ್ಲಾ ಲಂಚ್ ಅವರ್‌ನಲ್ಲಿ ಕುಳಿತು ಮಾತನಾಡಿ ಯಾವರೀತಿ ನಿರ್ಣಯ ಇರಬೇಕು ಎಂದು ಒಟ್ಟಾರೆ ನಿರ್ಣಯವನ್ನು ಮಾಡುವುದಕ್ಕೆ ನಾವು ಆಲೋಚನೆಯನ್ನು ಮಾಡಿಕೊಂಡು ಅನಂತರ ಸದನಕ್ಕೆ ಬರತಕ್ಕಂಥದ್ದು ಸೂಕ್ತ ಎಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು, ಸದನವನ್ನು ಮುಂದಕ್ಕೆ ಹಾಕಿ ತಮ್ಮ ಕೊಠಡಿಯಲ್ಲಿ ಕುಳಿತು ಒಂದು ತೀರ್ಮಾನಕ್ಕೆ ಬರೋಣ. ಇದು ಬಹಳ ಗಂಭೀರವಾದ ಪರಿಸ್ಥಿತಿ. ನಮ್ಮ ರಾಜ್ಯದ ಮೇಲೆ ಅವರು ದಾಳಿ ಮಾಡುವುದಕ್ಕೆ ಹೊರಟಿದ್ದಾರೆ ಇದು ಸರಿಯಲ್ಲ.

ಉಪಾಧ್ಯಕ್ಷರು :- ಸದನವನ್ನು ಮುಂದಕ್ಕೆ ಹಾಕಿದರೆ ಈಗ ಅದು ಸಧ್ಯಕ್ಕೆ ಪರಿಹಾರ ಆಗುವುದಿಲ್ಲ, ಅವರು ಏನು ಹೇಳುತ್ತಾರೆ, ಇದರ ಬಗ್ಗೆ ಕಾನೂನು ಮಂತ್ರಿಗಳು ಮತ್ತು ಕಾನೂನು ಕಾರ್ಯದರ್ಶಿಗಳ ಜೊತೆಯಲ್ಲಿ ಮಾತನಾಡಿ ನಿಜ ವಾದಂಥದ್ದು ಏನು ಇದೆ....

ಶ್ರೀ ವಾಟಾಳ್ ನಾಗರಾಜ್ :- ಅವರು ಸರಿಯಾಗಿ ಹೇಳಿದರು, ಇದರ ಬಗ್ಗೆ ಎಲ್ಲರೂ ಕುಳಿತು ಒಂದು ಸರ್ವಾನುಮತದ ತೀರ್ಮಾನಕ್ಕೆ ಬರೋಣ.

ಶ್ರೀ ಕೆ. ಎನ್. ನಾಗೇಗೌಡ :- ನಾವು ನಮ್ಮ ರಾಜ್ಯಕ್ಕೆ ಅನ್ಯಾಯವಾಗುವಂಥ ಕಾಲ ಬಂದಾಗ ಯಾವುದೇ ಹೋರಾಟಕ್ಕೆ ಸಿದ್ದರಿದ್ದೇವೆ. ಅದರಲ್ಲಿ ಎರಡನೆಯ ಮಾತೇ ಬೇಡ, ಈಗಲೇ ಸದನವನ್ನು ಮುಂದೂಡಿ, ಎಲ್ಲರೂ ಕುಳಿತು ಮಾತನಾಡೋಣ.

(ಗೊಂದಲ)

ಶ್ರೀ **ಆರ್. ಲಕ್ಷ್ಮಯ್ಯ** :- ಗಂಟೆಗಟ್ಟಲೆ ಕೇಳಿದ್ದಾರೆ, ಇವರಿಗೆ ಸಮಾಧಾನ ಇಲ್ಲವೇ?

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ ಮಂತ್ರಿಗಳು ಉತ್ತರ ಕೊಡುತ್ತಾರೆ....

ಶ್ರೀ ಕೆ. ಎನ್. ನಾಗೇಗೌಡ :- ಉಪಾಧ್ಯಕ್ಷರೇ, ಇದಕ್ಕಿಂತ ಮುಖ್ಯವಾದ ಕೆಲಸ ಇಲ್ಲ. ಆದ್ದರಿಂದ ದಯವಿಟ್ಟು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ದೂಡಿ. ನಮ್ಮ ಎಲ್ಲಾ ಪಕ್ಷದವರು ಕುಳಿತು ಮಾತನಾಡಿ ಮತ್ತೆ ಸದನಕ್ಕೆ ಬರೋಣ.

ಶ್ರೀ ವಾಟಾಳ್ ನಾಗರಾಜ್ :- ನನ್ನ ಪ್ರಕಾರ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಬೇಕಾಗಿತ್ತು. ಅದೇನು ಪ್ರಾಮುಖ್ಯ ಇರಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಉಪಾಧ್ಯಕ್ಷರೇ, ನನಗೆ ಅರ್ಥವಾಗದೇ ಇರುವುದು ಒಂದು ಸಂಗತಿ. ಸನ್ಮಾನ್ಯ ನೀರಾವರಿ ಸಚಿವರು ಎದ್ದುನಿಂತುಕೊಂಡು ಈ ಸದನದಲ್ಲಿ ಹೇಳುತ್ತಾರೆ. ಆ ಒಂದು ಆಂಧ್ರದ ಹೈಕೋರ್ಟಿನ ಆದೇಶದ ಕಾಪಿ ಏನು ಇದೆ, ಅದನ್ನು ನಾನು ಓದುವುದಕ್ಕೆ ಬರುವುದಿಲ್ಲ ಎನ್ನುವಂತದ್ದು ಬಂದಿದೆ ಎನ್ನುವುದನ್ನು ಒಂದು ಹೇಳುತ್ತೀರಿ.....

ಶ್ರೀ ಕೆ. ಎನ್. ನಾಗೇಗೌಡ :- ನಾನು ಕೌನ್ಸಿಲ್‌ನಲ್ಲಿದ್ದೆ ಆ ಮಧ್ಯೆ ಜೆರಾಕ್ಸ್ ಕಾಪಿ ಬಂದಿದೆ. ಅದನ್ನು ನಾನು ಈಗ ತರಿಸಿಕೊಂಡು ನೋಡಿದ್ದು, ಅದಕ್ಕೆ ವಿರೋಧ ಪಕ್ಷದ ನಾಯಕರೇ, ಒಂದು ಹತ್ತು ನಿಮಿಷಗಳ ಕಾಲ ಸದನವನ್ನು ಮುಂದಕ್ಕೆ ಹಾಕಿ ಅದರಲ್ಲಿ ನೀವು ನಾವೆಲ್ಲ ಕುಳಿತು ಚರ್ಚೆ ಮಾಡಿಕೊಂಡು ಲೀಗಲ್ ಆಸ್ಪೆಕ್ಟ್ ನೋಡೋಣ, ರೆಸಲ್ಯೂಷನ್ ಆಸ್ಪೆಕ್ಟ್ ನೋಡೋಣ. ಬೇರೆ ಆಸ್ಪೆಕಟ್ಸ್ ನೋಡಿಕೊಂಡು ಸದನಕ್ಕೆ ಬರೋಣ ಎಂದು ನಾನೇ ಉಪಾಧ್ಯಕ್ಷರಿಗೆ ಸಲಹೆಯನ್ನು ನೀಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಏಕೆ ಬಂದಿಲ್ಲವೆಂದು ಹೇಳುತ್ತಿದ್ದೀರಲ್ಲಾ ನಿನ್ನೆ ಸಂಜೆ ಸಂಜೆವಾಣಿಯಲ್ಲಿ ಇತರ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ವಾಟಾಳ್ ನಾಗರಾಜರವರು ಸಹ ನಿನ್ನೆ ಸಂಜೆ 7-00 ಗಂಟೆಗೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಮಲ್ಲಕಾರ್ಜುನ ಖರ್ಗೆಯವರೇ, ತಾವುಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ನಾವು ನಿನ್ನೆ 6 ಗಂಟೆಗೆ ಮತ್ತು ಏಳೂವರೆ ಗಂಟೆಗೆ ವಿಷಯವನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೇವೆ.

ಉಪಾಧ್ಯಕ್ಷರು :- ಈಗ ಲಾ ಮಿನಿಸ್ಟರ್ ಏನು ಹೇಳುತ್ತಾರೆ ಕೇಳಿ,

ಶ್ರೀ ವಾಟಾಳ್ ನಾಗರಾಜ್ :- ಇದು ನಿನ್ನೆ 12-00 ಗಂಟೆಗೆ ತೀರ್ಪು ಆಗಿದೆ. ನಾನು ಈ ವಿಷಯವನ್ನು ನಿನ್ನೆ ರಾತ್ರಿ 7-00 ಗಂಟೆಗೆ ಪ್ರಸ್ತಾಪ ಮಾಡಿದ್ದೇನೆ. ಆಗ ನಾವು ಸದನದಲ್ಲಿ ಇರಲಿಲ್ಲ.

ಶ್ರೀ ಕೆ. ಎನ್. ನಾಗೇಗೌಡ :- ನಾವು ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಪ್ರಯತ್ನ ಮಾಡಿದ್ದೇವೆ. ನಮಗೆ ಅದರ ಕಾಪಿ ಸಿಗಲಿಲ್ಲ.

+ **ಶ್ರೀ ಎಂ. ಸಿ. ನಾಣಯ್ಯ** (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಆಂಧ್ರ ಪ್ರದೇಶದ ಉಚ್ಛ ನ್ಯಾಯಾಲಯದಲ್ಲಿ ಆಲಮಟ್ಟಿ ಅಣೆಕಟ್ಟಿನ ಬಗ್ಗೆ ಏನು ತೀರ್ಮಾನವನ್ನು ತೆಗೆದುಕೊಂಡಿದೆ ಎಂಬುದನ್ನು ಟೆಲಿಪ್ರಿಂಟ್‌ನಲ್ಲಿ ನೋಡಿದೆವು. ನಮಗೆ ಯಾವುದೇ ಒಂದು ರೀತಿಯ ಮಾಹಿತಿಯು ಇರಲಿಲ್ಲ. ರಾಜ್ಯ ಸರ್ಕಾರ ಕೂಡಲೇ ಆಂಧ್ರ ಪ್ರದೇಶದ ಸಂಪರ್ಕವನ್ನು ಮಾಡಿ ಈ ರಿಟ್ ಪಿಟಿಷನ್ ಯಾರು ಹಾಕಿದ್ದಾರೆ? ನಿನ್ನೆ ಉಚ್ಚ ನ್ಯಾಯಾಲಯದಲ್ಲಿ ಕೊಟ್ಟಿರುವಂತಹ ಆಜ್ಞೆ ಏನು? ಮತ್ತು ಉಚ್ಛ ನ್ಯಾಯಾಲಯದಲ್ಲಿ ಯಾವ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಅವುಗಳ ನಕಲುಗಳನ್ನು ಕೂಡಲೇ ಕಳುಹಿಸಿ ಕೊಡಿ ಎಂಬ ಹಿನ್ನೆಲೆಯಲ್ಲಿ ಇವತ್ತು ಈಗ ನಾನು ಸಭೆಗೆ ಬರುವ ಸಂದರ್ಭದಲ್ಲಿ ಒಬ್ಬ ಅಡ್ವೋಕೇಟ್ ಪತ್ರವನ್ನು ಕಳುಹಿಸಿದ್ದಾರೆ. ಕೃಷ್ಣಯ್ಯ ಎನ್ನುವವರು ವಾದ ಮಾಡಲಿಕ್ಕೆ ಇರುವಂತಹ ವಕೀಲರು ಇರಬಹುದು. ಅವರು ಈ ವಿಚಾರವನ್ನು ತಿಳಿಸಿದ್ದಾರೆ. ಉಚ್ಛ ನ್ಯಾಯಾಲಯದವರು ಈ ವಕೀಲರಿಗೆ ಇದಕ್ಕೆ ಸಂಬಂಧಪಟ್ಟವರಿಗೆ ಎಲ್ಲರಿಗೂ ತಿಳಿಸಬೇಕೆಂದು ಹೇಳಿದ್ದರಿಂದ ಅವರು ನಮಗೆ ಪತ್ರದಲ್ಲಿ ತಿಳಿಸಿದ್ದಾರೆ. Let me just read the letter. ಇದರಲ್ಲಿ confusion ಮಾಡಿಕೊಳ್ಳಬೇಕಾಗಿಲ್ಲ. ಇದರ ಜೊತೆಗೆ ಫ್ಯಾಕ್ಸ್ ಸಂದೇಶ ಇದೆ.

SRI M. MALLIKARJUN KHARGE :- Reading of the letter is different. We want to know what is the order of the High Court?

SRI M. C. NANAIAH :- We have got it now, You kindly hear me.

SRI M. MALLIKARJUN KHARGE :- You said that first petition was sent by the Applicant, Mr. Krishnaiah.

ಉಪಾಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್‌ರವರೇ ಅವರು ಹೇಳುವುದನ್ನು ಮೊದಲು ಕೇಳಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಅವರಿಗೆ ಅನುಕೂಲವಾಗಲಿ ಎಂದು ಕೇಳುತ್ತಿದ್ದೇನೆ. ಅದು ಅಧಿಕೃತವಾದಂತಹ ತೀರ್ಪೇ? ಏಕೆಂದರೆ ನಮ್ಮನ್ನು ಯಾವುದಾದರೂ ರೀತಿ ತಪ್ಪು ದಾರಿಗೆ ಎಳೆಯುವಂಥಾದ್ದು ಇದೆಯೇ?

SRI M. C. NANAIAH :- Sri S. Ramachandra Rao...

SRI H. N. NANGE GOWDA :- I am on a point of order. Now a constitutional violation is committed by the Andhra High Court. The Law Minister is trying to read that letter and the order portion also. When a High Court has committed breach of Constitution, at least Government should examine what legal action should be taken against Judges. I do not want the remarks or orders of those Judges to be recorded in our House. So, I request the Hon. Minister for law not to read that order.

SRI MALLIKARJUN KHARGE :- It should not be part of the proceedings.

SRI K. N. NAGE GOWDA :- He is correct. That is why I said, kindly adjourn the House for ten minutes.

ಶ್ರೀ ಎಂ. ಸಿ. ನಾಣಯ್ಯ :- ತಾವೆಲ್ಲರೂ ಒಪ್ಪುವುದಾದರೆ ಸದನವನ್ನು 15 ನಿಮಿಷಗಳ ಕಾಲ ಮುಂದೂಡಿ ಈ ವಿಷಯದ ಬಗ್ಗೆ ತಮ್ಮ ಕೊಠಡಿಯಲ್ಲಿ ಚರ್ಚೆ ಮಾಡೋಣ. ಎಲ್ಲರೂ ಸೇರಿ ಸರ್ವಾನುಮತದಿಂದ ಒಂದು ತೀರ್ಮಾನಕ್ಕೆ ಬರೋಣ.

ಉಪಾಧ್ಯಕ್ಷರು :- ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಿ ಮತ್ತೆ ಸೇರೋಣ.

(ಸದನವು ಮಧ್ಯಾಹ್ನ ಗಂಟೆ 12-05 ಕ್ಕೆ ಮುಕ್ತಾಯವಾಗಿ ಮತ್ತೆ 12-20 ಗಂಟೆಗೆ ಸೇರಲು ನಿಶ್ಚಯಿಸಿತು).

(ಸಭೆಯು ಮಧ್ಯಾಹ್ನ 4-09 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷ ಸ್ಥಾನವನ್ನು ಮಾನ್ಯ ಅಧ್ಯಕ್ಷರು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಆಲಮಟ್ಟಿ ಡ್ಯಾಂ ಎತ್ತರಿಸುವ ಬಗ್ಗೆ -(ಮುಂದುವರಿದ ಚರ್ಚೆ)

+ **ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** :- ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಿತ್ತಿರುವಂಥ ಆಲಮಟ್ಟಿ ಅಣೆಕಟ್ಟಿನ ನಿರ್ಮಾಣ ಕಾರ್ಯವನ್ನು ಸರ್ಕಾರದವರು ಯಥಾಸ್ಥಿತಿಯನ್ನು 30 ನೇ ತಾರೀಖಿನವರೆಗೆ ಕಾಯ್ದುಕೊಂಡು ಹೋಗಬೇಕೆಂದು ಆಂಧ್ರ ಪ್ರದೇಶದ ಉಚ್ಚನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಏನು ಆದೇಶವನ್ನು ಕೊಟ್ಟಿದೆ ಇದರ ಬಗ್ಗೆ ನಾವು ಸದನದಲ್ಲಿ ಪ್ರಸ್ತಾಪವನ್ನು ಮಾಡಿ ಚರ್ಚೆಯು ನಡೆಯುತ್ತಿತ್ತು. ನೀರಾವರಿಯ ಸಚಿವರು ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡಿ ಪ್ರಮುಖವಾದಂತಹ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆಂದು ಸಲಹೆಯನ್ನು ಕೊಟ್ಟಾಗ, ಬಹುಶಃ ನಾವುಗಳು ಸುಮಾರು 4 ಗಂಟೆಗಳ ಕಾಲ ಸ್ಪೀಕರ್ ಕೊಠಡಿಯಲ್ಲಿ ಕಾಯುತ್ತಿದ್ದೆವು. ಆದರೆ ಕೊನೆಯ ನಿಮಿಷದವರೆಗೂ ಯಾವುದೇ ನಿರ್ದಿಷ್ಟ ವಾದಂತಹ ಸಲಹೆಗಳು ಬರಲಿಲ್ಲ. ನಾವಂತೂ ಸ್ಪೀಕರ್ ಕೊಠಡಿಯಲ್ಲಿ ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದು ಸದನಕ್ಕೆ ಬರಬೇಕೆಂದು ನಮ್ಮಗಳ ಅಪೇಕ್ಷೆ ಇತ್ತು. ಆದರೆ ಒಂದು ಒಳ್ಳೆಯದಾಯಿತು, ಅದೇನೆಂದರೆ, ಸನ್ಮಾನ್ಯ ಕೆ. ಎನ್. ನಾಗೇಗೌಡರ ಸಲಹೆ ಮೇರೆಗೆ ಸದನವನ್ನು ಮುಂದೂಡಿದ ಮೇಲೆ ಅನೇಕ ವಿಷಯಗಳು ನನ್ನ ಗಮನಕ್ಕೆ ಬಂತು.

ಅಧ್ಯಕ್ಷರು :- ಶ್ರೀ ವಾಟಾಳ್ ನಾಗರಾಜ್ ಅವರು ಒಳಗಡೆ ಏನು ನಡೆಯಿತು ಎಂದರು. ಒಳಗಡೆ ಏನೂ ನಡೆದಿಲ್ಲ. ಅಭಿಪ್ರಾಯಗಳು ಏನೂ ಬಂದಿಲ್ಲ, ತೀರ್ಮಾನ ಆಗಲಿಲ್ಲ. ತೀರ್ಮಾನ ಆಗುವ ಹಾಗೆ ಇದ್ದರೆ ನಿಮ್ಮನ್ನು ಕರೆಯಿಸಿ ಮಾತನಾಡುತ್ತಿದ್ದೆವು, ಏನೂ ತೀರ್ಮಾನವಾಗಿಲ್ಲವೆಂದು ನಾನು ಹೇಳುತ್ತಿದ್ದೇನಲ್ಲ.

ಶ್ರೀ ವಾಟಾಳ್ ನಾಗರಾಜ್ :- ತಾವು ಹೇಳಿದ ಮೇಲೆ ಆಯಿತು, ಸಂತೋಷ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಮಾತನಾಡುವಾಗ ಒಳಗೆ ನಾವೆಲ್ಲಾ ಸೇರಿದ್ದು ಮಾತನಾಡಿದೆವು ಅಂದರು. ಒಳಗೆ ನಡೆದದ್ದು ಏನೂ ನಮಗೆ ಗೊತ್ತಿಲ್ಲವೆಂದು ಹೇಳಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಒಳಗಡೆ ಕಾನೂನು ಮಂತ್ರಿಗಳ ಜೊತೆ, ಮುಖ್ಯಮಂತ್ರಿಗಳ ಜೊತೆ, ನೀರಾವರಿ ಸಚಿವರ ಜೊತೆ ನಾವು ವಿರೋಧ ಪಕ್ಷದ ಮುಖಂಡರು ಯಾರೆಲ್ಲ ಒಳಗಡೆ ಇದ್ದೆವು, ಅಲ್ಲಿ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದೆವು. ಇಲ್ಲಿ ಬಹಳ ಪ್ರಮುಖವಾಗಿ ಕೆಲವು ಅಂಶಗಳಿವೆ. ನಿನ್ನೆ ಶ್ರೀ ವಾಟಾಳ್ ನಾಗರಾಜು ಅವರು ಮತ್ತು ನಾವು ಪ್ರಸ್ತಾಪ ಮಾಡಿದ್ದೆವು.

ಆಂಧ್ರ ಹೈಕೋರ್ಟ್ ಸೆಂಟ್ರಲ್ ಗವರ್ನಮೆಂಟಿಗೆ 30 ರವರೆಗೆ ಈ ಪ್ರಾಜೆಕ್ಟ್ ವರ್ಕ್ ನಿಲ್ಲಿಸಬೇಕೆಂದು ಈ ರೀತಿ ಡೈರೆಕ್ಷನ್ ಕೊಟ್ಟಿದೆ ಇದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಶ್ರೀ ಸಿಂಧ್ಯಾರವರು ಹೇಳಿದರು, ನಮ್ಮ ಗಮನಕ್ಕೆ ಬಂದಿದೆ, ಅದರ ಬಗ್ಗೆ ನಾವು ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ. ಅದನ್ನು ನಾವು ತಿಳಿಸುತ್ತೇವೆ, ನಾಳೆ ಹೇಳಿಕೆ ಕೊಡುತ್ತೇವೆಂಬ ಅರ್ಥ ಬರುವ ರೀತಿಯಲ್ಲಿ ನಿನ್ನೆ ಅವರು ಮಾತನಾಡಿದ್ದರೂ. ನಮ್ಮ ಕರ್ತವ್ಯ ದೃಷ್ಟಿಯಿಂದ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಿನ್ನೆ ಇದನ್ನು ಪ್ರಸ್ತಾಪ ಮಾಡಿದ್ದೆವು. ಇವತ್ತು ಏನು ಆಂಧ್ರ ಹೈಕೋರ್ಟಿನ ಆದೇಶ ಎಲ್ಲ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ, ಅದರ ಬಗ್ಗೆ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಕಾನೂನು ಮಂತ್ರಿಗಳು ಒಂದು ಮಾತನ್ನು ಹೇಳಿದರು. ಇವತ್ತು ಹೈಕೋರ್ಟಿನಿಂದ ಆದೇಶ ಬರುತ್ತಿರುವುದರ ಬಗ್ಗೆ ನಮಗೆ ಏನೂ ಮಾಹಿತಿ ಇರಲಿಲ್ಲ. ತಮಗೇನಾದರೂ ಹೈಕೋರ್ಟಿನಿಂದ ನೋಟೀಸ್ ಬಂದಿತ್ತೆ? ಅದನ್ನು ಸರ್ವೆ ಮಾಡಿದ್ದೀರೋ ಎಂದಾಗ ಅದು ಬಂದಿರಲಿಲ್ಲವೆಂಬ ಈ ಮಾತನ್ನು ಅವರು ಹೇಳಿದ್ದರು. ಆದರೆ ಏಕೋ ಏನೋ ಈ ಸರ್ಕಾರ ಯಾವುದರ ಬಗ್ಗೆಯೂ ಒಂದು ಸೀರಿಯಸ್ ಆಗಿಲ್ಲ. ಇಷ್ಟೊಂದು ಗಂಭೀರವಾದ ವಿಷಯ, ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿದ್ದುದು ವಿನಾಕಾರಣ ನಮಗೆ ಗೊಂದಲ ಉಂಟು ಮಾಡುವಂಥ ಒಂದು ಪ್ರಯತ್ನ ಆಂಧ್ರ ಸರ್ಕಾರ ಮಾಡುತ್ತಿದೆ. ಅಲ್ಲಿಯ ಹೈಕೋರ್ಟ್ ಮುಂದೆ ಹೋಗಿದೆ, ಎನ್ನುವ ಗಂಭೀರವಾದ ವಿಷಯ ಇವತ್ತು ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ಅದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಹಿಂದು ಪತ್ರಿಕೆಯಲ್ಲಿ, ಈ ನಾಡು ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಜುಲೈ 4 ನೇ ತಾರೀಖು ಒಂದು ವಿಷಯ ಬಹಳ ಸ್ಪಷ್ಟವಾಗಿ ಪ್ರಕಟವಾಗಿದೆ.

`A Division Bench of the Andhra Pradesh High Court on wednesday ordered notice to the respondents (Andhra Pradesh Governement, Karnataka Government and the Central Government) in public interest writ petitions seeking an injunction restraining the Karnataka Government against going ahead with the construction of Almatti irrigation and power dam on the Krishna river in Bijapur District beyond 1680 feet and not to permit creation of storage capacities beyond the limits permitted by the Bachawat Commission Award...

Further it says.

`The Bench ordered notice to the respondents returnable in three weeks'..... ಎರಡು ಮೂರು ಪ್ರಮುಖವಾದ ಅಂಶಗಳನ್ನು ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮಗೆ ನೋಟೀಸ್ ಸರ್ವ್ ಆಗಿದೆಯೋ ಅಥವಾ ಇಲ್ಲವೋ,

ಅದನ್ನು ಆಮೇಲೆ ಚರ್ಚೆ ಮಾಡೋಣ. ಆದರೆ ಸ್ಪಷ್ಟವಾಗಿ ಹಿಂದು ಪತ್ರಿಕೆಯಲ್ಲಿ ಇಷ್ಟೊಂದು ಪ್ರಮುಖವಾದ ವಿಚಾರ ಬಂದಮೇಲೆ ಈ ಸರ್ಕಾರದ ಜವಾಬ್ದಾರಿ ಇತ್ತು ತಾನೆ? ಇವತ್ತು ನಮ್ಮ ಒಂದು ಹಿತಕ್ಕೆ ಧಕ್ಕೆ ಬರುವಂಥ ಒಂದು ಅರ್ಜಿ ಹೈಕೋರ್ಟ್ ಮುಂದೆ ಬರುತ್ತದೆ ಎಂಬುದಾದರೆ ನಿಮ್ಮ ಕಡೆಯಿಂದ ಅಡ್ವೊಕೇಟ್ ಕೋರ್ಟ್ ಮುಂದೆ ಅಪಿಯರ್ ಆಗಬೇಕು, ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ನಮಗೆ ಆ ಜ್ಯುರಿಸ್‌ಡಿಕ್ಷನ್ ಇಲ್ಲವೇ ಎಂದು ತಕ್ಷಣ ತಿಳಿದುಕೊಂಡು ನಿಮ್ಮ ಅಡ್ವೊಕೇಟ್ ಅಲ್ಲಿ ಅಪಿಯರ್ ಆಗಬೇಕು. ಈ ಯಾವುದೇ ಕೆಲಸವನ್ನೂ ತಾವು ಮಾಡಲಿಲ್ಲ. ಇವತ್ತು ನಮಗೆ ಸಂಶಯ ಬಂದಿರುವುದು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತಿರುವುದು, ಇವತ್ತು ಪ್ರೊಸೆಸಿಂಗ್ ಫೀಯನ್ನು ಕಟ್ಟಿದ್ದರೆ ಯಾವ ಯಾವ ರಾಜ್ಯಗಳಿಗೆ ಸಂಬಂಧ ಪಟ್ಟಂಥ ಪಾರ್ಟಿಗಳಿದ್ದಾರೆ ಅವರಿಗೆಲ್ಲಾ ನೋಟೀಸ್ ಸರ್ವ್ ಮಾಡಬೇಕಾಗುತ್ತದೆ. ನೋಟೀಸ್ ಸರ್ವ್ ಆಗಿರುತ್ತದೆ. ನೀವು ಅಪಿಯರ್ ಆಗಿಲ್ಲವೆಂದು ಸ್ಪಷ್ಟವಾಗಿದೆ. ಅವರ ಆರ್ಡರ್‌ನಲ್ಲಿ ಸ್ಪಷ್ಟ ಇದೆ. ಹಾಗಿರಬೇಕಾದರೆ ಇವತ್ತು ನಿಮಗೆ ನೋಟೀಸ್ ಬಂದಿದ್ದರೂ ಸಹ ಯಾವುದೋ ಒಂದು ಕಾರಣಕ್ಕೆ ಮುಚ್ಚಿಡುತ್ತಿದ್ದೀರಿ, ಇದನ್ನು ಬಹಿರಂಗ ಮಾಡುತ್ತಿಲ್ಲ ವೆಂಬ ಅನುಮಾನ ನಮಗೆ ಬಂದಿದೆ. ಅದಕ್ಕೆ ಕಾರಣವೇನಿರಬಹುದು? ತಾವು ಹೇಳ ಬಹುದು ಇಲ್ಲ, ಬಂದಿಲ್ಲ, ಎಂದು. ನನಗನ್ನಿಸುತ್ತದೆ, ಇವತ್ತಲ್ಲ ನಾಳೆ ಸತ್ಯ ಸಂಗತಿ ಹೊರಗೆ ಬಂದೇ ಬರುತ್ತದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ನಿಶ್ಚಿತವಾಗಿ ಇವತ್ತು ಹಿಂದು ಪತ್ರಿಕೆಯಲ್ಲಿ ಪ್ರಕಟವಾದ ನ್ಯೂಸ್ ನೋಡಿದಾಗ, ಅವರು ಪ್ರೊಸೆಸ್ ಫೀ ಕಟ್ಟಿ ನೋಟೀಸ್ ಸರ್ವ್ ಮಾಡಿ ಎಂದು ಆದೇಶ ಕೊಟ್ಟ ಮೇಲೆ ನೀವು ನಿಮ್ಮ ಸರ್ಕಾರ, ಸರ್ಕಾರದ ಪರವಾಗಿ ಯಾರೋ ಒಬ್ಬ ಅಧಿಕಾರಿ ರಿಸೀವ್ ಮಾಡಿದ ಮೇಲೆ ಯಾವುದೋ ಒಂದು ಕಾರಣಕ್ಕೆ ಇದನ್ನು ಬಹಿರಂಗ ಪಡಿಸಿಲ್ಲ. ಇದರ ಜೊತೆಗೆ ಕೋರ್ಟಿನಲ್ಲಿ ನಿಮ್ಮ ವಕೀಲರು ಅಪಿಯರ್ ಆಗಲಿಲ್ಲ. ಇದು ಸ್ಪಷ್ಟವಾದ ಈ ಆರೋಪವನ್ನು ಮಾಡುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಕರ್ನಾಟಕದ ಜನತೆಗೆ ಮರೆಮಾಚುವ ಕೆಲಸ ಇಲ್ಲಿ ಆಗುತ್ತಿದೆ ಎಂಬುದು ನಮ್ಮ ಮನಸ್ಸಿಗೆ ಸ್ಪಷ್ಟವಾಗಿ ಕಾಣುತ್ತಿದೆ. ಇನ್ನೊಂದು ಬಹಳ ಪ್ರಮುಖವಾದ ಅಂಶವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಟೆಲೆಕ್ಸ್ ಮೆಸೇಜ್ ಬಂದಿದೆ. ಶ್ರೀ ಎಸ್. ರಾಮಚಂದ್ರರಾವ್, ಸೀನಿಯರ್ ಅಡ್ವೊಕೇಟ್, ಹೈಕೋರ್ಟ್ ಅವರ ಮೂಲಕ 25-7-96 ಕ್ಕೆ ಟೆಲೆಕ್ಸ್ ಮೆಸೇಜ್ ಬಂದಿದೆ. Sub: Writ petition No 1254/96-Notice to you as per the court directions regarding....ಇದನ್ನು ಸೀನಿಯರ್ ಅಡ್ವೊಕೇಟ್ ಹೈಕೋರ್ಟ್ ನ್ಯಾಯಾಧೀಶರ ಆದೇಶದ ಮೇಲೆ ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತಾರೆ.

'The above writ petition came up for hearing before the Division Bench consisting of Chief Justice and Mr. Justice....on 3-7-1996. After hearing, notice ordered to all the respondents in which you are one of the respondents and also directed that the above matter should be listed for hearing on 24-7-1996. Accordingly, the above

matters were listed yesterday for hearing. After hearing the court passed an order directing the first Respondents i.e. the Union of India to issue necessary instrations to all the concerned to maintain statusque until final adjudication of the above writ petition. The Hon'ble High Court permitted me to take our personal notice to you. The matter is posted to if any by you to appear before the court either by you or either through Counsel. If you fail to appear on the next hearing the case may be disposed of ex-parte. I am informing you as per the court order dated 24-7-1996... ಇದರ ಅರ್ಥ ಏನು? ಬಹಳ ಸ್ಪಷ್ಟವಾಗಿ ಹೈಕೋರ್ಟ್ ಆದೇಶದ ಮೇಲೆ ಮುಖ್ಯ ಕಾರ್ಯದರ್ಶಿಯವರಿಗೆ ಸೀನಿಯರ್ ಅಡ್ವೋಕೇಟ್ ಶ್ರೀ ಎಸ್. ರಾಮಚಂದ್ರರಾವ್ ಪತ್ರ ಬರೆಯುತ್ತಾರೆ. ಆದರ ಟೆಲೆಕ್ಸ್ ಕಾಪಿ ಇಲ್ಲಿಗೆ ಬರುತ್ತದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ನೀವು 3-7-96 ಕ್ಕೆ ಏನು ಅಪಿಯರ್ ಆಗಬೇಕಾಗಿತ್ತು ಆ ಸಮಯದಲ್ಲಿ ಕೋರ್ಟ್ ಡೈರೆಕ್ಷನ್ ಪ್ರಕಾರ ತಾವು ಅಪಿಯರ್ ಆಗಿಲ್ಲವೆಂದು ಬಹಳ ಸ್ಪಷ್ಟವಾಗಿ ಈ ಪತ್ರದಿಂದ ಅರ್ಥವಾಗುತ್ತದೆ. ಅಂದರೆ ನಾನು ಇವತ್ತು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಹೇಳಬಹುದು ಏನಾಗಿದೆ ಅನಾಹುತ ಯಡಿಯೂರಪ್ಪನವರೆ, ಆಂಧ್ರ ಹೈಕೋರ್ಟಿಗೆ ಎಲ್ಲಿ ಜ್ಯೂರಿಸ್‌ಡಿಕ್ಷನ್ ಇದೆ, ಅವರು ಆದೇಶ ಕೊಟ್ಟ ತಕ್ಷಣಕ್ಕೆ ನಾವು ಏನು ಆಲಮಟ್ಟಿ ಕಟ್ಟುವುದನ್ನು ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಆದೇಶ ಬಂದಿಲ್ಲವೆಂದು ನೀವು ಹೇಳಬಹುದು. ಆದರೆ ನಾನು ಹೇಳುವುದು ಇವತ್ತು ಈ ರೀತಿ ಕಾಂಪ್ಲಿಕೇಟ್ ಆಗುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ? ಹಿಂದು ಅಂಥ ದೊಡ್ಡ ಪತ್ರಿಕೆಯಲ್ಲಿ ಬಂದಮೇಲೆ ನಿಮಗೆ ಪ್ರೆಸ್ ಬ್ರೀಫ್ ಇಲ್ಲವೇ? ಮುಖ್ಯ ಕಾರ್ಯ ದರ್ಶಿಯವರು ಇಲ್ಲವೆ? ಅಧಿಕಾರಿಗಳು ಇಲ್ಲವೆ? ಪ್ರೆಸ್ ಸೆಕ್ರೆಟರಿ ಇಲ್ಲವೆ? ಅಂದರೆ ಇವತ್ತು ತಾವು ಏನೋ ಗೊಂದಲದಲ್ಲಿದ್ದೀರಿ. ರಾಜ್ಯದಲ್ಲಿ ಏನು ಬೇಕಾದರೂ ಆಗ ಬಹುದು. ಅದರ ಕಡೆ ಗಮನ ಕೊಟ್ಟು ತಕ್ಷಣ ನಮ್ಮ ರಾಜ್ಯದ ಜನರ ಹಿತವನ್ನೂ ಕಾಪಾಡುವ ದೃಷ್ಟಿಯಲ್ಲಿ ಯಾವ ಕೆಲಸ ಮಾಡಬೇಕೋ ಅದರಲ್ಲಿ ನೀವು ಸಂಪೂರ್ಣ ವಿಫಲರಾಗುತ್ತಿದ್ದೀರಿ. ಕೇವಲ ಇದು ಒಂದೇ ವಿಷಯ ಅಲ್ಲ. ಇದನ್ನು ನೋಡಿದ ಮೇಲೆ ನಮಗೆ ಅನ್ನಿಸುತ್ತದೆ. ಎಷ್ಟರಮಟ್ಟಿಗೆ ನೀವು ಗಂಭೀರವಾಗಿ ಆಡಳಿತ ನಡೆಸು ತ್ತಿದ್ದೀರಿ? ಇಂಥ ಪ್ರಮುಖವಾದ ವಿಷಯಗಳು ಬಂದಾಗ ಈ ರೀತಿ ನೆಗ್ಲೆಕ್ಟ್ ಮಾಡು ತ್ತಿರುವ ನಿಮ್ಮ ಸರ್ಕಾರ, ಇದೇ ರೀತಿ ಇನ್ನು ಎಷ್ಟು ಅನಾಹುತಗಳು ಆಗುತ್ತಿರಬ ಹುದು. ಕೆಲವು ಗೊತ್ತಾಗುತ್ತವೆ. ಕೆಲವು ಗೊತ್ತಾಗುವುದಿಲ್ಲ. ಇವತ್ತು ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆ ಇದರ ಪರಿಣಾಮ ಏನಾಗುತ್ತದೆ? ಕಾವೇರಿ ಟ್ರಿಬ್ಯೂನಲ್ ವಿಚಾರ ಏನಾಯಿತು? ಕೂಗಿದ್ದೇವೆ, ಚೀರಿದ್ದೇವೆ, ಪರಿಣಾಮ ಏನಾಗಬೇಕು ಅದು ಆಯಿತು. ನಮಗೆ ಗಂಡಾಂತರವಾಗಿದೆ, ರೈತರು ಸಂಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಕೃಷ್ಣಾ ಬೇಸಿನ್‌ನಲ್ಲಿರುವಂತವನು ಇರಬಹುದು, ಕಾವೇರಿ ಬೇಸಿನ್‌ನಲ್ಲಿರುವಂತವನು ಇರಬಹುದು,

ಒಂದಲ್ಲ ಒಂದು ಗಂಡಾಂತರಕ್ಕೆ ಸಿಕ್ಕಿ ನರಳುತ್ತಿರುವ ಪರಿಸ್ಥಿತಿ; ಈ ಪರಿಸ್ಥಿತಿ ಇರುತ್ತಿದ್ದರೂ ಸಹ ಮತ್ತೆ ಮತ್ತೆ ನೀವು ಕೈಕಟ್ಟಿಕೊಳ್ಳುವ ಪ್ರಯತ್ನ. ಇವತ್ತು ನಮಗೆ ಏನು ಅನ್ನಿಸುತ್ತದೆ? ಇವತ್ತು ಬಹಳ ನೊಂದು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಪ್ಲಾನಿಂಗ್ ಕಮಿಷನ್ ಕ್ಲಿಯರ್ ಮಾಡಿರುವಂಥ ಈ ಪ್ರಾಜೆಕ್ಟ್ ಇದು. ಬಚಾವತ್ ಆಯೋಗದ ತೀರ್ಪಿನ ಆಧಾರದ ಮೇಲೆ ನಾವು ಮಾಡುತ್ತಿದ್ದೇವೆ. ಇವತ್ತು 528 ಮೀಟರ್ ಎತ್ತರ ಕಟ್ಟುವುದಕ್ಕೆ ಯಾವ ಒಂದು ಅಡ್ಡಿ ಆತಂಕಗಳು ಇಲ್ಲ. ಇದೆಲ್ಲ ಸ್ಪಷ್ಟವಾಗಿದ್ದರೂ ಸಹ ಇವತ್ತು ಏತಕ್ಕೆ ಗೊಂದಲ? ಏತಕ್ಕೆ ನಾವು ದೀರ್ಘವಾಗಿ ಚರ್ಚೆ ಮಾಡುತ್ತಿದ್ದೇವೆ. ಪ್ರಧಾನಿಯವರು ಒಂದು ಮಾತು ಹೇಳಿದರು, ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಂಥ ಕಾಲದಲ್ಲಿ ಎರಡು ರಾಜ್ಯದ ಉನ್ನತಾಧಿಕಾರಿಗಳನ್ನು ಕರೆದು ನಾನು ಮಾತನಾಡುತ್ತೇನೆ, ಇದನ್ನು ಸರಿಪಡಿಸುತ್ತೇನೆ ಎಂದು ನಾನು ಕೇಳುತ್ತೇನೆ, ಇದು ಸರಿಪಡಿಸುವುದಕ್ಕೆ ಏನಿದೆ? ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಪ್ಲಾನಿಂಗ್ ಕಮಿಷನ್ ಕ್ಲಿಯರ್ ಮಾಡಿದ ಮೇಲೆ ಯಾರ ಅಪ್ಪಣೆ ಬೇಕು? ಯಾರ ಅನುಮತಿ ನಮಗೆ ಅಗತ್ಯ ಇದೆ? ಯಾರ ಮೊರೆ ನಾವು ಹೋಗಬೇಕಾಗಿಲ್ಲ. ಯಾರಿಗೆ ಅನ್ಯಾಯವಾಗಿದೆ ಅವರು ಬೇಕಾದರೆ ಹೋಗಲಿ; ಅನ್ಯಾಯವಾಗಿದ್ದರೆ ನಮಗೆ ಲೀಗಲ್ ಆಗಿ ಅಧಿಕಾರ ಇದೆ; ಆದುದರಿಂದ ನಾವೇನು ನಿಯೋಗ ಹೋಗಬೇಕಾದುದಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯ ಕೇಳಬೇಕಾದರೆ ಯಾವುದೇ ರೆಸಲ್ಯೂಷನ್ ಅಗತ್ಯ ಇಲ್ಲ. ಈ ಹೌಸ್‌ನಲ್ಲಿ, ಏತಕೋಸ್ಕರ ನಿಯೋಗ ಹೋಗಬೇಕು? ನಮಗೆ ಅನ್ಯಾಯವಾದಾಗ ಹೋಗಬೇಕು, ಅಥವಾ ಇನ್ನೊಬ್ಬರಿಗೆ ನಾವು ಅನ್ಯಾಯ ಮಾಡಿದ್ದರೆ ಮನಸ್ಸಿನಲ್ಲಿ ಗೊಂದಲ ಇದ್ದಾಗ ನಾವು ಬಡಿದಾಡುವ ಅಗತ್ಯ ಇದೆ. ಇಲ್ಲಿ ಅದು ಇಲ್ಲ. ಅನ್ಯಾಯ ಜುರಾಲಾದಲ್ಲಿ ಆಗಿದೆ; ಅದಕ್ಕೆ ನಾವು ಗಮನ ಕೊಡಲಿಲ್ಲ. ನಾವು ಹೈಕೋರ್ಟ್ ಮುಂದೆ ಹೋಗಲಿಲ್ಲ. ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು, ಸೌಹಾರ್ದಯುತವಾಗಿ ಮಾತನಾಡಬೇಕೆಂದು ಹೇಳುವ ಅಕ್ಕಪಕ್ಕದ ರಾಜ್ಯದವರು ನಮ್ಮನ್ನು ಈ ರೀತಿ ಗೊಂದಲದಲ್ಲಿ ಸಿಕ್ಕಿಸುವಂಥದ್ದು ಸರಿಯೇ? ದೇಶದ ಜನರ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಪ್ರಯತ್ನ. ಸ್ವಾಮಿ, ನಾನು ಒಂದು ಪ್ರಿನ್ಸಿಪಲ್ ಇಟ್ಟುಕೊಂಡಿದ್ದೇನೆ. ಕೋರ್ಟುಗಳ ಬಗ್ಗೆ ಸಣ್ಣಪುಟ್ಟ ನನ್ನ ಭಾವನೆಗಳನ್ನು ಹೇಳಬಹುದೇ ಹೊರತು ಎಲ್ಲೋ ಒಂದೆರಡು ಕಡೆ ಕೊರತೆಯಾದರೆ ಅದರ ಬಗ್ಗೆ ಎತ್ತಿ ಮಾತನಾಡುವುದಕ್ಕೆ ನಾನಂತೂ ಇಷ್ಟಪಡುವುದಿಲ್ಲ. ಆ ನ್ಯಾಯಾಲಯ ಕೊಟ್ಟ ತೀರ್ಪು ಸರಿಯೋ ಅಥವಾ ಅಲ್ಲವೋ ಎಂದು ಏಕೆ ಇಲ್ಲಿ ಮಾತನಾಡಬೇಕು ಅದನ್ನು? ಸುಪ್ರೀಂ ಕೋರ್ಟ್ ಇದೆ. ಅಲ್ಲಿಗೆ ಹೋಗೋಣ. ಅವರ ಜ್ಯೂರಿಸ್‌ಡಿಕ್ಷನ್ ಇಲ್ಲ ಅಂತ ಹೋಗೋಣ. ನಾನು ಇವತ್ತು ಬೆಳಗ್ಗೆ ಮಾತನಾಡಬೇಕಾದರೆ ಒಂದು ಸಲಹೆ ಕೊಟ್ಟೆ. ಸುಪ್ರೀಂ ಕೋರ್ಟಿಗೆ ಹೋಗೋಣ, ಇವರಿಗೆ ಜ್ಯುರಿಸ್‌ಡಿಕ್ಷನ್ ಇಲ್ಲ, ಈ ರಿಟ್ಟನ್ನು ಡಿಸ್‌ಮಿಸ್ ಮಾಡಿ ಅಂತ ಹೋಗೋಣ ಅಂತ ನಾನು ಸಲಹೆ ಕೊಟ್ಟಿದ್ದೇನೆ. ಆದರೆ ಇಲ್ಲಿ ನಾನು ಇವತ್ತು ಪ್ರಮುಖವಾಗಿ ಪ್ರಸ್ತಾಪ ಮಾಡುತ್ತಿರುವುದು, ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು, ಏನು ಅನಾಹುತ ಆಗಿದೆ ಯಡಿಯೂರಪ್ಪನವರೇ, ಯಾಕೆ ಇಷ್ಟೊಂದು ಸಮಯ ಹಾಳು ಮಾಡುತ್ತೀರಿ,

ಯಾಕೆ ಇದು ಎಂದು ನೀವು ಹೇಳಬಹುದು. ಆದರೆ ನಾನು ಹೇಳುತ್ತಾ ಇರುವಂಥದ್ದು ಇಷ್ಟೊಂದು ಪ್ರಮುಖವಾದಂಥ ವಿಷಯಗಳು ಬಂದಾಗ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬಂದಾಗ, ಸ್ವಾಮಿ, ಅನೇಕ ವಿಷಯಗಳು ಇವತ್ತು ಪತ್ರಿಕೆಗಳಲ್ಲಿ ಬರುತ್ತವೆ, ನಮಗೂ ನಿಮಗೂ ಗೊತ್ತಿಲ್ಲದೇ, ಇರುವಂಥದ್ದು. ಅಂಥದರ ಕಡೆ ಗಮನ ಕೊಡಬೇಕಾಗಿತ್ತು. ಇದು ಬಿಟ್ಟು ನಿಮಗೆ ಬೇರೆ ಏನು ಕೆಲಸ ಇದೆ? ಈ ಕೆಲಸ ಬಿಟ್ಟು ಬೇರೆ ಎಲ್ಲಾ ಮಾಡುತ್ತಾ ಇದ್ದೀರಿ. ಅಗತ್ಯವಿರುವಂಥ ಕೆಲಸ ಮಾಡದೇ ಕೈಕಟ್ಟಿಕೊಂಡು ಕುಳಿತಿದ್ದೀರಿ. ನಾನೇನು ಹೇಳುವುದಕ್ಕೆ ಹೊರಟಿದ್ದೆ. ನನಗೇನು ಅನುಮಾನ? ಇವತ್ತು ಪ್ರಧಾನಿಯವರು ಎರಡೂ ರಾಜ್ಯದ ಅಧಿಕಾರಿಗಳನ್ನು ಕರೆದು ಮಾತುಕತೆ ಆಡುತ್ತೇನೆ ಅಂತ ಹೇಳಿದಾಗ ಎಲ್ಲೋ ಒಂದು ಕಡೆ ಗೊಂದಲ ಪ್ರಾರಂಭವಾಗಿದೆ. ಆಂಧ್ರ ಪ್ರದೇಶದ ಬೆಂಬಲಕ್ಕಾಗಿ ನಮ್ಮ ರಾಜ್ಯದ ಹಿತವನ್ನು ಎಲ್ಲಿ ಮಾರಿಬಿಡುತ್ತೀರೋ? ಎಲ್ಲಿ ಹಿತವನ್ನು ಕಡೆಗಣಿಸು ತ್ತೀರೋ ಎನ್ನುವಂಥ ಅನುಮಾನ ಇವತ್ತು ನಮಗೆ ಬರುತ್ತಾ ಇದೆ. ಅದಕ್ಕೆ ಏನೋ ಒಂದು ಚಿತಾವಣೆ, ಏನೋ ಒಂದು ಸಂಚು. ಆಂಧ್ರಪ್ರದೇಶ ಹೈಕೋರ್ಟಿನಲ್ಲಿ ಯಾರೋ ಒಬ್ಬ ಪಾರ್ಟಿ ರಿಟ್ ಹೋಗುವುದು, ಅಲ್ಲಿ ಕೇಂದ್ರ ಸರ್ಕಾರಕ್ಕೆ ಅವರು ಡೈರೆಕ್ಷನ್ಸ್ ಕೊಡುವುದು ಅದಾದಮೇಲೆ ನಾವು ಕೈ ಹಿಡಿದುಕೊಂಡು ಕಾಲು ಹಿಡಿದುಕೊಂಡು, ಅಪ್ಪಾ ಅದೇ ಹಿಂದೆ ಇದ್ದಂಥ ಒಂದು 528 ಮೀಟರ್ ಅಷ್ಟಕ್ಕೇ ಕಟ್ಟಿಕೊಳ್ಳುವುದಕ್ಕೆ ಬಿಡಿ ಅಂತ ಹೇಳಿ ಪ್ರಧಾನಿಯವರ ಮೊರೆ ಹೋಗುವಂಥದ್ದು, ಈ ರೀತಿ ನಾವು ಒಂದು ಭಿಕ್ಷಾಪಾತ್ರೆ ಹಿಡಿದುಕೊಂಡು ಏನೋ ಒಂದು ದೊಡ್ಡ ಸಾಧನೆ ಮಾಡುತ್ತಿದ್ದೇವೆ ಅಂತ ಹೇಳಿ ಡೆಲ್ಲಿ ಯಾತ್ರೆಯೂ ಅಗತ್ಯವಿರುವುದಿಲ್ಲ. ನಮಗೇನು ರೈಟ್ಸ್ ಇದೆ, ಕಾನೂನು ಚೌಕಟ್ಟಿನಲ್ಲಿ ನಮಗೇನು ಅಧಿಕಾರ ಸಿಕ್ಕಿದೆ ಅದನ್ನು ಚಲಾವಣೆ ಮಾಡು ವುದಕ್ಕೆ ಯಾರ ಅಪ್ಪಣೆಯೂ ಅಗತ್ಯ ಇಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನನ್ನದು ಎರಡು ಮೂರು ನೇರವಾದ ಆರೋಪ. ಒಂದು, ಹಿಂದೂ ಪತ್ರಿಕೆಯಲ್ಲಿ ಬಂದಿರುವ ಸುದ್ದಿಯ ಪ್ರಕಾರ ಇವತ್ತು ಸೀನಿಯರ್ ಅಡ್ವೊಕೇಟ್ ರಾಮಚಂದ್ರರಾವ್ ಅವರು ಪತ್ರವನ್ನು ನಮ್ಮ ಚೀಫ್ ಸೆಕ್ರೆಟರಿಯವರಿಗೆ ಬರೆದಿರುವ ಪ್ರಕಾರ ನೋಟೀಸ್ ತಲುಪಿಲ್ಲ ಎಂದು ಹೇಳುವುದು ಅತ್ಯಂತ ಹಸಿ ಸುಳ್ಳು. ನಿಮಗೆ ನೋಟೀಸ್ ಬಂದಿದೆ. ಸಿಕ್ಕಿದೆ. ನಿಮ್ಮ ನಿರ್ಲಕ್ಷ್ಯ ಅಥವಾ ಇನ್ನಾವುದೋ ಒಂದು ಸಂಚು. ಈ ಸರ್ಕಾರ ಜನಹಿತವನ್ನು ಕನ್ನಡಿಗರ ಹಿತವನ್ನು ಮರೆತು ಏನೋ ಒಂದು ಸಂಚಿನಲ್ಲಿ ಭಾಗವಹಿಸಿದ್ದೀರಿ. ನಿಮ್ಮ ಕರ್ತವ್ಯವನ್ನು ನೀವು ಸರಿಯಾಗಿ ನಿರ್ವ ಹಿಸುತ್ತಾ ಇಲ್ಲ. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇವತ್ತು ಈ ನೋಟೀಸ್ ನಿಮಗೆ ಬಂದಿದ್ದರೂ ಸಹ ಸದನವನ್ನು ತಪ್ಪುದಾರಿಗೆ ಎಳೆಯುತ್ತಿ ದ್ದೀರಿ. ನಿಮ್ಮ ಕರ್ತವ್ಯಚ್ಯುತಿಯಾಗಿದೆ. ನಿಮಗೆ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕಿಲ್ಲ. ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೇವಲ ಇದೊಂದು ಅನಾಹುತದ ಬಗ್ಗೆ ಅಲ್ಲ. ಇದೊಂದರ ಪರಿಣಾಮ ಅಲ್ಲ. ನಮ್ಮ ಮನೆಯಲ್ಲಿ ನಮ್ಮ ತಾಯಿ ಅಡಿಗೆ ಮಾಡುತ್ತಾಳೆ. ಅನ್ನ ಬೆಂದಿದೆಯೋ ಇಲ್ಲವೋ ಎಂದು ಎಲ್ಲಾ ಅಗ ಳನ್ನೂ ಮುಟ್ಟಿನೋಡುವುದಿಲ್ಲ. ಎರಡು ಅಗಳನ್ನು ನೋಡುತ್ತಾಳೆ, ಬೆಂದಿದ್ದರೆ ಬಸಿ ಯುತ್ತಾಳೆ. ಹಾಗೆಯೇ ನಿಮ್ಮ ಆಡಳಿತ ಹೇಗೆ ನಡೆಸುತ್ತಿದ್ದೀರಿ ಎನ್ನುವುದಕ್ಕೆ ಇದೊಂದು

ಕೈಗನ್ನಡಿ. ನಿಮಗೆ ಸೀರಿಯಸ್‌ನೆಸ್ ಇಲ್ಲ, ಕಳಕಳಿ ಇಲ್ಲ. ನಿಮ್ಮ ಅಧಿಕಾರಿಗಳೂ ಇದರ ಬಗ್ಗೆ ಯಾವುದೇ ಗಮನ ಕೊಡುತ್ತಿಲ್ಲ. ಅಧಿಕಾರಿಗಳ ಬಿಗಿ ಹಿಡಿದುಕೊಂಡು ಅವರ ಕರ್ತವ್ಯವನ್ನು ನಿರ್ವಹಿಸುವಂಥ ಕೆಲಸ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ನಾವು ಲೀಗಲ್ ಡಿಪಾರ್ಟ್‌ಮೆಂಟಿಗೆ ಖರ್ಚು ಮಾಡುತ್ತಿದ್ದೇವೆ. ಇಂಥ ಅಗತ್ಯವಿರುವ ಕೆಲಸವನ್ನು ಮಾಡದೇ ಇದ್ದಮೇಲೆ ಆ ಡಿಪಾರ್ಟ್‌ಮೆಂಟ್ ಏಕೆ? ನಿಮ್ಮ ಅಡ್ವೋಕೇಟ್ ಜನರಲ್ ಏತಕ್ಕೆ? ನಿಮ್ಮ ಅಧಿಕಾರಿಗಳು ಏತಕ್ಕೆ ಬೇಕು? ಈ ರೀತಿಯ ಪರಿಸ್ಥಿತಿಗೆ ನಿಮ್ಮ ಆಡಳಿತ ಬಂದು ನಿಂತಿದೆ. ಇವತ್ತು ಸರಿಯಾದ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ನಿಮಗೆ ಮನಸ್ಸಿಲ್ಲ. ಸಮಯ ಇಲ್ಲ. ಕಳಕಳಿ ಇಲ್ಲ. ಆ ರೀತಿಯ ಒಂದು ಬೇಜವಾಬ್ದಾರಿ ಸರ್ಕಾರ ಇವತ್ತು ಆಡಳಿತ ನಡೆಸುತ್ತಿದೆ. ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕಿಲ್ಲ. ಆದ್ದರಿಂದ ನೀವು ಅಧಿಕಾರವನ್ನು ಬಿಟ್ಟು ತೊಲಗಿ ಎಂದು ಹೇಳುವಂಥ ಪರಿಸ್ಥಿತಿ ಈ ಘಟನೆಗಳನ್ನು ನೋಡಿದಾಗ, ಒಂದು ತಿಂಗಳಿಂದ ಈ ಸದನದ ಕಾರ್ಯಕಲಾಪ ನೋಡುವಂಥ ಸಂದರ್ಭದಲ್ಲಿ, ಪ್ರತಿಯೊಂದು ಸಂದರ್ಭದಲ್ಲಿ ಈ ಸರ್ಕಾರ ಯಾವುದನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳದೆ, ನಮ್ಮ ನಾಡಿನ ಜನರನ್ನು ಕತ್ತಲೆಯತ್ತ ಎಲ್ಲೋ ಒಂದು ಕಡೆ ತಳ್ಳಿ ಮತ್ತೆ ಹೊರಬರುವುದಕ್ಕೆ ಆಗದಂಥ ಪರಿಸ್ಥಿತಿಗೆ ಸಿಕ್ಕಿಬಿಡುತ್ತೀರೋ ಎನ್ನುವ ಭಯ ಇರುವುದರಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ನಾನು ಹೇಳುತ್ತೇನೆ. ನೀವು ಎದ್ದು ನಿಂತುಕೊಂಡು ಇಲ್ಲ ಯಡಿಯೂರಪ್ಪನವರೇ, ಚೀಫ್ ಸೆಕ್ರೆಟರಿಯಾಗಿ ನಮ್ಮ ಅಧಿಕಾರಿಗಳು ಯಾರೂ ರಿಸೀವ್ ಮಾಡಿಲ್ಲ ಎನ್ನುವುದಾದರೆ ದಯಮಾಡಿ ನಿಮ್ಮ ಅಡ್ವೋಕೇಟ್ ಜನರಲ್ ಮೂಲಕ ಫೋನ್ ಮಾಡಿ. ಕಾಂಟ್ಯಾಕ್ಟ್ ಮಾಡಿ. ನೋಟೀಸ್ ಸರ್ವ್ ಆಗಿದೆಯೋ ಇಲ್ಲವೋ ತಿಳಿದುಕೊಳ್ಳಿ. ಅಲ್ಲಿ ಅಸೋಸಿಯೇಟಿಂಗ್ ಫೀಸ್ ಕಟ್ಟಿರುತ್ತಾರೆ ಅವರು. ಇಲ್ಲದೇ ಇದ್ದರೆ ಈ ರೀತಿ ಒಂದು ಪತ್ರ ಇವತ್ತು ಚೀಫ್ ಸೆಕ್ರೆಟರಿಯವರಿಗೆ ಸೀನಿಯರ್ ಅಡ್ವೋಕೇಟ್ ರಾಮಚಂದ್ರರಾವ್ ಅವರಿಂದ ಬರುವುದಕ್ಕೆ ಸಾಧ್ಯವಿಲ್ಲ. ನೋಟೀಸ್ ಬರದೇ ಯಾವುದೇ ಹೈಕೋರ್ಟ್ ಜವಾಬ್ದಾರಿಯುತ ಹೈಕೋರ್ಟ್ ನ್ಯಾಯಾಧೀಶ ಈ ರೀತಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಿಮಗೆ ನೋಟೀಸ್ ಕೊಟ್ಟಮೇಲೂ ನೀವು ಅಪಿಯರ್ ಆಗಲಿಲ್ಲ ಅಂತ ಹೇಳಿದರೆ ಆಗ ಅನಿವಾರ್ಯವಾಗಿ ಇವತ್ತು ಸರಿಯೋ ತಪ್ಪೋ, ಜ್ಯುರಿಸ್‌ಡಿಕ್ಷನ್ ಇತ್ತೋ ಇಲ್ಲವೋ ಈ ರೀತಿಯಾಗಿ ಒಂದು ತೀರ್ಮಾನ ಆಗಿದೆ ಇದರ ಮೇಲೆ ನಾವು ಸುಪ್ರೀಂ ಕೋರ್ಟಿನ ಮೊರೆ ಹೋಗುವುದು, ಪ್ರಧಾನಿಯವರ ಹತ್ತಿರ ಮೊರೆ ಹೋಗುವುದು, ಈ ರೀತಿ ಇಕ್ಕಟ್ಟಿನಲ್ಲಿ ನಮ್ಮನ್ನು ಸಿಕ್ಕಿಸುವಂಥ ಒಂದು ಪ್ರಯತ್ನ ನೀವು ಮಾಡಿದ್ದೀರಿ. ಆದಕ್ಕಾಗಿ ಸ್ಪಷ್ಟವಾದ ಉತ್ತರವನ್ನು ಕೇಳುವುದಕ್ಕೋಸ್ಕರ ನಾನು ಇವತ್ತು ಬೆಳಗ್ಗೆ ಬಂದತಕ್ಷಣ ಇದನ್ನು ಪ್ರಸ್ತಾಪ ಮಾಡಿದ್ದೆ. ಇದು ಅತ್ಯಂತ ಪ್ರಮುಖವಾದ ವಿಷಯ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು. ಸುಮ್ಮನೆ ಅನಗತ್ಯವಾದ ಧರಣಿ ಮಾಡುತ್ತೀರಿ, ಸತ್ಯಾಗ್ರಹ ಮಾಡುತ್ತೀರಿ ಎಂದು. ನನಗನ್ನಿಸುತ್ತದೆ. ಬಹಳ ತಾಳ್ಮೆಯಿಂದ ನಾವು ಕೆಲಸ ಮಾಡುತ್ತಿದ್ದೇವೆ. ಈ ಸದನದ ಒಂದೊಂದು ನಿಮಿಷ ಸಹ ವ್ಯರ್ಥ ಆಗಬಾರದು, ಪ್ರತಿ ಪಕ್ಷದಲ್ಲಿ ನಿಂತುಕೊಂಡು ಏನೇ ಕೊರತೆಗಳಾದ, ಸರ್ಕಾರ ತಪ್ಪು ಹೆಜ್ಜೆ ಇಟ್ಟಾಗ, ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದೇ ಇದ್ದಾಗ ನಮ್ಮ

ಒಂದು ಕರ್ತವ್ಯವನ್ನು ನಾವು ಮಾಡುತ್ತಾ ಇದ್ದೇವೆ. ಜನ ಮೆಚ್ಚುತ್ತಾರೆ. ಇವತ್ತು ಆಡಳಿತ ನಡೆಸುವವರು ನೀವು ಒಪ್ಪುತ್ತೀರೋ ಇಲ್ಲವೋ. ನಿಮ್ಮನ್ನು ಒಪ್ಪಿಸುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ವಿರೋಧಪಕ್ಷದಲ್ಲಿ ಈ ಕಡೆ ಕುಳಿತಿರುವಂಥವರು ಈ ಲೋಪದೋಷಗಳಾದಾಗ, ಜನಹಿತವನ್ನು ಮರೆತಾಗ, ನಿಮ್ಮ ರಾಜಕೀಯ ಗೊಂದಲದಲ್ಲಿ ತಲ್ಲೀನರಾಗಿ ರಾಜ್ಯದ ಹಿತವನ್ನು ಮರೆತಾಗ ನಿಮ್ಮನ್ನು ಬಡಿದೆಬ್ಬಿಸುವುದು, ಮತ್ತು ನೀವು ಅಧಿಕಾರ ಬಿಟ್ಟು ತೊಲಗಿ ಅಂತ ಹೇಳುವಂಥದ್ದು ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ನಮಗೆ ಈ ಎಲ್ಲಾ ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ತಾವು ಕೊಡಬೇಕು. ನಂತರ ಕೆಲವು ವಿಷಯಗಳನ್ನು ನಾವು ಕ್ಲಾರಿಫಿಕೇಷನ್ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

+ **ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ :-** ಸನ್ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು :- ತಮಗೆ ಎಷ್ಟು ಟೈಮ್ ಬೇಕಾಗಬಹುದು ಸುಮಾರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಕೊಟ್ಟಷ್ಟು ಸಮಯ.

ಅಧ್ಯಕ್ಷರು :- ಎಲ್ಲೋ ಒಂದು ಕಡೆ ಕ್ಲೋಸ್ ಮಾಡಿಕೊಳ್ಳಬೇಕಲ್ಲಾ ನಾವು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ :- ಕ್ಲೋಸಂತೂ ಮಾಡೋಣ. ಆದರೆ ನಾವಂತೂ ಕ್ಲೋಸ್ ಮಾಡುವುದಕ್ಕೆ ತಯಾರಿದ್ದೇವೆ. ಅದರ ಬಗ್ಗೆ ಮಾಹಿತಿಯೇ ಸಿಗಲಿಲ್ಲ. ಅದಕ್ಕಾಗಿ ನಾವು ಓಪನ್ ಮಾಡಿದ್ದೇವೆ. ನನ್ನದು 10-15 ನಿಮಿಷ ಆಗಬಹುದು ಅಷ್ಟೆ. ಅದಕ್ಕಿಂತ ಜಾಸ್ತಿ ಇಲ್ಲ. 10 ನಿಮಿಷದೊಳಗೆ ಮುಗಿಸುತ್ತೇನೆ. ಅಧ್ಯಕ್ಷರೇ, ಈಗಾಗಲೇ ನಾನು ಮುಂಜಾನೆ ಈ ವಿಷಯದ ಮೇಲೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿ ಹೇಳಿದ್ದೇನೆ. ಇವತ್ತು ಒಂದೇನು ಬೆಳಕಿಗೆ ಬಂತು ಅಂದರೆ, ಚರ್ಚೆ ನಡೆದಾಗ ಹಲವಾರು ವಿಷಯಗಳನ್ನು ಈ ವಿಷಯದ ಬಗ್ಗೆ ನಾವು ಪ್ರಸ್ತಾಪ ಮಾಡಿದಮೇಲೆ ಮಾನ್ಯ ಸಚಿವರಾದ ಶ್ರೀಮಾನ್ ನಾಗೇಗೌಡರು ಮತ್ತು ನಾಣಯ್ಯ ನವರು ಹತ್ತು ನಿಮಿಷ ಸದನವನ್ನು ಮುಂದೆ ಹಾಕಿ ಆಮೇಲೆ ಇದರ ಬಗ್ಗೆ ತೀರ್ಮಾನಕ್ಕೆ ಬಂದು ಪುನಃ ಇಲ್ಲಿ ಬರೋಣ ಅನ್ನತಕ್ಕಂಥ ಅವರ ಒಂದು ವಿನಂತಿ ಮೇರೆಗೆ ಉಪಾಧ್ಯಕ್ಷರು ಸದನವನ್ನು ಮುಂದೆ ಹಾಕಿದರು. ಮತ್ತು ಆ ಒಂದು ತಾಸಿನಲ್ಲಿ ಯಾವುದೇ ಒಂದು ತೀರ್ಮಾನ ಆಗಲಿಲ್ಲ. ಅಂದರೆ ಯಾವರೀತಿಯಾಗಿ ಇದನ್ನು ಪ್ರೊಸೀಡ್ ಮಾಡಬೇಕು, ಏನು ಮಾಡಬೇಕು ಎನ್ನತಕ್ಕ ಬಗ್ಗೆಯೂ ಕೂಡ ಅವರು ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಈಗ ಬಂದಿದ್ದಾರೆ. ಅದಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕ ಅವಶ್ಯಕತೆ ಇದೆ ಎಂದು ನಾನು ಮಾಡು ತ್ತಿದ್ದೇನೆ. ಈ ನಮ್ಮ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ಸಾಕಷ್ಟು ಚಳುವಳಿಯನ್ನು ಆಂಧ್ರಪ್ರದೇಶದ ಎಲ್ಲಾ ಪಕ್ಷದವರೂ ಮಾಡುತ್ತಾ ಇದ್ದಾರೆ. ಇದರ ಹಿಂದೆ ಅವರು ಆಲಮಟ್ಟಿ ಡ್ಯಾಮಿಗೆ ಹೋಗಿ, ವಿಸಿಟ್ ಮಾಡಿ, ಅಲ್ಲಿ ಗಲಾಟೆ ಮಾಡಿ, ಆಮೇಲೆ ಮತ್ತೆ ಅಸ್ಸೆಂಬ್ಲಿಯಲ್ಲಿ ಗಲಾಟೆ ಮಾಡಿ ಮಾರ್ಚ್ ತಿಂಗಳಲ್ಲಿ ಅವರು ಸದನದಲ್ಲಿ,

ಆಂಧ್ರಪ್ರದೇಶದ ಅಸ್ಸೆಂಬ್ಲಿಯಲ್ಲಿ ಸರ್ವಾನುಮತದಿಂದ ಒಂದು ರೆಸಲ್ಯೂಷನ್‌ನ್ನೂ ಪಾಸ್ ಮಾಡಿದರು. ಏನೆಂದರೆ ಆಲಮಟ್ಟಿ ಡ್ಯಾಮನ್ನು ಕರ್ನಾಟಕ ಸರ್ಕಾರದವರು ಏನು ಎತ್ತರಿಸುತ್ತಿದ್ದಾರೆ ಅದನ್ನು ತಕ್ಷಣ ನಿಲ್ಲಿಸಬೇಕು ; ಅದಕ್ಕೆ ಪ್ರಧಾನ ಮಂತ್ರಿಗಳು ಇಂಟರ್‌ಫಿಯರ್ ಆಗಬೇಕು; ಅದಕ್ಕೆ ನಾವು ಡೆಲಿಗೇಷನ್ ಕೂಡ ಹೋಗಬೇಕು ಎಂಬ ಮಾತನ್ನು ಅವರು ಸುಮಾರು ಒಂದು ತಿಂಗಳ ಹಿಂದಿನಿಂದ ಎರಡು ತಿಂಗಳು ಹಿಂದಿನಿಂದ ಹೇಳಿಕೊಂಡು ಬಂದಿದ್ದಾರೆ. ಮತ್ತು ಅವರು ಇದನ್ನು ಇವತ್ತು ಹೈಕೋರ್ಟ್ ಮುಖಾಂತರ ಕೂಡ ಈ ರೀತಿ ಒಂದು ಪ್ರೆಷರನ್ನು ಬಿಲ್ಡಪ್ ಮಾಡಿದ್ದಾರೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನೂ ಕೂಡ ಸಾಕಷ್ಟು ಗೌರವವನ್ನು ಸುಪ್ರೀಂ ಕೋರ್ಟ್ ಬಗ್ಗೆಯಾಗಲೀ ಹೈಕೋರ್ಟ್ ಬಗ್ಗೆಯಾಗಲೀ ಇಟ್ಟುಕೊಂಡಿದ್ದೇನೆ. ಜಡ್ಜಸ್ ಬಗ್ಗೆ ನನಗೆ ಸಾಕಷ್ಟು ಗೌರವವಿದೆ. ಈ ಸದನದಲ್ಲಿ ನಾನೆಂದೂ ಕೂಡ ಅವರ ವಿರುದ್ಧ ಮಾತನಾಡತಕ್ಕ ಪ್ರಯತ್ನ ಮಾಡಿಲ್ಲ. ಮತ್ತು ಸದನದ ಒಂದು ಅವಕಾಶವನ್ನೂ ಕೂಡ ನಾನು ಬಳಸಿಕೊಂಡಿಲ್ಲ. ಆದರೆ ಈ ಸಂದರ್ಭದಲ್ಲಿ ಏನಾಗಿದೆಯೆಂದರೆ ಅನಾವಶ್ಯಕವಾಗಿ ಯಾವ ಜ್ಯುರಿಸ್‌ಡಿಕ್ಷನ್ ಅವರಿಗೆ ಇಲ್ಲ ಆ ಜ್ಯುರಿಸ್‌ಡಿಕ್ಷನ್‌ನ್ನು ಅವರ ಕೈಯಲ್ಲಿ ತೆಗೆದುಕೊಂಡು ತಮ್ಮ ಅಧೀನದಲ್ಲಿ ತೆಗೆದುಕೊಂಡು ಒಂದು ನ್ಯಾಯವನ್ನು ಕೊಡತಕ್ಕಂಥ ಅಥವಾ ಒಂದು ತೀರ್ಪನ್ನು ಕೊಡತಕ್ಕಂಥ ಪ್ರಯತನ್ನವನ್ನು ಮಾಡಿದ್ದಾರೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಇಂಡಿಯನ್ನು ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 131 ಪ್ರಕಾರ ಒರಿಜಿನಲ್ ಜ್ಯುರಿಸ್‌ಡಿಕ್ಷನ್ ಆಫ್ ದಿ ಸುಪ್ರೀಂ ಕೋರ್ಟ್ ಏನು ಎಂದು ಇದರಲ್ಲಿ ಡಿಫೈನ್ ಮಾಡಿದ್ದಾರೆ. ಯಾವ ಯಾವ ವಿಷಯಗಳು ಸುಪ್ರೀಂ ಕೋರ್ಟಿಗೆ ಬರುತ್ತದೆ, ಯಾವ ವಿಷಯಗಳು ಹೈಕೋರ್ಟಿಗೆ ಹೋಗುತ್ತದೆ ಎನ್ನತಕ್ಕದ್ದು ಸ್ಪಷ್ಟವಾಗಿ ಆರ್ಟಿಕಲ್ 131 ರಲ್ಲಿ ಇದ್ದರೂ ಕೂಡ ಇದನ್ನು ಬದಿಗಿಟ್ಟು ಇವತ್ತಿನ ದಿವಸ ಆಂಧ್ರ ಪ್ರದೇಶದ ಹೈಕೋರ್ಟ್ ಚೀಫ್ ಜಸ್ಟೀಸ್ ಶ್ರೀಮಾನ್ ಪಿ. ಎಸ್. ಮಿಶ್ರ ಅವರು ಹಾಗೂ ಸಯ್ಯದ್ ಸಾದತ್ ಉಲ್ಲಾ ಹುಸೇನ್ ಅವರು ಇವತ್ತು ಆರ್ಡರ್ ಪಾಸ್ ಮಾಡಿದ್ದಾರೆ. ಇದು ಎಂಥ ಆರ್ಡರ್ ಇದೆ ಎಂದರೆ ಅಧ್ಯಕ್ಷರೇ, ಒಬ್ಬ ಆರ್. ಕೃಷ್ಣಯ್ಯ ಎನ್ನುವವರು ಅವರು ಬ್ಯಾಕ್‌ವರ್ಡ್ ಕ್ಲಾಸ್ ವೆಲ್‌ಫೇರ್ ಅಸೋಸಿಯೇಷನ್ ಎಂದು ಮಾಡಿಕೊಂಡು ಪಬ್ಲಿಕ್ ಇಂಟರೆಸ್ಟ್ ರಿಟ್ ಪಿಟಿಷನ್ ಆರ್ಟಿಕಲ್ 262-263 ಕೆಳಗೆ ಹಾಕಿದ್ದಾರೆ. ಏನೆಂದರೆ, ಈ ಬಚಾವತ್ ಅವಾರ್ಡ್ ಪ್ರಕಾರ ಏನು ನೀರಿನ ಪಾಲು ಇದೆ, ಏನು ಅಲೋಕೇಷನ್ ಇದೆ, ಆ ಅಲೋಕೇಷನ್ ಸರಿಯಾಗಿ ಉಪ ಯೋಗವಾಗಬೇಕಾದರೆ ಅಲ್ಲಿ ಎಂದು ರಿವರ್ ಬೋರ್ಡ್ ಎಂದು ಮಾಡಬೇಕು, ಅದಕ್ಕೆ ನೀವು ಸರ್ಕಾರಕ್ಕೆ ಡೈರೆಕ್ಷನ್ ಕೊಡಿಯೆಂದು ಹೇಳಿ ಅವರು ಒಂದು ಪಿಟಿಷನ್ ಹಾಕಿ, ಮತ್ತೊಂದು ರಿಕ್ವೆಸ್ಟ್ ಏನೆಂದರೆ, ಅವರು ಕೇಳಿಕೊಂಡಿದ್ದು ಆಲಮಟ್ಟಿ ಡ್ಯಾಮ್‌ನ್ನು ಏನು ಕರ್ನಾಟಕದವರು ಎತ್ತರಿಸುತ್ತಿದ್ದಾರೆ ಅದನ್ನು ತಡೆಹಿಡಿಯಬೇಕು, ಅದನ್ನು ನಿಲ್ಲಿಸಬೇಕು ಅದಕ್ಕೆ ತಕ್ಷಣ ತಾವು ಸ್ಟೇ ಕೊಡಬೇಕು, ಸ್ಟೇಟಸ್ಕೊ ಮೆಂಟೇನ್ ಮಾಡಬೇಕು ಅಂತ ಅವರಿಗೆ ಇವೆಕ್ಷನ್ ಆರ್ಡರ್ ಕೊಡಬೇಕೆಂದು ಹೇಳಿ ಅವರು ಕೇಳಿಕೊಂಡಿದ್ದಾರೆ. ಹಾಗೆ ಕೇಳಿಕೊಂಡ ಮೇಲೆ ಇವತ್ತು ಅದರ ಆಧಾರದ ಮೇಲೆ ಅವರೊಂದು ನಿರ್ಣಯವನ್ನು

ಪಾಸ್‌ಮಾಡಿ ಜಡ್ಜ್‌ಮೆಂಟ್ ಕೊಡುವಾಗಲೇ ಕೆಲವು ರೀತಿ ಜನರಿಗೆ ಪ್ರಚೋದನೆ ಮಾಡತಕ್ಕ ರೀತಿಯಲ್ಲಿ ಹೇಳಿದ್ದಾರೆ. ಒಂದು ಕೇಂದ್ರಸರ್ಕಾರದವರು ಇತ್ತಕಡೆಗೆ ಗಮನ ಹರಿಸದಿದ್ದರೆ ಕರ್ನಾಟಕದವರು ಡ್ಯಾಮ್ ಎತ್ತರ ಮಾಡುವುದನ್ನು ನಿಲ್ಲಿಸದೇ ಹೋದರೆ ಅಥವಾ ಇವರೆಲ್ಲರೂ ಕೂಡ ಕೊಲ್ಯೂಡ್ ಆಗಿ ಬಚಾವತ್ ಅವಾರ್ಡ್ ಏನಿದೆ ಅದನ್ನು ತಪ್ಪಿಸಬೇಕು ಮತ್ತು ಅದರಲ್ಲಿ ವ್ಯತ್ಯಾಸ ಮಾಡಬೇಕೆಂದು ಏನು ಹೊರಟಿದ್ದಾರೆ ಅದಕ್ಕೆ ನಾವು ಯೂರಾ ಕೂಡ ಬೆಂಬಲ ಕೊಡಬಾರದೆನ್ನತಕ್ಕ ಅರ್ಥ ಬರುವ ರೀತಿಯಲ್ಲಿ ಅವರು ಹೇಳಿ, ಒಪನ್ ಕೋರ್ಟ್‌ನಲ್ಲಿ ಅದೇ ರೀತಿಯಾಗಿ ಮಾತನಾಡಿದ್ದಾರೆ. ಅದು ಪತ್ರಿಕೆಯಲ್ಲಿ ಕೂಡ ಬಂದಿದೆ. ನಾನು ಮುಂಜಾನೆ ಅದನ್ನು ಓದಿ ಕೂಡ ಹೇಳಿದ್ದೇನೆ. ಅವರು ಯಾವ ರೀತಿಯಾಗಿ ಪ್ರಚೋದನೆ ಮಾಡಿದ್ದಾರೆ ಎನ್ನುವುದರ ಬಗ್ಗೆ. ಬೀದಿ ಜಗಳಗಳು ಆಗುತ್ತದೆ, ಆಂಧ್ರ ಮತ್ತು ಕರ್ನಾಟಕದಲ್ಲಿ ಅದಕ್ಕಾಗಿ ಇದನ್ನು ಬಹಳ ಮಹತ್ವದ ವಿಷಯ ಎಂದು ತಿಳಿದುಕೊಂಡು ಇವತ್ತು ನಾವು ಡೈರೆಕ್ಷನ್ ಕೊಡುತ್ತೇವೆಂದುಹೇಳಿ ಅವರು ನಾವು ಮೂವತ್ತನೇ ತಾರೀಖು ಹಾಜರಾಗಬೇಕೆಂದು ಹೇಳಿ ಈಗಾಗಲೇ ಡೈರೆಕ್ಷನ್ಸ್ ಕೇಂದ್ರ ಸರ್ಕಾರಕ್ಕೂ ಕೊಟ್ಟಿದ್ದಾರೆ, ಕೇಂದ್ರ ಸರ್ಕಾರದ ಮುಖಾಂತರ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳಿ ಅವರಿಗೂ ಕೊಟ್ಟಿದ್ದಾರೆ. ಅದು ಅಲ್ಲದೆ ಶ್ರೀಮಾನ್ ರಾಮಚಂದ್ರರಾಯರು, ಸೀನಿಯರ್ ಅಡ್ವೊಕೇಟ್ ಅವರ ವತಿಯಿಂದ ನೀವೇ ಇದನ್ನು ಸರ್ವ್ ಮಾಡಿಯೆಂದು ಹೇಳಿ ಅವರಿಗೆ ಹೇಳಿದ ಮೇಲೆ, ಅವರು ಇವತ್ತು ಫ್ಯಾಕ್ಸ್ ಮುಖಾಂತರ ಚೀಫ್ ಸೆಕ್ರೆಟರಿಯವರಿಗೆ ಲೆಟರ್ ಕಳುಹಿಸಿದ್ದಾರೆ. ಅವರು ಆ ಲೆಟರ್ ಬಂದಮೇಲೆ ನನಗೆ ಇದು ಈಗ ಬಂದಿದೆ, ಫ್ಯಾಕ್ಸ್ ಮೆಸೇಜ್ ಇದೀಗ ತಾನೇ ತಲುಪಿದೆ ಎಂದು ಹೇಳಿ ಅದರ ಬಗ್ಗೆ ಒಪಿನಿಯನ್‌ಗಾಗಿ ಲಾ ಸೆಕ್ರೆಟರಿಯವರಿಗೆ ಇವತ್ತು ಕಳುಹಿಸಿದ್ದಾರೆ. ಅಂದರೆ ಇದೆಲ್ಲವೂ ಕೂಡ ಈ ವಿಷಯವನ್ನು ಈ ಸದನದಲ್ಲಿ ಎತ್ತಿದಮೇಲೆ ಪ್ರಾರಂಭವಾಯಿತು. ಇದರಲ್ಲಿ ಎರಡು ವಿಷಯಗಳು. ಒಂದು ಕಾನೂನು ಪ್ರಕಾರ ಕ್ರಮ ಏನು ತೆಗೆದುಕೊಳ್ಳಬೇಕು ಲೀಗಲ್ ಪ್ರೊಸೀಜರ್ ಏನೋ ಫಾಲೋ ಮಾಡಬೇಕು ಅದು ಲಾ ಡಿಪಾರ್ಟ್‌ಮೆಂಟ್ ನಮ್ಮ ಅಡ್ವೊಕೇಟ್ಸ್ ಅವರು ಮಾಡುತ್ತಾರೆ ಇದೊಂದು ಕಡೆ. ಆದರೆ ಅಲ್ಲಿ ಹಾಜರಾಗಬೇಕಾಗಿತ್ತು ಅದು ಆಗಿಲ್ಲ. ಇದು ಅವರ ಲ್ಯಾಪ್ಸ್ ಇದೆ. ಆದರೆ ಎರಡನೆಯದು ಏನೆಂದರೇ, ಅಲ್ಲಿರತಕ್ಕ ಆರ್. ಕೃಷ್ಣಯ್ಯ ಎನ್ನುವವರು ಏನು ಕೇಸ್ ಹಾಕಿದ್ದರು ಅವರು ಕೇಸ್ ಹಾಕಿದಾಗ ಅವರು ಪಾರ್ಟಿ ಮಾಡಿದ್ದುದು ಯಾರಿಗೆಂದರೆ, ಯೂನಿಯನ್ ಆಫ್ ಇಂಡಿಯಾ, ಕ್ಯಾಬಿನೆಟ್ ಸೆಕ್ರೆಟರಿ ಗೌರ್ನಮೆಂಟ್ ಆಫ್ ನ್ಯೂಡೆಲ್ಲಿ. ಎರಡನೆಯ ರೆಸ್ಪಾಂಡೆಂಟ್ ಯಾರೆಂದರೆ Chief Secretary, State of Andra pradesh. ಮೂರನೆಯವರು ಯಾರೆಂದುರ ಸ್ಟೇಟ್ ಆಫ್ ಕರ್ನಾಟಕ, ಚೀಫ್ ಸೆಕ್ರೆಟರಿ, ನಾಲ್ಕನೆಯದು ಏನೆಂದರೆ ಸ್ಟೇಟ್ ಆಫ್ ಮಹಾರಾಷ್ಟ್ರ, ಬೈ ಇಟ್ಸ್ ಚೀಫ್ ಸೆಕ್ರೆಟರಿ ಬಾಂಬೆ, 5 ನೇಯ ರೆಸ್ಪಾಂಡೆಂಟ್ ಯಾರೆಂದರೆ Central water and power transmission, Represented by its Secretary, New Delhi. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮೀಷನ್, 6ನೆಯದು, ಯಾರೆಂದರೆ, ಪ್ಲಾನಿಂಗ್ ಕಮೀಷನ್ ಆಫ್ ಇಂಡಿಯಾ

ರೆಪ್ರಸೆಂಟಿವ್ ಬೈ ಇಟ್ಸ್ ಸೆಕ್ರೆಟರಿ, ಯೋಜನಾಭವನ್, ನ್ಯೂ ಡೆಲ್ಲಿ. ಇಷ್ಟು ಜನ ಇವತ್ತು ರೆಸ್ಪಾಂಡೆಂಟ್. ಈ ರೆಸ್ಪಾಂಡೆಂಟ್ಸ್‌ಗೆ ಹೈಕೋರ್ಟ್‌ದವರು ಸಮನ್ಸ್ ಜಾರಿ ಮಾಡಿದ್ದಾರೆ. ಸಮನ್ಸ್ ಜಾರಿ ಮಾಡಿ ಅದರಲ್ಲಿ ಅವರು ಸ್ಪಷ್ಟವಾಗಿ ಏನು ಹೇಳಿ ದ್ದಾರೆಂದರೆ, ಇದನ್ನು ನಾಲ್ಕನೆಯ ತಾರೀಖಿನೊಳಗಾಗಿ, ಸರ್ವೆ ಮಾಡಿ ನಮಗೆ ತಿಳಿಸಬೇಕೆನ್ನತಕ್ಕ ಮಾತನ್ನು ಹೇಳಿದ್ದಾರೆ. ಇಲ್ಲಿ ಕೇಳಿದರೆ ಏನು ಹೇಳಿದರು? ನಮಗೆ ಅದರ ಬಗ್ಗೆ ಏನೂ ಮಾಹಿತಯು ಬಂದಿಲ್ಲ. ಅಲ್ಲಿ ಹೈಕೋರ್ಟ್‌ನಲ್ಲಿದ್ದಂತಹ ಕೇಸಿನ ಬಗ್ಗೆ ಅಥವಾ ಸಮನ್ಸ್‌ಜಾರಿ ಮಾಡಿ, ಸರ್ವ್ ಮಾಡಿ ವಾಪಸ್ಸು ಕಳುಹಿಸಬೇಕೆನ್ನತಕ್ಕ ಬಗ್ಗೆ ನಮಗೇನೂ ಮಾಹಿತಿಯಿಲ್ಲ, ನಮಗೆ ಸಮನ್ಸ್ ಸರ್ವ್ ಆಗಿಲ್ಲ, ಆವೊಂದು ಪಿಟಿಷನ್ ಬಗ್ಗೆ ನಮಗೆ ಯಾವ ಮಾಹಿತಿಯೂ ಕೂಡ ಇಲ್ಲವೆನ್ನತಕ್ಕ ಮಾತನ್ನು ಕರ್ನಾಟಕ ಸರ್ಕಾರದವರು ಹೇಳುತ್ತಾರೆ. ಇದು ಅವರ ಲ್ಯಾಪ್ಸ್. ಅಂದರೆ ಅವರು ಕಳುಹಿಸಿದ್ದೇವೆಂದು ಹೇಳುತ್ತಾರೆ, ಇವರು ಇಲ್ಲವೆಂದು ಹೇಳುತ್ತಾರೆ. ಆದರೆ ಇದಕ್ಕೆ ಪುರಾವೆ ಏನೆಂದರೆ, ಈಗಾಗಲೇ ಅವರು ಹೇಳಿದಾಹಾಗೆ ಹಿಂದೂ ಪತ್ರಿಕೆಯಲ್ಲಿ ಇದು ಬಂದಿದೆ ಫ್ರೆಂಟ್ ಪೇಜ್‌ನಲ್ಲಿ ನಮ್ಮ ಕಡೆಯೂ ಕೂಡ ಬಂದಿದೆ. ಏನಂತ ಬಂದಿದೆ ಅಂದರೆ ಅದು ಈ ರೀತಿ ಇದೆ. ``High Court issues notice to Andhra Pradesh and Karnataka. A Division Bench of the Andhra Pradesh High Court on Wednesday, ordered notice to the Respondents (Andhra Pradesh Goverńment, Karnataka Government and the Central Government) in a public interest writ petition seeking an injuction restraining the Karnataka Government against going ahead with the construction of Alamatti irrigation and power dam on the Krishna River in Bijapur District beyond 1680' and not to permit creation of storage capcities beyond the limits permitted by the Bachawat Commission Award". ಮುಂದೆ ನಾನು ಓದುವುದಕ್ಕೆ ಹೋಗುವುದಿಲ್ಲ. ಅಲ್ಲಿರತಕ್ಕ ಪ್ರೊಸೆಸರ್ ಜೊತೆ ಕಳುಹಿಸಬೇಕಂದರೆ ಅಲ್ಲಿ ಹಣ ತುಂಬಿ ಸಮನ್ಸ್ ಸರ್ವೆ ಮಾಡುವುದಕ್ಕೆ ಏನು ಫೀಸ್ ತುಂಬಬೇಕೊ ಅದನ್ನು ತುಂಬಿ ಕಳುಹಿಸುತ್ತಾರೆ. ಅದೂ ಕೂಡ ನೀವು ವೆರಿಫೈ ಮಾಡಿಲ್ಲ. ಇವತ್ತು ಮುಂಜಾನೆಯಿಂದ ಇಲ್ಲಿ ಚರ್ಚೆ ನಡೆದಿದೆ. ಅವರು ಹಣ ತುಂಬಿದ್ದಾರೊ ಅಥವಾ ಇಲ್ಲವೋ ಸಮನ್ಸ್ ಸರ್ವ್ ಆಗಿದೆಯೋ ಇಲ್ಲವೋ ಅವತ್ತು ಇದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಕೂಡ ನೀವು ಯಾರೂ ಗಮನಕ್ಕೆ ತೆಗೆದುಕೊಂಡಿಲ್ಲ. ಪತ್ರಿಕೆಯಲ್ಲಿ ಬಂದಾಗ ಕೊನೆಯ ಪಕ್ಷ ಇದರಿಂದ ಏನಾಗುತ್ತದೆ, ರಾಜ್ಯದ ಹಿತದೃಷ್ಟಿಯಿಂದ ಇದೊಂದು ದೊಡ್ಡ ಯೋಜನೆ ಇದ್ದ ಕಾರಣ ತಾವು ಗಮನಕ್ಕೆ ತೆಗೆದುಕೊಂಡಿಲ್ಲ. ಇದು ಚೀಫ್ ಮಿನಿಸ್ಟರ್ ಗಮನಕ್ಕೆ ಬಂದಿಲ್ಲವೆಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಿಮಗೆ ಪ್ರೆಸ್ ಸೆಕ್ರೆಟರಿ ಇರುತ್ತಾರೆ, ನಿಮಗೆ ಇನ್‌ಫರ್ಮೇಶನ್ ಸೆಕ್ರೆಟರಿ ಇರುತ್ತಾರೆ. ಡೈರೆಕ್ಟರ್, ಇನ್‌ಫರ್ಮೇಶನ್ ಅಂಡ್ ಪಬ್ಲಿಸಿಟಿ ಇರುತ್ತಾರೆ. ಆಮೇಲೆ ನಿಮ್ಮ ಇಂಟಲಿಜೆನ್ಸ್ ಇದೆ. ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್

ಇದೆ. ಇಷ್ಟು ಇಲಾಖೆಗಳು ಇದ್ದರೂ ಕೂಡ ಇದರ ಬಗ್ಗೆ ನಿಮಗೆ ಮಾಹಿತಿ ಬಂದಿಲ್ಲವೆಂದರೆ ನಾವು ಏನು ತಿಳಿದುಕೊಳ್ಳಬೇಕು? ನೀವು ಪರ್ಪಸ್‌ಲಿ ಇದನ್ನು ನೆಗ್ಲೆಕ್ಟ್ ಮಾಡಿದ್ದೀರಿ ಎನ್ನತಕ್ಕ ಮಾತನ್ನು ನಾನು ಹೇಳಬೇಕಾಗುತ್ತದೆ. ಈವೊಂದು ನಿಮ್ಮ ನಿರ್ಲಕ್ಷ್ಯಕ್ಕಾಗಿ, ನಿಮ್ಮ ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್‌ಗಾಗಿ ಇದನ್ನು ನೀವು ಒಪ್ಪಿಕೊಳ್ಳಬೇಕು. ಒಪ್ಪಿಕೊಂಡು ಇವತ್ತಿನ ದಿವಸ ಯಾವ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಿಮಗೆ ಶಕ್ತಿಯಿಲ್ಲ ನೀವು ರಾಜ್ಯವನ್ನು ಮುನ್ನಡೆಸುವುದಕ್ಕೆ ನಿಮಗೆ ಸಾಮರ್ಥ್ಯವಿಲ್ಲವೆನ್ನತಕ್ಕ ಮಾತನ್ನು ನಾನು ಹೇಳಬೇಕಾಗುತ್ತದೆ. ಇಂತಹ ದೊಡ್ಡ ಪ್ರಾಜೆಕ್ಟ್ ಇದು. ಆಮೇಲೆ ಬಚಾವತ್ ಅವಾರ್ಡ್ ಪ್ರಕಾರ 2000 ದ ಇಸವಿಯೊಳಗಾಗಿ ನಾವು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ಒಂದು ಪ್ರಾಜೆಕ್ಟ್ ಇದು. ಅದಕ್ಕೆ ಚೀಫ್ ಸೆಕ್ರೆಟರಿಯವರಾಗಲಿ, ಇರಿಗೇಷನ್ ಸೆಕ್ರೆಟರಿಯವರಾಗಲಿ, ಇನ್‌ಫರ್ಮೇಶನ್‌ದವರಾಗಲಿ ಇಂಟಲಿಜೆನ್ಸ್‌ದವರಾಗಲಿ, ಮಂತ್ರಿಗಳಾಗಲೀ ಯಾರೂ ಕೂಡ ಗಮನಕ್ಕೆ ತೆಗೆದುಕೊಳ್ಳದೇ ಹೋದರೆ ನಾವೇನು ತಿಳಿದುಕೊಳ್ಳಬೇಕು? ನೀವೇನು ಅಲ್ಲಿ ಕೇಂದ್ರ ಸರ್ಕಾರದಲ್ಲಿ ನಮ್ಮ ಪ್ರಧಾನ ಮಂತ್ರಿಯವರಿಗೆ ಹೆಲ್ಪ್ ಆಗಲಿಯೆಂದು ಮಾಡುತ್ತಾ ಇದ್ದೀರಾ? ಏಕೆಂದರೆ ಅಲ್ಲೊಬ್ಬರು ಅಡ್ವೊಕೇಟ್ ಕೂಡ ಹೇಳಿದ್ದಾರೆ ಚಂದ್ರಬಾಬು ನಾಯ್ಡುರವರ ಪರವಾಗಿ. ನಾವು ಪೊಲಿಟಿಕಲ್‌ಆಗಿ ಸಾಲ್ವ್ ಮಾಡಿಕೊಳ್ಳುತ್ತೇವೆಂದು ಹೈಕೋರ್ಟ್ ಮುಂದೆ ಪ್ಲೀಡ್ ಮಾಡಿದರೂ ಕೂಡ ಜಡ್ಜ್‌ರವರ ರಿಮಾರ್ಕ್ಸ್ ಏನೆಂದರೆ ನಿಮ್ಮ ಕೈಯಿಂದ ರಾಜ್ಯದ ನೀರನ್ನು ಉಳಿಸಿಕೊಳ್ಳತಕ್ಕ ರಕ್ಷಣೆ ಮಾಡಲಿಕ್ಕೆ ಆಗುವುದಿಲ್ಲ. ಆಂಧ್ರಪ್ರದೇಶದ ಹಿತರಕ್ಷಣೆ ಮಾಡುವುದಕ್ಕಾಗುವುದಿಲ್ಲ ನೀವು ಲೆಥಾರ್ಜಿಕ್ ಎನ್ನತಕ್ಕ ಮಾತನ್ನೂ ಕೂಡ ಅವರು ಹೇಳಿದ್ದಾರೆ. ಅಂದರೆ ಎಷ್ಟರಮಟ್ಟಿಗೆ ಮುಂದುವರಿದು, ಅಲ್ಲಿನ ಹೈಕೋರ್ಟ್ ತೀರ್ಪು ಕೊಟ್ಟಿದೆ ಎನ್ನತಕ್ಕದ್ದು ಒಂದು ಕಡೆ, ಎರಡನೆಯದು ನಿಮ್ಮ ನಿರ್ಲಕ್ಷ್ಯ ಎಷ್ಟಿದೆ ಎನ್ನುವುದು ಇನ್ನೊಂದು ಕಡೆ, ಮೂರನೆಯದಾಗಿ ಇವತ್ತು ಏನು ಈ ಫ್ಯಾಕ್ಸ್ ಬಂತು ಅದನ್ನು ನೀವು ಏಕೆ ತಿಳಿದುಕೊಳ್ಳಲಿಲ್ಲ? ಹಿಂದೆ ಕೂಡ ಅವರು ಕೇಸ್ ಹಾಕಿದ್ದು ರಿಟ್ ಪಿಟಿಷನ್ ನಂ. 12/756 ಆಫ್ 1960 ಹಾಕಿದ್ದು 3 ನೇ ತಾರೀಖು. ಅಂದರೆ ಇದನ್ನು ಹಾಕಿದ ಮೇಲೆ ಕೊನೆಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ 3ನೆಯ ತಾರೀಖು ಒಂದು ಆರ್ಡರ್ ಪಾಸ್ ಮಾಡಿ ಕಳುಹಿಸಿದ್ದಾರೆ.

`` We are pursusded on the Fax and in the circumstances as above to call upon the respondents to show-cause, if any, why the petitions be not admitted to hearing and dispose of at admission stage itself and why the relief as prayed for by the peititoner be not granted. Since we are not disposing of the question as to maintainability of the Writ Peitition and only taken a prime-facie view, we do not propose to issue any Interim direction but observe at this stage that the Government of the two States, i.e.,Andhra Pradesh, Karnataka

as well as the Central Government shall create the dispute which has already been adjudicated upon by the decision of the Tribunal i.e. Justice Bachawat Award and we will be failing in the obligation the Constitution of India has put upon them for serving, if they do anything which voilates the decision of the tribunal and give occassion for the people of the two States to live with grievances with each other. Issue Notices accordingly to the Respondents. Rule is made returnable within 3 weeks. The petitioner is directed to file the process etc., for the service of the Notices to the Respondents by tomorrow i.e. 4/7/1996." ಅಂದರೆ ಇದು ಮೂರನೇ ತಾರೀಖು ಈ ರೀತಿಯಾಗಿ ಆರ್ಡರ್ ಪಾಸ್‌ಮಾಡಿ ಅವರು ಡೈರೆಕ್ಷನ್ ಕೊಟ್ಟರು ಮತ್ತು ಆ ಕಾಪಿಯನ್ನು ಅಸಿಸ್ಟಂಟ್ ರಿಜಿಸ್ಟ್ರಾರ್‌ಗೆ ಕೊಟ್ಟು ಅವರು ಕೂಡ ಪ್ರೊಸೆಸಿಂಗ್ ಫೀಸ್ ತೆಗೆದುಕೊಂಡು ಸಮನ್ಸ್ ಜಾರಿಮಾಡತಕ್ಕದ್ದು ಮಾಡಿದರು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇದೆಲ್ಲಾ ನಡೆದರೂ ಕೂಡ ನಿಮ್ಮ ಸರ್ಕಾರ ಏನು ನಿದ್ದೆ ಮಾಡುತ್ತಿತ್ತೇ? ನಿಮ್ಮಲ್ಲಿ ಸಿಬ್ಬಂದಿ ಇಲ್ಲವೇನು? ಇದರ ಬಗ್ಗೆ ಮಾಹಿತಿ ಕೊಡತಕ್ಕಂಥ ಜನರು ಇಲ್ಲವೇನು? ಯಾವ ಕಾರಣಕ್ಕೆ ನೀವು ಇದನ್ನು ನೆಗ್ಲೆಕ್ಟ್ ಮಾಡಿದಿರಿ ಎನ್ನತಕ್ಕಂಥಾದ್ದು ತಾವು ಸ್ಪಷ್ಟಪಡಿಸಬೇಕು. ಇದು ಒಂದು ಕಡೆ ಲೀಗಲ್ ಲ್ಯಾಪ್ಸ್‌ಏನು ಆಯಿತು ಅದರ ಬಗ್ಗೆ ಹೇಳಬೇಕು. ಎರಡನೆಯದು, ಇದು ಒಂದು ಪತ್ರಿಕೆಯಲ್ಲಿ ಬಂದಿದ್ದರೂ ಕೂಡ ತಾವು ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್ ಏನು ಮಾಡಿದ್ದೀರಿ, ಅದರ ಬಗ್ಗೆ ಕೂಡ ತಾವು ಸ್ಪಷ್ಟವಾದ ಮಾಹಿತಿಯನ್ನು ಕೊಡಬೇಕು ಮತ್ತು ಯಾವರೀತಿಯಾಗಿ ನಡೆದಂಥ ಆಲಮಟ್ಟಿಯ ಕೆಲಸ ಏನಿದೆ ಅದು ಇದೇರೀತಿಯಾಗಿ ಮುಂದುವರೆಯುತ್ತದೆಯೋ ಅಥವಾ ಅವರ ಒತ್ತಾಯ ಮೇರೆಗೆ ನಿಲ್ಲಿಸುತ್ತೀರೋ? ಏಕೆಂದರೆ ಅವರು ಹೋಗಿ ಪ್ರಧಾನಮಂತ್ರಿಗಳಿಗೆ ಹೇಳುತ್ತೇವೆ ಎಂದು ಹೇಳಿ ಚಂದ್ರಬಾಬು ನಾಯ್ಡು ಅವರು ಈಗಾಗಲೇ ನಾನೇ ಈ ದೇಶದ ಪ್ರಧಾನ ಮಂತ್ರಿಯವರಿಗೆ ಪ್ರಪೋಸ್ ಮಾಡಿದ್ದೇನೆ, ನನ್ನ ಕೈವಾಡ ಇದರಲ್ಲಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿಕೊಂಡು ಅಡ್ಡಾಡುತ್ತಿದ್ದಾರೆ. ಅದಕ್ಕೇ ಅವರ ಒತ್ತಡಕ್ಕೆ ಮಣಿದು ಏನಾದರೂ ನಿಲ್ಲಿಸತಕ್ಕದ್ದು ಮಾಡುತ್ತೀರೋ ಹೇಗೆ ಎನ್ನತಕ್ಕದ್ದನ್ನು ಸಂಪೂರ್ಣವಾಗಿ ತಾವು ಇಲ್ಲಿ ಸ್ಪಷ್ಟಪಡಿಸಬೇಕು. ಮತ್ತು ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್ ಬಗ್ಗೆ ಯಾರು ತಪ್ಪಿತಸ್ತರು ಇದ್ದಾರೋ, ಅವರಿಗೆ ಶಿಕ್ಷೆ ಕೊಡತಕ್ಕದ್ದನ್ನ ಮಾಡಬೇಕು. ಇಲ್ಲ ಅಂತಂದರೆ ತಾವೇ ರಾಜೀನಾಮೆ ಕೊಟ್ಟು ಹೋಗಿ. ಏಕೆಂದರೆ ತಮ್ಮ ಕೈಯಲ್ಲಿ ಅವರಿಗೆ ಶಿಕ್ಷೆ ಮಾಡುವುದಕ್ಕೆ ಆಗಿಲ್ಲವೆಂದರೆ ಬಿಟ್ಟು ಹೋಗುವುದೇ ವಾಸಿ.

+ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :-** ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ಪ್ರಶ್ನೆ. ಇವತ್ತು ಹನ್ನೆರಡೂ ಮುಕ್ಕಾಲು ಗಂಟೆಗೆ ಈ ಸದನವನ್ನು ಮುಂದೂಡಿ ಮತ್ತೆ ನಾಲ್ಕುಕಾಲು ಗಂಟೆಗೆ ಸೇರಿದ್ದೇವೆ. ಈ ಮೂರುವರೆ

ಗಂಟೆಯಲ್ಲಿ ಏನು ಆಗುತ್ತಾ ಇದೆ ಅಂತ ಯಾರೂ ಇದರ ಜವಾಬ್ದಾರಿ ತೆಗೆದು ಕೊಳ್ಳಲಿಲ್ಲ. ಸರ್ಕಾರ ಏನಾಗಿದೆ, ಈ ಸದನ ಏನಾಗಿದೆ ಎಂದು, ಏನು ಆಗಬೇಕು, ಎಲ್ಲಿ ತಲುಪುತ್ತಿದ್ದೇವೆ ಅಂತ ಒಬ್ಬರೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಎಲ್ಲಿ ಹೋಗುತ್ತಿದ್ದೇವೆ, ಏನು ನಡೆದಿದೆ ಅಂತ ಒಬ್ಬರಿಗೂ ಅರ್ಥವಾಗಲಿಲ್ಲ. ಅಂದರೆ ಒಂದು ರೀತಿಯಲ್ಲಿ ಗೊಂದಲ. ಸೃಷ್ಟಿಯಾಗಿದೆ. ಈ ಗೊಂದಲಕ್ಕೆ ಕಾರಣ ಏನು? ಅಥವಾ ಸರ್ಕಾರದಲ್ಲಿ ಐಕ್ಯಮತ್ಯ ಇಲ್ಲವೋ, ನಿಮ್ಮಲ್ಲೇ ಭೇದಭಾವ ಇದೆಯೋ ಅಥವಾ ನಿಮ್ಮಲ್ಲಿ ಏನಾದರೂ ಪ್ರಾಮಾಣಿಕವಾದ ಚಿಂತನೆ ಇಲ್ಲವೋ ಅಥವಾ ತಮ್ಮ ಒಳಜಗಳವನ್ನು ಇದಕ್ಕೆ ಏನಾದರೂ ಬಳಸಿಕೊಳ್ಳುತ್ತಿದ್ದೀರೋ? ಇವೆಲ್ಲವೂ ಕೂಡ ಒಂದಕ್ಕೆ ಒಂದಾಗಿ ದಾರಿ ಕೊಡತಕ್ಕಂಥ ವಿಚಾರಗಳು ಆಗುತ್ತವೆ. ಆ ದೃಷ್ಟಿಯಿಂದ ನನಗನ್ನಿಸುತ್ತದೆ, ಇದು ಬಹಳ ನೋವಿನ ಪ್ರಸಂಗ. ಕುಳಿತಿದ್ದರೆ ಪತ್ರಕರ್ತರು ಏನಾಗುತ್ತಿದೆ ಎಂದು ಕೇಳುತ್ತಲೇ ಇದ್ದರು. ಯಾರು ಇದಕ್ಕೆ ಏನಾಗುತ್ತಿದೆ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಮೇಲ್ಮನೆಯಲ್ಲಿ ಈಗಾಗಲೇ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು ಎನ್ನತಕ್ಕಂಥ ಸುದ್ದಿ ಬಂತು. ಈ ಸದನದಲ್ಲಿ ಮುಖ್ಯಮಂತ್ರಿಗಳು ಉತ್ತರ ಕೊಟ್ಟು ಏನು ನಡೆದಿದೆ ಎಂದು ಹೇಳಬಹುದಿತ್ತು, ಅದೂ ಆಗಲಿಲ್ಲ. ಸಂಸದೀಯ ಸಚಿವರು ಎಲ್ಲಿ ಹೋದರು ಎನ್ನತಕ್ಕಂಥಾದ್ದು ನಮಗೆ ಗೊತ್ತಾಗಲಿಲ್ಲ ಮತ್ತು ದೊಡ್ಡ ನೀರಾವರಿ ಸಚಿವರು ನಮಗೆ ಏನಾಗಿದೆ.....

ಶ್ರೀ ಎಂ.ಸಿ. ನಾಣಯ್ಯ :- ನಾನು ಇಲ್ಲೆಯೇ ಇದ್ದೆ. ಸಭೆ ಮುಂದೂಡುವರೆಗೆ ನಾನು ಇಲ್ಲೇ ಇದ್ದೆ. ನೀವು ಇಲ್ಲೇ ಇದ್ದಿರಿ. ಮುಂದೂಡಿದ ಮೇಲೆ ಏನಾಯಿತು ಎಂದು.

ಶ್ರೀ ವಾಟಾಳ್ ನಾಗರಾಜ್ :- ಹೌದು, ಮುಂದೂಡಿದಮೇಲೆ. ಏನು ಮೂರು ಗಂಟೆಗಳ ಕಾಲ ಒಂದು ರೀತಿ ಜೀವ ಇಲ್ಲದೇ ಇರತಕ್ಕಂಥ ರೀತಿಯಲ್ಲಿ, ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುತ್ತದಲ್ಲ, ಆ ಪರಿಸ್ಥಿತಿ ಏಕೆ ನಿರ್ಮಾಣವಾಯಿತು?

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೇ, ಯಾವ ಸ್ಥಿತಿಯೂ ಆಗಿರಲಿಲ್ಲ. ಸಭೆ ಮುಂದೂಡತಕ್ಕಂಥ ಸಂದರ್ಭದಲ್ಲಿ ಮಾನ್ಯ ನಮ್ಮ ನೀರಾವರಿ ಸಚಿವರು ಬಹುಶಃ ಇದರ ಬಗ್ಗೆ ನಾವು ಚರ್ಚೆ ಮಾಡುವಾ, ನಾವು ಸಭಾಧ್ಯಕ್ಷರ ಕೊಠಡಿಗೆ ತೆರುಳವಾ ಎಂದು ಮನವಿ ಮಾಡಿದರು. ಆ ಸಂದರ್ಭದಲ್ಲಿ ಸಭೆಯನ್ನು ಒಂದು ಅರ್ಧಗಂಟೆ ಮುಂದೂಡಿ, ಸಭಾಧ್ಯಕ್ಷರ ಕೊಠಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಅಲ್ಲಿಂದ ಪುನಃ ಸದನಕ್ಕೆ ಬರುವಾ ಎಂದು ಹೇಳಿ ಮಾನ್ಯ ಸಭಾಧ್ಯಕ್ಷರು, ಪೀಠದಲ್ಲಿದ್ದವರು ಸದನವನ್ನು ಮುಂದೂಡಿದರು. ನಾವು ಸಭಾಧ್ಯಕ್ಷರ ಕೊಠಡಿಗೆ ಹೋಗಿ ಅಲ್ಲಿ ಚರ್ಚೆ ಮಾಡಿದೆವು. ವಿರೋಧ ಪಕ್ಷದವರ ಜೊತೆಯಲ್ಲಿಯೂ ಚರ್ಚೆ ಮಾಡಿದೆವು. ಹಲವಾರು ವಿಷಯಗಳನ್ನು ಕೂಡ ಚರ್ಚೆ ಮಾಡಿದೆವು. ಬಹುಶಃ ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಒಮ್ಮತ್ರವಾಗತಕ್ಕಂಥಾದ್ದು ಬರಲಿಲ್ಲ. ಆದರೆ ವ್ಯಾಪಕವಾಗಿ ಚರ್ಚೆ ಆಯಿತು. ನಾವೆಲ್ಲರೂ ಸಭಾಧ್ಯಕ್ಷರ ಕೊಠಡಿಗ ಹೋಗಿದ್ದೆವು.

ಅಲ್ಲಿ ಕಾಂಗ್ರೆಸ್ ಮುಖಂಡರು ಬಂದಿದ್ದರು. ಬಿ.ಜೆ.ಪಿ. ಪಕ್ಷದ ಮುಖಂಡರು ಬಂದಿದ್ದರು. ಇತರ ಮಿತ್ರರೂ ಬಂದಿದ್ದರೂ, ನಾವೂ ಹೋಗಿದ್ದೆವು. ವಾಟಾಳ್ ನಾಗರಾಜ್‌ರವರು ಮಾತ್ರ ನಮಗೆ ಕಾಣಲಿಲ್ಲ. ರೆಡ್ಡಿಯವರು ಇದ್ದರು.....

ಶ್ರೀ ವಾಟಾಳ್ ನಾಗರಾಜ್ :- ಚರ್ಚೆ ಆಯಿತು ಎಂದು ತಾವು ಹೇಳಿದಿರಿ. ಆದರೆ ಅಧ್ಯಕ್ಷರು ಚರ್ಚೆ ಆಗಲಿಲ್ಲ, ಚರ್ಚೆ ಆಗಿದ್ದರೆ ಕರೆಯುತ್ತಿದ್ದೆ ಎಂದು ಹೇಳಿ ಬಿಟ್ಟರು. ಆದ್ದರಿಂದ ತಾವು ಸದನಕ್ಕೆ ಸತ್ಯಕ್ಕೆ ದೂರವಾದ....

ಶ್ರೀ ಎಂ. ಸಿ. ನಾಣಯ್ಯ :- ಮಾತುಕತೆ ಆಯಿತು. ಒಮ್ಮತಕ್ಕೆ ಬರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರು ಹೇಳಿದರು ಚರ್ಚೆಯಾಗಲಿಲ್ಲ ಎಂದು. ಚರ್ಚೆ ಆಗಿದ್ದರೆ ವಿರೋಧ ಪಕ್ಷದ ನಿಮ್ಮಗಳನ್ನು ಕರೆಯುತ್ತಿದ್ದೆ ಎಂದು ಅವರು ಹೇಳಿದರು. ಮಾನ್ಯ ಅಧ್ಯಕ್ಷರ ಮಾತಿನ ಬಗ್ಗೆ ನನಗೆ ನಂಬಿಕೆ ಇದೆ.

ಶ್ರೀ ಎಂ. ಸಿ. ನಾಣಯ್ಯ :- ನಮಗೂ ಅಪಾರ ಗೌರವ ಇದೆ. ನಾವು ಈ ಸದನ ಮುಂದೂಡುವಾಗ ಒಪ್ಪಿ ಹೋಗಿದ್ದೆವು. ನಾವು ಸಭಾಧ್ಯಕ್ಷರ ಕೊಠಡಿಗೆ ಚರ್ಚೆಗೆ ಹೋಗಬೇಕು ಮತ್ತು ಹೋಗಿ ಚರ್ಚೆ ಮಾಡಬೇಕೆಂದು ತೀರ್ಮಾನ ಮಾಡಿ ಸಭಾಧ್ಯಕ್ಷರ ಕೊಠಡಿಗೆ ಹೋಗಿದ್ದೇವೆ. ಬಹುಶಃ ಸಭಾಧ್ಯಕ್ಷರು ಎಲ್ಲರಿಗೂ ಪುನಃ ಕರೆಹೇಳಬೇಕೆಂದು ಹೇಳತಕ್ಕದ್ದು ಆ ಸಭೆಯಲ್ಲಿ ಮೂಡಿಬಂದಿರತಕ್ಕಂಥ ವಾತಾವರಣ ಅಲ್ಲ. ನಾವೆಲ್ಲರೂ ತಮ್ಮ ಕೊಠಡಿಗೆ ಬರಬೇಕು ಎಂದು ಮಾಡಿರತಕ್ಕಂಥ ತೀರ್ಮಾನದಲ್ಲಿ ನಾವೆಲ್ಲರೂ ಅವರ ಕೊಠಡಿಗೆ ಹೋಗಿದ್ದುದು ನಿಜ. ಸಭಾಧ್ಯಕ್ಷರು ಪ್ರತಿಯೊಬ್ಬರಿಗೂ ತಿಳುವಳಿಕೆ ಕೊಡಬೇಕಾಗಿತ್ತು ಎಂದು ಹೇಳತಕ್ಕಂಥ ಒಂದು ಮಾತನ್ನೂ ನಾನು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ದಾರಿ ತಪ್ಪಿಸುವುದಕ್ಕೆ ಹೋಗಬೇಡಿ.

ಶ್ರೀ ಎಂ. ಸಿ. ನಾಣಯ್ಯ :- ನಾವು ಒಪ್ಪಿ ಅವರ ಕಚೇರಿಗೆ ಹೋಗಿದ್ದೆವು.

ಶ್ರೀ ವಾಟಾಳ್ ನಾಗರಾಜ್ :- ಯಾವಾಗಲೂ ಬರೀ ಗೊಂದಲ ಮಾಡುವುದೇ ನಿಮ್ಮ ಜಾಯಮಾನ. ತಾವು ಸಂಸದೀಯ ಸಚಿವರಾಗಿರುವುದೇ ಸರಿ ಇಲ್ಲ. ನೀವು ಗೃಹಮಂತ್ರಿಯಾಗಿ.....

ಶ್ರೀ ಎಂ. ಸಿ. ನಾಣಯ್ಯ :- ನಾನು ಸರಿಯಿಲ್ಲವೆಂದರೆ ನಾನು ಇಲ್ಲಿ ಸ್ಥಾನದಲ್ಲಿ ಇರತಕ್ಕಂಥಾದ್ದು ನಿಮ್ಮ ಮರ್ಜಿಯಿಂದ ಅಲ್ಲ. ನಾನು ಇಲ್ಲಿ ಬರಲಿಕ್ಕೆ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ್ದಾರೆ. ಮುಖ್ಯಮಂತ್ರಿಗಳು ಬೇಡವೆಂದರೆ ಹೋಗುತ್ತೇನೆ. ನಿಮ್ಮ ಮರ್ಜಿಯಲ್ಲಿ ನಾನು ಈ ಸ್ಥಾನದಲ್ಲಿ ಇಲ್ಲ. ಇದನ್ನು ನಾನು ನೇರವಾಗಿ ಹೇಳುತ್ತೇನೆ. ಆದ್ದರಿಂದ ನೀವು ದಯವಿಟ್ಟು ಮುಖ್ಯಮಂತ್ರಿಗಳ ಅಧಿಕಾರವನ್ನು ತೆಗೆದುಕೊಳ್ಳಬೇಡಿ. ಆ ಸ್ಥಾನಕ್ಕೆ ಬಂದಾಗ ನೀವು ಯಾರಿಗೆ ಬೇಕಾದರೂ ಮಾಡಿ.

ಶ್ರೀ ವಾಟಾಳ್ ನಾಗರಾಜ್ :- ನಾಣಯ್ಯನವರೇ, ನಾನು ತಮ್ಮ ಬಗ್ಗೆ ವೈಯಕ್ತಿಕವಾಗಿ ಮಾತನಾಡತಕ್ಕದ್ದು ಅಲ್ಲ. ನೀವು ಅದನ್ನು ವೈಯಕ್ತಿಕವಾಗಿ ತೆಗೆದು ಕೊಳ್ಳಬಾರದು. ಏಕೆಂದರೆ ಸಂಸದೀಯ ಸಚಿವರು ಎಷ್ಟು ಚುರುಕಾಗಿರಬೇಕು? ಮೂರು ಗಂಟೆಗಳ ಕಾಲ ಸದನ ನಡೆಯಲಿಲ್ಲ ಎಂದಮೇಲೆ ಸಂಸದೀಯ ಸಚಿವರ ಪ್ರಶ್ನೆ ಇಲ್ಲಿ ಉದ್ಭವ ಆಗುತ್ತದೆ. ಮೂರು ಗಂಟೆ ಕಾಲ ಸಂಸದೀಯ ವ್ಯವಹಾರ ಸಂಪೂರ್ಣವಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿತ್ತು ಎಂದು ಹೇಳಿದರೆ ಪರಿಸ್ಥಿತಿ ಏನು?

ಶ್ರೀ ಎಂ. ಸಿ. ನಾಣಯ್ಯ :- ಇದಕ್ಕೆ ಕಾರ್ಯಕರ್ತರು ಯಾರು?

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರ ನಡೆಸುವವರು ನೀವು. ನೀವು ಇದಕ್ಕೆ ಉತ್ತರ ಕೊಡಬೇಕಾದವರು. ನನಗೆ ನಿಮ್ಮನ್ನು ಬದಲಾವಣೆ ಮಾಡಬೇಕೆಂದು ಹೇಳಿ ನಾನೇ ಆ ಇಲಾಖೆಗೆ ಬರಬೇಕೆಂದು ಇಲ್ಲ. ತಮಗೆ ಗೊತ್ತಿದೆ, ತಾವು ವಿಧಾನಪರಿಷತ್ತಿನಲ್ಲಿದ್ದಾಗ ನಾನೇ ತಮಗೆ ಬದಲಾವಣೆಯ ಸೂಚನೆ ಮಾಡಿದ್ದೆ. ಆ ಬಗ್ಗೆ ನಾನು ಗೌರವ ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ನಾನು ಹಿಂದೆ ಮುಂದೆ ಹೋಗ ತಕ್ಕಂಥ ಪ್ರಶ್ನೆ ಇಲ್ಲ. ಆದರೆ ಇಂತಹ ಒಂದು ಗಂಭೀರವಾದ ಪರಿಸ್ಥಿತಿ ನಿರ್ಮಾಣ ವಾಗುವಾಗ ರಾಜ್ಯದಲ್ಲಿ ಮೂರುವರೆ ಗಂಟೆ ಸದನ ಮುಂದೂಡಿ, ತಾವು ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ನಡೆಯಬೇಕೆಂದು ಮುಂದೂಡಿ, ನಾಲ್ಕೂಕಾಲು ಗಂಟೆಯಾದರೂ ಯಾವ ದಿಕ್ಕಿನಲ್ಲಿ ಇದ್ದೇವೆ ಎಂದು ಒಬ್ಬರಿಗೂ ಗೊತ್ತಿಲ್ಲ. ವಿರೋಧ ಪಕ್ಷದಲ್ಲಿಯೂ ನಾಲ್ಕು ಜನ ಆ ಕಡೆ ನಾಲ್ಕು ಜನ ಈ ಕಡೆ ಇದ್ದರು. ಮತ್ತೆ ನಮ್ಮ ಹತ್ತಿರ ಯಾರಾದರೂ ಬಂದು ಹೀಗೆ ಇದು ನಡೆಯುತ್ತಿದೆ, ಈ ಸೂತ್ರ ಇದೆ, ಈ ಸೂತ್ರಗಳ ಮೇಲೆ ಚರ್ಚೆ ಮಾಡೋಣ ಎಂದು ಯಾರೂ ಕರೆಯಲಿಲ್ಲ. ಆದ್ದರಿಂದ ಇದರಲ್ಲಿ ನಾನು ರಾಜಕಾರಣ ಮಾಡುತ್ತಿಲ್ಲ. ಈ ರಾಜ್ಯದ ಹಿತವನ್ನು ಕಾಪಾಡುವ ಪ್ರಶ್ನೆಯಲ್ಲಿ ನಾವೆಲ್ಲರೂ ಇವತ್ತು ಅತ್ಯಂತ ಪ್ರಾಮಾಣಿಕವಾಗಿ ಎದೆಮೆಟ್ಟಿನಿಲ್ಲಬೇಕಾದ ಪರಿಸ್ಥಿತಿ ಇದೆ. ಆದರೆ ನಿನ್ನೆತಾನೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾವು ನಿದ್ದೆ ಮಾಡುತ್ತಿಲ್ಲ ಎಂದರು. ನಿನ್ನೆ ತಾನೆ ವಿರೋದ ಪಕ್ಷದ ನಾಯಕರಿಗೆ ಅಪ್ಪಣೆ ಕೊಡಿಸಿದರು ನಾವು ನಿದ್ದೆ ಮಾಡುತ್ತಿಲ್ಲ ಎಂದು. ನಾಲ್ಕನೇ ತಾರೀಖು ಪತ್ರಿಕೆಯಲ್ಲಿ ಆಂಧ್ರ ಹೈಕೋರ್ಟಿನಲ್ಲಿ ಈ ಪ್ರಶ್ನೆ ಬರುತ್ತದೆ ಎಂದು ಬಂದಾಗ ಇಲ್ಲಿಯವರೆಗೆ ನೀವು ಗಮನಹರಿಸಿಲ್ಲ ಎಂದ ಮೇಲೆ ನೀವು ನಿದ್ದೆ ಮಾಡುತ್ತಿರುವುದು ನಿಜ ತಾನೇ? ಇದರಲ್ಲಿ ಎರಡನೇ ಪ್ರಶ್ನೆ ಇಲ್ಲವೇ ಇಲ್ಲ. ನನಗೆ ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡಬೇಕಾಗಿಲ್ಲ. ಇದು ನಿದ್ರೆ, ಸಂಪೂರ್ಣವಾಗಿ ನಿದ್ರೇನೆ. ಇದು ನಿದ್ರಾವಸ್ಥೆ. ಇದರಲ್ಲಿ ಬೇರೆ ಪ್ರಶ್ನೆ ಇಲ್ಲವೇ ಇಲ್ಲ. ನಾವು ಎಚ್ಚರ ಇದ್ದೇವೆ. ಎಚ್ಚರ ಆಗುವಂಥ ಮಾತನ್ನು ಆಡಿದರೆ ನಾವು ಎಚ್ಚರವಾಗುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಹೇಳಿದರು.

ಸ್ವಾಮಿ ಇಡೀ ರಾಜ್ಯಕ್ಕೇ ಬೆಂಕಿ ಬಿದ್ದಿದೆ. ಆಲಮಟ್ಟಿ ಜಲಾಶಯದ ಬಗ್ಗೆ ಆಂಧ್ರ ಹೈಕೋರ್ಟಿನವರು ಒಂದು ತೀರ್ಮಾನ ಕೊಡುವುದಾದರೆ, ಇದರಿಂದ ಕರ್ನಾಟಕಕ್ಕೆ ಬೆಂಕಿ ಬಿದ್ದಹಾಗಾಗಿದೆ. ಇದು ಯಾರೋ ಒಬ್ಬರ ಪ್ರಶ್ನೆಯೇನೂ ಅಲ್ಲ. ನನಗನ್ನಿಸುತ್ತದೆ, ಇದು

ಬಹಳ ಅತಿಯಾದಂಥ ವಿಚಾರ. ಸರ್ಕಾರಕ್ಕೆ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ನಿಮ್ಮ ಆಡಳಿತ ಸರಿಯಿಲ್ಲವೆಂದಾಗಲೀ, ಅಥವಾ ನಿಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ತಾವು ನೇರವಾಗಿ ಇದಕ್ಕೆ ಕಾರಣ. ಪ್ರತಿಯೊಂದೂ ಪೋಸ್ಟ್ ಆಫೀಸಿಗೆ ಹೋಗಿಬಿಟ್ಟು ಪತ್ರ ತರತಕ್ಕಂಥ ಕರ್ತವ್ಯ ಮುಖ್ಯಮಂತ್ರಿಗಳದಲ್ಲ. ಪೋಸ್ಟ್ ಆಫೀಸಿನಿಂದ ಬರುವ ಪತ್ರಗಳನ್ನೆಲ್ಲಾ, ವಿಧಾನ ಸೌಧಕ್ಕೆ ಬರುವ ಪತ್ರಗಳನ್ನೆಲ್ಲಾ ಬಾಗಿಲಿನಲ್ಲಿ ಕಾದು ತರತಕ್ಕಂಥಾದ್ದು ಮುಖ್ಯಮಂತ್ರಿಗಳ ಕರ್ತವ್ಯವಲ್ಲ. ಈ ರಾಜ್ಯದ ಹೊಣೆಗಾರಿಕೆ ಇರತಕ್ಕಂಥ ಮುಖ್ಯ ಕಾರ್ಯದರ್ಶಿಯವರ ಕರ್ತವ್ಯ ಏನು ಎನ್ನತಕ್ಕಂತಾದ್ದು. ನಾನು ವೈಯಕ್ತಿಕವಾಗಿ ಹೇಳುತ್ತಾ ಇಲ್ಲ. ಮುಖ್ಯ ಕಾರ್ಯದರ್ಶಿಯವರು, 4 ನೇ ತಾರೀಖು ಆಂಧ್ರ ಹೈಕೋರ್ಟಿನಲ್ಲಿ ಈ ಪ್ರಶ್ನೆ ಬರುತ್ತದೆ ಎಂದು ಹಿಂದೂ ಪತ್ರಿಕೆಯಲ್ಲಿ ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಮಾಹಿತಿ ಬಂದಿರುವಾಗ, ನಮ್ಮ ಸರ್ಕಾರ ಸಮರೋಪಾದಿಯಲ್ಲಿ ನಾವು ಏನು ಮಾಡಬೇಕಾಗಿದೆ, ಯಾವ ದಿಕ್ಕಿನಲ್ಲಿ ಹೋಗಬೇಕಾಗಿದೆ ಎಂದು ಯೋಜನೆ ಮಾಡಬೇಕಾಗಿತ್ತು. ನಮಗೆ ಆಂಧ್ರ ಹೈಕೋರ್ಟಿನವರು ನೋಟೀಸ್ ಕಳುಹಿಸಬೇಕಾಗಿಲ್ಲ. ಈ ಸುದ್ದಿ ಬಗ್ಗೆ ನಾವೇನು ಮಾಡೋಣ ಎಂದು ಮುಖ್ಯಮಂತ್ರಿಗಳ ಜೊತೆಯಲ್ಲಿ ಎಷ್ಟುಸಾರಿ ಚರ್ಚೆ ಮಾಡಿದ್ದಾರೆ. ಇದು ನನಗೆ ಬೇಕಾಗಿರತಕ್ಕಂಥಾದ್ದು. ಯಾವ ಪ್ರಶ್ನೆಯೂ ಇಲ್ಲದೆ, ಇದು ಅತ್ಯಂತ ಹುಡುಗಾಟಿಕೆಯಾಗಿದೆ. ಇದು ಬೇಜವಾಬ್ದಾರಿತನವಾಗಿದೆ. ಕರ್ನಾಟಕದ ಅಧಿಕಾರಿಗಳು ಕರ್ನಾಟಕವನ್ನು ಧರ್ಮಛತ್ರ ಎಂದು ತಿಳಿದುಕೊಂಡಿದ್ದಾರೆಯೇ? ಕೆಲವು ಅಧಿಕಾರಿಗಳು ಕರ್ನಾಟಕವನ್ನು ಯಾವುದೋ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎನ್ನುವುದನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಬಹಳ ಚುರುಕಾಗಿ ಈ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆ ರೀತಿಯ ಕ್ರಮವನ್ನು ತೆಗೆದುಕೊಳ್ಳದೇ ಮುಖ್ಯ ಕಾರ್ಯ ದರ್ಶಿಯವರು ಮಾಡಿರತಕ್ಕ ಅಕ್ಷಮ್ಯ ಅಪರಾಧವೆಂದು ಹೇಳುವುದರಲ್ಲಿ ಬೇರೆ ಮಾತು ಇಲ್ಲವೇ ಇಲ್ಲ. ಇದು ಅಷ್ಟು ಸುಲಭವಾಗಿ ಮಾಡತಕ್ಕಂಥ ವಿಚಾರವಲ್ಲ. ಈ ಬಗ್ಗೆ ನೀವು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ನನಗೇನು ವೈಯಕ್ತಿಕವಾಗಿ ಯಾವ ಅಧಿಕಾರಿಗಳ ಮೇಲೂ ದ್ವೇಷ ಇಲ್ಲ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿ ಇಷ್ಟೊಂದು ಅತ್ಯಂತ ಹೀನಾಯವಾಗಿದ್ದು ನಾವು ಇಲ್ಲಿ 4 ನೇ ತಾರೀಖಿನಿಂದ 25 ನೇ ತಾರೀಖಿನವರೆಗೂ, ಇವತ್ತು ಸದನದಲ್ಲಿ ಚರ್ಚೆಯಾಗುವವರೆಗೂ ಇವತ್ತು ಸರ್ಕಾರಕ್ಕೆ ಮಾಹಿತಿ ಇಲ್ಲವೆನ್ನುವುದಾದರೆ, ಇದು ಸರ್ಕಾರವೇ? ಇದು ಏನು? ನಿನ್ನೆ ನಾನು ಮಾತನಾಡುತ್ತಿದ್ದರೆ, ಇದು ಪುರಸಭೆ ಕೆಟ್ಟುಹೋಯಿತೇ ಎಂದು ನಮ್ಮ ನಂಜೇಗೌಡರು ಹೇಳುತ್ತಾರೆ. ಇವತ್ತು ಏನಾಗಿದೆ, ನೀವು ಈ ಪ್ರಶ್ನೆ ಮಾತಾಡುತ್ತೀರಿ. ಖರ್ಗೆಯವರಿಗೆ ಏನಾಗಿದೆ ಎಂದು ಹೇಳುತ್ತೀರಿ ನೀವು. ನಾವು ಮಾತನಾಡುವುದಕ್ಕೆ ಹೋದರೆ, ನಮ್ಮ ಮೇಲೆ ಈ ತರಹ ಹೇಳುತ್ತೀರಿ. ನಾನು ತಮಗೆ ಹೇಳುತ್ತೇನೆ. ಕರ್ನಾಟಕದ ಹಿತವನ್ನು ಕಾಪಾಡುವುದರಲ್ಲಿ ನಾವು ರಾಜಕಾರಣ ಮಾಡಬಾರದು. ಅಧಿಕಾರಕ್ಕೋಸ್ಕರವಾಗಲೀ, ನಮ್ಮಲ್ಲಿ ಯಾರೂ ಈ ವಿಚಾರಕ್ಕೆ ತಲೆಹಾಕುವುದೇ ಇಲ್ಲ. ನಾನಂತು ನಿಮಗೆ ಹೇಳುತ್ತೇನೆ. ಈ ರಾಜ್ಯದ ನೆಲ, ಜಲದ ಬಗ್ಗೆ ನಿಮ್ಮ ಜೊತೆಯಲ್ಲಿ ಯಾವು

ಸಂದರ್ಭದಲ್ಲಿ ಬೇಕಾದರೂ ನಿಲ್ಲುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ, ಪ್ರಶ್ನೆ ಇವತ್ತು ನಡೆದಿರತಕ್ಕಂತಾದ್ದು ನೋಡಿದರೆ, ಅತ್ಯಂತ ನೋವಿನ ಪ್ರಸಂಗ. ಆಂಧ್ರ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ವೈಯಕ್ತಿಕವಾಗಿ ಟೀಕೆ ಮಾಡಬೇಕೆಂಬ ಪ್ರಶ್ನೆ ನನ್ನದೇನಲ್ಲ. ಆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಕೊಟ್ಟಿರುವ ತೀರ್ಪಿನ ಇತಿಮಿತಿಯ ಬಗ್ಗೆ ನಾನು ಮಾತನಾಡುತ್ತೇನೆ. ಇದು ನಿಜವಾಗಿಯೂ, ಇಡೀ ದೇಶದ ನ್ಯಾಯಾಲಯಗಳು ಮತ್ತು ನ್ಯಾಯಾಂಗವೇ, ತಲೆತಗ್ಗಿಸತಕ್ಕಂಥ ಪರಿಸ್ಥಿತಿಯಲ್ಲಿ ನಡೆದು ಕೊಂಡಿದ್ದಾರೆ. ನಾನೇನು ಅವರ ತೀರ್ಪನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಕರ್ನಾಟಕದ ಮೇಲೆ ಕೊಟ್ಟಿರತಕ್ಕಂಥ ತೀರ್ಪು, ಇನ್ನೊಬ್ಬರು ಹಿಂದೆ ಹಳೇ ಕಾಲದಲ್ಲಿ ಯಾವುದೋ ರಾಜ್ಯದ ಪಾಳೇಗಾರ, ಇನ್ನ್ಯಾವುದೋ ರಾಜ್ಯದ ಮೇಲೆ, ದಂಡೆತ್ತಿ ಹೋದಂತಾಗಿದೆ ಇದು. ಇವತ್ತಿನ ತೀರ್ಪು ಮಾಡಿರತಕ್ಕಂಥ ಪ್ರಶ್ನೆ. ಕೃಷ್ಣಯ್ಯ ನವರು ಈ ಕೇಸ್ ಹಾಕಬೇಕಾದರೆ, ಅಷ್ಟು ಸುಲಭವಾಗಿ ಇಲ್ಲ. ಇದರ ಹಿಂದೆ ಇರತಕ್ಕಂಥ ಕಾಣದ ಕೈ ಯಾವುದು? ಇದರ ಹಿಂದೆ ಇರತಕ್ಕಂಥ ಯಾವುದೋ ಒಂದು ದೊಡ್ಡ ರಾಜಕೀಯದ ಪ್ರಚೋದನೆ ಇದ್ದೇಇದೆ. ಆದರಲ್ಲೇನೂ ಅನುಮಾನ ಇಲ್ಲ. ಏನ್ನತಕ್ಕಂಥ ಮಾತನ್ನು ತಮಗೆ ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ. ಇವತ್ತು ನಾನು ನೇರವಾಗಿ ಈ ಸದನದ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಹಿತಕ್ಕಾಗಿ, ಇವತ್ತು ಒಂದು ಕಡೆ ತಮಿಳು ನಾಡಿನವರು, ನಮಗೆ ನೀರು ಬಿಡಬೇಕು ಇಲ್ಲದೇ ಹೋದರೆ ನಾವು ಹೊರಗಡೆ ಬರುತ್ತೇನೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು :– ನೀವು ವಿಷಯಕ್ಕೆ ಬಂದುಬಿಡಿ. ವಿಷಯಕ್ಕೆ ಬಂದು ಬೇಗ ಪೂರೈಸಿ. ತಮಿಳುನಾಡಿಗೆ, ಕಾವೇರಿಗೆ ಮತ್ತೆ ಎಲ್ಲಾ ವಿಚಾರ ಪ್ರಸ್ತಾಪ ಬೇಡ. ಶೂನ್ಯವೇಳೆಯಲ್ಲಿ ಇದನ್ನು ತೆಗೆದುಕೊಂಡೆವು. ಬೇಗ ಮುಗಿಸಿದರೆ ಒಳ್ಳೆಯದು. ನೀವು ಎಷ್ಟು ಹೊತ್ತಾದರೂ ಅಂಜಿಸುತ್ತಾ ಹೋದರೆ, ನಾನು ಹೇಗೆ ಮಾಡಿಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ :- ಪ್ರಧಾನ ಮಂತ್ರಿಗಳ ಒಂದು ವಿಷಯ ಅಷ್ಟೆ. ನಾನೇನು ಅವರನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು :– ಟೀಕೆ ಮಾಡುವ ಹಾಗಿದ್ದರೆ ಮಾಡಿ, ನನಗೇನಾಗಬೇಕು. ನೀವು ಟೀಕೆ ಮಾಡಿದರೆ, ಅವರು ಅಬ್ಜೆಕ್ಟ್ ಮಾಡುತ್ತಾರೆ, ಅವರು ಟೀಕೆ ಮಾಡಿದರೆ, ನೀವು ಅಬ್ಜೆಕ್ಟ್ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ :- ಪ್ರಧಾನ ಮಂತ್ರಿಗಳ ಬಗ್ಗೆ ಟೀಕೆ ಮಾಡು ವುದಕ್ಕೆ ಹೋದರೆ ಅಷ್ಟು ಸರಿಕಾಣುವುದಿಲ್ಲ. ಅದಕ್ಕೋಸ್ಕರ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಧಾನ ಮಂತ್ರಿಗಳಿಗೆ ಏನು ಹೇಳುತ್ತಿದ್ದೇನೆಂದರೆ, ಆಂಧ್ರದವರು ಆಲಮಟ್ಟಿ ಬಗ್ಗೆ ಅವರನ್ನು ಒಂದು ರೀತಿ ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ಇದೊಂದು ರೀತಿ ಪ್ರಧಾನ ಮಂತ್ರಿಗಳ ಮೇಲೆ ಒತ್ತಡ ತಂದು ಆಂಧ್ರದ ಮುಖ್ಯಮಂತ್ರಿಗಳ

ಒಂದಕಡೆ ರಾಜಿ, ಮತ್ತೊಂದು ಕಡೆ ನ್ಯಾಯಾಲಯ, ಇನ್ನೊಂದು ಕಡೆ ಪ್ರಧಾನ ಮಂತ್ರಿಗಳ ಕೈ ಎಳೆಯುವುದು. ಆದಕ್ಕೆ ನಾನು ಹೇಳುತ್ತೇನೆ. ಪ್ರಧಾನ ಮಂತ್ರಿಗಳ ಕರ್ನಾಟಕ ರಾಜ್ಯದ ಹಿತಕ್ಕಾಗಿ, ನಾನು ಅವರು ಪ್ರಧಾನಮಂತ್ರಿಯಾದಾಗ ತಮ್ಮೆದುರಿಗೇ ಹೇಳಿದ್ದೇನೆ. ಇಲ್ಲಿ ಒಂದು ಸರ್ವಾನುಮತದ ನಿರ್ಣಯ ಮಾಡಬೇಕೆಂದು ಹೇಳಿದ್ದೇನೆ. ಕರ್ನಾಟಕಕ್ಕೆ ಅನ್ಯಾಯವಾಗತಕ್ಕ ಸಂದರ್ಭದಲ್ಲಿ ತಮ್ಮ ಪದವಿಗೆ ರಾಜೀನಾಮೆ ಕೊಟ್ಟು ಹೊರಗೆ ಬರಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ **ಶ್ರೀ ಜಿ. ಎ. ಶ್ರೀ ರಾಮರೆಡ್ಡಿ** :- ಅಧ್ಯಕ್ಷರೇ...

ಅಧ್ಯಕ್ಷರು :- ಈಗ ಎಲ್ಲರೂ ಮಾತನಾಡಬೇಕೇ? ಈಗಾಗಲೇ ಸಾಕಷ್ಟು ಹೇಳಿದ್ದಾರಲ್ಲ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ಅಧ್ಯಕ್ಷರೇ, ನನ್ನದೂ ಒಂದು ಅಭಿಪ್ರಾಯ ಇದೆಯಲ್ಲ.

ಅಧ್ಯಕ್ಷರು :- ಆಯಿತು. ಬೇಗ ಮುಗಿಸಿ. ಇದೊಂದು ಪದ್ಧತಿಯೇ ಆಗಿಹೋಯಿತು. ಇದು ನಾನೇ ಮಾಡಿದ ತಪ್ಪು. ಎಲ್ಲಾ ವಿಚಾರದಲ್ಲೂ ಎಲ್ಲರೂ ಎದ್ದು ಸಾಂಪ್ರದಾಯಿಕವಾಗಿ ವೇದಘೋಷ ಮಾಡಿದ ಹಾಗೆ ಆಯಿತು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ :- ನೀವು ಬೇಡ ಎಂದರೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು :- ಮಾಡಿ, ಮಾಡಿ. ನನ್ನ ಸಮಸ್ಯೆ ಒಂದು, ಏನೆಂದರೆ..... ನಾಳೆಯಿಂದ ಒಂದು ಕೆಲಸ ಮಾಡಿ. ಮೇಜರ್ ಇಷ್ಯೂಸ್ ರೈಸ್ ಮಾಡುವಾಗ, ಶೂನ್ಯವೇಳೆ ಉಪಯೋಗ ಮಾಡಿಕೊಳ್ಳಬೇಡಿ. ನೀವು ಅಡ್ಜರ್ನ್‌ಮೆಂಟ್ ಮೋಷನ್‌ಗೋ ಅಥವಾ ಇನ್ನಾವುದಕ್ಕೋ ಕೊಡಿ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ನಾನು ಮಾತನಾಡುವುದರಿಂದಲೇ ಸಮಯದ ಸಮಸ್ಯೆ ಬರುತ್ತದೆಂದರೆ, ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು :- ನಿಮ್ಮ ಪ್ರಶ್ನೆಯಲ್ಲ ನಾನು ಹೇಳುತ್ತಾ ಇರುವುದು. ನೀವು ಮಾತಾಡುವುದಕ್ಕೆ ಹೇಳುತ್ತಾ ಇಲ್ಲ. ನಾನು ಏನು ಹೇಳಿದೆ ಎಂದರೆ,...

ಶ್ರೀ ಜಿ. ಎ. ರಾಮರೆಡ್ಡಿ :- ನಾನು ಎದ್ದಾಗಲೇ ಈ ಪ್ರಶ್ನೆ ಬಂದಿದೆಯಲ್ಲಾ.

ಅಧ್ಯಕ್ಷರು :- ಸಂಕ್ಷಿಪ್ತವಾಗಿ ಹೇಳುವುದಿದ್ದರೆ ಮಾತ್ರ ಶೂನ್ಯವೇಳೆ..... ಒಂದು ನಿಮಿಷ ಇರಿ ರೆಡ್ಡಿಯವರೇ, everyone of you are very sensitive. But my problem is that I have to carry out the business of the House.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :- ಏಕೆಂದರೆ, ನಾನು ಎದ್ದಾಗಲೇ ಸಮಯದ ಪ್ರಶ್ನೆ ಬಂದಿದೆ ಎಂದು ಹೇಳಿದಾಗ ನಾನು ಮಾತನಾಡುವುದಿಲ್ಲ. ಬೇರೆಯವರು ಎದ್ದಾಗ ಸಮಯದ ಪ್ರಶ್ನೆ ಹೇಳಲಿಲ್ಲ.

ಅಧ್ಯಕ್ಷರು :- ಮುಗಿಸಿ, ಮುಗಿಸಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಅಧ್ಯಕ್ಷರೇ, ಈ ವಿಷಯದಲ್ಲಿ ಇಲ್ಲಿ ಎರಡು ಪ್ರಶ್ನೆ ಇದೆ. ಹಲವಾರು ವಿಷಯಗಳನ್ನು ಬೇರೆಯವರು ಹೇಳಿದ್ದಾರೆ. ಎರಡು ಸಮಸ್ಯೆಗಳು ಉದ್ಭವವಾಗಿದೆ. ಒಂದು, ನ್ಯಾಯಾಂಗದ ಅತಿರೇಕ, ಇನ್ನೊಂದು ಕರ್ನಾಟಕ ರಾಜ್ಯದ ಕಾರ್ಯಾಂಗದ ನಿಷ್ಕ್ರಿಯತೆ ಮತ್ತು ಬೇಜವಾಬ್ದಾರಿತನ. ಇವೆರಡರಿಂದ ಈ ಸಮಸ್ಯೆ ಉದ್ಭವವಾಗಿದೆ. ಆಂಧ್ರದ ಹೈಕೋರ್ಟ್‌ನಲ್ಲಿ ಆ ಸರ್ಕಾರದ ಪ್ರಕಾರ, ಅಡ್ವೊಕೇಟ್ ಜನರಲ್ ರವರು ಹೋಗಿ, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ರಾಜಕೀಯ ಪರಿಹಾರ ಹುಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ರಿಕ್ವೆಸ್ಟ್ ಮಾಡಿದರೂ ಕೂಡ, ಆ ಆಂಧ್ರದ ಹೈಕೋರ್ಟ್ ಈ ರೀತಿಯ ಆದೇಶವನ್ನು ಕೊಟ್ಟಿರತಕ್ಕಂಥಾದ್ದೇ ನ್ಯಾಯಾಂಗದ ಅತಿರೇಕ. ಎರಡನೆಯದು, ಅವರ ಜ್ಯೂರಿಸ್‌ಡಿಕ್ಷನ್‌ಗೆ ಬರದೇ ಇರತಕ್ಕಂಥ ಅವರ ವ್ಯಾಪ್ತಿಗೆ ಬರದೇ ಇರತಕ್ಕಂಥ ತೀರ್ಪನ್ನು ಕೊಟ್ಟಿರುವುದರಿಂದ, ಅದನ್ನು ನಾವು ಮಾನ್ಯತೆ ಮಾಡಬೇಕಾದ ಅವಶ್ಯಕತೆ ಇಲ್ಲ. ಬೇಕಾದರೆ ಸುಪ್ರೀಂ ಕೋರ್ಟಿಗೆ ಹೋಗಲಿ, ಸೆಂಟ್ರಲ್ ಗವರ್ನಮೆಂಟ್‌ಗೆ ನಿರ್ದೇಶನ ಕೊಡಲಿ; ಇನ್ನೊಂದಕ್ಕೆ ನಿರ್ದೇಶನ ಕೊಡಲಿ. ಆ ತೀರ್ಪಿಗೆ ಮಾನ್ಯತೆ ಕೊಡಬೇಕಾದ ಅವಶ್ಯಕತೆ ನಮಗಿಲ್ಲ. ಅದು ನಮ್ಮ ಕರ್ನಾಟಕ ರಾಜ್ಯಕ್ಕೆ ಇಲ್ಲ. ಆದ್ದರಿಂದ ನಾವು ಆ ತೀರ್ಪನ್ನು ಸಂಪೂರ್ಣವಾಗಿ ಕಡೆಗಾಣಿಸಬೇಕು. ಮೂರನೆಯದು ನ್ಯಾಯಾಂಗ ಇವತ್ತು ಅವರ ತೀರ್ಪಲ್ಲಿ ಹೇಳಿಲ್ಲ. ಆದರೆ, ಅವರ ಅಬ್ಸರ್ವೇಷನ್‌ನಲ್ಲಿ ಏನಿದೆ, ಎಂದರೆ, ಸ್ಟೇಟ್ ಫೈಟ್ ಆಗುತ್ತೆ ಎಂದು ಹೇಳತಕ್ಕಂಥಾದ್ದು, ಭಾರತ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಭಂಗ ತರತಕ್ಕಂಥ ರೀತಿಯಲ್ಲಿ ನ್ಯಾಯಾಂಗ ಅಬ್ಸರ್ವ್ ಮಾಡಿದೆ ಎಂದು ಹೇಳತಕ್ಕಂಥಾದ್ದು ಬಹಳ ಗಂಭೀರವಾದಂಥ ವಿಷಯ. ಇಂತಹ ಅಬ್ಸರ್ವೇಷನ್ ವಿರುದ್ಧ ನಾವೆಲ್ಲರೂ ಗಂಭೀರವಾಗಿ ಪ್ರತಿಭಟನೆ ಮಾಡಬೇಕಾಗಿದೆ; ನ್ಯಾಯಾಂಗದ ಅತಿರೇಕದ ವಿರುದ್ಧ. ಇನ್ನೊಂದು ಕರ್ನಾಟಕ ರಾಜ್ಯದ ಕಾರ್ಯಾಂಗದ ನಿಷ್ಕ್ರಿಯತೆ. ಅಧ್ಯಕ್ಷರೇ, ಇಲ್ಲಿ ಸರ್ಕಾರಕ್ಕೆ ಮುಖ್ಯ ಕಾರ್ಯದರ್ಶಿಯವರು ಇದ್ದಾರೆ. 3ನೇ ತಾರೀಖು ಆಂಧ್ರ ಹೈಕೋರ್ಟ್ ತೀರ್ಪು ಕೊಟ್ಟಿದೆ. ಅವರು ನಮಗೆ ನೋಟೀಸ್ ಬಂದಿಲ್ಲವೆಂದು ಹೇಳುತ್ತಾರೆ. ನಿಮಗೆ ನೋಟೀಸ್ ಬರದೇ ಇರಬಹುದು. ಆದರೆ, ಪತ್ರಿಕೆಯಲ್ಲಿ 4ನೇ ತಾರೀಖು ಬಂದಿದೆ. ನಿಮಗೆ ಇಂಟೆಲಿಜೆನ್ಸಿ ಇದೆ, ಪೋಲೀಸ್ ಇದೆ. ನಿಮ್ಮ ಇನ್‌ಫರ್ಮೇಷನ್ ಬ್ಯೂರೋ ಇದೆ. ಹಾಗಾದರೆ ಈ ಮುಖ್ಯ ಕಾರ್ಯದರ್ಶಿಯವರ ಕೆಲಸವೇನು? ಮುಖ್ಯಕಾರ್ಯದರ್ಶಿಯವರಿಗೆ ಸೌಲಭ್ಯ ಇಲ್ಲವೇ? ಅವರಿಗೆ ಸಿಬ್ಬಂದಿ ಕೊಟ್ಟಿಲ್ಲವೇ? ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿದ್ದರೂ ಕೂಡ, 20 ದಿವಸಗಳ ನಂತರವೂ ಇವತ್ತು ನಮಗೆ ನೋಟೀಸ್ ಬಂದಿಲ್ಲವೆಂದು, ಇವತ್ತು ಸಬೂಬು ಹೇಳಲಿಕ್ಕೆ ಬಂದಿದ್ದಾರೆ. ಆದ್ದರಿಂದ ಈ ಹೊಣೆಗಾರಿಕೆಯನ್ನು ಈ ರಾಜ್ಯದ

ಮುಖ್ಯಕಾರ್ಯದರ್ಶಿಯವರೇ ಹೊರಬೇಕಾಗುತ್ತದೆ. ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡು, ಅವರನ್ನು ತಕ್ಷಣ ಅಮಾನತ್ತಿನಲ್ಲಿಡಬೇಕೆಂದು ನನ್ನ ಅಭಿಪ್ರಾಯ. ಅವರನ್ನು ಮತ್ತು ಅವರ ಸಂಬಂಧಪಟ್ಟಂಥ ಸ್ಟ್ಯಾಫ್. ಸರ್ಕಾರ ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡಿ, ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದರೂ ಕೂಡ ಅದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದರೆ, ಅದನ್ನು ಖಂಡಿತ ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಅವರನ್ನು ಅಮಾನತ್ತಿನಲ್ಲಿಡಬೇಕು. ಆಲಮಟ್ಟಿ ಯೋಜನೆಯ ಬಗ್ಗೆ ಆಂಧ್ರ ಮತ್ತು ಕರ್ನಾಟಕಕ್ಕೆ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ, ಮಾತುಕತೆ ಮುಖಾಂತರ ಪರಿಹಾರ ಮಾಡಲಿಕ್ಕೆ ಸಾಧ್ಯತೆ ಇದೆ. ಅದಕ್ಕೆ ಪರಿಹಾರವನ್ನು ರಾಜಕೀಯವಾಗಿ ಎರಡು ರಾಜ್ಯಗಳವರೂ ಮಾಡಬೇಕಾಗಿದೆ. ನ್ಯಾಯಾಂಗ ಇದರಲ್ಲಿ ಹಸ್ತಕ್ಷೇಪ ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-00 ಪಿ. ಎಂ.

+ **ಶ್ರೀ ಎಂ. ಸಿ. ನಾಣಯ್ಯ** (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಇವತ್ತು ಬೆಳಿಗ್ಗೆ ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಆಂಧ್ರಪ್ರದೇಶದ ಹೈಕೋರ್ಟಿನವರು ನಿನ್ನೆ ಕೊಟ್ಟಿರ ತಕ್ಕಂಥ ಒಂದು ತೀರ್ಪಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಪ್ರಸ್ತಾಪ ಮಾಡಿದರು. ನಿನ್ನೆ ಪ್ರಥಮ ಭಾರಿಗೆ ಐ.ಟಿ.ಐ.ನ. ಟೆಲಿಪ್ರಿಂಟರ್ ಮುಖಾಂತರ ಆಂಧ್ರಪ್ರದೇಶದ ಹೈಕೋರ್ಟಿನವರು ರಿಟ್ ಪಿಟೀಶನ್ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಅದರಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಆದೇಶವನ್ನೂ ಕೊಡುವುದರ ಮುಖಾಂತರ ಆಲಮಟ್ಟಿ ಕಟ್ಟೆ ಯಾವುದು ಇದೆ ಇದರ ಕಾಮಗಾರಿ ಕೆಲಸ ಈಗ ಇರುವ ಸ್ಟೇಟಸ್-ಕೋ ಮೇನ್‌ಟೇನ್ ಮಾಡಬೇಕು ಎನ್ನತಕ್ಕಂಥ ಒಂದು ಇನ್‌ಸ್ಟ್ರಕ್ಷನ್ಸನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಕೊಡಬೇಕು ಎಂದು ಹೇಳತಕ್ಕಂಥ ಆದೇಶವನ್ನು ನಾವು ಟೆಲಿಪ್ರಿಂಟರ್‌ನಲ್ಲಿ ನೋಡಿದೆವು ಇವತ್ತು ಬೆಳಿಗ್ಗೆ ಈ ವಿಚಾರವನ್ನು ನಾವು ಕೂಡ ಆಂಧ್ರಪ್ರದೇಶದಲ್ಲಿರತಕ್ಕಂಥವವ ಜೊತೆಯಲ್ಲಿ ನಾವು ಪ್ರಸ್ತಾಪ ಮಾಡಿ ಅಲ್ಲಿ ಯಾವುದಾದರೂ ಮಾಹಿತಿಗಳು ಇದ್ದರೆ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಕಳುಹಿಸಬೇಕು ಅಂತ ಪ್ರಯತ್ನಪಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಅವರ ಅಡ್ವೊಕೇಟ್ ಯಾರು ಇದ್ದಾರೆ ಅವರ ಬಗ್ಗೆ ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಶ್ರೀ ರಾಮಚಂದ್ರರಾವ್ ಸೀನಿಯರ್ ಅಡ್ವೊಕೇಟ್ ಹೈಕೋರ್ಟ್ ಆಫ್ ಆಂಧ್ರಪ್ರದೇಶ್, ಶ್ರೀ ಕೃಷ್ಣಯ್ಯ ಎನ್ನತಕ್ಕಂಥವರು ಆಂಧ್ರಪ್ರದೇಶದ ಹೈಕೋರ್ಟಿನಲ್ಲಿ ಯಾವ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ ಅವರ ಪರವಾಗಿ ವಾದಮಾಡಲಿಕ್ಕೆ ಇರತಕ್ಕಂಥ ಅಡ್ವೊಕೇಟ್ ಅವರು. ಈ ಅಡ್ವೊಕೇಟ್ ಅವರು ಇವತ್ತು ಬೆಳಿಗ್ಗೆ ಮುಖ್ಯಕಾರ್ಯದರ್ಶಿ ಯವರಿಗೆ ಒಂದು ಫ್ಯಾಕ್ಸ್ ಮೆಸ್ಸೇಜನ್ನು ಕಳುಹಿಸಿದ್ದರೆ. ದಿನಾಂಕ 25-7-96 ರಲ್ಲಿ ಅದನ್ನು ಅವರು ಓದಿ ಹೇಳಿದ್ದಾರೆ. ಇವತ್ತು ಬೆಳಿಗ್ಗೆ ಮುಖ್ಯಕಾರ್ಯದರ್ಶಿಯವರಿಗೆ

ತಲುಪಿರತಕ್ಕಂಥಾದ್ದು ಸುಮಾರು 10-00 ಗಂಟೆಗೆ. ಇದೇ ಮೊದಲನೇ ಬಾರಿಗೆ ಮುಖ್ಯ ಕಾರ್ಯದರ್ಶಿಯವರಿಗೆ ಸಿಕ್ಕಿರತಕ್ಕಂಥ ಪತ್ರ. ಆದರಲ್ಲಿ ಏನು ಹೇಳಿದ್ದಾರೆ ಆಂಧ್ರ ಆಂಧ್ರಪ್ರದೇಶದ ಹೈಕೋರ್ಟ್‌ನವರು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ದಿನಾಂಕ 30-7-96ಕ್ಕೆ ಇದರ ಬಗ್ಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಪ್ರತಿವಾದಿಗಳು ಹಾಜರಾಗಿ ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಅಫಿಡವಿಟ್ಸ್ ಮತ್ತು ಸ್ಟೇಟ್‌ಮೆಂಟ್ಸ್‌ನ್ನು ಹಾಕಬೇಕು ಎಂದು ಕೇಳಿದ್ದಾರೆ. ನಿನ್ನೆ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದವರು ಯಾವ ಒಂದು ತೀರ್ಮಾನವನ್ನು ಮಾಡಿದ್ದಾರೆ ಆ ತೀರ್ಮಾನದ ಪ್ರತಿಯನ್ನು ಸಹ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರಾಗಲೀ ಯಡಿಯೂರಪ್ಪನವರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ವಾಟಾಳ್ ನಾಗರಾಜ್‌ಅವರು ಸಲ್ಲಿಸಿರತಕ್ಕಂಥ ರಿಟ್ ಅರ್ಜಿಯಾವುದು ಇದೆ 3 ನೇ ತಾರೀಖು ಅವರು ರಿಟ್ ಅರ್ಜಿಯನ್ನು ಸಲ್ಲಿಸಿದ್ದರೆ ಅದು 4ನೇ ತಾರೀಖಿಗೆ ಹಿಂದೂ ಪತ್ರಿಕೆಯಲ್ಲಿ ವ್ಯಾಪಕವಾಗಿ ಬಂದಿರತಕ್ಕಂಥಾದ್ದು ಇದನ್ನು ಗಮನಕ್ಕೆ ಏಕೆ ತೆಗೆದುಕೊಳ್ಳಲಿಲ್ಲ? ಸರ್ಕಾರದಲ್ಲಿರತಕ್ಕಾಂಥ ವಿವಿಧ ಇಲಾಖೆಗಳೂ ಸಹ ಇದರ ಬಗ್ಗೆ ಗಮನಹರಿಸಲಿಲ್ಲ ಇದರ ಬಗ್ಗೆ ಗಮನ ಹರಿಸಿದ್ದರೆ ಬಹುಶಃ ನಾವು ಈ ಸಂದರ್ಭದಲ್ಲಿ ನಾವು ರಾಜ್ಯ ಸರ್ಕಾರದ ವತಿಯಿಂದ ಆಂಧ್ರಪ್ರದೇಶಕ್ಕೆ ಹೋಗಿ ಅಲ್ಲಿ ನಮ್ಮ ಹೇಳಿಕೆಯನ್ನು ಕೊಡುವುದರ ಮುಖಾಂತರ ಇದನ್ನು ತಪ್ಪಿಸಬಹುದಾಗಿತ್ತು ಎಂದು ಹೇಳುವುದು ಒಂದು, ಎರಡನೇಯದು ಅವರು ಕಳುಹಿಸಿರತಕ್ಕಂಥ ನೋಟೀಸ್ ಇನ್ನೂ ಕೂಡ ಇಲ್ಲಗೆ ತಲುಪಿಲ್ಲ ಎಂದು ಹೇಳುತ್ತಿರುವಂಥ ಹೇಳಿಕೆ ಬಹುಶಃ ಇದು ಸರಿಯಲ್ಲ ಉದ್ದೇಶಪೂರ್ವಕವಾಗಿ ನಮಗೆ ತಲುಪಿದ್ದರೂ ಕೂಡ ನಾವು ಇದನ್ನು ಮುಚ್ಚಿಡುತ್ತಿದ್ದೇವೆ ಎಂದು ಕೇಳುವಂತಹ ಆರೋಪ ಮೂರನೆಯದು, ಈ ತರಹದ ಕಾರ್ಯಕ್ರಮವನ್ನು ತಾವು ಕೈಗೊಂಡಿದ್ದರಿಂದ ರಾಜ್ಯದ ಹಿತವನ್ನು ತಾವು ಬಲಿಕೊಟ್ಟಿದ್ದೀರಿ ಎಂದು ಹೇಳುವಂಥಾದ್ದು ಕೂಡ ತಾವು ಹೇಳಿದ್ದೀರಿ. ಮಾನ್ಯ ಸಭಾಧ್ಯಕ್ಷರೇ ಇದರಲ್ಲಿ ನಾಲ್ಕು ಅರ್ಜಿಗಳನ್ನು ಆ ಕೃಷ್ಣಯ್ಯ ಎನ್ನತಕ್ಕಂಥವರು ಒಟ್ಟಾರೆ ಫೈಲ್ ಮಾಡಿದ್ದಾರೆ. ಆಂಧ್ರಪ್ರದೇಶದ ಹೈಕೋರ್ಟಿನಲ್ಲಿ. ರಿಟ್ ಪಿಟೀಶನ್ ಸಂಖ್ಯೆ 12756, 12757, 12758, 12759, ಈ ಎಲ್ಲಾ ರಿಟ್ ಪಿಟೀಶನ್‌ಗಳಲ್ಲಿ ಕೂಡ ಕೇಂದ್ರ ಸರ್ಕಾರವನ್ನು ಪಾರ್ಟಿ ಮಾಡಿದ್ದಾರೆ. ಕರ್ನಾಟಕ ಸರ್ಕಾರವನ್ನು ಪಾರ್ಟಿ ಮಾಡಿದ್ದಾರೆ, ಮಹಾರಾಷ್ಟ್ರ ಸರ್ಕಾರವನ್ನು ಪಾರ್ಟಿ ಮಾಡಿದ್ದಾರೆ. ಪ್ಲಾನಿಂಗ್ ಕಮೀಷನ್ ಅವರನ್ನು ಪಾರ್ಟಿ ಮಾಡಿದ್ದಾರೆ. ವಾಟರ್ ರೀಸೋರ್ಸ್ ಸ್ ಕಮೀಷನ್ ಅವರನ್ನು ಪಾರ್ಟಿ ಮಾಡಿದ್ದಾರೆ. ಈ 4 ರಿಟ್ ಪಿಟೀಶನ್‌ಗಳಲ್ಲಿ ಸಹ ಅವರು ಕೇಳಿರತಕ್ಕಂಥ ರಿಲೀಫ್ ಯಾವುದು ಅಂತ ಕಂಡರ ರಿಟ್ ಪಿಟೀಶನ್ ಸಂಖ್ಯೆ 12756 ರಲ್ಲಿ ಅವರು ಕೇಳಿರತಕ್ಕಂಥ ರಿಲೀಫ್ ಯಾವುದು ಅಂತ ಕಂಡರೆ For a declaration to abide by the Bachawat Award ಡಿಕ್ಲರೇಶನ್ ಕೊಡಬೇಕು, ಬಚಾವತ್ ಅವಾರ್ಡ್ ಯಾವುದು ಇದೇ ಅದರ ಪ್ರಕಾರ ನಡೆದುಕೊಂಡು ಹೋಗಬೇಕು ಎಂದು ಹೇಳುತ್ತಾ ಇರತಕ್ಕಂಥಾದ್ದಕ್ಕೆ that is the main relief asked; 12757 ಆ ರಿಟ್ ಪಿಟೀಶನ್‌ನಲ್ಲಿ ಏನು ಕೇಳಿದ್ದಾರೆ ಎಂದರೆ For establishing an Inter State Water council on the question of Krishna Waters ಇಂಟರ್ ಸ್ಟೇಟ್ ಕೌನ್ಸಿಲ್ ಮಾಡಲಿಕ್ಕೆ

ಇರತಕ್ಕಂಥಾದ್ದು, 12758 ರಲ್ಲಿ ಎನು ಕೇಳಿದ್ದಾರೆ ಅಂತ ಕಂಡರೆ Sec. 4 of the Inter-State Dispute Act is not a bar for acception... entertaining writ under Art. 226. 12759 ರಲ್ಲಿ ಏನು ಕೇಳಿದ್ದಾರೆ ಅಂತ ಕಂಡರೆ For a declaration to the Union Government to create River Board to carry out statutory obligations relating to Bachawat Award. ಈ 4 ರಿಟ್ ಪಿಟೀಶನ್‌ಗಳನ್ನು ಫೈಲ್ ಮಾಡಿ ಅವರು ಈ ನಾಲ್ಕು ರಿಲೀಫ್ ಗಳನ್ನು ಅವರು ಅಲ್ಲಿ ಕೇಳಿದ್ದಾರೆ. ಈ 4 ರಿಟ್ ಪಿಟೀಶನ್‌ಗಳನ್ನು ಕೂಡ ಅವರು ಕ್ಲಬ್ ಮಾಡಿಕೊಂಡಿದ್ದಾರೆ. ಕ್ಲಬ್ ಮಾಡಿ ಆದ ಮೇಲೆ ಸಭಾಧ್ಯಕ್ಷರೇ 4 ನೇ ತಾರೀಖು ಈ ಆರ್ಡರ್ ಮಾಡುವಾಗ ಈ ಪ್ರತಿವಾದಿಗಳು ಯಾರು ಇದ್ದಾರೆ ಈ ಎಲ್ಲಾ ಪ್ರತಿವಾದಿಗಳಿಗೂ ನೋಟೀಸನ್ನು ನೀಡಿ ಅದರಲ್ಲಿ ಮೂರು ವಾರಗಳ ಒಳಗೆ ಅವರು ಬಂದು ಹಾಜರಾಗಬೇಕು ಎಂದು ಹೇಳುವುದಕ್ಕೆ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ ನಾನು ಆಗಲೇ ಹೇಳಿದೆ ನಿನ್ನೆಯ ದಿವಸ ಟೆಲಿಪ್ರಿಂಟರ್‌ನಲ್ಲಿ ಯಾವ ಒಂದು ಆರ್ಡರ್‌ನ್ನು ನೋಡಿದೆವು ಅವತ್ತೇ ಮೊದಲ ಬಾರಿಗೆ ಇದು ನಮ್ಮ ಗಮನಕ್ಕೆ ಬಂದಿದ್ದು. ಅಂದ್ರೆ ಇವತ್ತು ಬೆಳಿಗ್ಗೆ ಕೂಡ ನಾವು ಇದನ್ನು ವಿಚಾರ ಮಾಡಿದೆವು. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಕೆಲವು ವಿಚಾರಗಳನ್ನು ಎತ್ತಿದಾಗ ನಾವು ಕೂಡ ಹೋಗಿ ಮುಖ್ಯ ಕಾರ್ಯದರ್ಶಿಗಳನ್ನು ಕೇಳಿ ಇದರ ಬಗ್ಗೆ ನಿಮಗೆ ಏನಾದರೂ ನೋಟೀಸ್ ಸರ್ವ್ ಆಗಿದೆಯೇ ಅಂತಕೇಳಿದಾಗ ಅವರು ಬಹಳ ಸ್ಪಷ್ಟವಾಗಿ ಹೇಳಿದರು ವೈಯಕ್ತಿಕವಾಗಿ ಇದುವರೆಗೆ ನನಗೆ ಯಾವುದೇ ನೋಟೀಸ್ ಆಗಲಿ ಸಮನ್ಸ್ ಆಗಲಿ ಸರ್ವ್ ಆಗಿಲ್ಲ. ಇವತ್ತು ಬೆಳಿಗ್ಗೆ 10 ಗಂಟೆಗೆ ಈ ಒಂದು ಟೆಲೆಕ್ಸ್ ಮೆಸ್ಸೇಜ್ ನನಗೆ ಬಂತು. ಟೆಲೆಕ್ಸ್ ಮೆಸ್ಸೇಜ್ ಬಂದು ಆದ ಕೂಡಲೇ ಅದರಲ್ಲಿಯೇ ನಾನು ಬರೆದಿದ್ದೇನೆ ಇದನ್ನು ಕೂಡಲೇ ಇರಿಗೇಶನ್ ಮತ್ತು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ, ಕ್ರಮ ತೆಗೆದುಕೊಳ್ಳಿ ಅಂತ ಹೇಳಿ ಆದು ಆದ ಮೇಲೆ ನನಗೆ ವೈಯಕ್ತಿಕವಾಗಿ ಯಾವುದೇ ತರಹದ ನೋಟೀಸ್ ಆಂಧ್ರಪ್ರದೇಶದ ಹೈಕೋರ್ಟಿ ನಿಂದ ಈ ರಿಟ್ ಪಿಟೀಶನ್‌ಗೆ ಸಂಬಂಧಪಟ್ಟ ಹಾಗೆ ಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಇವತ್ತು ಅವರು ಕಳುಹಿಸಿರತ್ಕಂಥ ನೋಟೀಸ್ ಎಲ್ಲೋ ಬಹುಶಃ ನಿಮ್ಮ ಮನಸ್ಸಿನಲ್ಲಿ ಒಂದು ಆತಂಕ ಇದೆ. ಒಂದು ಶಂಕೆ ಬಂದಿದೆ ನಾವು ಅದನ್ನು ಎಲ್ಲೋ ಬಚ್ಚಿಟ್ಟುಬಿಟ್ಟಿದ್ದೇವೆ ಬಹುಶಃ ಇದರ ಬಗ್ಗೆ ಏನೋ ಗಮನಹರಿಸಲಿಲ್ಲ ಎಂದು ಹೇಳುತ್ತಾ ಇರತಕ್ಕಂಥಾದ್ದು. ಮಾನ್ಯ ಅಧ್ಯಕ್ಷರೇ, ನಾನು ನೇರವಾಗಿ ಹೇಳುತ್ತೇನೆ ಇಂತಹ ಪ್ರಮುಖವಾಗಿರತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಬಂದಾಗ ಅಥವಾ ಮುಖ್ಯಕಾರ್ಯದರ್ಶಿಗಳ ಗಮನಕ್ಕೆ ಬಂದಾಗ ಅದನ್ನು ಮುಚ್ಚಿಡುವುದಕ್ಕೆ ಯಾವುದೇ ಒಂದು ನಾಗರೀಕ ಸರ್ಕಾರ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ಇರತಕ್ಕಂಥ ಸರ್ಕಾರ ಮಾಡುವುದಿಲ್ಲ. ನೀವೂ ಕೂಡ ಆಡಳಿತ ನಡೆಸಿರತಕ್ಕಂಥವರು ನಾವು ಇವತ್ತು ಆಡಳಿತ ಪಕ್ಷದಲ್ಲಿದ್ದೇವೆ. ಕೃಷ್ಣಾ ಮತ್ತು ಕಾವೇರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರದಲ್ಲಿ ನಮ್ಮ ಸರ್ಕಾರ ಯಾವುದಾದರೊಂದನ್ನು ರಾಜ್ಯದ ಹಿತಕ್ಕೆ ಬಲಿ ಕೊಟ್ಟಿರತಕ್ಕಂಥ ವಿಷಯವನ್ನು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ ಇವತ್ತು ಬೆಳಿಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ನಾವು ಹೇಳಿದ್ದು ಸುಳ್ಳು ಇರಬಹುದು. ಅವರ ದೃಷ್ಟಿಯಲ್ಲಿ, ನಾವು ಬಹಳ ಒತ್ತಾಯ ಮಾಡುತ್ತಿದ್ದೇವೆ, ನಮ್ಮ ಸರ್ಕಾರವನ್ನು ತಪ್ಪುದಾರಿಗೆ ಎಳೆಯುತ್ತಿದ್ದೇವೆ ಎಂದು ಹೇಳಿ ಅವರಿಗೆ ಆ ಭಾವನೆ ಬಂದಿರಬಹುದು. ಇವತ್ತು ಮುಂಜಾನೆಯ ಎಲ್ಲಾ ಪತ್ರಿಕೆಗಳಲ್ಲಿ ಇದು ಬಂದಿದೆ. ಬಂದ ಮೇಲು ಕೂಡ ನೀವು ಆಂಧ್ರಪ್ರದೇಶದ ಹೈಕೋರ್ಟ್ ರಿಜಿಸ್ಟ್ರಾರ್‌ಗೆ ಕಂಟ್ಯಾಕ್ಟ್ ಮಾಡಿ ಇಲ್ಲಿ ಬಂದಂತಹ ಶ್ರೀ ರಾಮಚಂದ್ರರಾವ್ ಸೀನಿಯರ್ ಅಡ್ವೊಕೇಟ್ ಏನು ಕಳುಹಿಸಿದ್ದಾರೆ ಇದು ಅಧಿಕೃತವಾದ ಆರ್ಡರ್ ಆಗಿದೆಯೋ ಇಲ್ಲವೋ ಎನ್ನುವುದನ್ನು ಆದರೂ ವೆರಿಫೈ ಮಾಡಿಸಿದ್ದೀರೋ? ಇಲ್ಲಾ ಆಂಧ್ರ ಕನಿಷ್ಟಪಕ್ಷ ಮುಖ್ಯ ಕಾರ್ಯದರ್ಶಿಗಳಿಂದ ಆಂಧ್ರ ಪ್ರದೇಶದ ಮುಖ್ಯ ಕಾರ್ಯದರ್ಶಿಯವರಿಗೆ ಮಾತನಾಡಿ ಈ ರಿಟ್ ಪಿಟೀಶನ್‌ನಲ್ಲಿ ಹೈಕೋರ್ಟ್ ಆರ್ಡರ್ ಕೊಟ್ಟಿದೆ ಇದು ಸರಿಯೋ ಅಥವಾ ತಪ್ಪೋ ಎನ್ನತಕ್ಕಂಥ ಮಾಹಿತಿಯನ್ನು ತೆಗೆದುಕೊಂಡಿದ್ದೀರೋ? ನೀವು ಯಾವ ಲೆಟರ್ ಓದುತ್ತಿದ್ದೀರಿ ಅಂದರೆ ಕೃಷ್ಣಯ್ಯ ಎನ್ನತಕ್ಕಂಥ ಪಿಟೀಶನ್ ಏನು ಇದ್ದ ಅವರ ಅಡ್ವೊಕೇಟ್ ರಾಮಚಂದ್ರರಾವ್ ಏನು ಇದ್ದರು ಅವರಿಗೆ ಕಾಂಟ್ಯಾಕ್ಟ್ ಮಾಡಿ ಬಂದಂತಹ ಫ್ಯಾಕ್ಸ್‌ನ್ನು ಓದುತ್ತಿದ್ದೀರೇ ವಿನಹ You have not taken document, information even from the Chief Secretary, even from the High Court Registrar, till today, till now. ಆಂದ್ರೆ ಇದರಲ್ಲಿ ನಿಮ್ಮ ನೆಗ್ಲಿಜನ್ಸ್ ಇಲ್ಲ ಅಂದರೆ ಏನು ಹೇಳಬೇಕು? ನೀವು ಹೇಳತಕ್ಕಂಥಾದ್ದನ್ನೇ ನಾನು ಹೇಳುತ್ತೇನೆ ಯಾರ ಲೆಟರ್ ಎಂದು ತಾವೇ ಹೇಳಿ.

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಈ ಒಂದು ಫ್ಯಾಕ್ ಸಂದೇಶ ಬಂದು ಆದ ಮೇಲೆ ಹೈಕೋರ್ಟಿನಿಂದ ಬಂದಿರತಕ್ಕಂಥ ಫ್ಯಾಕ್ಸ್ ಸರ್ಕಾರಕ್ಕೆ ಬಂದಿರತಕ್ಕಂಥಾದ್ದು ಆಂಧ್ರಪ್ರದೇಶದ ಹೈಕೋರ್ಟ್ ಹೈದ್ರಾಬಾದ್, ದಿನಾಂಕ 25-7-96 ರಲ್ಲಿ 12-46 ನಿಮಿಷಕ್ಕೆ ಈ ಫ್ಯಾಕ್ಸ್ ಮೆಸ್ಸೇಜ್ ಸಹ ಬಂತು. ಹೈಕೋರ್ಟ್‌ನಿಂದ ಸಹ ಬಂತು. ಇದೇ ಅವರು ಯಾವುದನ್ನು ಕಳುಹಿಸಿದರು ಅದೂ ಕೂಡ ಮುಖ್ಯಕಾರ್ಯದರ್ಶಿಗಳಿಗೆ 12-46 ನಿಮಿಷಕ್ಕೆ ಬಂತು. ಅದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಅಷ್ಟು ಹೊತ್ತಿಗೆ ಸದನ ಮುಂದೂಡಿ ಆಗಿತ್ತು. ನಾವು ಅಥೆಂಟಿಸಿಟಿ ಪ್ರಶ್ನೆ ಮಾಡುತ್ತಿಲ್ಲ ಎಂದು ಹೇಳುವಂಥಾ ಸಂದರ್ಭದಲ್ಲಿ ಅವರೇ ನಮಗೆ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ ನಾನು ಹೇಳುತ್ತಿರುವುದು ಇಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಏಕೆ ಮಾಡಲಿಲ್ಲ ಅದನ್ನು ಹೇಳಿ?

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ we have taken cognisance of it ಆದ್ದರಿಂದ ಮಾನ್ಯ ಅಧ್ಯಕ್ಷರೇ ಒಬ್ಬ ಸೀನಿಯರ್ ಅಡ್ವೊಕೇಟ್ who has appeared for the petitioner ಅದು ಏನು ಅಂದ್ರೆ ಮಾನ್ಯ ಅಧ್ಯಕ್ಷರೇ, ಈ ಕೇಸ್‌ನಲ್ಲಿ ಅಡ್ವೊಕೇಟ್ ಯಾರು ಇದ್ದಾರೆ. ಅವರಿಗೆ ಹೈಕೋರ್ಟಿನವರೇ ಹೇಳಿದ್ದಾರೆ. ಪ್ರತಿವಾದಿಗಳಿಗೆ ಕಳುಹಿಸಬೇಕಾದಂತಹ ಯಾವುದೇ ನೋಟೀಸ್‌ಗಳನ್ನು ನೀವೇ ಜವಾಬ್ದಾರಿ

ಹೊತ್ತುಕೊಂಡು ಕಳುಹಿಸಬೇಕು ಎಂದು ಅವರ ಆರ್ಡರ್‌ನಲ್ಲಿ ಹೇಳುತ್ತಾರೆ. They have cited in the order. They have sent it and we have taken cognisance of it. 12-46 ನಿಮಿಷಕ್ಕೆ ಹೈಕೋರ್ಟ್‌ನಿಂದ ಸಹ ಬರುತ್ತದೆ. ನಾವು ಈಗ ಇದನ್ನು ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ನೇರವಾಗಿ ಹೇಳುತ್ತಿದ್ದೇನೆ ಸರ್ಕಾರದ ಪರವಾಗಿ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ಆಗಲೀ ಇರಿಗೇಶನ್ ಕಾರ್ಯದರ್ಶಿಗಳ ಗಮನಕ್ಕೆ ಆಗಲಿ ಅಥವಾ ಸರ್ಕಾರದ ಗಮನಕ್ಕೇ ಆಗಲೀ ಇದು ಬಂದಿದ್ದರೆ ನಾವು ಸರ್ಕಾರದವರು ಎಲ್ಲೋ ಒಂದು ಕಡೆ ಬದಿಗಿಟ್ಟು ಆಲ್ಮಟ್ಟಿ ಅಣೆಕಟ್ಟೆಗೆ ಸಂಬಂಧಪಟ್ಟಿರತಕ್ಕಂಥದ್ದರಲ್ಲಿ ಕೃಷ್ಣಾ ಕಣಿವೆಗೆ ಸಂಬಂಧಪಟ್ಟಿದ್ದರಲ್ಲಿ ಈ ಸರ್ಕಾರ ನಮ್ಮ ರಾಜ್ಯದ ಹಿತಕ್ಕೆ ಬಲಿ ಕೊಡುತ್ತಾರೆಂದು ತಾವು ಏನು ವಾದ ಮಾಡಿದಿರಿ ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ನಾವಾಗಲಿ ನೀವಾಗಲಿ ಇನ್ನೊಂದು ಸರ್ಕಾರ ಆಗಲಿ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಬಹುಶಃ ಪ್ರಧಾನ ಮಂತ್ರಿಗಳು ಇವತ್ತು ನಮ್ಮವರು ಇದ್ದಾರೆ. ಆದ್ದರಿಂದ ತಾವು ಇವತ್ತು ಯಾವುದೋ ಒಂದು ವಾದದಲ್ಲಿ ಬಹುಶಃ ಚಂದ್ರಬಾಬು ನಾಯ್ಡುರವರಿಗೆ ಸಹಾಯ· ಮಾಡುತ್ತಾರೆ, ಆ ಒಂದು ಇದರಲ್ಲಿ ಬಹುಶಃ ಎಲ್ಲೋ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವಂತಹ ಭಾವನೆಯನ್ನು ದಯವಿಟ್ಟು ಇಟ್ಟುಕೊಂಡು ಇದನ್ನು ಹೇಳ ಬೇಡಿ, ಮಾನ್ಯ ಪ್ರಧಾನ ಮಂತ್ರಿಗಳಾಗಿ ಸಹ ಈ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡಿಕೊಂಡು ಬಂದವರು. ಇವತ್ತು ಪ್ರಧಾನಿಗಳಾಗಿ ಇವತ್ತು ನಮ್ಮ ರಾಜ್ಯದ ಹಿತ ವನ್ನು ಕಾಪಾಡಲೇಬೇಕಾಗುತ್ತದೆ. ಅದು ಅವರ ಕರ್ತವ್ಯ ಆಗುತ್ತದೆ. ಅದು ಅವರ ಧರ್ಮ ಆಗುತ್ತದೆ ಈ ಕೆಲಸವನ್ನು ಅವರು ಕೂಡ ಮಾಡುತ್ತಾರೆ. ಇದರಲ್ಲಿ ಯಾವುದೇ ಸಂದೇಹ ಯಾರಿಗೂ ಬೇಕಾಗಿಲ್ಲ. ಈಗ ನಾವು ಮಾಡಬೇಕಾಗಿರುವಂಥಾದ್ದು ಮಾನ್ಯ ಸಭಾಧ್ಯಕ್ಷರೇ ಈ ಒಂದು ನೋಟೀಸ್ ನಲ್ಲಿ ಏನು ಹೇಳಿದ್ದಾರೆ ಎಂದರೆ ಇದರಲ್ಲಿ ಇವರು ಈ ಆರ್ಡರ್ ನ್ನು ಪಾಸ್ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ನಾನು ಕೇವಲ ಆ ಕಡೆಯ ಪ್ಯಾರಾ ಮಾತ್ರ ಓದುತ್ತೇನೆ ಬಾಕಿ ಯಾವುದನ್ನು ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಏನು ಹೇಳುತ್ತಾರೆ ಅಂತ ಅಂದರೆ....

SRI H. N. NANJE GOWDA :- Is it necessary at this stage to go into it?

ಶ್ರೀ ಎಂ. ಸಿ. ನಾಣಯ್ಯ :- ನಾನು ಹೇಳುತ್ತಾ ಇರತಕ್ಕಂಥಾದ್ದು ಇದರಲ್ಲಿ ಒಂದು ಪ್ಯಾರಾ ಮಾತ್ರ ಓದುತ್ತೇನೆ. so that let them know. ಅವರು ಎಲ್ಲಿ ಯಾವಾಗ ಈ ಆರ್ಡರ್‌ನ್ನು ಪಾಸ್ ಮಾಡಿದರು ಎಂದು.

ಶ್ರೀ ಹೆಚ್. ಎನ್. ನಂಜೇಗೌಡ :- ಅದೆಲ್ಲಾ ರಿಕಾರ್ಡ್‌ಗೆ ಹೋಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ :- ಬೇಡ ಅಂದರೆ ಬೇಡ ಬಿಡಿ. I don't read that. ಮಾನ್ಯ ಸಭಾಧ್ಯಕ್ಷರೇ, ನಾನು ಇದರಲ್ಲಿ ಇಷ್ಟನ್ನೇ ಹೇಳುತ್ತಿದ್ದೇನೆ, ನಮಗೆ

ಅವರು ನೋಟೀಸ್ ಕೊಟ್ಟಿರತಕ್ಕಂಥಾದ್ದು ಎಲ್ಲಾ ಪ್ರತಿವಾದಿಗಳು ಯಾರು ಇದ್ದಾರೆ ಕೇಂದ್ರ ಸರ್ಕಾರ, ವಾಟರ್ ಕಮೀಷನ್ ಪ್ಲಾನಿಂಗ್ ಕಮೀಷನ್ ಮಹಾರಾಷ್ಟ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರ, ನಾವು ಈ ಕೇಸಿನ ಬಗ್ಗೆ ಈ ರಿಟ್ ಪಿಟಿಶನ್‌ಗೆ ಸಂಬಂಧಪಟ್ಟ ಹಾಗೆ ನೀವು 30 ನೇ ತಾರೀಖು ಒಳಗಡೆ ನಿಮ್ಮ ಸ್ಟೇಟ್ ಮೆಂಟ್ ನಿಮ್ಮ ಕೌಂಟರ್ ಅಫಿಡವಿಟ್ ಯಾವುದಾದರೂ ಇದ್ದರೆ ನೀವು ಅದನ್ನು ಫೈಲ್ ಮಾಡ ಬೇಕು ಎಂದು ತಿಳಿಸಿದ್ದಾರೆ. ಈ ರಿಟ್ ಪಿಟೀಷನ್ ನಲ್ಲಿರತಕ್ಕಂಥ ಪ್ರೇಯರ್ಸ್‌ನ್ನು ಏಕೆ ಅಲೋ ಮಾಡಬಾರದೆಂದು ಕೇಳುವುದಕ್ಕೋಸ್ಕರ 30 ನೇ ತಾರೀಖಿನ ಒಳಗಡೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಹೈಕೋರ್ಟ್‌ನಲ್ಲಿ ತಮ್ಮ ಅಫಿಡವಿಟನ್ನು ಹಾಕಬೇಕೆಂದು ಕೇಳಿರತಕ್ಕಂಥ ಹಿನ್ನಲೆಯಲ್ಲಿ ನಾವು ಅಡ್ವೋಕೇಟ್ ಜನರಲ್ ಮತ್ತು ನಮ್ಮ ರಾಜ್ಯದ ಹಿರಿಯ ನ್ಯಾಯವಾದಿಗಳನ್ನು ಕಾಂಟೆಕ್ಟ್ ಮಾಡಿದ್ದೇವೆ, ಈ ಕೆಲಸವನ್ನು ನಾವು ನಾಳೆಯಿಂದಲೇ ಮಾಡುವುದಕ್ಕೆ ನಾವು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಬಚಾವತ್ ಅವಾರ್ಡ್ ಪ್ರಕಾರ ನಮ್ಮ ರಾಜ್ಯಕ್ಕೆ ಬರಬೇಕಾದ 734 ಟಿ.ಎಂ.ಸಿ.ಎಫ್.ಟಿ ನೀರನ್ನು ತಡೆಯಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ, ಕಾನೂನು ಬದ್ಧವಾಗಿ ಇದರ ಬಗ್ಗೆ ಹೈಕೋರ್ಟಿಗೆ ಅಧಿಕಾರ ಇದೆಯೇ ಇಲ್ಲವೇ ಎಂಬ ಬಗ್ಗೆ ನಮ್ಮ ವಕೀಲರುಗಳು ಹೈಕೋರ್ಟ್ ಮುಂದೆ ಹಾಜರಾಗಿ ವಾದಮಾಡುತ್ತಾರೆ, ಕೇಂದ್ರ ಸರ್ಕಾರದವರು ಕೂಡ ಈ ಕೆಲಸವನ್ನು ಮಾಡಲೇಬೇಕಾಗುತ್ತದೆ. ಹೈಕೋರ್ಟ್ ಮಾಡಿರತಕ್ಕ ತೀರ್ಮಾನದ ವಿರುದ್ಧವಾಗಿ ನಾನು ಮಾತನಾಡುತ್ತಿಲ್ಲ. ಆದರೆ, ನಮ್ಮ ರಾಜ್ಯದ ಹಿತವನ್ನು ಕಾಪಾಡುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ ಆದಕ್ಕಾಗಿ ತಮ್ಮೆಲ್ಲರ ಸಹಕಾರವನ್ನು ನಾವು ಬಯಸುತ್ತೇವೆ. ಆದುದ್ದರಿಂದ, ಈ ಬಗ್ಗೆ ಯಾರೂ ಸಂಶಯ ದೃಷ್ಟಿಯನ್ನು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಮಾನ್ಯ ವಿರೋದ ಪಕ್ಷದ ಸದಸ್ಯರುಗಳು ಎತ್ತಿರತಕ್ಕಂಥ ವಿಷಯವನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಾನೂನು ಪ್ರಕಾರ ಕ್ರಮಗಳನ್ನು ಕೈಗೊಂಡು ಕೃಷ್ಣಾ ಜಲಾನಯನ ನೀರಿನ ಹಕ್ಕನ್ನು ಮತ್ತು ರಾಜ್ಯದ ಹಿತವನ್ನು ಕಾಪಾಡುತ್ತೇವೆಂದು ಈ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, 4ನೇ ತಾರೀಖಿನ ಪತ್ರಿಕೆಗಳಲ್ಲಿ ಮುಖ ಪುಟಗಳಲ್ಲಿ ಇದು ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸ್‌ನಿಂದ ಆಗಿರುವಂಥಾದ್ದು ಎಂದು ಬಂದಿರುವುದನ್ನು ಸರ್ಕಾರ ಗಮನಿಸಿಲ್ಲವೆಂದು ಕಾಣುತ್ತದೆ. ಚೀಫ್ ಸೆಕ್ರೆಟರಿಯವರೇ ಸಹಿ ಮಾಡಿ ಪಡೆದಿದ್ದರೆಂದಾಗಲೀ ಅಥವಾ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾ ರೆಂದಾಗಲೀ ನಾನು ಹೇಳುವುದಿಲ್ಲ. ಸರ್ಕಾರಕ್ಕೆ ಸಂಬಂಧಪಟ್ಟಂತೆ ಯಾರಾದರೂ ಒಬ್ಬ ಅಧಿಕಾರಿ ಪಡೆದುಕೊಂಡಿದ್ದಂಥ ನೋಟಿಸ್ ಕಡೆ ಸರ್ಕಾರ ಗಮನ ಕೊಡದೆ ಇರುವಂಥ ಸಂಭವವಿದೆಯೆಂದು ನಮಗೆ ಸ್ಪಷ್ಟವಾಗಿದೆ. ಈ ವಿಷಯದ ಬಗ್ಗೆ ಪತ್ರಿಕೆಗಳಲ್ಲಿ ಬಂದ ಮೇಲೂ ಸರ್ಕಾರ ಗಮನ ಕೊಡಲಿಲ್ಲ. ಈಗಾಗಲೇ ಈ ಬಗ್ಗೆ ಎರಡು ರಾಜ್ಯಗಳ ಮುಂದೆ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಬಚಾವತ್ ಅವಾರ್ಡ್ ಪ್ರಕಾರ ಮತ್ತು ಪ್ಲಾನಿಂಗ್ ಕಮಿಷನ್ ನಿರ್ದೇಶನದ ಪ್ರಕಾರ ನಾವು ಯಾವುದೇ ಕಾರಣಕ್ಕೂ ಈ ಡ್ಯಾಂನ ಒಂದು ಇಂಚು ಕಡಿಮೆ ಮಾಡುವುದಿಲ್ಲ ಎಂಬ ಮಾತನ್ನು ಸರ್ಕಾರದಿಂದ ಬರದೇ ಇರುವುದರಿಂದ ನಾವು ಸರ್ಕಾರದ ನೀತಿಯನ್ನು ವಿರೋಧಿಸಿ ವಾಕ್‌ಔಟ್ ಮಾಡುತ್ತೇವೆ.

(ವಿರೋದ ಪಕ್ಷದ ನಾಯಕರು ಮತ್ತು ಅವರ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅದರಲ್ಲಿ ಎರಡು ವಿಷಯಗಳನ್ನು ಮಾತ್ರ ನಾವು ಸ್ಪಷ್ಟವಾಗಿ ಸರ್ಕಾರಕ್ಕೆ ಕೇಳಿದ್ದೇನೆ. ಒಂದನೇಯದು ಲೀಗಲ್ ಸೈಡ್‌ನಲ್ಲೂ ಸರ್ಕಾರ ಲ್ಯಾಪ್ಸ್ ಮಾಡಿದೆ. ಅಂದರೆ ಕಾನೂನು ಪ್ರಕಾರ ಯಾವ ಯಾವ ಕ್ರಮಗಳನ್ನು ತೆಗೆದುಕೊಡು ಹೈಕೋರ್ಟ್ ಮುಂದೆ ಹಾಜರಾಗಿ ಪ್ರಾತಿಪಾದನೆ ಮಾಡಿಲ್ಲ ಹಾಗೂ ಆರ್ಟಿಕಲ್ 131ರ ಪ್ರಕಾರ ಅವರಿಗೆ ಯಾವ ಹಕ್ಕು ಇಲ್ಲದೇ ಇದ್ದರೂ ಒಂದು ಆರ್ಡರನ್ನು ಕೊಟ್ಟಿರುವುದಕ್ಕಾಗಿ ಸರ್ಕಾರ ಪ್ರತಿಭಟಣೆ ಮಾಡಲೂ ಇಲ್ಲ ಅದರ ಬಗ್ಗೆ ಕಾಳಜಿ ವಹಿಸಲೂ ಇಲ್ಲ. ಎರಡನೆಯದಾಗಿ 3ನೇ ತಾರಿಖು ಅವರು ಇಶ್ಯೂ ಮಾಡಿದರು, 4ನೇ ತಾರೀಖು ಅದು ಬಂತು, ಆಮೇಲೆ 24ನೇ ತಾರಿಖು ಯಾರು ಇಲ್ಲದೇ ಇದ್ದುದರಿಂದ ಅದು ಪೋಸ್ಟ್‌ಪೋನ್ ಆಗಿ ಪುನ: 30ನೇ ತಾರೀಖಿಗೆ ಬಂತು. ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ, ಆಂಧ್ರ ಪ್ರದೇಶದ ಹೈಕೋರ್ಟಿನವರು ಇವತ್ತು ಕಾಪಿ ಕಳುಹಿಸಿದ್ದಾರೆ ಎನ್ನುವ ವಿಷಯವನ್ನು ಹೇಳುತ್ತಿದ್ದಾರೆಯೇ ಹೊರತು ಈ ಮೊದಲೇ ಪೇಪರ್‌ಗಳಲ್ಲಿ ಬಂದ ಮೇಲೂ ಕಾಳಜಿವಹಿಸಿ ಈ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಏನು ಹಡೆದಿದೆ ಎಂದು ತಿಳಿದುಕೊಳ್ಳುವ ಬಗ್ಗೆ ಆಸಕ್ತಿ ವಹಿಸಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್ :- 4ನೇ ತಾರೀಖಿನ ಹಿಂದೂ ಪತ್ರಿಕೆಯನ್ನು ತಾವು ನೋಡಿದ್ದೀರೋ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮಗೆ ಪ್ರೆಸ್ ಸೆಕ್ರೆಟರಿ ಇರುತ್ತಾರೆ, ಇಂಟೆಲಿಜೇನ್ಸ್ ಇಲಾಖೆ ಇದೆ, ಸರ್ಕಾರ ನಡೆಸತಕ್ಕಂಥವರು ಇಂಥಾ ಬೇಜವಾಬ್ದಾರಿ ಮಾತನಾಡಿದರೆ ನಾವು ಇದಕ್ಕೆ ಏನು ಹೇಳಬೇಕು ಮಾನ್ಯ ಅಧ್ಯಕ್ಷರೇ? ಆಂಧ್ರ ಪ್ರದೇಶದ ಹೈಕೋರ್ಟ್ ಆಲಮಟ್ಟಿ ಡ್ಯಾಂನ ಕೆಲಸದಲ್ಲಿ ಸ್ಟೇಟಸ್-ಕೋ ಮೇನ್‌ಟೇನ್ ಮಾಡಬೇಕೆಂದು ಆದೇಶ ಕೊಟ್ಟಿರುವುದು ಇಡೀ ದೇಶದ ಎಲ್ಲಾ ಪತ್ರಿಕೆಗಳ ಪ್ರಮುಖ ಮುಖ ಪುಟಗಳಲ್ಲಿ ಬಂದಿರುವುದು ಸರ್ಕಾರಕ್ಕೆ ಗೊತ್ತಿಲ್ಲವಾ? ಸರ್ಕಾರ ಅದನ್ನು ಏಕೆ ನೋಡಲಿಲ್ಲ? ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿತ್ತು? ಚೀಫ್ ಸೆಕ್ರೆಟರಿಯವರು ಏನು ಮಾಡುತ್ತಿದ್ದರು? ಇರಿಗೇಶನ್ ಡಿಪಾರ್ಟಮೆಂಟ್ ಏನು ಮಾಡುತ್ತಿತ್ತು? ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಷಯಗಳನ್ನು ಇನ್‌ಫರ್ಮೇಶನ್ ಡಿಪಾರ್ಟ್‌ಮೆಂಟಿನವರು ಆಯಾ ಮಂತ್ರಿಯವರಿಗೆ ತಿಳಿಸಬೇಕು, ಆದರಂತೆ ಮುಖ್ಯಮಂತ್ರಿಯವರಿಗೆ ತಿಳಿಸಿಲ್ಲವೆ? ನನಗೆ ಒಬ್ಬ ಮ್ಯಾನ್ ಇಲ್ಲ, ಒಬ್ಬ ಕ್ಲರ್ಕ್ ಇಲ್ಲ, ನಾನೂ ಅಪೋಸಿಷನ್ ಫ್ಲೋರ್ ಲೀಡರ್ ಅಲ್ಲವಾದ್ದರಿಂದ ನನಗೆ ಯಾರೂ ಮಾಹಿತಿಯನ್ನು ಕಳುಹಿಸಿಕೊಡಲಿಲ್ಲ. ಮುಖ್ಯಮಂತ್ರಿಗಳು ಇಷ್ಟೆಲ್ಲ ಸಿಬ್ಬಂದಿಯನ್ನು ಇಟ್ಟುಕೊಂಡು ನಿದ್ದೇಮಾಡುತ್ತಿದ್ದರೋ?

ಶ್ರೀ ಜೆ. ಹೆಚ್. ಪಟೇಲ್ :- ಅವರು ಕೇಳುವ ಡಿಬೇಟ್ ಮೇಲೆ ಒಂದು ಪಾಯಿಂಟ್ ಗೇನ್ ಮಾಡುವುದಕ್ಕೆ ನಾನು ಇದನ್ನು ಹೇಳುತ್ತಿಲ್ಲ ಕೆಲವು ಸಂದರ್ಭಗಳಲ್ಲಿ ಮುಖ್ಯವಾದ ವಿಷಯಗಳೂ ಔಟ್ ಆಫ್ ಸೈಟ್ ಹೋಗಿರಬಹುದು. ಮಾನ್ಯ ಖರ್ಗೆ ಯವರು ಈ ರಾಜ್ಯದ ಒಬ್ಬ ಪ್ರಮುಖ ರಾಜಕಾರಣಿ. ಈ ರಾಜ್ಯದ ಹಿತದ ಬಗ್ಗೆ ಮುಖ್ಯಮಂತ್ರಿಗೆ ಎಷ್ಟು ಜವಾಬ್ದಾರಿ ಇರುತ್ತದೆಯೋ ಅಷ್ಟೇ ಜವಾಬ್ದಾರಿ ಅವರಿಗೂ ಇದೆ. ಅವರು 4ನೇ ತಾರೀಖಿನ ದಿವಸವೇ ಪತ್ರಿಕೆಗಳನ್ನು ನೋಡಿ ಆಂಧ್ರಪ್ರದೇಶದಲ್ಲಿ ಆ ತರಹ ಆಗಿದೆ ಇದರ ಬಗ್ಗೆ ಏನು ಮಾಡುತ್ತಿದ್ದೀರಿ ಎಂದು ಕೇಳುವಷ್ಟು ಯಜಮಾನಿಕೆ ಇರುವಷ್ಟು ಮನುಷ್ಯ ಅವರಾಗಿದ್ದಾರೆ. ಅವರು ಕೇಳುತ್ತಿರುವುದು ಹೇಗಿದೆ ಎಂದರೆ ಒಬ್ಬ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಮನೆಗೆ ಹೋಗಿ ಅವನ ಹೆಂಡತಿಯನ್ನು ಕೇಳುತ್ತಾನೆ, ಕಾಫಿ ಮಾಡಿದ್ದೀಯಾ ಎಂದು? ಆಕೆ ಎಲೆಕ್ಟ್ರಿಸಿಟಿ ಇಲ್ಲವೆಂದು ಹೇಳುತ್ತಾಳೆ, come to the point- ಕಾಫಿ ಮಾಡಿದ್ದೀಯಾ? ಎಂದು ಹೇಳಿದ ಹಾಗಿದೆ.

ಶ್ರೀ ಜಿ. ವಿ. ರಾಮರೆಡ್ಡಿ :- ಮುಖ್ಯಮಂತ್ರಿಯವರು ಈ ವಾದವನ್ನು ಹೇಳಿ ತಪ್ಪಿಸಿಕೊಳ್ಳುವುದು ಸರಿಯಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- 4ನೇ ತಾರೀಖಿನ ಪತ್ರಿಕೆ ನೀವು ನೋಡಲಿಲ್ಲವೇನು ಎಂದು ನನ್ನ ಕೇಳಿದರೆ, ನಾನು ಕೇಳುತ್ತೇನೆ, 4ನೇ ತಾರೀಖು ಇಡೀ ಸರ್ಕಾರ ನಿದ್ರೆ ಮಾಡುತಿತ್ತೇನು? ನನ್ನನ್ನು ಕೇಳುವುದು ಅವರು ಏನು ಮಾಡಿದ್ದಾರೆ? ನನಗಿಂತ ಹೆಚ್ಚಿನ ಜವಾಬ್ದಾರಿ ಅವರ ಮೇಲಿದೆ. ಇದು ಎಂಟರ್ ಟೇನ್‌ಮೆಂಟ್ ಹೌಸ್ ಅಲ್ಲ. ಇದ್ದ ವಿಷಯವನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. ಇದರಿಂದ ಪಾಯಿಂಟ್ ಗೇನ್ ಮಾಡಬೇಕು ಅಥವಾ ಟೀಕೆಗೋಸ್ಕರ ಟೀಕೆ ಮಾಡ ಬೇಕೆಂದು ಈ ವಿಷಯವನ್ನು ನಾವು ಎತ್ತಿಲ್ಲ. ಇವತ್ತಿನ ಮುಂಜಾನೆಯೇ ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ವಿಷಯವನ್ನು ಎತ್ತಿದ ಮೇಲೆ ಸರ್ಕಾರದವರು ಸದನವನ್ನು ಮುಂದೂಡಿಸಿ ಇದಕ್ಕೆ ಯುನಾನಿಮಸ್ ರೆಗ್ಯುಲೇಷನ್ ಮಾಡೋಣವೆಂದು ನಮ್ಮನ್ನು ಕೇಳಿದ ಮೇಲೆ ನಾವು ಒಪ್ಪಿಕೊಂಡೆವು ಅದನ್ನೂ ಬಿಟ್ಟು, ನೀವು ಪತ್ರಿಕೆ ಓದಿದ್ದೀರೇನು? ಮ್ಯಾಜಿಸ್ಟ್ರೇಟ್ ಕಾಫಿ ಕೇಳಿದ ಹಾಗ ಇದು ಎಂದು ಹೇಳುವುದು ಇದೆಲ್ಲಾ ಸರಿಯಾದ ಮಾತಾ? ಇದನ್ನು ನೋಡಿದರೆ, ಇದರ ಬಗ್ಗೆ ಸರ್ಕಾರಕ್ಕೆ ಸೀರಿಯಸ್‌ನೆಸ್ ಇಲ್ಲ, ಅಧಿಕಾರಿಗಳು ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್ ಮಾಡಿದ್ದಾರೆಂದು ಒಪ್ಪಿ ಕೊಳ್ಳುವುದಕ್ಕೆ ಸರ್ಕಾರ ತಯಾರಿಲ್ಲ, ಅಧಿಕಾರಿಗಳಿಗೆ ಸಂಪೂರ್ಣವಾಗಿ ಡಿಫೆಂಡ್ ಮಾಡ ಲಾಗುತ್ತಿದೆ. ಇದು ಒಂದೇ ಕೇಸಿನಲ್ಲಿ ಅಲ್ಲ, ಪರ್ಫಾರ್ಮೆನ್ಸ್ ಬಜೆಟ್ ವಿಷಯದಲ್ಲೂ ತಪ್ಪಾಗಿದೆ ಮುಂದೆ ಸರಿಪಡಿಸಿಕೊಳ್ಳುತ್ತೇವೆಂದು ಅಧಿಕಾರಿಗಳ ಪರ ಸರ್ಕಾರ ಕ್ಷಮೆ ಕೇಳಿತು, ಕೆಎಟಿನಲ್ಲಿ ಕೌಂಟರ್ ಅಫಿಡವಿಟ್ ಏಕೆ ಹಾಕಲಿಲ್ಲವೆಂದು ಕೇಳಿದ್ದಕ್ಕೆ ಹೌದು ಲ್ಯಾಪ್ಸ್ ಆಗಿದೆ, ಆ ರೀತಿ ಇನ್ನು ಮುಂದೆ ಮಾಡುವುದಿಲ್ಲವೆಂದು ಮತ್ತೊಂದು ಸಾರಿ ಸರ್ಕಾರ ಒಪ್ಪಿಕೊಂಡಿದೆ. ಇವತ್ತು, ಪತ್ರಿಕೆಯಲ್ಲಿ ಬಂದಿದ್ದನ್ನು ಸರ್ಕಾರ ಏಕೆ ನೋಡ ಲಿಲ್ಲವೆಂದು ಕೇಳಿದರೆ, ನೀವು ನೋಡಿದ್ದೀರೇನು? ಎಂದು ಕೇಳಿಕೊಂಡು ಕಾಲಹರಣ

ಮಾಡಲಾಗುತ್ತಿದೆ. ಈ ಕಾಲಹರಣ ಕೆಲಸ ಮಾಡುವುದನ್ನು ಬಿಟ್ಟು ಸರಿಯಾಗಿ ಬಿಹೇವ್ ಮಾಡುವಂಥ ಸಂಬಂಧಪಟ್ಟ ಡಿರ್ಪಾರ್ಟ್‌ಮೆಂಟ್‌ಗೆ ಸರ್ಕಾರ ಆದೇಶ ಕೊಡುವುದು ಒಳ್ಳೆಯದು. ಸುಮ್ಮನೆ ಬೇರೆಯವರ ತಲೆ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಬಿಟ್ಟು ಹೇಗಾದರೂ ನನ್ನ ಅವಧಿಯನ್ನು ಮುಗಿಸಿಕೊಂಡು ಹೋಗಬೇಕು ಎನ್ನುವ ರೀತಿಯಲ್ಲಿ ದಯವಿಟ್ಟು ಸರ್ಕಾರವನ್ನು ನಡೆಸಬೇಡಿ. ಸರ್ಕಾರ ನಡೆಸಬೇಕಾದರೆ ಸೀರಿಯಸ್‌ನೆಸ್ ಇರಲಿ, ಅಧಿಕಾರಿಗಳ ಮೇಲೆ ಹತೋಟಿ ಇರಲಿ ಇಟ್ಟುಕೊಂಡು ಒಳ್ಳೆಯ ಅಡ್ಮಿನಿಸ್ಟ್ರೆಷನ್ ಕೊಡುವ ಕೆಲಸ ಮಾಡಬೇಕು. 1983 ರ ಹಿಂದೆ ಯಾವ ರೀತಿ ಜೆ. ಹೆಚ್. ಪಟೇಲರು ಇದ್ದರೋ ಅದೇ ರೀತಿ ಇವತ್ತೂ ಇರಬೇಕೆಂದು ನಾವು ಹೇಳುತ್ತೇವೆ. ನಾವು ಮಾತನಾಡಬೇಕಾದರೆ ಏನಾದರೂ ಫ್ಯಾಕ್ಟ್ಸ್ ಇದ್ದರೆ ಮಾತ್ರ ಮಾತನಾಡುತ್ತೇವೆ. ಸುಮ್ಮನೆ ಬಾಯಿಗೆ ಬಂದ ಹಾಗೆ ಮಾತನಾಡಿ ಹೋಗತಕ್ಕಂಥ ಮನುಷ್ಯ ನಾನಲ್ಲ. ಈ ಅವಕಾಶ ಆಂಧ್ರಪ್ರದೇಶದವರಿಗೆ ಇಲ್ಲವಾದ್ದರಿಂದ ಅವರು ಈ ಮಾತನಾಡಬಾರದಾಗಿತ್ತೆಂದು ನಾನು ಸ್ವತಃ ವಾದ ಮಾಡಿದ್ದೇವೆ. ಅವರು ಪ್ರಚೋದನೆ ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಅದನ್ನು ಬಿಟ್ಟು ನಿಮ್ಮ ಜನರನ್ನು ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೋಸ್ಕರ ಎಷ್ಟು ಸಾರಿ ಈ ಸದನಕ್ಕೆ ಎಕ್ಸ್‌ಕ್ಯೂಸನ್ನು ಕೇಳುತ್ತೀರಿ? ಇದು ಒಂದೆರಡು ಅಲ್ಲ, ಮೂರುನಾಲ್ಕು ಕೇಸ್‌ಗಳಲ್ಲಿ ಹೀಗೆ ಆಗಿದೆ. ಹೀಗೆ ಆದರೆ ಇದು ಗವರ್ನ್‌ಮೆಂಟ್ ಆಫ್ ಎಕ್ಸ್‌ಕ್ಯೂಸ್ ಎಂದ ಹಾಗೆ ಆಗುತ್ತದೆ. ಆದುದರಿಂದ ನಾವು ಕೂಡ ನಿಮ್ಮ ಉತ್ತರದಿಂದ ತೃಪ್ತರಾಗಿಲ್ಲ. ನಾವು ವಾಕ್‌ಔಟ್ ಮಾಡುತ್ತೇವೆ.

(ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನೀವು ಪತ್ರಿಕೆಯಲ್ಲಿ ನೋಡಿದ್ದೀರೋ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಮ್ಮನ್ನು ಹೀಗೆ ಕೇಳುವ ಬದಲು, ಮುಖ್ಯಕಾರ್ಯದರ್ಶಿಗಳನ್ನು ಬೆಳಿಗ್ಗೆ ಕರೆದು ನೀವೇನು ಮಾಡುತ್ತಿದ್ದೀರಿ? ದನಕಾಯುತ್ತಾ ಇದ್ದೀರೋ ಎಂದು ಕೇಳಬಹುದಾಗಿತ್ತು. ಇದುವರೆಗೆ ಎಲ್ಲಿಗೆ ಹೋಗಿದ್ದೀರಿ? ಎಂದು ನೇರವಾಗಿ ಕೇಳಬೇಕಾಗಿತ್ತು. ಇದೇನು ಹುಡುಗಾಟವೆ? ನಿಮ್ಮ ಬಗ್ಗೆ ನಮಗೇನೂ ವೈಯಕ್ತಿಕ ದ್ವೇಷವಂತೂ ಇಲ್ಲವೇ ಇಲ್ಲ. ನಾವು ನಿಮ್ಮ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇವೆ. ಆ ವಿಚಾರದಲ್ಲಿ ಒಂದು ಇಂಚು ಕೂಡ ಹಿಂದೆ ಮುಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ನಿಮ್ಮ ಮುಖ್ಯಮಂತ್ರಿ ಪದವಿಗೆ ಹೀಗಾದರೆ ಬಹಳ ಕೆಟ್ಟ ಹೆಸರು ಬರುತ್ತದಲ್ಲಾ ಎಂಬ ನೋವಿನಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಇದು ಒಳ್ಳೆಯ ನೀತಿ ಅಲ್ಲ. ಕರ್ನಾಟಕ ಸರ್ಕಾರ ತನ್ನ ಸ್ಪಷ್ಟವಾದ ನೀತಿಯನ್ನು ತಾಳಬೇಕು. ಆಂಧ್ರದವರು ಮಾಡುತ್ತಿರತಕ್ಕಂಥ ಏನೊಂದು ತಂತ್ರ ಇದೆ, ಕುತಂತ್ರ ಏನಿದೆ ಅದನ್ನು ನಾವು ವಿರೋಧ ಮಾಡುತ್ತಿದ್ದೇವೆ. ಸರಕಾರದ ಬೇಜವಾಬ್ದಾರಿತನವನ್ನು ವಿರೋಧ ಮಾಡುತ್ತಾ ಇದ್ದೇವೆ. ಹಾಗೆಯೇ ಆಂಧ್ರಪ್ರದೇಶ ಸರಕಾರದವರು ಅನುಸರಿಸಿದ ನೀತಿಯನ್ನು ವಿರೋಧಿಸಿ ಸದನದಲ್ಲಿ ನಾನು ಧರಣೆಯನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ಧರಣ ಮಾಡಿದರು)

ಶ್ರೀ ಜಿ. ವಿ. ರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಕಾರಣಕ್ಕೂ ವಿಫಲರಾಗಿರತಕ್ಕಂಥ ಮುಖ್ಯ ಕಾರ್ಯದರ್ಶಿಯವರನ್ನು ಅಮಾನತ್ತುಗೊಳಿಸಬೇಕೆಂದು ನಾನು ಹೇಳಿದೆ. ಆದರೆ ಅದಕ್ಕೆ ಸರಕಾರ ಒಪ್ಪುತ್ತಾ ಇಲ್ಲ. ಅದನ್ನು ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ. ವಿ. ರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಪುಟ್ಟಣಯ್ಯ :- ಮಾನ್ಯ ಅಧ್ಯಕ್ಷರೇ, ಸರಕಾರವು ಆಡಳಿತ ವ್ಯವಸ್ಥೆಯಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಣೆ ಮಾಡದೇ ಇರುವುದರಿಂದ, ಆಂಧ್ರ ಹೈಕೋರ್ಟಿನಿಂದ ನೋಟೀಸ್ ಬಂದು 20 ದಿವಸಗಳಾದರೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಣೆ ಮಾಡಲಿಲ್ಲ. ಏಕೆಂದರೆ ಅತೀ ಜವಾಬ್ದಾರಿಯಾದವುಗಳು ಅಂದರೆ ಕಾಗದ ಪತ್ರಗಳು. ಎಲ್ಲಾ ಆಸ್ಪತ್ರೆಗಳಲ್ಲಿಯೂ ಕೂಡ ಒಂದು ಇಂಟೆನ್ಸಿವ್ ಕೇರ್ ವಿಭಾಗ ಇದ್ದೇ ಇರುತ್ತದೆ. ಬಹಳ ಸೀರಿಯಸ್ ಆದ ರೋಗಿ ಬಂದಾಗ ತತ್‌ಕ್ಷಣ ಅಡ್ಮಿಟ್ ಮಾಡಿಕೊಳ್ಳಲು ಒಂದು ಖಾಲಿ ವಾರ್ಡ್‌ನ್ನು ಇಟ್ಟುಕೊಂಡಿರುತ್ತಾರೆ. ಅದೇ ರೀತಿಯಲ್ಲಿ ಸರಕಾರದ ಅತ್ಯಂತ ಜವಾಬ್ದಾರಿ ಕಾಗದಪತ್ರಗಳನ್ನು ಸೂಕ್ತ ಕಾಲದಲ್ಲಿ ಸರಕಾರಕ್ಕೆ ತಲುಪಿಸತಕ್ಕಂಥ ಕೆಲಸವನ್ನು ಮಾಡಬೇಕು. ಆ ದಿಸೆಯಲ್ಲಿ ಸರಕಾರದ ಆಡಳಿತ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದೆ ಇರುವುದರಿಂದ ನಾನು ಅದನ್ನು ವಿರೋಧ ಮಾಡಿ ಧರಣೆ ಹೂಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ. ಎಸ್. ಪುಟ್ಟಣ್ಣಯ್ಯನವರು ಬಾವಿಯಲ್ಲಿ ಧರಣೆ ಹೂಡಿದರು)

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ :- ಮಾನ್ಯ ಅಧ್ಯಕ್ಷರೇ, ಇಂಥ ನೆಗ್ಲಿಜೆನ್ಸ್‌ಗೆ ಇದೊಂದೆ ಘಟನೆ ಅಲ್ಲ, ಅದು ನಡೆಯುತ್ತಿದ್ದರೂ ಸರಕಾರ ಅದನ್ನು ಗಮನಿಸುತ್ತಾ ಇಲ್ಲ. ಹೀಗೆ ಯಾರು ನೆಗ್ಲಿಜೆನ್ಸ್ ಮಾಡುತ್ತಾರೋ ಅಂಥವರ ಮೇಲೆ ಸರಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಯಾವ ಅಧಿಕಾರಿಯ ಕೈವಾಡ ಇದೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಹೇಳಿ, ನಾನು ಸದನದಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜುಲ್ಫಿಕರ್ ಹಷ್ಮಿಯವರು ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಎಂ. ಬಸಪ್ಪ :- ಮಾನ್ಯ ಅಧ್ಯಕ್ಷರೇ, ಸರಕಾರದ ಈ ಒಂದು ನಿರ್ಲಕ್ಷತೆಯನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡುತ್ತೇವೆ.

(ಕೆಸಿಪಿಯ ಮಾನ್ಯ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಸಭಾತ್ಯಾಗವನ್ನು ಮಾಡುವುದಿಲ್ಲ, ಧರಣಿ ಕುಳಿತುಕೊಳ್ಳುವುದೂ ಇಲ್ಲ. ಸರಕಾರ ಈ ಬಗ್ಗೆ ತೆಗೆದುಕೊಂಡ ಕ್ರಮ ಸರಿಯಾಗಿದೆ ಎಂದು ಹೇಳಬಯಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

5. 1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

+ **ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು)** :- ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಇದ್ದೇನೆ. ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷ 7 ತಿಂಗಳುಗಳಾದರೂ ಕೂಡ ಅಲ್ಪಾವಧಿಯಲ್ಲಿಯೇ ಅತ್ಯುತ್ತಮವಾದ ಕೆಲಸಕಾರ್ಯಗಳನ್ನು ಮಾಡಿದೆ. ಅವುಗಳಲ್ಲಿ ಪ್ರಮುಖವಾಗಿ ನಾನು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಹೇಳಬಯಸುತ್ತೇನೆ. ಹೋದ ವರ್ಷ ಸರಕಾರ ವಿದ್ಯುಚ್ಛಕ್ತಿ ವಿಚಾರದಲ್ಲಿ ಅನುಭವಿಸಿದ ಕಷ್ಟವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಕಳೆದ ಹತ್ತು ವರ್ಷಗಳಿಂದ ಈ ವಿದ್ಯುಚ್ಛಕ್ತಿಯ ಇಲಾಖೆಯ ಬಗ್ಗೆ ಸರಕಾರಗಳು ತೋರಿದ ನಿರ್ಲಕ್ಷತೆ ಯಿಂದಾಗಿ ಹೋದ ವರ್ಷ ಭಾರಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಕಡಿತಕ್ಕೆ ಕಾರಣ ವಾಯಿತು. ಆದರೆ ನಮ್ಮ ಸರಕಾರ ಬಂದ ತತ್‌ಕ್ಷಣವೇ ವಿದ್ಯುಚ್ಛಕ್ತಿ ಉತ್ಪಾದನೆಯ ಕುರಿತಾದ ಅನೇಕ ಯೋಜನೆಗಳನ್ನು ಪ್ರಾರಂಭ ಮಾಡಲು ಕ್ರಮಕೈಗೊಂಡಿತು. ಈ ಕುರಿತಾಗಿ ಸುಮಾರು 30 ಕೋಟಿ ವೆಚ್ಚದ 18 ಯೋಜನೆಗಳನ್ನು ಪ್ರಾರಂಭ ಮಾಡಲು ಕ್ರಮವನ್ನು ತೆಗೆದುಕೊಂಡಿದ್ದಾರೆ. 5500 ಮೆಗಾವ್ಯಾಟ್ ವಿದ್ಯುತ್ ಚ್ಛಕ್ತಿ ಉತ್ಪಾದನಾ ಯೋಜನೆಯನ್ನು 30 ಕೋಟಿ ರೂ. ಗಳ ವೆಚ್ಚದಲ್ಲಿ ಪ್ರಾರಂಭ ಮಾಡುತ್ತಾ ಇದ್ದಾರೆ. ರೈತರ ಪಂಪ್‌ಸೆಟ್‌ಗಳಿಗೆ, ಗೃಹಬಳಕೆ ವಿದ್ಯುತ್‌ಗೆ, ಹೆಚ್‌ಟಿಎಗಳಿಗೂ ಕೂಡ ದರವನ್ನು ಹೆಚ್ಚು ಮಾಡಿದ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಿದ್ದಾರೆ. ಹೀಗೆ ಸರಕಾರ ದವರು ಏತಕ್ಕಾಗಿ ಬೆಲೆಯನ್ನು ಹೆಚ್ಚಿಸಿದ್ದಾರೆ ಎಂದರೆ ಈಗ ನಮ್ಮ ಉತ್ಪತ್ತಿ 3540 ಮೆಗಾವ್ಯಾಟ್ಸ್ ಮಾತ್ರ ಇದ್ದು ನಮ್ಮ ರಿಕ್ವಾಯರ್‌ಮೆಂಟ್ 9000 ಮೆಗಾವ್ಯಾಟ್ಸ್ ಇರುವುದರಿಂದಾಗಿ, ಇದನ್ನು ಹೆಚ್ಚು ಉತ್ಪಾದನೆ ಮಾಡಬೇಕಾದರೆ ಇದಕ್ಕೆ ಆಗತಕ್ಕಂಥ ಖರ್ಚೆ 30 ಕೋಟಿಗಳಾಗುವ ಪ್ರಯುಕ್ತ ಇರುವ ಬೆಲೆಯನ್ನು ಹೆಚ್ಚು ಮಾಡುವಂಥ ಸಂದರ್ಭ ಬಂತು. ನಮ್ಮ ಸರಕಾರ 1995-96 ರಲ್ಲಿ 1070 ಕೋಟಿ ವಿದ್ಯುತ್‌ನ್ನು ಖರೀದಿ ಮಾಡಿದೆ. ಪ್ರತಿದಿನ 60 ಲಕ್ಷ ರೂ. ಗಳ ವಿದ್ಯುತ್‌ನ್ನು ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಿಂದ ಪಡೆಯುತ್ತಾ ಇದ್ದೇವೆ. ಆದುದರಿಂದ ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನು ಷ್ಠಾನಗೊಳಿಸಬೇಕಾದರೆ ಈ ವಿದ್ಯುತ್ ದರವನ್ನು ಏರಿಸಲೇಬೇಕಾದ ಸಂದರ್ಭ ಇದೆ. ಈಗ ವಿರೋಧ ಪಕ್ಷದವರು ಟೀಕೆ ಮಾಡತಕ್ಕಂಥ ಸಂದರ್ಭ ಅಂದರೆ, ಪಂಪ್‌ಸೆಟ್ ಗಳಿಗೆ ವಿಧಿಸಿದ ಬೆಲೆಯ ಬಗ್ಗೆ. ಆದರೆ ನಾನು ಹಳ್ಳಿಗಾಡಿನಲ್ಲಿ ಭೇಟಿ ನೀಡಿದ

ಸಂದರ್ಭಗಳಲ್ಲಿ ಯಾವ ರೈತರೂ ಕೂಡ ಬೆಲೆ ನಿಗದಿ ಮಾಡಿದ ಬಗ್ಗೆ ಟೀಕೆ ಮಾಡಿಲ್ಲ. ನಮಗೆ ಉತ್ತಮ ರೀತಿಯಲ್ಲಿ ವಿದ್ಯುತ್‌ನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಹಣದ ವಿಚಾರದಲ್ಲಿ ಅವರ ಬೇರೆ ಭಾವನೆಗಳು ಇಲ್ಲ. ಅವರಿಗೆ ಬೇಕಾದುದು ಒಳ್ಳೆಯ ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾತ್ರ. ಆದುದರಿಂದ ಸರಕಾರದವರು ಈ ಬಗ್ಗೆ ತಳೆದ ನಿಲುವನ್ನು ನಾನು ಸ್ವಾಗತ ಮಾಡುತ್ತಾ ಇದ್ದೇನೆ. ಕಳೆದ ಹತ್ತು ವರ್ಷಗಳಿಂದ ಸರಕಾರಗಳು ತಳೆದ ನಿರ್ಲಕ್ಷ್ಯ ಧೋರಣೆಯಿಂದಾಗಿ ರೈತರು ತೊಂದರೆಗೆ ಸಿಲುಕುವಂತಾಗಿದೆ. ರೈತರು ಬಹಳ ನಷ್ಟವನ್ನು ಕೂಡ ಅನುಭವಿಸತಕ್ಕಂಥ ಪರಿಸ್ಥಿತಿಯು ಬಂದಿದೆ. ಹೀಗಾಗಿ ನಾಲ್ಕು ಎಕರೆ ಬೆಳೆ ಬೆಳೆಯತಕ್ಕಂಥ ರೈತನು ಒಂದೂ ವರೆ ಎಕರೆ ಬೆಳೆ ಬೆಳೆಯಲು ಕೂಡ ಕಷ್ಟಪಡುವಂತಾಗಿದೆ. ಇದನ್ನು ಗಮನಿಸಿ ಎಲ್ಲಾ ಯೋಜನೆ ಗಳನ್ನು ಕೈಗೊಳ್ಳಲು ನಮಗೆ ಹಣದ ಕೊರತೆ ಇದೆ. ನಮ್ಮ ಈ ಯೋಜನೆಗಳಿಗೆ ಹಣವನ್ನು ಕ್ರೂಢೀಕರಿಸಲು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದವರನ್ನು ನಿಗದಿ ಪಡಿಸಲೇಬೇಕಾಗಿದೆ ಮತ್ತು ವಿದ್ಯುತ್ ದವರನ್ನು ಹೆಚ್ಚು ಮಾಡಲೇಬೇಕಾಗಿದೆ. ಇಷ್ಟೆಲ್ಲಾ ಸಂಪನ್ಮೂಲಗಳನ್ನು ಮಾಡಿಕೊಂಡರೂ ಕೂಡ ಇನ್ನೂ 700 ಕೋಟಿ ರೂಪಾಯಿಗಳು ಕಡಿಮೆಯಾಗುವ ಸ್ಥಿತಿಯಲ್ಲಿದ್ದೇವೆ. ನಿಗಮವು ಕೇಂದ್ರಬಿಗೆ 563 ಕೋಟಿ ಕೊಡಬೇಕು ರಾಷ್ಟ್ರೀಯ ವಿದ್ಯುತ್ ನಿಗಮಕ್ಕೆ 33 ಕೋಟಿ ರೂಗಳು ನಿಗಮಕ್ಕೆ 149 ಕೋಟಿ, ಮದರಾಸು ವಿದ್ಯುತ್ ಕೇಂದ್ರಕ್ಕೆ 9 ಕೋಟಿ ಒಟ್ಟು 725 ಕೋಟಿ ಸಾಲವನ್ನು ಕೇಂಬಿ ಬಾಕಿ ಕೊಡುವ ಪರಿಸ್ಥಿತಿ ಇರುವಾಗ ಸರ್ಕಾರ ವಿದ್ಯುತ್ ದರ ಏರಿಸಿದ್ದುದು ಸೂಕ್ತವೆಂದು ತಿಳಿಸಲಿಚ್ಛಿಸುತ್ತೇನೆ. ಆದರೆ ಇದರಲ್ಲಿ ಗಮನಿಸಬೇಕಾದ ವಿಚಾರ ಇದೆ. ಉತ್ಪಾದನೆಯಾದ ವಿದ್ಯುತ್ತಿನ ವಿತರಣೆ ಬಗ್ಗೆ ಕೂಡ ಯಾವ ರೀತಿ ಕ್ರಮ ಜರುಗಿಸ ಬೇಕೆಂಬುದು. ಈಗ ಶೇಕಡ 42 ರಷ್ಟು ವಿದ್ಯುತ್ತನ್ನು ನೀರಾವರಿ ಪಂಪ್‌ಸೆಟ್‌ಗೂ ಆದರಲ್ಲಿ ಶೇಕಡ 18 ಪೋಲಾಗುತ್ತಿದೆ, ಇನ್ನುಳಿದ ಶೇಕಡ 40 ವಿದ್ಯುತ್ ಮಾತ್ರ ಹೈಟೆನ್‌ಶನ್‌ನವರಿಗೆ ಮತ್ತು ಬಳಕೆದಾರರಿಗೆ ಕೊಡುವ ಪರಿಸ್ಥಿತಿ ಇದ್ದು ಪೋಲಾಗು ತ್ತಿರುವುದನ್ನು ಯಾವ ರೀತಿ ತಡೆಗಟ್ಟುಬೇಕೆಂಬ ಬಗ್ಗೆ ಸರ್ಕಾರ ಪರಿಗಣಿಸುತ್ತಿದೆ. ಬರೀ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ಕೊಡುವುದಿಲ್ಲ, ದೊಡ್ಡ ಕಾರ್ಖಾನೆಗಳ ಮಾಲೀಕರು ಕೇಂಬಿಯವರು ಒಂದಾಗಿ ವಿದ್ಯುತ್ ಕಳ್ಳತನ ಮಾಡುತ್ತಿರುವ ಉದಾಹರಣೆ ನಮ್ಮ ಮುಂದಿವೆ. ಆದ್ದರಿಂದ ಈ ಬಗ್ಗೆ ವಿದ್ಯುತ್ ಇಲಾಖೆಯ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ಜರುಗಿಸಿದರೆ ಮಾತ್ರ ಕಳ್ಳತನವನ್ನು ತಡೆಗಟ್ಟಬಹುದೆಂಬ ಅಭಿಪ್ರಾಯ ನನ್ನದು. ತಾಲ್ಲೂಕು ಮಟ್ಟದಲ್ಲೂ ಇಂತಹ ಪರಿಸ್ಥಿತಿ ತಡೆಗಟ್ಟಬೇಕಾಗಿದೆ. ಈಗ ಪ್ರತಿ ಸಂಸ್ಥೆ ಗಳಲ್ಲೂ ಪ್ರಜಾಪ್ರತಿನಿಧಿಗಳಿದ್ದಾರೆ. ಈಗ ಭೂ ಅಭಿವೃದ್ಧಿ ತೆಗೆದುಕೊಳ್ಳಿ, ಕೃಷಿ ಸೇವಾ ಸಹಕಾರ ಸಂಘ ತೆಗೆದುಕೊಳ್ಳಿ, ಪುರಸಭೆ ತೆಗೆದುಕೊಳ್ಳಿ ಇವುಗಳಲ್ಲೆಲ್ಲ ರೈತರ ಕಷ್ಟ ತಪ್ಪಿಸಲು ಪ್ರತಿನಿಧಿಗಳಿರುವುದರಿಂದ ಅದೇರೀತಿ ವಿದ್ಯುತ್ ಮಂಡಲಿಗೂ ಒಂದು ಬೋರ್ಡ್‌ನ್ನು ರಚಿಸಿ ಅದರಲ್ಲಿ ಪ್ರತಿನಿಧಿಗಳನ್ನು ಸೇರಿಸಿದರೆ ಅದು ರೈತನ ಕಷ್ಟ ಪರಿಹಾರಕ್ಕೆ ಸೂಕ್ತ ಕ್ರಮವೆಂದು ನಾನಾದರೂ ತಿಳಿಸುತ್ತೇನೆ. ಪ್ರತಿಯೊಂದು ತಾಲ್ಲೂಕಿ ನಲ್ಲೂ ತಾಲ್ಲೂಕು ಬೋರ್ಡಿರುವಂತೆ ವಿದ್ಯುತ್ ಮಂಡಲಿಯನ್ನು ರಚಿಸಬೇಕು. ಹೀಗೆ

ನಮ್ಮ ಸರ್ಕಾರ ವಿದ್ಯುತ್ ಬಗ್ಗೆ ಅನೇಕ ರೀತಿ ಕ್ರಮ ತೆಗೆದುಕೊಂಡಿರುವುದನ್ನು ಸ್ವಾಗತ ಮಾಡಿ ಸೂಕ್ತ ಬೆಲೆ ಮಾಡಿ ಉತ್ತಮ ವಿದ್ಯುತ್ತನ್ನು ಕೊಡಬೇಕು. ಎರಡನೆಯದಾಗಿ, ನಮ್ಮ ಸರ್ಕಾರ ಅನೇಕ ಇಲಾಖೆಗಳಲ್ಲೂ ಪ್ರಗತಿಪರ ಕಾರ್ಯ ಮಾಡಿದೆ ಎಂದರೆ ತಪ್ಪಾಗಲಾರದು. ಕೃಷಿ, ಶಿಕ್ಷಣ, ಹೈನುಗಾರಿಕೆ, ಕೃಷಿ ಮಾರುಕಟ್ಟೆ, ಸಾರಿಗೆ ಆಶ್ರಯ, ನಿವೇಶನಗಳು, ಕೊಳಚೆ ನಿರ್ಮೂಲನೆ ಯಾವುದೇ ತೆಗೆದುಕೊಳ್ಳಿ ಪಟ್ಟಣಗಳ ಅಭಿವೃದ್ಧಿ, ಬಯಲುಸೀಮೆ ಅಭಿವೃದ್ಧಿ ತೆಗೆದುಕೊಳ್ಳಿ, ಇವುಗಳಲ್ಲೆಲ್ಲ ಬಡವರಿಗೆ ಉತ್ತಮ ಕೆಲಸ ಮಾಡುವ ಸಾಧನೆಯನ್ನುನಾವು ಒಂದೂವರೆ ವರ್ಷದಿಂದ ಮಾಡಿದ್ದೇವೆ. ಶಿಕ್ಷಣ ಇಲಾಖೆ ತೆಗೆದುಕೊಂಡರೆ 30 ಲಕ್ಷ ಜನರಿಗೆ ದಿನಕ್ಕೆ 3 ಕೆಜಿ ತರಹದ ಅಕ್ಕಿ ಕೊಡುತ್ತಿದ್ದೇವೆ. 17 ನೇ ತರಗತಿವರೆಗೆ ಎಸ್‌ಸಿ.ಎಸ್‌ಟಿ ಮಕ್ಕಳಿಗೆ ಉಚಿತ ಬಟ್ಟೆ ಕೊಡುತ್ತಿದ್ದೇವೆ, 4.20 ಕೋಟಿ ವೆಚ್ಚದಲ್ಲಿ 4200 ಕೊಠಡಿಗಳನ್ನು ಕಟ್ಟಲು ಸರ್ಕಾರ ಪ್ರಾರಂಭಿಸಿದೆ. ಪ್ರತಿ ಕ್ಷೇತ್ರದಲ್ಲೂ 50 ರಿಂದ 60 ಕೊಠಡಿಗಳನ್ನು ನಿರ್ಮಿಸಿ ಪ್ರತಿಶಾಲೆಯಲ್ಲಿ 40 ಮಕ್ಕಳಿಗೆ ಒಬ್ಬ ಶಿಕ್ಷಕರನ್ನು ನೇಮಿಸುವ ಯೋಜನೆ ಸರ್ಕಾರ ಮಾಡಿದೆ. ಇದುವರೆಗಿನ ಯಾವ ಸರ್ಕಾರವೂ ಶಿಕ್ಷಣ ಇಲಾಖೆ ಬಗ್ಗೆ ಗಮನ ಇಟ್ಟಿರಲಿಲ್ಲ. ನನ್ನ ಕ್ಷೇತ್ರದಲ್ಲಿ 345 ಹಳ್ಳಿಗಳಿದ್ದರೂ ನಮ್ಮ ಸರ್ಕಾರ ಬರುವ ಮುಂಚೆ ಕೇವಲ 150 ಹಳ್ಳಿಗಳಲ್ಲಿ ಮಾತ್ರ ಪ್ರಾಥಮಿಕ ಶಾಲೆಗಳಿದ್ದವು, ನಮ್ಮ ಸರ್ಕಾರ ಬಂದ ಮೇಲೆ 110 ಶಾಲೆಗಳನ್ನು ಪ್ರಾರಂಭಿಸಲಾಗಿದೆ, ಇದು ನಮ್ಮ ಸರ್ಕಾರದ ಸಾಧನೆ ಎಂದರೆ ತಪ್ಪಾಗಲಾರದು. ಶಿಕ್ಷಣಕ್ಕೆ ಮೂಲ ಒತ್ತು ಕೊಡಬೇಕಾದ ಅವಶ್ಯಕತೆ ಈಗ ಇದೆ. ಸ್ವಾತಂತ್ರ್ಯ ಬಂದು 49 ವರ್ಷವಾದರೂ ಬಂದ ಸರ್ಕಾರಗಳು ಬಡವರ ಪರವಿರುವ ಸರ್ಕಾರಗಳೆಂದು ಘೋಷಣೆ ಮಾಡಿದವಲ್ಲ ಅವು ಅನರ್ಹವು, ಅವುಗಳು ನಮ್ಮ ಸರ್ಕಾರವನ್ನು ಟೀಕೆ ಮಾಡಲು ಹಕ್ಕಿಲ್ಲ. ಮುಖ್ಯವಾಗಿ ಹೇಳಬೇಕಾದ ವಿಚಾರವೆಂದರೆ ತಾಲ್ಲೂಕುಮಟ್ಟದಲ್ಲಿ ಗ್ರಂಥಾಲಯಗಳು, ಪ್ರತಿ ಗ್ರಾಮಪಂಚಾಯಿತಿಯಲ್ಲೂ ಒಂದೊಂದು ಗ್ರಂಥಾಲಯ ತೆರೆಯುವ ಪ್ರಯತ್ನ ಮಾಡಿದ್ದೇವೆ ಅದಕ್ಕಾಗಿ ಸುಮಾರು 211 ಲಕ್ಷ ರೂ.ಗಳನ್ನು ವೆಚ್ಚ ಮಾಡಿ ಹಳ್ಳಿಯ ಪ್ರತಿಯೊಬ್ಬನು ಗ್ರಂಥಾಲಯದಲ್ಲಿ ಪೇಪರ್ ಪುಸ್ತಕಗಳನ್ನು ಓದಿ ಪ್ರಜ್ಞಾವಂತ ರಾಗಬೇಕೆಂಬ ಉದ್ದೇಶದಿಂದ 1015 ಗ್ರಂಥಾಲಯ ತೆರೆಯುವ ಯೋಜನೆ ನಮ್ಮ ಸರ್ಕಾರ ಮಾಡಿದೆ. ಮಾನ್ಯ ಗೋವಿಂದೇಗೌಡರು ಈ ಇಲಾಖೆ ತೆಗೆದುಕೊಂಡು ಹಂತಹಂತದಲ್ಲೂ ಹಳ್ಳಿಯ ಪ್ರತಿಯೊಬ್ಬರೂ ಶಿಕ್ಷಣ ಪಡೆಯುವಂತಹ ಯೋಜನೆ ಆಗಿರುವುದರಿಂದ ಇಡೀ ಭಾರತದಲ್ಲೇ ವಿಶಿಷ್ಟ ಪ್ರಗತಿ ಮಾಡಿದೆ ನಮ್ಮ ಕರ್ನಾಟಕ ರಾಜ್ಯ ಶಿಕ್ಷಣದ ವಿಚಾರದಲ್ಲಿ ಎಂದು ಹೇಳಿದರೆ ತಪ್ಪಾಗಬಾರದು. ಇನ್ನು ಗ್ರಾಮೀಣಾಭಿವೃದ್ಧಿ ತೆಗೆದುಕೊಂಡರೆ ತಮಗೂ ಎಲ್ಲಾ ಗೊತ್ತಿದೆ ಅಧ್ಯಕ್ಷರೇ, ನಾವೆಲ್ಲ 5 ವರ್ಷ ಕಾದು ನೋಡಿದ್ದೇವು, 89 ರಿಂದ 94 ರವರೆಗೂ ಬಡವರಿಂದ ಬಂದಿದ್ದ ಸರ್ಕಾರ ಕೇವಲ 75 ಸಾವಿರ ಮನೆಗಳನ್ನು ಕಟ್ಟುವ ಸಾಧನೆ ಮಾಡಿತ್ತು. ನಾವು ಒಂದೇ ವರ್ಷದಲ್ಲಿ 1.26 ಲಕ್ಷ ಮನೆ ಕಟ್ಟಿದ್ದೇವೆ, ಈ ಸಲ ಕೂಡ 1.26 ಲಕ್ಷ ಮನೆ ಕಟ್ಟುವ ವ್ಯವಸ್ಥೆ ಮಾಡಿಕೊಂಡಿದ್ದೇವೆ, ಕುಡಿಯುವ ನೀರಿನ ಬಗ್ಗೆಯೂ 83 ರಿಂದ 89 ರವರೆಗೆ ನೀರ್ ಸಾಬ್‌ರ ನೇತೃತ್ವದಲ್ಲಿ ಪ್ರತಿಹಳ್ಳಿಗೂ ಶುದ್ಧ ಕುಡಿಯುವ ನೀರು ಒದಗಿಸುವ

ಯೋಜನೆ ಇತ್ತು ಆದಾದನಂತರ ಬಂದ ಸರ್ಕಾರ ಹಳ್ಳಿಗರಿಗೆ ಕುಡಿಯುವ ನೀರು ಒದಗಿಸುವಲ್ಲಿ ವಿಫಲವಾಯಿತು, ಆದರೆ ನಾವು ಬಂದ ಮೇಲೆ ಮೊಟ್ಟಮೊದಲನೆಯ ದಾಗಿ 104 ಕೋಟಿಯನ್ನು ನೀರಿಗಾಗಿ ಖರ್ಚು ಮಾಡಿದ್ದೇವೆ. ಈ ಸಲ 205 ಕೋಟಿ ರೂಗಳಲ್ಲಿ ಹಳ್ಳಿಗಳಿಗೆ ನೀರು ಪೂರೈಕೆ ಮಾಡಿದ್ದೇವೆ. ಪ್ರತಿ ಹಳ್ಳಿಗೂ ಕುಡಿಯುವ ನೀರಿಗಾಗಿ ಕೊಳವೆಬಾವಿಗಳನ್ನು ತೆರೆಸಿ ನಮ್ಮ ಅಕ್ಕತಾಯಂದಿರಿಗೆ ನಲ್ಲಿ ನೀರಿನ ವ್ಯವಸ್ಥೆ ಮಾಡಲು 250 ಕೋಟಿ ರೂ.ಗಳ ಉತ್ತಮವಾದ ಸಾಧನೆ ಮಾಡಿದ್ದೇವೆ. ಅದೇ ಅಲ್ಲ ನಿವೇಶನಗಳು, ಹಿಂದಿನ ಸರ್ಕಾರದ ಅವಧಿಯಲ್ಲಿ ಭೂಮಿಯನ್ನು ಅಕ್ವೈರ್ ಮಾಡಿ ಕೊಂಡು ಅವರಿಗೆ ನಾಲ್ಕೈದು ಸಾವಿರ ಕೊಡುತ್ತಿದ್ದ ಪದ್ಧತಿಯನ್ನು ನಮ್ಮ ಸರ್ಕಾರ ಬಂದ ಮೇಲೆ ಆ ಬೆಲೆಯನ್ನು ಸರ್ಕಾರವೇ ಕೊಟ್ಟು ಬಡವರಿಗೆ ಮನೆ ಕಟ್ಟಿಸಿಕೊಡುವ ವ್ಯವಸ್ಥೆ ಮಾಡಲಾಗಿದೆ. ಪ್ರತಿಹಳ್ಳಿಯ ನಿರ್ವಸಿತರಿಗೂ ಮನೆ ಕೊಡುತ್ತೇವೆ, ಹಳ್ಳಿಗಾಡಷ್ಟೆ ಅಲ್ಲ ಪಟ್ಟಣದ ಬಡ ಜನರಿಗೂ ಒಂದೆಕಡೆ ಜಮೀನನ್ನು ಒಂದೂಕಾಲು ಲಕ್ಷ ರೂ.ವರೆಗೆ ಕೊಟ್ಟು ಖರೀದಿ ಮಾಡಿ ಉಚಿತ ನಿವೇಶನ ಕೊಡುವ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ. ಈಗಾಗಲೇ ಅನೇಕ ಹಳ್ಳಿ ಪಟ್ಟಣಗಳಲ್ಲಿ ನಿವೇಶನ ಹಂಚುವುದನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ ಸರಕಾರದ ಇನ್ನೊಂದು ದೊಡ್ಡ ಸಾಧನೆ ಏನೆಂದರೆ ನಾವು ಬಂದಾಗ 560 ಕೋಟಿ ಸಾಲ ಇತ್ತು. ಅದನ್ನೆಲ್ಲಾ ನಾವು ತೀರಿಸಿದ್ದೇವೆ. ಹಳ್ಳಿಯಲ್ಲಿರ ತಕ್ಕಂತಹವರಿಗೆ ಒಂದು ಪ್ರತ್ಯೇಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದು ಸಲವೂ ಓವರ್ ಡ್ರಾಫ್ಟ್ ತೆಗೆದುಕೊಂಡಿಲ್ಲ. ಹಿಂದಿನ ಸರಕಾರ ಇದ್ದಾಗ ಪ್ರತಿ 6 ತಿಂಗಳಿಗೊಮ್ಮೆ ಕೇಂದ್ರ ಸರಕಾರದಿಂದ ಓವರ್ ಡ್ರಾಫ್ಟ್ ತೆಗೆದುಕೊಳ್ಳುತ್ತಿತ್ತು. ನಾವು ಒಂದು ಸಲ ಕೂಡ ಒಂದು ಕೋಟಿ ಸಾಲವನ್ನು ಓಡಿಯನ್ನು ತೆಗೆದುಕೊಳ್ಳವುದಕ್ಕೆ ಹೋಗಿಲ್ಲ. ಅದು ಒಂದೇ ಅಲ್ಲ. ವೇಸ್ ಅಂಡ್ ಮೀನ್ಸ್ ಎಂದು ಏನು ನಮ್ಮ ಸರಕಾರ ನಿಗದಿ ಪಡಿಸುತ್ತದೆ ಆದರ ನಾಲ್ಕನೇ ಒಂದು ಭಾಗವನ್ನು ಆಗಾಗ ಮುಂಗಡವಾಗಿ ತೆಗೆದುಕೊಳ್ಳುವ ಪದ್ಧತಿ ಹಿಂದಿನ ಸರಕಾರದಲ್ಲಿತ್ತು. ಆದರೆ ನಮ್ಮ ಸರಕಾರ ಆ ಕೆಲಸವನ್ನು ಮಾಡಲಿಲ್ಲ. ನಾವು ಲಕ್ಷಾಂತರ ರೂಪಾಯಿಗಳ ವೆಚ್ಚದ ಯೋಜನೆಗಳನ್ನು ಮಾಡಿದ್ದರೂ ಕೂಡ ಒಂದು ಸಲವೂ ಕೇಂದ್ರ ಸರಕಾರಕ್ಕೆ ಕೇಳುವುದಕ್ಕೆ ಹೋಗಿಲ್ಲ. ಸರಕಾರದ ನಿಷ್ಠೆ ಯಾವ ರೀತಿ ಇದೆ ಎಂದು ನಾನು ತಮಗೆ ತಿಳಿಸುತ್ತಿದ್ದೇನೆ. ಈ ಎಲ್ಲಾ ಯೋಜನೆಗಳಿಗಿಂತ ಮುಖ್ಯವಾದುದು ಹಳ್ಳಿಗಳಲ್ಲಿ ಶೌಚಾಲಯವನ್ನು ಕಟ್ಟುವುದು, ಆ ಹಳ್ಳಿಯ ಜನ ಅಲ್ಲಿನ ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಹೋಗುವಾಗ ಆ ಒಂದು ಕಷ್ಟವನ್ನು ನೋಡಿ 90 ಕೋಟಿ ಹಣವನ್ನು ವೆಚ್ಚ ಮಾಡಿ ಹಳ್ಳಿಗಳಲ್ಲಿ ಶೌಚಾಲಯ ಗಳನ್ನು ಕಟ್ಟಿದ್ದಾರೆ. ಭಾರತದ ಇದರ ಯೋಜನೆಯಡಿ ಎಷ್ಟು 60 ಕೋಟಿ ರೂಪಾಯಿ. ಕರ್ನಾಟಕದ ಒಂದು ಯೋಜನೆ ಇರತಕ್ಕಂಥಾದ್ದು 90 ಕೋಟಿ ರೂಪಾಯಿ ಪ್ರತ್ಯೇಕವಾಗಿ ಸಾಧನೆ ಮಾಡಿರತಕ್ಕಂಥದ್ದಾಗಿದೆ. ನಮ್ಮ ಸರಕಾರದಿಂದ ಅನೇಕ ಗ್ರಾಮದ ಮಾದರಿಯ, ಒಂದೊಂದು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡತಕ್ಕಂತಹ ವ್ಯವಸ್ಥೆಯ ಯೋಜನೆ ಯನ್ನು ಹಾಕಿಕೊಂಡು ಸೆಪ್ಟೆಂಬರ್ 2ನೇ ತಾರೀಖು ಅದು ನೆಹರು ಮಾದರಿ ಎಂದು ಹೇಳಿ ಒಂದು ಹೆಸರನ್ನು ಕೊಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಇದೊಂದೇ ಅಲ್ಲ ಆಹಾರದ ಬಗ್ಗೆ ಈಗಾಗಲೇ ನಾವು ಏನು ಪ್ರಣಾಳಿಕೆಯಲ್ಲಿ ಪ್ರಕಟನೆ ಮಾಡಿದ್ದೇವೆ ಆದರಂತೆ ನಮ್ಮ ಕಾರ್ಯಕ್ರಮಗಳು ಸಾಗುತ್ತಿವೆ. ಬಡ ಜನರಿಗೆ, ದೀನ ದಲಿತರಿಗೆ ಕೃಷಿ ಕಾರ್ಮಿಕರಿಗೆ 480 ಕೋಟಿ ರಿಯಾಯಿತಿ ದರದ ಅಕ್ಕಿಯನ್ನು ವಿತರಣೆ ಮಾಡಿ ಹಸಿರು ಕಾರ್ಡಿನಲ್ಲಿ ಕೂಡ ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಇದು ಬರೀ ಹಳ್ಳಿಯಲ್ಲಿರತಕ್ಕಂತಹವರಿಗೆ ಅಲ್ಲ ಪಟ್ಟಣ ವಾಸಿಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ಇರ ತಕ್ಕಂತಹ ಬಡವರಿಗೂ ಕೂಡ ಕೊಡುವ ಮೂಲಕ ಪ್ರಗತಿ ಪರ ಸಾಧನೆ ಮಾಡಿ ದ್ದೇವೆ. ಕೊಳಚೆ ಪ್ರದೇಶದ ಬಗ್ಗೆ ಮಾತನಾಡಬೇಕಾದರೆ ನಾವು ಪ್ರತ್ಯೇಕವಾದಂತಹ ಯೋಜನೆಯನ್ನು ಹಾಕಿಕೊಂಡು ಪ್ರತಿ ಪಟ್ಟಣದಲ್ಲಿರತಕ್ಕಂತಹ ಕಾರ್ಮಿಕರ ಹಿತದೃಷ್ಟಿ ಯಿಂದ ಆ ಗುಡಿಸಲುವಾಸಿಗಳ ಹಿತದೃಷ್ಟಿಯಿಂದ ಕೂಲಿ ಮಾಡುವವರ ಹಿತದೃಷ್ಟಿ ಯಿಂದ ಕನಿಷ್ಠ ಪಕ್ಷ ಮನೆ ಕಟ್ಟಿಕೊಳ್ಳುವುದಕ್ಕೆ ಅಸಾಧ್ಯವಾಗಿರತಕ್ಕಂತಹ ಜನರಿಗೆ ಯೋಜನೆಯನ್ನು ಮಾಡಿ ಪ್ರತಿಯೊಂದು ಕೊಳಚೆ ಪ್ರದೇಶದಲ್ಲೂ ಕೂಡ ಇದರ ಬಗ್ಗೆ ಯೋಜನೆಯನ್ನು ಮಾಡಿ ಈಗಾಗಲೇ ಮುಂದುವರಿಸುತ್ತಿದ್ದೇವೆ. ನನ್ನ ಕ್ಷೇತ್ರದಲ್ಲೂ 200 ಮನೆಗಳು ಮಂಜೂರು ಆಗಿದ್ದು ಕೊಳಚೆ ಪ್ರದೇಶಗಳನ್ನು ಪ್ರಾರಂಭ ಮಾಡಿದ್ದೇವೆ. ಅಷ್ಟೇ ಅಲ್ಲ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ 10 ಲಕ್ಷದ ಮೌಲ್ಯದ ಮಾದರಿಯ ಕೊಳಚೆ ಪ್ರದೇಶವನ್ನು ಪರಿವರ್ತನೆ ಮಾಡುವುದಕ್ಕೆ ಈಗಾಗಲೇ ಹಣವನ್ನು ಮಂಜೂರು ಮಾಡಿದ್ದೇವೆ. ನಗರಾಭಿವೃದ್ಧಿಗೆ ತೆಗೆದುಕೊಂಡಾಗ ಈಗಾಗಲೇ ವಿಫಲವಾಗಿದೆ. ನಗರದಲ್ಲಿ ನೀರು ಕೊಡತಕ್ಕಂತಹ ವ್ಯವಸ್ಥೆಯು ಯಾವ ರೀತಿಯಾಗಿ ಇದೆ ಎಂದರೇ, ಹಳ್ಳಿಯ ಲ್ಲಾದರೂ ನೀರು ಸಿಗದಿದ್ದರೆ ಬಾವಿಯಲ್ಲಿ ತಂಬಿಗೆಯಲ್ಲಿ ತರತಕ್ಕಂತಹ ವ್ಯವಸ್ಥೆ ಇದೆ. ಅದೇ ಪಟ್ಟಣಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದಾಗ ಆ ಅವಸ್ಥೆಯನ್ನು ಎದುರಿಸುವ ಪ್ರಯುಕ್ತ ಸರಕಾರ ಅದಕ್ಕೆ ಪ್ರತ್ಯೇಕವಾಗಿ ಯೋಜನೆ ಮಾಡುತ್ತಿದೆ. 80 ಕೋಟಿಯನ್ನು ನಗರದ ನೀರಿನ ಸರಬರಾಜಿಗೋಸ್ಕರ ಮಾಡಿ ಅದರ ಉನ್ನತ ಮಟ್ಟದ್ದನ್ನಾಗಿ ಮಾಡ ಬೇಕು. 80 ಕೋಟಿ ಅಲ್ಲ ಕೇಂದ್ರ ಸರಕಾರ ನಮ್ಮದೇ ಆಗಿರುವುದರಿಂದ ಪ್ರಧಾನ ಮಂತ್ರಿಯವರು ನಮ್ಮವರೇ ಆಗಿರುವುದರಿಂದ ಸಂಬಂಧಪಟ್ಟ ಸರಕಾರದ ಮಂತ್ರಿಗಳು ಅವರನ್ನು ಭೇಟಿ ಮಾಡಿ ಪ್ರತಿಯೊಂದಕ್ಕೂ ಕೂಡ ಹೆಚ್ಚಿನ ಮೌಲ್ಯದ ಹಣವನ್ನು ತಂದು ಪ್ರತಿಯೊಂದು ಗ್ರಾಮ ಪ್ರತಿಯೊಂದು ಪಟ್ಟಣಕ್ಕೂ ಕೂಡ 40 ರಿಂದ 50 ಲೀಟರ್ ನೀರು ಪ್ರತಿ ಮನುಷ್ಯನಿಗೂ ಅವಶ್ಯಕತೆ ಇದೆ, ಆದ್ದರಿಂದ ಇಷ್ಟು ಕ್ವಾಂಟಿಟಿಯ ನೀರನ್ನು ಸರಬರಾಜು ಮಾಡುವುದಕ್ಕೆ ಸರಕಾರ ವ್ಯವಸ್ಥೆ ಮಾಡಬೇಕು. ಇದು ಸಾಧನೆ ಅಲ್ಲ. ಇನ್ನು ಮುಂದೆ ಮಾಡತಕ್ಕಂತಹ ಅನೇಕ ಸಾಧನೆಗಳು ಇರುವುದರಿಂದ ಸಂಬಂಧ ಪಟ್ಟ ಮಂತ್ರಿಗಳು ಕೇಂದ್ರವನ್ನು ಸಂಪರ್ಕಿಸಿ ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಯಾರೂ ಗಮನಿಸಿಲ್ಲ. ನಮ್ಮ ಸರಕಾರ ಯಾವ ರೀತಿ ಹಿಂದುಳಿದ ಪ್ರದೇಶಕ್ಕೆ ಪ್ರಾತಿನಿಧ್ಯಕೊಡುತ್ತದೆ ಎನ್ನುವುದರ ಬಗ್ಗೆ ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಆ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದೆ. ಹೈದರಾಬಾದ್ ಕರ್ನಾಟಕಕ್ಕೂ ಕೊಟ್ಟಿದ್ದರು. ಮಲೆನಾಡು ಅಭಿವೃದ್ಧಿ ನಿಗಮಕ್ಕೂ ಕೊಟ್ಟಿದ್ದರು ಆದರೆ ಬಯಲು ಸೀಮೆ ಪ್ರದೇಶವೆಂದು 57 ತಾಲ್ಲೂಕುಗಳು ಇವೆ ಇದನ್ನು

ಪೂರ್ತಿಯಾಗಿ ನಿರ್ಲಕ್ಷಿಸಿರತಕ್ಕಂತಹ ವ್ಯವಸ್ಥೆಯನ್ನು ನಾವೆಲ್ಲರೂ ತಮ್ಮ ಮೂಲಕ ತಿಳಿಸುತ್ತಿದ್ದೇವೆ ಇದನ್ನು ಯಾರೂ ಗಮನಿಸಿಲ್ಲ. ಏನು ಜನಸಂಖ್ಯೆ ಇದೆ ಅದರ 3ನೇ ಒಂದು ಭಾಗದಷ್ಟು ಜನಸಂಖ್ಯೆ ಆ ಒಂದು ಪ್ರದೇಶದಲ್ಲಿ ವಾಸವಾಗಿದ್ದಾರೆ. 40 ವರ್ಷಗಳ ಕಾಲ ಯಾವುದೇ ಸರಕಾರ ಬಂದರೂ ಕೂಡ ಈ 3 ನೇ ಒಂದು ಭಾಗದಷ್ಟು ಜನರನ್ನು ನಿರ್ಲಕ್ಷ್ಯ ಮಾಡಿದ್ದರು. ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಮಾನ್ಯ ಜೆ. ಹೆಚ್. ಪಟೇಲ್ ಅವರು ಮುಖ್ಯ ಮಂತ್ರಿಯಾದಾಗ, ಈಗಿನ ಪ್ರಧಾನ ಮಂತ್ರಿ ಮಾನ್ಯ ದೇವೇಗೌಡರು ಮೊಟ್ಟ ಮೊದಲನೆಯದಾಗಿ ಇದರ ಅಸ್ತಿತ್ವವನ್ನು ಮಾರಿ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಿ ಪ್ರತ್ಯೇಕವಾಗಿ ಆದ್ಯತೆ ಯನ್ನು ಕೊಡಬೇಕೆಂಬ ಉದ್ದೇಶದಿಂದ ಈ ನಿಗಮಕ್ಕೆ ನಿನ್ನೆ ಕೂಡ ಧಾರಾಳವಾಗಿ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. 40-50 ವರ್ಷಗಳಿಂದ ಯಾವುದೇ ಸರಕಾರ ಬಂದರೂ ಕೂಡ ಅವರನ್ನು ನಿರ್ಲಕ್ಷ್ಯ ಮಾಡಿದ್ದರು. ನಮ್ಮ ಸರಕಾರ ಪ್ರತಿಯೊಂದು ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಮೂಲೆ ಮೂಲೆಗೂ ಪ್ರತಿಯೊಬ್ಬ ರೈತನೂ ಕೂಡ ಆರ್ಥಿಕವಾಗಿ ಅವನು ಬಲಶಾಲಿಯಾಗಬೇಕೆಂಬ ಒಂದೇ ಉದ್ದೇಶ ದಿಂದ ಈ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿಗೆ ಹಣ ಕೊಟ್ಟಿದೆ. ಸಾರಿಗೆ ಸಮಸ್ಯ ನಮ್ಮಲ್ಲಿ ಬಹಳ ಇದೆ. ನಾವು ಕೈಗೆ ತೆಗೆದುಕೊಂಡಾಗ 450 ಕೋಟಿರೂಪಾಯಿ ಲುಕ್ಸಾನಿನಲ್ಲಿ ಇತ್ತು. ಒಂದು ವರ್ಷದಿಂದ ಅನೇಕ ಸಮಸ್ಯೆಗಳು ಅಲ್ಲಿ ಇತ್ತು. ಮಾನ್ಯ ಬೀಳಗಿಯವರು ಇದರ ಬಗ್ಗೆ ಪ್ರಯತ್ನ ಮಾಡಿದರು ಆಗಲಿಲ್ಲ. ಈಗ ಆ ಇಲಾಖೆಯಲ್ಲಿ ಬಹಳ ಉನ್ನತ ಸೇವೆ ಸಲ್ಲಿಸಿದ್ದ ಮಾನ್ಯ ಸಿಂಧ್ಯರವರು ಸಾರಿಗೆ ಸಚಿವರಾಗಿದ್ದಾರೆ ಕಳೆದ ಒಂದೂವರೆ ತಿಂಗಳ ಹಿಂದೆ ಎಲ್ಲಾ ಶಾಸಕರನ್ನು ಕರೆದು ಅವರ ಕುಂದುಕೊರತೆಗಳನ್ನು ವಿಚಾರಣೆ ಮಾಡಿ ಯಾವ ರೀತಿ ಅಲ್ಲಿ ಆಡಳಿತವನ್ನು ನಡೆಸಿ ನಷ್ಟವನ್ನು ತುಂಬಬೇಕೆನ್ನುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಪ್ರತಿಯೊಂದು ಗ್ರಾಮದಲ್ಲಿ ಪಟ್ಟಣದಲ್ಲಿ ಹಳ್ಳಿಹಳ್ಳಿಯಲ್ಲೂ ಕೂಡ ಪ್ರತ್ಯೇಕವಾಗಿ ಸಾರಿಗೆ ವ್ಯವಸ್ಥೆಯನ್ನು ಮಾಡಬೇಕೆನ್ನುವ ಉದ್ದೇಶವನ್ನು ಮಾಡಿಕೊಂಡು ಎರಡು ಸಾವಿರ ಹೊಸ ಬಸ್ಸುಗಳನ್ನು ಪರ್ಚೇಸ್ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದಾರೆ. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಬಸ್ ನಿಲ್ದಾಣವನ್ನು ಮಾಡತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಮಂಡ್ಯ, ಕೋಲಾರ, ಬೆಂಗಳೂರು, ತುಮಕೂರು ಇಂತಹ ಕಡೆ ಏನು ಸ್ಕೀಮ್ಸ್ ಪ್ಯಾಕೆಟ್ಸ್ ಇದೆ ಖಾಸಗಿಯವರು ಏನು ಬಸ್ಸಗಳನ್ನು ಓಡಾಡಿಸುತ್ತಿದ್ದಾರೆ ಇದ ಬಗ್ಗೆ ಹೆಚ್ಚು ಗಮನಹರಿಸಬೇಕು. ಈಗಿರತಕ್ಕ ಕಾನೂನು ಏನಿದೆ, ಇದನ್ನು ಕಾನೂನು ಇಲಾಖೆಯವರು ಅಮೆಂಡ್‌ಮೆಂಟ್ ಮಾಡಬೇಕು. ಬೆಂಗಳೂರಿನಿಂದ ಇನ್ನೊಂದು ಕಡೆಗೆ ಹೋಗತಕ್ಕಂತಹ 450 ಕಿಲೋಮೀಟರ್ ಆಗತಕ್ಕಂಥಾದ್ದಕ್ಕೂ ಒಂದೇ ಟ್ಯಾಕ್ಸ್ ಉಂಟು. 5-6 ಸಾವಿರ ಆಗತಕ್ಕಂಥಾದ್ದಕ್ಕೂ ಒಂದೇ ಟ್ಯಾಕ್ಸ್ ಉಂಟು. ತಾಲ್ಲೂಕು ಮಟ್ಟದಲ್ಲಿ ಓಡಾಡತಕ್ಕಂತಹ ಬಸ್‌ಗಳಿಗೂ ಒಂದೇ ರೀತಿಯಾದ ತೆರಿಗೆ ದರ ಇರುವುದರಿಂದ ಹಳ್ಳಿಗಳಿಗೆ ನಾವು ಕೊಡತಕ್ಕಂತಹ ಶಕ್ತಿ ನಮಗೆ ಇಲ್ಲದ ಪ್ರಯುಕ್ತ ಬಹಳ ತೊಂದರೆ ಯಾಗಿದೆ. ತಾಲ್ಲೂಕಿನ ವ್ಯಾಪ್ತಿಯಲ್ಲಿ ಬಸ್‌ಗಳು ಏನು ಓಡಾಡುತ್ತಿವೆ ಅಂಥ ಸಣ್ಣ

ಮತ್ತು ಮಧ್ಯಮ ವರ್ಗದ ಬಸ್ ಮಾಲೀಕರಿಗೆ 50 ಪರ್ಸೆಂಟ್ ರಿಯಾಯಿತಿ ದರದಲ್ಲಿ ತೆರಿಗೆಯನ್ನು ಇವತ್ತು ಏನಾದರೂ ನಿಗದಿ ಪಡಿಸಿದರೆ ಪ್ರತಿಯೊಂದು 150 ಕಿಲೋ ಮೀಟರ್ ಒಳಗೆ ಯಾವ ಬಸ್‌ನ ಚಾಲನೆ ನಡೆಯುತ್ತದೋ ಅಂತಹ ಬಸ್‌ಗಳಿಗೆ ಇವತ್ತು 50 ಪರ್ಸೆಂಟ್ ಟ್ಯಾಕ್ಸ್ ಅನ್ನು ಕಡಿಮೆ ಮಾಡಿದ ಪಕ್ಷದಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿ ಕೂಡ ಖಾಸಗಿ ಬಸ್‌ನವರು ಚಾಲನೆ ಮಾಡತಕ್ಕಂತಹ ವ್ಯವಸ್ಥೆ ಆಗುತ್ತದೆ. ಸಣ್ಣ ರೂಟುಗಳಲ್ಲಿ ನಮ್ಮ ಸರಕಾರದವರು ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಓಡಿಸದೇ ದೊಡ್ಡ ರೂಟುಗಳಲ್ಲಿ ಓಡಿಸಿದರೆ ನಮ್ಮ ನಷ್ಟವನ್ನು ಕಡಿಮೆ ಮಾಡಬಹುದು. ಎಂತಹ ಪರಿಸ್ಥಿತಿಯಲ್ಲೂ ಸರಕಾರ ಈ ಕಾನೂನನ್ನು ಮಾಡಿಷ್ಟೈ ಮಾಡಬೇಕು. ಸಣ್ಣ ಮತ್ತು 150 ಕಿಲೋ ಮೀಟರ್ ಒಳಗೆ ಮಾಡಿರತಕ್ಕಂತಹ ಬಸ್ ಮಾಲೀಕರಿಗೆ ಅರ್ಧದಷ್ಟು ತೆರಿಗೆಯನ್ನು ಕಡಿಮೆ ಮಾಡಬೇಕೆಂದು ನಾನು ಸರಕಾರಕ್ಕೆ ತಿಳಿಸುತ್ತಿದ್ದೇನೆ. ತಮಿಳು ನಾಡಿನಲ್ಲಿ ಒಂದು ವ್ಯವಸ್ಥೆ ಮಾಡಿದ್ದಾರೆ. 150-120 ಕಿಲೋ ಮೀಟರ್ ಮೇಲ್ಪಟ್ಟು ಇರತಕ್ಕಂತಹ ಎಲ್ಲಾ ರೂಟುಗಳಿಗೆ ಖಾಸಗಿಯವರಿಗೆ ಕೊಟ್ಟಿರುವ ಪ್ರಯುಕ್ತ ಈ ನಷ್ಟವನ್ನು ತುಂಬಬಹುದು. ಆ ನಷ್ಟವನ್ನು ಪರಿಹಾರ ಮಾಡುವುದಕ್ಕೆ ಇದೊಂದು ಸೂಕ್ತವಾದಂತಹ ಕ್ರಮವೆಂದು ನಾನು ಸರಕಾರಕ್ಕೆ ತಿಳಿಸುತ್ತಿದ್ದೇನೆ. ಇನ್ನು ಆರೋಗ್ಯದ ಬಗ್ಗೆ ಹೇಳುವುದಾದರೆ ಆರೋಗ್ಯ ಇಲಾಖೆ ಮುಖ್ಯವಾದ ಸಂಸ್ಥೆಯಾಗಿರುವುದರಿಂದ ಈ ಆರೋಗ್ಯ ಇಲಾಖೆ ಹಿಂದೆ ಎಷ್ಟು ನಿರ್ಲಕ್ಷ್ಯವಾಗಿತ್ತು ಎಂದು ಹೇಳಿದರೆ ನನ್ನ ಕ್ಷೇತ್ರದಲ್ಲಿ 16 ಆಸ್ಪತ್ರೆಗಳು ಇದ್ದರೂ ಕೂಡ ಕೇವಲ ಎಂಟು ಜನ ಡಾಕ್ಟರ್‌ಗಳು ಇದ್ದರು. ಆ ರೀತಿ ಎಂಟು ಡಾಕ್ಟರ್‌ಗಳು ಇದ್ದುದನ್ನು ನನ್ನ ಕೇಂದ್ರದಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಬ್ಬರೇ ಒಬ್ಬರು ಡಾಕ್ಟರ್ ಇದ್ದರು ನಾನು ಚುನಾವಣೆಗೆ ನಿಂತಾಗ. ಆದರೆ ನಮ್ಮ ಸರ್ಕಾರ ಬಂದನಂತರ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ ಎಂದರೆ, ಎಂಟು ನೂರು ಕೋಟಿ ರೂಪಾಯಿಗಳನ್ನು ಇವತ್ತಿನ ದಿನ ವಿಶ್ವಬ್ಯಾಂಕ್‌ನಿಂದ ಜರ್ಮನ್ ಬ್ಯಾಂಕ್‌ನಿಂದ ಕೂಡ ಸಾಲ ಪಡೆದು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಐದು ಸಾವಿರದಿಂದ ಆರು ಸಾವಿರ ಜನಸಂಖ್ಯೆ ಇರುವ ಪ್ರತಿಯೊಂದು ಪ್ರದೇಶದಲ್ಲೂ ಒಂದು ಆಸ್ಪತ್ರೆಯನ್ನು ಕಟ್ಟುವ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಎಲ್ಲೆಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ, ಅಲ್ಲಿ ಅಪಘಾತದ ಒಂದು ಆಸ್ಪತ್ರೆಯನ್ನು ತೆರೆದು ಮೊಬೈಲ್ ಆಸ್ಪತ್ರೆಯ ಒಂದು ಉದ್ದೇಶದಿಂದ ಇವೆಲ್ಲಾ ತೆರೆದು ಅಪಘಾತಗಳಾದವರಿಗೆ ತಕ್ಷಣ ಚಿಕಿತ್ಸೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಇನ್ನೊಂದೆರಡು ವರ್ಷಗಳಲ್ಲಿ ಪ್ರತಿಯೊಂದು ಪಂಚಾಯಿತಿ ಹೆಡ್‌ಕ್ವಾರ್ಟರ್ ಅಥವಾ ಹೆಡ್ ಪಂಚಾಯಿತಿಗೆ ಒಂದೊಂದು ಆಸ್ಪತ್ರೆಯನ್ನು ತೆರೆಯುವ ಯೋಚನೆಯನ್ನು ಮಾಡಿಕೊಂಡಿದ್ದೇವೆ. ಕೃಷಿ ಮಾರುಕಟ್ಟೆಯಲ್ಲಿ ಸಂಜೀವಿನಿ ಯೋಜನೆಯನ್ನು ಈಗಾಗಲೇ ತೆರೆದಿದ್ದೇವೆ. ಇವೆಲ್ಲಾ ಏನು? ಒಬ್ಬ ಕೃಷಿ ಕಾರ್ಮಿಕ ತನ್ನ ಹೊಲದಲ್ಲಿ ಕೃಷಿಯನ್ನು ಮಾಡುತ್ತಿರುತ್ತಾನೆ. ಅಲ್ಲಿ ಏನೋ ಅಪಘಾತಕ್ಕೆ ಈಡಾಗುತ್ತಾನೆ. ಆ ರೀತಿ ಯಾರೇ ಅಪಘಾತಕ್ಕೆ ಈಡಾದಾಗ ಅವರಿಗೆ ಇನ್‌ಷೂರೆನ್ಸ್ ಉಂಟು. ಅವರಿಗೆ ಬೇರೆ ಇಎಸ್ಐ ಉಂಟು. ಅನೇಕ ಸೌಲಭ್ಯ ಉಂಟು. ಆದರೆ ಹಳ್ಳಿಯಲ್ಲಿರುವ

ಕೃಷಿ ಕಾರ್ಮಿಕರಿಗೆ ಯಾವ ಸೌಲಭ್ಯವೂ ಇಲ್ಲದ ಪ್ರಯುಕ್ತ ನಮ್ಮ ಸರ್ಕಾರ ಬಂದ ನಂತರ ಸಂಜೀವಿನಿ ಎನ್ನುವ ಒಂದು ಯೋಜನೆಯನ್ನು ಮಾಡಿ ಆ ಯೋಜನೆಯಿಂದ ಇವತ್ತು ಪ್ರತಿಯೊಬ್ಬ ಕೃಷಿ ಕಾರ್ಮಿಕನು ಏನಾದರೂ ಅಪಘಾತಕ್ಕೆ ಈಡಾದರೆ ಅವರಿಗೆ 25 ಸಾವಿರ ಕೊಡುವ ಒಂದು ಯೋಜನೆಯನ್ನು ಮಾಡಿಕೊಂಡಿದ್ದಾರೆ. ಒಂದು ಕಾಲು ಅಥವಾ ಕೈ ಇಂಥದ್ದು ಏನಾದರೂ ಮುರಿದ ತಕ್ಷಣ ಅವರಿಗೆ ಒಂದೂವರೆ ಸಾವಿರ ರೂಪಾಯಿಯಿಂದ ಆರು ಸಾವಿರ ರೂಪಾಯಿ ಕೊಡುವುದನ್ನು ತಕ್ಷಣ ಪರಿಹಾರ ಕೊಡುವ ಯೋಜನೆಯನ್ನು ಮಾಡಿಕೊಂಡಿದ್ದೇವೆ. ಇದನ್ನು ಯಾವ ಸರ್ಕಾರ ಮಾಡಿದೆ ಸ್ವಾಮಿ? ಇದು ರೈತರ ಸರ್ಕಾರವಾಗಿರುವುದರಿಂದ ಇವತ್ತು ಮಣ್ಣಿನ ಮಗ ಪ್ರಧಾನ ಮಂತ್ರಿಯಾಗಿ ಇನ್ನೊಬ್ಬ ಮಣ್ಣಿನ ಮಗ ಇವತ್ತು ಮುಖ್ಯಮಂತ್ರಿಯಾಗಿರುವುದರಿಂದ ಗ್ರಾಮೀಣ ಪ್ರದೇಶಕ್ಕೆ ಅಧಿಕವಾದಂಥ ಸೌಲಭ್ಯ ಕೊಡಬೇಕೆಂದು ಒಂದೇ ಉದ್ದೇಶದಿಂದ ಇವೆಲ್ಲಾ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ರೈತನು ಮಾರುಕಟ್ಟೆಗೆ ಸರಕನ್ನು ಕೊಟ್ಟಾಗ ಒಬ್ಬ ಖಾಸಗಿಯವನಿಗೆ ಕೊಟ್ಟಾಗ 400 ರೂಪಾಯಿ ಕ್ವಿಂಟಾಲ್ ಇದ್ದರೆ ಅವನು 300ರೂಪಾಯಿ ಕೊಡುತ್ತಿದ್ದ. ಅಂಥ ವ್ಯವಸ್ಥೆಯಲ್ಲಿ ಇವತ್ತು ಮಾರುಕಟ್ಟೆಗೆ ಹೋದ ತಕ್ಷಣ ಶೇಕಡ 60 ಪರ್ಸೆಂಟ್ ಹಣವನ್ನು ತಕ್ಷಣ ಪಾವತಿ ಮಾಡುವ ವ್ಯವಸ್ಥೆಯನ್ನು ಕೂಡ ನಮ್ಮ ಸರ್ಕಾರ ಮಾಡಿದೆ. ಇದರಿಂದ ಕೂಡ ರೈತನಿಗೆ ಅನುಕೂಲವಾಗಿದೆ. ಇದೊಂದೇ ಅಲ್ಲ. ರೈತನು ಸರಕುಗಳನ್ನು ಸಾಗಾಣಿ ಮಾಡುವಾಗ ರಸ್ತೆಗಳು ಬಹಳ ಕೆಟ್ಟುಹೋಗಿತ್ತು. ಆ ರೀತಿ ಕೆಟ್ಟುಹೋಗಿರುವ ರಸ್ತೆಗಳಿಗಾಗಿ ಅದಕ್ಕೂ ಕೂಡ 15 ಲಕ್ಷ ರೂಪಾಯಿಗಳನ್ನು ಎಪಿಎಂಸಿಯವರೆಲ್ಲಾ ಕೊಟ್ಟು ಆ ರಸ್ತೆಯನ್ನು ಸರಿ ಮಾಡಬೇಕು ಎಂದು ಮಾಡಿದ್ದಾರೆ. ಇದಕ್ಕಾಗಿ 25 ಲಕ್ಷ ರೂಪಾಯಿಗಳವರೆಗೂ ಒಂದು ಕ್ಷೇತ್ರಕ್ಕೆ ಕೊಡುತ್ತಿದ್ದಾರೆ. ಕೇಂದ್ರ ಬಜೆಟ್ ನೋಡಿದಾಗ ಎಷ್ಟು ಸಂತೋಷವಾಯಿತು. ಇವತ್ತು ಪ್ರಧಾನಮಂತ್ರಿ ಮಣ್ಣಿನ ಮಗನಾದ್ದರಿಂದ ಬಜೆಟ್ ಅಷ್ಟೊಂದು ಚೆನ್ನಾಗಿದೆ. ಗ್ರಾಮೀಣ ಭಾಗಕ್ಕೆ 920 ಕೋಟಿ ರೂಪಾಯಿಗಳು ಮಾತ್ರ ಇತ್ತು. ಅಂಥದ್ದನ್ನು ಎಂಟು ಸಾವಿರ ಕೋಟಿ ರೂಪಾಯಿಗಳನ್ನು ಮಾಡಿರುವ ಪ್ರಯುಕ್ತ ಈ ಒಂದು ಸೌಲಭ್ಯವನ್ನು ನಾವು ಕರ್ನಾಟಕದವರು ಅದನ್ನು ಉಪಯೋಗಿಸಿಕೊಂಡು ಇಡೀ ಕರ್ನಾಟಕ ರಾಜ್ಯದಲ್ಲಿರುವ 85 ಪರ್‌ಸೆಂಟ್ ಜನರು ಏನು ಹಳ್ಳಿಯಲ್ಲಿ ಜೀವನ ಮಾಡುತ್ತಿದ್ದೇವೆ, ಇವರಿಗೆಲ್ಲಾ ಪ್ರತ್ಯೇಕವಾದ ಸೌಲಭ್ಯಗಳನ್ನು ಅದು ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಶೌಚಾಲಯಗಳು ಇರಬಹುದು ಅಥವಾ ಆಶ್ರಯ ಯೋಜನೆಯಲ್ಲಿ ಮನೆಗಳು ಇರಬಹುದು ಅಥವಾ ರಸ್ತೆಗಳು ಇರಬಹುದು ಅಥವಾ ಆರೋಗ್ಯ ಘಟಕಗಳು ಇರಬಹುದು. ಇವೆಲ್ಲವನ್ನೂ ಕೂಡಿ ಉನ್ನತವಾದ ಒಂದು ಸೌಕರ್ಯವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ನಿನ್ನೆ ನಮ್ಮ ಸಗೀರ್ ಅಹಮದ್‌ರವರು ಮಾತನಾಡುತ್ತಾ ಹೇಳುತ್ತಿದ್ದರು, ನಿಮ್ಮ ಸರ್ಕಾರ ಬಡವರ ಪರವಾಗಿಲ್ಲ, ಬಡವರಿಗೆ ನೀರು ಕುಡಿಯುವುದಕ್ಕೆ ವ್ಯವಸ್ಥೆ ಇಲ್ಲ, ಕೊಳಚೆ ಪ್ರದೇಶಗಳಲ್ಲಿ ಓಡಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದರು. ಅವರು ಕೂಡ ನನ್ನ ಸ್ನೇಹಿತರು. ಅವರ ಒಂದು ಆಡಳಿತದಲ್ಲಿ ಕನಿಷ್ಟಪಕ್ಷ ಕುಡಿಯುವುದಕ್ಕೆ ನೀರಲ್ಲ, ಹೋಗುವ ರಸ್ತೆ ಕೂಡ ವಿಫಲವಾಗಿತ್ತಲ್ಲ ಐದು ವರ್ಷಗಳ ಕಾಲ. ಅದನ್ನು ನಾವು ಬಂದ ನಂತರ ನಮ್ಮದು ಬಡವರ ಪರ ಇರುವ ಸರ್ಕಾರ

ಇದನ್ನು ಮಧ್ಯಮಪರ ಇರುವ ಸರ್ಕಾರ ಎಂದು ಹೇಳಿ ಜನತಾದಳ ಸರ್ಕಾರ ಸಾಹುಕಾರರ ಪರ ಇರುವುದು ಎಂದು ಹೇಳಿ ದೊಡ್ಡದಾಗಿ ಘೋಷಣೆ ಮಾಡಿದರು. ನಾವು ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಕೊಳವೆಬಾವಿಯನ್ನು ಮಾಡಬೇಕೆಂದು ಹೇಳಿ ಇವತ್ತೇನು ಜನತಾದಳ ಸರ್ಕಾರ ಕೇಂದ್ರದಲ್ಲಿ ಮಾಡಿದೆ, ಇದನ್ನು ನಾವು ಸ್ವಾಗತ ಮಾಡಬೇಕು. ಸನ್ಮಾನ್ಯ ಹಿರಿಯ ಸದಸ್ಯರಾದ ರಾಮಕೃಷ್ಣರವರು ಹೇಳುತ್ತಾರೆ, ಎಸ್‌ಸಿ/ಎಸ್‌ಟಿಯವರಿಗೆಲ್ಲಾ ಕೂಡ ಬಹಳ ಅನ್ಯಾಯವಾಗಿದೆ, ಈ ಸರ್ಕಾರ ಬಡ ಪರವಾಗಿಲ್ಲ ಎಂದು. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಎಷ್ಟು ಖರ್ಚು ಮಾಡಿದ್ದಾರೆ, ಹಿಂದೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರು ಎಂದು ಈ ಪ್ರಶ್ನೆಯನ್ನು ತಾವು ನಮಗೆ ಕೇಳಬಹುದು. ನಾನೂ ಕೂಡ ವಿಷಯ ಸಮಿತಿಯಲ್ಲಿದ್ದೇನೆ. 1036 ಕೋಟಿ ರೂಪಾಯಗಳನ್ನು ಎಸ್‌ಸಿ / ಎಸ್‌ಟಿ ಕಾರ್ಪೊರೇಷನ್‌ನಿಂದ ಉಪಯೋಗಿಸದೆ ಕೇಂದ್ರ ಸರ್ಕಾರಕ್ಕೆ ಕಳಿಹಿಸಿರುವುದನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ಅವರೂ ಕೂಡ ಫೈನಾನ್ಸ್ ಕಮಿಟಿಯ ಛೇರ್ಮೆನ್‌ರಾಗಿದ್ದರು. 1036 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡದೆ, ಬಡ ರೈತರಿಗೆ ಕೊಡದೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಕೊಡದೇ ಉಪಯೋಗ ಮಾಡದೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಘಟನೆಯ ಬಗ್ಗೆ ಕೂಡ ನಾವೆಲ್ಲರೂ ಚರ್ಚೆ ಮಾಡಿದ್ದೇವೆ. ಇವರು ಬಡವರ ಪರವಾಗಿ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗಾಗಿ ಇರುವ ಸರ್ಕಾರ ಎಂದು ಹೇಳಿ ಆ ಹಣವನ್ನು ಬಡವರಿಗೆ ಕೊಟ್ಟಿದ್ದರೆ ಎಷ್ಟೋ ಕುಟುಂಬಗಳು ಇವತ್ತಿನದಿನ ಉದ್ಧಾರವಾಗುತ್ತಿತ್ತು. ನಾವು ಗಂಗಾ ಕಲ್ಯಾಣ ಯೋಜನೆ ತಂದಿದ್ದೇವೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ತಂದಿದ್ದೇವೆ. ಇವತ್ತು ಸಾಮಾನ್ಯದ ಬಡ ರೈತ ನಾಲ್ಕು ಎಕರೆ ಇರುವ ರೈತ ಅವನು ಕೊಳವೆ ಬಾವಿ ತೋಡಿಸಿ ಅವನಿಗೆ ಪಂಪ್‌ಸೆಟ್ಟನ್ನು ಹಾಕಿ ಕೊಟ್ಟಾಗ ಅದರಲ್ಲೇ ಜೀವನ ಮಾಡಿ ತನ್ನ ಸ್ವಂತ ಕಾಲ ಮೇಲೆ ನಿಲ್ಲುವ ಯೋಜನೆಯನ್ನು ಮಾಡಿದ್ದೇವೆ. ಒಂದೊಂದು ತಾಲ್ಲೂಕಿಗೂ ಕೂಡ 50 ರಿಂದ 75 ಗಂಗಾಕಲ್ಯಾಣ ಯೋಜನೆಯನ್ನು ಜಾರಿ ಮಾಡಿದ್ದೇವೆ. ಎಲ್ಲಾ ಭಾಗದಲ್ಲೂ ನಿಷ್ಪಕ್ಷಪಾತವಾಗಿ ಆಗಬೇಕೆಂದು ಮಾಡಿದ್ದೇವೆ. ಎಸ್‌ಸಿ ಎಸ್‌ಟಿಯವರಿಗೆ ಉಚಿತವಾಗಿ ಪಂಪ್‌ಸೆಟ್ ಕೊಟ್ಟು, ಉಚಿತವಾಗಿ ವಿದ್ಯುಚ್ಛಕ್ತಿ ಸೌಲಭ್ಯ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಪಿ. ಆರ್. ಸಗೀರ್ ಅಹಮದ್ :- ಮಾನ್ಯ ಉಪಾಧ್ಯಕ್ಷರೇ, ಅವರು ಮಾತನಾಡಲಿ, ನಮಗೇನು ಅಭ್ಯಂತರವಿಲ್ಲ. ನಾನು ಹೇಳುವುದೇನೆಂದರೆ ಸನ್ಮಾನ್ಯ ಬಿಜೆಪಿಯ ಉಪನಾಯಕರಾದಂಥ ವೈ. ರಾಮಕೃಷ್ಣರವರು ನಿನ್ನೆ ಮಾತನಾಡಿದರು, ನಾನು ಮಾತನಾಡಿದ್ದೆ, ಇನ್ನು ಅನೇಕ ಜನ ಸ್ನೇಹಿತರುಗಳು ಮಾತನಾಡಿದರು. ಮಾನ್ಯ ನನ್ನ ಮಿತ್ರರಾದ ಸದಸ್ಯರಿಗೆ ವಿದ್ಯುತ್ ಸೌಕರ್ಯ ದೊರೆಯದೇ ಇರುವುದರಿಂದ ರೈತರಿಗೆ ಇವರು ಅಧಿಕಾರಕ್ಕೆ ಬಂದ ನಂತರ ಎಷ್ಟು ಕೊಳವೆ ಬಾವಿಗಳಿಗೆ ಎಷ್ಟು ತೆರೆದ ಬಾವಿಗಳಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ ಎನ್ನುವ ಮಾಹಿತಿಯನ್ನು ಹೇಳಬೇಕಾಗುತ್ತದೆ. ಕೇವಲ ಸದನದಲ್ಲಿ ನಾವು ಹರಿಜನರು, ಗಿರಿಜನರ ಉದ್ಧಾರಕ್ಕಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಏಳಿಗೆಗಾಗಿ ಎಂದು ಹೇಳಿದರೆ ಆಗುವುದಿಲ್ಲ.

ನನಗೆ ತಿಳಿದಹಾಗೆ 255 ಕೊಳವೆ ಬಾವಿಗಳಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಸದಸ್ಯರಿಗೆ ಇವತ್ತಿನವರೆಗೂ ಸಹ ವಿದ್ಯುತ್ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ.

ಉಪಾಧ್ಯಕ್ಷರು :- ಮಾನ್ಯ ಶ್ರೀನಿವಾಸ್‌ರವರೇ, ತಾವು ಮುಗಿಸಿ.

ಶ್ರೀ ಆರ್. ಶ್ರೀನಿವಾಸ್ :- ಮಾನ್ಯ ಉಪಾಧ್ಯಕ್ಷರೇ, ನಮ್ಮ ಸ್ನೇಹಿತರು ಏನು ಹೇಳಿದರು, ಅದನ್ನು ಸ್ವಾಗತ ಮಾಡುತ್ತೇನೆ ನಿಜ. ಅವರ ಸರ್ಕಾರ ಇತ್ತು, ಅವರ್ಯಾರೋ ಒಂದು ಮನೆಗೆ ಹೋದಾಗ ಒಂದು ಕೆಜಿ ಅಕ್ಕಿ ತಂದುಕೊಟ್ಟು 20 ಜನರಿಗೆ ಮಾಡಿ ಹಾಕು ಎಂದು ಹೇಳಿದರಂತೆ. ಇಲ್ಲಾ, ಇದರಲ್ಲಿ ನಾನು ಹೇಗೆ ಮಾಡುವುದು ಎಂದಾಗ ಇಲ್ಲಾ, ಇಲ್ಲಾ ನೀ ಮಾಡಿ ಹಾಕು; ನಾನು ಇದ್ದೇನೆ ಎಂದರಂತೆ. ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಯಾರು ಗಮನಹರಿಸಲಿಲ್ಲ. 5 ಸಾವಿರ ಪಂಪ್‌ಸೆಟ್ಟುಗಳನ್ನು ಒಂದೊಂದು ಕ್ಷೇತ್ರಕ್ಕೆ ಕೊಡಿ ಎಂದು ಆರ್ಡರ್ ಮಾಡಿದರು. ಆಗ ನಾನು ವಿರೋಧಪಕ್ಷದ ನಾಯಕನಾಗಿದ್ದೆ ನಮ್ಮ ಕ್ಷೇತ್ರದಲ್ಲಿ. ಮೇಲಿಂದ ಆಜ್ಞೆಯಾಗಿದೆ, 5 ಸಾವಿರ ಪಂಪ್‌ಸೆಟ್ ಕೊಡಲೇಬೇಕು ನೀವು ಎಂದು ಹೇಳಿದರು. ಆಗ ವಿದ್ಯುಚ್ಛಕ್ತಿ ಇಲಾಖೆಯವರು ಮನೆ ಮನೆಗೂ ಹುಡುಕಿ ಪಂಪ್‌ಸೆಟ್ಟು ಇಲ್ಲದಿದ್ದವರಿಗೂ ಕೂಡ ಸರ್ವೀಸ್ ಕೊಡುವ ವ್ಯವಸ್ಥೆಯನ್ನು ಮಾಡಿದರು.

6.00 ಪಿ. ಎಂ.

ಆದರೆ ಉತ್ಪಾದನೆ ಬಗ್ಗೆ ಗಮನ ತೋರಿಸಿಲ್ಲ. ಹಿಂದಿನ ಹತ್ತು ವರ್ಷಗಳಲ್ಲಿ ಏನು 3480 ಮೆಗಾವ್ಯಾಟ್ ಉತ್ಪತ್ತಿ ಆಗುತ್ತಿತ್ತೋ ಅದೇ ಉತ್ಪತ್ತಿ ಇವತ್ತು ಕೂಡ ಮುಂದುವರಿಯುತ್ತಿದೆ. ಆ ಜನರಿಗೆ ಅನ್ಯಾಯವಾಗುತ್ತಿದ್ದುದರ ಪ್ರಯುಕ್ತ ಮೊದಲು ಉತ್ಪತ್ತಿ ಹೆಚ್ಚಿಗೆ ಮಾಡಿ ಅನಂತರ ವಿತರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾವೀಗ ಯೋಜನೆಗಳನ್ನು ಹಾಕುತ್ತಿದ್ದೇವೆ ಮಹಾಸ್ವಾಮಿಗಳೇ, ಎರಡನೆಯದಾಗಿ ಇನ್ನೊಬ್ಬ ಮುಖ್ಯಮಂತ್ರಿಗಳು ಬಂದರು ಭಾಗ್ಯಜ್ಯೋತಿ ಎಂದು ಹೇಳಿದರು. ಶುರುವಾಯಿತು. ನಮ್ಮಲ್ಲಿ 9 ಸಾವಿರ ಭಾಗ್ಯಜ್ಯೋತಿ ಹಾಕಿದರು. ಬಚ್ಚಲು ಮನೆಗೂ ಭಾಗ್ಯಜ್ಯೋತಿಯೇ ಅಡಿಗೆ ಮನೆಗೂ ಭಾಗ್ಯಜ್ಯೋತಿನೇ, ಎಲ್ಲಿ ನೋಡಿದರೂ ಭಾಗ್ಯಜ್ಯೋತಿನೇ. ಈ ವ್ಯವಸ್ಥೆಯನ್ನು ದುರ್ವವಸ್ಥೆ ಮಾಡಿ ಸರ್ಕಾರದ ಯೋಜನೆ ಒಂದು ಯಾವ ರೀತಿ, ಯಾವ ಮಟ್ಟಕ್ಕೆ ತಂದುಕೊಂಡರು ವಿದ್ಯುಚ್ಛಕ್ತಿ ಇಲಾಖೆಯನ್ನು ಎಂದರೆ ಈಗಾಗಲೇ ನಾವು ಪ್ರಸ್ತಾವನೆ ಮಾಡಿದ ಹಾಗೆ ನಾವು ಕನಿಷ್ಟ ಪಕ್ಷ 4 ಗಂಟೆ ಕಾಲ ಉನ್ನತ ವಾದಂತಹ ಒಂದು ವಿದ್ಯುಚ್ಛಕ್ತಿ ಕೊಡಲು ನಿಸ್ಸಹಾಯಕರಾಗಿದ್ದೆವು ಹೋದ ವರ್ಷ. ಇವೆಲ್ಲಾ ಕೂಡ ನಾವೆಲ್ಲ ಏಕೆ ವಿದ್ಯುಚ್ಛಕ್ತಿಯಿಂದ ವಿರಹಿತರಾಗಿದ್ದೆವು, ಬೇರೆ ಕಡೆಯಿಂದ ವಿದ್ಯುತ್ತನ್ನು ಕೇಳಿಕೊಂಡು ತರುವಂತಹ ಒಂದು ಪರಿಸ್ಥಿತಿ ಇತ್ತು. ಆದ್ದರಿಂದ ನಾವು ಆ ಒಂದು ಯೋಜನೆಯನ್ನು ಹಾಕಿಕೊಂಡ ಮೇಲೆ ಪ್ರತಿ ಒಂದು ಗ್ರಾಮದಲ್ಲಿರತಕ್ಕಂಥ ಪ್ರತಿ ಒಬ್ಬ ಎಸ್‌ಸಿ / ಎಸ್‌ಟಿಯವರಿಗೂ ಕೂಡ ಕೊಡತಕ್ಕಂಥ ಪರಿಸ್ಥಿತಿ ಬಂದೇ

ಬರುತ್ತದೆ. ಪ್ರತಿ ಒಬ್ಬರಿಗೂ ಬಡ ರೈತರಿಗೆ ಉನ್ನತವಾದಂತಹ, ಉತ್ತಮವಾದಂತಹ ವಿದ್ಯುಚ್ಛಕ್ತಿ ಒದಗಿಸತಕ್ಕದ್ದನ್ನು ಈ ಒಂದೆರಡು ವರ್ಷಗಳಲ್ಲಿ ಮಾಡುತ್ತೇವೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದರು.

ಉಪಾಧ್ಯಕ್ಷರು :- ತಾವು ಬೇಗ ಮುಗಿಸಬೇಕು.

ಶ್ರೀ ಆರ್. ಶ್ರೀನಿವಾಸ :- 1200 ಮೆಗಾವ್ಯಾಟನ್ನು ನಾವು ಕೊಡುತ್ತೇವೆ. 1200 ಮೆಗಾವ್ಯಾಟನ್ನು ಕೊಟ್ಟಾಗ ನಾವೆಲ್ಲ ನಮ್ಮ ಕಾಲ ಮೇಲೆ ನಿಲ್ಲುತ್ತೇವೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು :- 35 ನಿಮಿಷ ಆಗಿದೆ, ಮುಗಿಸಿ.

ಶ್ರೀ ಆರ್. ಶ್ರೀನಿವಾಸ :- ಆಯಿತು ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಈಗ ಎಲ್ಲಾ ಪ್ರಗತಿಗಳನ್ನು ನಾವು ಸಾಧನೆ ಮಾಡುತ್ತೇವೆ. ಏನು ಇವತ್ತು ಹಿಂದಿನ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಾಗಿದ್ದಾರೆ ಅವರ ಒಂದು ಗುರಿ ಬಡ ಜನರ ಮೇಲೆ ಇರುವುದರಿಂದ...

ಉಪಾಧ್ಯಕ್ಷರು :- ತಾವು ಇಷ್ಟು ಹೊತ್ತು ಮಾತನಾಡಿದರೆ ಬೇರೆಯವರು ಮಾತನಾಡುವವರು ಹೇಗೆ ಮಾಡಬೇಕು?

ಶ್ರೀ ಆರ್. ಶ್ರೀನಿವಾಸ :- ಹಳ್ಳಿಜನ ದೇಶದ ಬೆನ್ನೆಲುಬು ಎಂದು ಇಡೀ ನಮ್ಮ ಭಾರತ ದೇಶದಲ್ಲಿ, ಹೇಳಿ ರೈತ ದೇಶದ ಬೆನ್ನೆಲುಬು ಎಂದು ಘೋಷಣೆ ಮಾಡುತ್ತಿದ್ದಂತಹ ಸರ್ಕಾರದ ಬೆನ್ನೆಲುಬು ಮುರಿದು ಹೋಗಿತ್ತು. ಕ್ಯಾನ್ಸರ್ ಬಂದು ಮುರಿದು ಹೋಗಿತ್ತು ಆ ಸರ್ಕಾರದ್ದು. ಆದರೆ ಈಗ ಆ ಕ್ಯಾನ್ಸರ್‌ಗೆ ಒಳ್ಳೆಯ ಮದ್ದು ಕೊಟ್ಟು ಆ ರೈತರ ಬೆನ್ನೆಲುಬನ್ನು ಗಟ್ಟಿ ಮಾಡುತ್ತಿದ್ದೇವೆ. ಹಿಂದೆ ಅವರು 150 ರೂಪಾಯಿ ಗೊಬ್ಬರವನ್ನು 350 ರೂಪಾಯಿಗೆ ಏರಿಸಿ ಯಾವ ರೀತಿ ಮಾಡಿದ್ದರು ಎಂಬುದು ಇವತ್ತು ನಮಗೆಲ್ಲಾ ಗೊತ್ತಾಗುತ್ತಿದೆ. ಇವತ್ತು ನಾವು ಅದನ್ನು ಕೂಡ ಕೇವಲ 500 ಕೋಟಿ ಸಬ್ಸಿಡಿ ಕೊಡತಕ್ಕಂಥಹ ವ್ಯವಸ್ಥೆಗೆ 2500 ರೂಪಾಯಿ ಸಬ್ಸಿಡಿಗೆ ನಾವು ಏರಿಸಿದ್ದೇವೆ. ಇದು ರೈತರ ಪ್ರಗತಿಪರ ಅಲ್ಲವೇ? ಇದರಿಂದ ರೈತರ ಆರ್ಥಿಕ ಸ್ಥಿತಿ ಉನ್ನತ ಮಟ್ಟಕ್ಕೆ ಹೋಗುವುದಿಲ್ಲವೇ? ಆದ್ದರಿಂದ ಇಲ್ಲಿ ಕೂಡ ಏನು ಮಹಾತ್ಮಾ ಗಾಂಧಿಯವರ ಕನಸನ್ನು ನನಸು ಮಾಡತಕ್ಕಂಥ ಯೋಜನೆಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ, ರಾಜ್ಯ ಸರ್ಕಾರ ಕೂಡ ಹಾಕಿಕೊಂಡಿದ್ದೇವೆ. ಪ್ರತಿ ಒಬ್ಬ ಅಲ್ಪಸಂಖ್ಯಾತರಿಗೂ ಕೂಡ ಒಂದೊಂದು ಮೊರಾರ್ಜಿ ದೇಸಾಯಿ ವಸತಿ ಗೃಹ ಓಪನ್ ಮಾಡುವುದಕ್ಕೆ ಈ ವರ್ಷದಿಂದ ಮಾಡುತ್ತೇವೆ.

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ :- ಅಲ್ಪ ಸಂಖ್ಯಾತರ ಬಗ್ಗೆ ಮಾತನಾಡಲು ಇವರಿಗೆ ಹಕ್ಕೇ ಇಲ್ಲ ಸ್ವಾಮಿ. ಏಕೆ ಇಲ್ಲ ಎಂದು ಹೇಳಿದರೆ ಅದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು :- ತಾವು ಕೂಡಿ ಅವರು ಮಾತನಾಡುವಾಗ ಏಕೆ ಅಡ್ಡಿ ಮಾಡುತ್ತೀರಿ?

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ :- ಇವರು ವಸತಿ ಶಾಲೆ ಪ್ರಾರಂಭ ಮಾಡುತ್ತೇವೆಂದು ಹೇಳಿ....

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :- ಅವರು ಮಾತನಾಡುವಾಗ ಇವರು ಏಕೆ ಹೀಗೆ ಅಡ್ಡಿ ಮಾಡುತ್ತಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು :- ತಾವು ಕೂಡಿ ಸಗೀರ್ ಅಹಮದ್, ಅವರು ಮಾತ ನಾಡುತ್ತಿದ್ದಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಶ್ರೀ ಶಿವರಾಮೇಗೌಡರು ಏನು ಪಂಚಾಯತಿಯ ಸಮಿತಿಯ ಅಧ್ಯಕ್ಷರೇ? ಅಲ್ಲಿ ಬಂದು ಕುಳಿತು ಪಂಚಾಯತಿ ಮಾಡುತ್ತಾರೆ, ಇಲ್ಲಿ ಬಂದು ಕುಳಿತೂ ಪಂಚಾಯತಿ ಮಾಡುತ್ತಾರೆ.

ಉಪಾಧ್ಯಕ್ಷರು :- ತಾವು ಮಂತ್ರಿಯಾಗಿ ಕೆಲಸ ಮಾಡಿದವರು, ಈ ರೀತಿ ಮಧ್ಯೆ ಎದ್ದು ಮತ್ತೊಬ್ಬರಿಗೆ ಅಡ್ಡಿ ಮಾಡಬಾರದು, ತಾವು ಕೂಡಿ. ಶ್ರೀನಿವಾಸ್ ತಾವು ಬೇಗ ಮುಗಿಸಿ ಬಿಡಿ.

ಶ್ರೀ ಆರ್. ಶ್ರೀನಿವಾಸ :- ಇದೆಲ್ಲಾ ಪ್ರಗತಿಗಳನ್ನು ಸಾಧನೆಯನ್ನು ಮಾಡಿದ್ದೇವೆ. ಇವತ್ತು ಅಲ್ಪಸಂಖ್ಯಾತರಿಗೆ ಕೂಡ ರಾಜಕೀಯದಲ್ಲಿ ಸಮಾನತೆ ಮಾಡಿದ್ದೇವೆ. ಪ್ರತಿ ಒಂದರಲ್ಲಿ ಕೂಡ ನಾವು ಸಮಾಜದಲ್ಲಿ ಅವರ ಒಂದು ಮತಗಳನ್ನು ಹಾಕಿಸಿ ಕೊಳ್ಳುತ್ತಿದ್ದರೇ ಹೊರತು ಅವರಿಗೆ ಯಾವುದೇ ಒಂದು ಮೀಸಲಾತಿಯನ್ನು ಇಟ್ಟಿರಲಿಲ್ಲ. ನಾವು ಬಂದ ಮೇಲೆ ಪ್ರತಿ ಒಂದಕ್ಕೆ ಕೂಡ ನಾವು ಮೀಸಲಾತಿಯನ್ನು ಕೊಟ್ಟಿದ್ದೇವೆ. ನನ್ನ ಕ್ಷೇತ್ರದಲ್ಲಿ ಕೂಡ ಇವತ್ತು ತಾಲ್ಲೂಕು ಕೇಂದ್ರದಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದೇವೆ.

ಉಪಾಧ್ಯಕ್ಷರು :- ತಾವು ಹೀಗೆ ಪದೇ ಪದೇ ಏಳಬಾರದು.

ಶ್ರೀ ಸಿ. ಆರ್. ಸಗೀರ್ ಅಹಮದ್ :- ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು :- ತಾವು ಕೂಡಿ, ಅವರು ಯೀಲ್ಡ್ ಆಗಿಲ್ಲ. ಹಾಗೆಲ್ಲ ಮಾಡಬಾರದು.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಪಾಯಿಂಟ್ 'ಆಫ್ ಆರ್ಡರ್ ಇದೆ ಸಾರ್.

ಉಪಾಧ್ಯಕ್ಷರು :- ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ, ತಾವು ಕೂಡಿ. ತಾವು ಬೇಗ ಮುಗಿಸಿ.

ಶ್ರೀ ಆರ್. ಶ್ರೀನಿವಾಸ :- ಇವತ್ತು ನಾನು ಈ ಸದನದಲ್ಲಿ ಬಹಿರಂಗವಾಗಿ ಹೇಳುತ್ತಿದ್ದೇನೆ. ಅವರೂ ರಾಜಕೀಯದಲ್ಲಿ ಇದ್ದವರೇ. ಇವತ್ತು ಚಿಕ್ಕಮಗಳೂರು, ಇದೆ ಅಲ್ಲಿಗೆ ನಾವು ಒಬ್ಬ ಅಲ್ಪಸಂಖ್ಯಾತ ಮಹಿಳೆಯನ್ನು ಮಾಡಿದ್ದೇವೆ. ಅವರು ಘಂಟಾ ಘೋಷವಾಗಿ ಹೇಳಲಿ ಯಾರು ಮಾಡಿದ್ದಾರೆ ಎಂದು. ಮಾಲೂರಿನಲ್ಲಿ ತಾಲ್ಲೂಕು ಸಮಿತಿಗೆ ಮಾಡಿದ್ದೇವೆ. ನನ್ನ ಕ್ಷೇತ್ರದಿಂದ ಕೂಡ ಇವತ್ತು ಮೂರು ಜನ ಪ್ರತಿನಿಧಿ ಆಗಿದ್ದಾರೆ. ಪಂಚಾಯತಿ ಮೆಂಬರ್‌ಗಳು ಆಗಿದ್ದಾರೆ, ಪಂಚಾಯತಿಯ ಛೇರ್ಮನ್‌ಗಳು ಆಗಿದ್ದಾರೆ. ರಾಜಕೀಯದ ಒಂದು ಸಮಾನತೆಯನ್ನು ಮಾಡಿರತ್ಕಕಂಥ ಈ ಒಂದು ಸರ್ಕಾರ ಆದ್ದರಿಂದ ಅವರಿಗೆ ಇದರ ಬಗ್ಗೆ ಮಾತನಾಡಲು ನೈತಿಕ ಹಕ್ಕು ಇಲ್ಲ ಎಂದು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ಎಲ್ಲಾ ವಿಧದಲ್ಲಿ ಕೂಡ ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರತಿ ಒಂದರಲ್ಲಿಯೂ ಕೂಡ ಸಮಾನತೆಯನ್ನು ಜಾತ್ಯಾತೀತವಾಗಿ ನಡೆಸತಕ್ಕಂಥ ಸರ್ಕಾರಕ್ಕೆ ನಾವೆಲ್ಲ ಕೂಡ ಪ್ರತ್ಯೇಕವಾಗಿ ಮಾಡಿದ್ದೇವೆ. ಇವತ್ತು ಏನು ವಸತಿ ಗೃಹ ಮಾಡುತ್ತಿದ್ದೇವೆ. ಇವತ್ತು ಲೇಬರ್ ಆಕ್ಟ್ ಬಂದಾಗ ಬೀಡಿ ಕಾರ್ಮಿಕರಿಗೆ ವಸತಿ ಕೊಡತಕ್ಕಂಥ ಒಂದು ಯೋಜನೆಯನ್ನು ಹಾಕಿ ಪಟ್ಟಣಗಳಲ್ಲಿರತಕ್ಕ ಪ್ರತಿಒಬ್ಬ ಬೀಡಿ ಕಾರ್ಮಿಕರಿಗೂ ಇವತ್ತು ವಸತಿಯನ್ನು ಮಾಡುತ್ತಿದ್ದೇವೆ.

ಉಪಾಧ್ಯಕ್ಷರು :- ತಾವು ಬೇಗ ಮುಗಿಸಿ...

ಶ್ರೀ ಆರ್. ಶ್ರೀನಿವಾಸ :- ಈ ಸರ್ಕಾರ ಮಾಡಿರತಕ್ಕಂಥ...

ಉಪಾಧ್ಯಕ್ಷರು :- ಮತ್ತೊಬ್ಬರು ಮಾತನಾಡುವಾಗ ಹೇಗೆ ತೊಂದರೆ ಕೊಟ್ಟರೆ ಹೇಗೆ? ಮಾನ್ಯ ಪ್ರಕಾಶ್‌ಅವರೇ ಕೂಡಿ. ತಾವು ಬೇಗ ಮುಗಿಸಿ ಶ್ರೀನಿವಾಸ್.

ಶ್ರೀ ಆರ್. ಶ್ರೀನಿವಾಸ್ :- ಇದೆಲ್ಲಾ ಮಾಡಿರುವುದರಿಂದ ಈ ಸರ್ಕಾರದ ಮೇಲೆ ಯಾವುದೇ ವಿಧವಾದಂತಹ ವಿರೋಧವನ್ನು ಮಾಡತಕ್ಕಂತಹ ಹಕ್ಕು ಅವರಿಗೆ ಇಲ್ಲ. ಅವರು ಈಗಾಗಲೇ 45 ವರ್ಷ ಆಡಳಿತ ನಡೆಸಿ ವಿಫಲವಾಗಿದ್ದಾರೆ. ವಿಫಲವಾಗಿ ಅವರು ಇವತ್ತು 375 ರಿಂದ 36 ಕ್ಕೆ ಇಳಿದಿರುವುದರಿಂದ ಅವರು ದಯವಿಟ್ಟು ಇವತ್ತಿನ ದಿನ ಅಲ್ಲಿ ಕುಳಿತುಕೊಳ್ಳಬೇಕು. ಬೇಕಾದರೆ ಬಿಜೆಪಿಯವರು ಇನ್ನೂ ಅಧಿಕಾರ ನೋಡಿಲ್ಲ, ಅವರು ನೋಡುವುದಕ್ಕೂ ಆಗುವುದಿಲ್ಲ. ಅವರೂ ಕೂಡ ಟೀಕೆ ಮಾಡುವುದರಿಂದ 40 ರಿಂದ 4 ಸೀಟಿಗೆ ಬರತಕ್ಕ ಸ್ಥಿತಿ ಇರುವುದರಿಂದ ನಮ್ಮ ಸರ್ಕಾರ.....

(ಗೊಂದಲ)

ಶ್ರೀ ಆರ್. ಶ್ರೀನಿವಾಸ :- ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ, ಅವಕಾಶ ಕೊಟ್ಟ ತಮಗೆ ವಂದನೆಗಳು.

ಉಪಾಧ್ಯಕ್ಷರು :- ಈಗ ಶಿವರಾಮೇಗೌಡರು ಮಾತನಾಡುತ್ತಾರೆ. ಅವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಸರ್ಕಾರದ ಪರ ಇದ್ದವರು ಶ್ರೀನಿವಾಸ್ ಅವರು ಮಾತನಾಡಿದರು. ಈಗ ಈ ಕಡೆಯವರಿಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :- ಅವರು ನಿನ್ನೆಯಿಂದ ಮಾತನಾಡಲು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಆಗಲಿ, ಇಬ್ಬರು ಸರ್ಕಾರದ ಪರ ಇರುವವರಿಗೆ ಮಾತನಾಡಲು ಅವಕಾಶ ಏಕೆ ಕೊಡುತ್ತೀರಿ?

ಉಪಾಧ್ಯಕ್ಷರು :- ಇಬ್ಬರೂ ಮಾತನಾಡಿಯೇ ಇಲ್ಲ. ಸರ್ಕಾರದ ಪರವಾಗಿ ಮಾತನಾಡುತ್ತಾರೋ, ವಿರೋಧವಾಗಿ ಮಾತನಾಡುತ್ತಾರೋ ಹೇಗೆ ಗೊತ್ತಾಗುವುದು. ಈಗ ಅವರು ಮಾತನಾಡಲಿ, ಆಮೇಲೆ ನೋಡೋಣ.

(ಗೊಂದಲ)

ಉಪಾಧ್ಯಕ್ಷರು :- ಶ್ರೀರಾಮರೆಡ್ಡಿಯವರೇ ಕುಳಿತುಕೊಳ್ಳಿ.

(ಗೊಂದಲ)

+ **ಶ್ರೀ ಎಲ್. ಆರ್. ಶಿವರಾಮೇಗೌಡ** (ನಾಗಮಂಗಲ) :- ಮಾನ್ಯ ಉಪಾಧ್ಯಕ್ಷರೇ, ನನ್ನನ್ನು ತಾವು ಮಾತನಾಡಲು ಕರೆದಿದ್ದೀರಿ. ಇವತ್ತು ಸುಮಾರು 19 ಬೇಡಿಕೆಗಳನ್ನು ಬೆಂಬಲಿಸಿ ಪ್ರಪ್ರಥಮವಾಗಿ ನಾಲ್ಕು ಮಾತುಗಳನ್ನು, ನಾಲ್ಕು ಸಲಹೆ ಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ಹೇಳಿ ಬಯಸುತ್ತೇನೆ. ಇವತ್ತು ಶಿಕ್ಷಣ ಇಲಾಖೆ ಬಹಳ ಒತ್ತನ್ನು ಕೊಟ್ಟಿರತಕ್ಕದ್ದನ್ನು ನಾವು ನೋಡಿದ್ದೇವೆ. ಏಕೆಂದು ಹೇಳಿದರೆ ರಂಗ ನಾಥ್‌ಅವರು ವೀರಪ್ಪ ಮೊಯಿಲಿಅವರು, ನಾಗಮ್ಮ ಕೇಶವ-ಮೂರ್ತಿಯವರು, ಗೋವಿಂದೇ ಗೌಡರು, ಮಂಜುನಾಥ್‌ಅವರು, ಸೋಮಶೇಖರ್‌ಅವರುಗಳು ಈ ಒಂದು ಇಲಾಖೆ ಯನ್ನು ಪ್ರತಿನಿಧಿಸತಕ್ಕಂಥ ಈ ಇಲಾಖೆಯ ಜವಾಬ್ದಾರಿಯನ್ನು ಇಟ್ಟುಕೊಂಡಿರತಕ್ಕಂಥ ಈ ಸಂದರ್ಭದಲ್ಲಿ, ಈ ಇಲಾಖೆಗೆ ಒಂದು ಹೊಸ ಕಾಯಕಲ್ಪವನ್ನು ಅವರೆಲ್ಲರೂ ಸಹ ಕೊಟ್ಟುಕೊಂಡೇ ಬಂದಿದ್ದಾರೆ. ಇವತ್ತು ಯಾವುದೇ ಸರ್ಕಾರ ಇರಬಹುದು, ಯಾವುದೇ ಸರ್ಕಾರ ಇಲ್ಲದೇ ಇರಬಹುದು. ಯಾರೇ ಸರ್ಕಾರ ಆಳಿರಬಹುದು. ಇವತ್ತು ವಿದ್ಯಾ ಇಲಾಖೆಗೆ ಸಾಕಷ್ಟು ಒತ್ತು ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಇವತ್ತು ಶಿಕ್ಷಣ ಇಲಾಖೆ ಎಂದು ಹೇಳಿದರೆ ಮನುಷ್ಯನಿಗೆ ಜ್ಞಾನವನ್ನು ಕೊಡತಕ್ಕಂಥ ಒಂದು ಮಹತ್ತರವಾಗಿರತಕ್ಕಂಥ ಇಲಾಖೆ. ಈ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕು

ಎನ್ನತಕ್ಕದ್ದೇ ಎಲ್ಲಾ ಸರ್ಕಾರಗಳ ಆಸೆ ಎಂದು ನಾನು ಅಂದುಕೊಂಡಿದ್ದೇನೆ. ಗಾಳಿ, ಬೆಳಕು, ಆಹಾರ ಇವು ಮನುಷ್ಯನಿಗೆ ಎಷ್ಟು ಪ್ರಾಮುಖ್ಯವೋ ಶಿಕ್ಷಣ ಎನ್ನುವುದು ಮನುಷ್ಯನಿಗೆ ಅಷ್ಟೇ ಪ್ರಾಮುಖ್ಯವಾಗಿರುವುದರಿಂದ ಕ್ರಿ. ಶ. 2000 ಇಸವಿಯ ಹೊತ್ತಿಗೆ ರಾಷ್ಟ್ರದಲ್ಲಿರುವ ಎಲ್ಲಾ ಜನರನ್ನೂ ಸಂಪೂರ್ಣ ಸಾಕ್ಷರರನ್ನಾಗಿ ಮಾಡಬೇಕೆಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕೋಸ್ಕರ ಖರ್ಚು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವೊತ್ತಿನ ಆಯ-ವ್ಯಯದಲ್ಲಿ ಶಿಕ್ಷಣ ಇಲಾಖೆಗೆಂದೇ 1,700 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಇಷ್ಟು ಪ್ರಮಾಣದಲ್ಲಿ ಹಣ ಕೊಟ್ಟರೂ ಸಹ ಶೇಕಡ 60 ಭಾಗದಷ್ಟು ಹಣವನ್ನು ಬರೀ ಸಂಬಳಕ್ಕೆ ಮೀಸಲಾಗಿಡತಕ್ಕ ಈ ಇಲಾಖೆಯನ್ನು ಇತರ ಎಲ್ಲಾ ಇಲಾಖೆಗಳಿಗೆ ಹೋಲಿಸಿದರೆ ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ಬಹಳ ಕಡಿಮೆ. ಭ್ರಷ್ಟಾಚಾರ ಇಲ್ಲದಿರುವ ಯಾವುದಾದರೂ ಇಲಾಖೆ ಸರ್ಕಾರದಲ್ಲಿ ಇದೆಯೆಂದರೆ ಅದು ಶಿಕ್ಷಣ ಇಲಾಖೆಯೆಂದು ನಾವೆಲ್ಲರೂ ಸಹ ಒಪ್ಪಿಕೊಳ್ಳಬೇಕಾಗುತ್ತದೆ. ಇವೊತ್ತಿನ ಶಿಕ್ಷಣದ ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ. ಸರ್ಕಾರ ಇಷ್ಟೆಲ್ಲಾ ಹಣ ಖರ್ಚು ಮಾಡಿ ಕ್ರಮ ತೆಗೆದುಕೊಂಡರೂ ಸಹ ಈ ರಾಜ್ಯದಲ್ಲಿ ಶಿಕ್ಷಣದ ಮಟ್ಟ ಕುಸಿಯುತ್ತಿದೆ. ಆದುದರಿಂದ, ಶಿಕ್ಷಣದ ಮಟ್ಟವನ್ನು ಪ್ರಾಥಮಿಕ ಹಂತದಲ್ಲಿ ಬಲಪಡಿಸದಿದ್ದರೆ ಮುಂದೆ 'ಆಗಿರತಕ್ಕಂಥ ಅನಾಹುತಗಳು ಎಷ್ಟೆಂಬುದರ ಬಗ್ಗೆ ಯೋಚಿಸಬೇಕಾಗುತ್ತದಾದ್ದರಿಂದ ನಾವು ಇವೊತ್ತು ಪ್ರಾಥಮಿಕ ಹಂತದಲ್ಲಿ ಶಿಕ್ಷಣವನ್ನು ಬಲಪಡಿಸಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾಥಮಿಕ, ಮತ್ತು ಮಾಧ್ಯಮಿಕ ಶಾಲೆಗಳೇನಿವೆ, ಅವುಗಳನ್ನು ಬಲಪಡಿಸಿ ಪುನಶ್ಚೇತನ ಗೊಳಿಸಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಇವೊತ್ತು ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ, ನನ್ನ ಕ್ಷೇತ್ರದ ವ್ಯಾಪ್ತಿಗೊಳಪಡುವ ನಾಗಮಂಗಲ ತಾಲ್ಲೂಕಿನಲ್ಲಿ ಎಂಟು ಜ್ಯೂನಿಯರ್ ಕಾಲೇಜುಗಳಿದ್ದು, ನಾಗಮಂಗಲ ದಲ್ಲಿರುವ ಜ್ಯೂನಿಯರ್ ಕಾಲೇಜಿನಲ್ಲಿ ವಿಜ್ಞಾನ ಭೋದಿಸುವ ಶಿಕ್ಷಕರಿಲ್ಲ. ಸರ್ಕಾರ ಚೆನ್ನಾಗಿದ್ದು, ಹಿಂದೆ ಆಡಳಿತ ನಡೆಸಿದಂಥ ಎಲ್ಲಾ ಸರ್ಕಾರಗಳೂ ಕೂಡ ಒತ್ತು ಕೊಟ್ಟಿವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ. ಆರ್. ಸಗೀರ್ ಅಹಮದ್ ರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರೇ, ನೀವು ನನ್ನ ರಕ್ಷಣೆಗೆ ಬರಬೇಕು. ನನ್ನ ಸಹೋದ್ಯೋಗಿ ಯಾಗಿರುವ ಸಗೀರ್ ಅಹಮದ್‌ರವರು ಹಿಂದೆ ಸಚಿವರಾಗಿದ್ದಂಥವರು. ನಾನು ಯೀಲ್ಡ್ ಆದರೆ ಮಾತ್ರ ನೀವು ಮಾತನಾಡಿ. ನಾನು ಯೀಲ್ಡ್ ಆಗದಿದ್ದರೂ ನೀವು ಎದ್ದು ನಿಂತು ಏಕೆ ತೊಂದರೆ ಕೊಡುತ್ತಿದ್ದೀರಿ? ಎಲ್ಲಾ ಸರ್ಕಾರಗಳೂ ಕೂಡ ಶಿಕ್ಷಣದ ಬಗ್ಗೆ ಚೆನ್ನಾಗಿ ಕೆಲಸ ಮಾಡಿವೆ. ಆದರೂ ಗ್ರಾಮಾಂತರ ಮಟ್ಟದಲ್ಲಿ ವೈಫಲ್ಯತೆ ಕಾಣುತ್ತಿದ್ದೇವೆ. ಮೊದಲು ಇದನ್ನು ಸರಿಪಡಿಸಬೇಕೆಂಬುದು ನನ್ನ ಸಲಹೆಯಾಗಿದೆ. ಇವೊತ್ತು ನಾಗಮಂಗಲ ಜ್ಯೂನಿಯರ್ ಕಾಲೇಜಿನಲ್ಲಿ ವಿಜ್ಞಾನ ಶಿಕ್ಷಕರ ಹುದ್ದೆ ಖಾಲಿ ಇದೆ, ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಖಾಲಿ ಇದೆ, ಪ್ರಯೋಗ ಶಾಲೆಯ ಸಹಾಯಕ ಶಿಕ್ಷಕರ ಹುದ್ದೆ

ಖಾಲಿ ಇದೆ ಅದೇ ರೀತಿ ಕನ್ನಡ ಉಪನ್ಯಾಸಕರ ಹುದ್ದೆ, ಉರ್ದು ಉಪನ್ಯಾಸಕರ ಹುದ್ದೆ, ರಾಜ್ಯಶಾಸ್ತ್ರ ಉಪನ್ಯಾಸಕರ ಹುದ್ದೆ ಮತ್ತು ಲೈಬ್ರರಿಯನ್ ಹುದ್ದೆಗಳು ಖಾಲಿ ಇವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಎಲ್ಲಾ ಕೊರತೆಗಳು ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಹುಟ್ಟಿದವುಗಳಲ್ಲ. ಈ ಕೊರತೆಗಳು ಬಹಳ ದಿವಸಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿದ್ದು ಕಿತ್ತು ತಿನ್ನುತ್ತಿರುವ ಸಮಸ್ಯೆಗಳಾಗಿವೆ. ಈ ಸಮಸ್ಯೆಗಳನ್ನು ಸಾಕಷ್ಟು ಸುಧಾರಣೆ ಮಾಡಿದರೂ ಸಹ ಸುಧಾರಣೆ ಮಾಡಬೇಕಾಗಿರುವುದು ಇನ್ನೂ ಇದೆಯೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಉದಾಹರಣೆಗೆ, ಇವೊತ್ತು ಬಿಂಡಿಗನವಿಲೆಯಲ್ಲಿ ಒಂದು ಜ್ಯೂನಿಯರ್ ಕಾಲೇಜು ಇದ್ದು, ಸದರಿ ಕಾಲೇಜಿನಲ್ಲಿ ಉಪಾಧ್ಯಾಯರ ನಾಲ್ಕು ಹುದ್ದೆಗಳ ಕೊರತೆ ಇದ್ದು, ಹಾಗೆಯೇ ಬೆಳ್ಳೂರಿನ ಕಾಲೇಜಿನಲ್ಲಿ ಎರಡು ಉಪನ್ಯಾಸಕರ ಹುದ್ದೆ ಖಾಲಿ ಇವೆ. ನನ್ನ ಒಂದು ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ ಈ ಎಲ್ಲಾ ಹುದ್ದೆಗಳು ಖಾಲಿ ಇರುವುದರಿಂದ ಬಡ ಬೋರೇಗೌಡನ ಮಗ ನಮ್ಮೂರಿನ ಜ್ಯೂನಿಯರ್ ಕಾಲೇಜಿನಲ್ಲಿ ಓದಿದಂತಹವನು, ಆ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಿಲ್ಲ, ಇಂಗ್ಲೀಷ್ ಬೋಧಿಸುವ ಉಪನ್ಯಾಸಕರಿಲ್ಲ, ವಿಜ್ಞಾನ ಶಾಸ್ತ್ರದ ಶಿಕ್ಷಕರಿಲ್ಲ, ಇಂತಹ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದಂಥ ಹುಡುಗ ಬೆಂಗಳೂರು ಮಹಾನಗರದಲ್ಲಿರುವ ಬಿಶಪ್ ಕಾಟನ್, ಪೂರ್ಣಪ್ರಜ್ಞ, ನ್ಯಾಶನಲ್ ಹೈಸ್ಕೂಲ್ ಮುಂತಾದ ಹೆಸರಾಂತ ದೊಡ್ಡ ದೊಡ್ಡ ಕಾನ್ವೆಂಟ್‌ಗಳಲ್ಲಿ ಓದುವ ಸಿರಿವಂತರ ಮಕ್ಕಳ ಜೊತೆ ಪೈಪೋಟಿ ಮಾಡಬೇಕಾಗಿದ್ದರೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಎಷ್ಟರಮಟ್ಟಿಗೆ ನಾವು ಕಲ್ಪಿಸಿಕೊಡುತ್ತಿದ್ದೇವೆಂಬುದರ ಬಗ್ಗೆ ಚಿಂತಿಸ ಬೇಕಾಗಿದೆ. ಯಾವುದೇ ಸರ್ಕಾರ ಹಿಂದೆ ಅಧಿಕಾರಕ್ಕೆ ಬಂದಿದ್ದಾಗ ಶಿಕ್ಷಣಕ್ಕೆ ಸಾಕಷ್ಟು ಒತ್ತು ಕೊಟ್ಟಿದೆಯೆಂಬ ಮಾತನ್ನು ನಾವು ಒಪ್ಪುತ್ತೇವೆ. ಆದರೂ ಇನ್ನೂ ಈ ಕೊರತೆಯನ್ನು ನೀಗಿಸುವುದಕ್ಕಾಗಿಲ್ಲ. ಆದರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ 9850 ಶಿಕ್ಷಕರನ್ನು ನೇಮಿಸಿಕೊಂಡಿದ್ದು, ಇನ್ನೂ 18 ಸಾವಿರದಷ್ಟು ಶಿಕ್ಷಕರ ಹುದ್ದೆ ಕೊರತೆ ಇದೆ ಎಂದ ಮಾತ್ರಕ್ಕೆ ಇದರ ಬಗ್ಗೆ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆಯೆಂಬ ಮಾತನ್ನು ನಾನು ಹೇಳುತ್ತಿಲ್ಲ, ಇನ್ನೂ ಹೆಚ್ಚಾಗಿ ಕೆಲಸ ಮಾಡಬೇಕು. ಎಲ್ಲೆಲ್ಲಿ ಹುದ್ದೆಗಳ ಕೊರತೆ ಕಂಡು ಬರುತ್ತದೋ ಅಲ್ಲಿ ತುಂಬಬೇಕು. ಈ ಕೊರತೆಗಳೆಲ್ಲವನ್ನೂ ಸರಿಪಡಿಸಬೇಕೆಂಬುದೇ......

(ಈ ಹಂತದಲ್ಲಿ ಪುನಃ ಮಾನ್ಯ ಸದಸ್ಯರಾದ ಸಗೀರ್ ಅಹಮದ್‌ರವರು ಮಾತನಾಡಲು ಎದ್ದು ನಿಂತರು)

ಮಾನ್ಯ ಉಪಾಧ್ಯಕ್ಷರೇ, ನೀವು ನನ್ನ ರಕ್ಷಣೆಗೆ ಬರಬೇಕು. ಇದರ ಬಗ್ಗೆ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು :- ಹಿಂದೆ ಮಂತ್ರಿಗಳಾಗಿದ್ದವರು, ಹಿರಿಯ ಸದಸ್ಯರಾಗಿರು ವುದರಿಂದ ಮಾನ್ಯ ಸದಸ್ಯರು ಮಾತನಾಡುವಾಗ ಈ ರೀತಿ ಅಡಚಣೆಯುಂಟು ಮಾಡಬಾರದು. ಅವರು ಯೀಲ್ಡ್ ಆದರೆ ಮಾತ್ರ ತಾವು ಎದ್ದು ನಿಂತು ಮಾಡಬೇಕು. ಅವರು ಯೀಲ್ಡ್ ಆಗಿಲ್ಲವಾದ್ದರಿಂದ ತಾವು ಕುಳಿತುಕೊಳ್ಳಬೇಕು.

ಶ್ರೀ. ಸಿ. ಆರ್. ಸಗೀರ್ ಅಹಮದ್ :- ಅವರು ವಿದ್ಯಾ ಇಲಾಖೆ ಬಗ್ಗೆ ಮಾತನಾಡುತ್ತಿದ್ದಾರೆ....

ಉಪಾಧ್ಯಕ್ಷರು :- ನೀವು ಅವರ ಕಡೆ ಲಕ್ಷ್ಯ ವಹಿಸಬೇಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಅವರ ಕಡೆ ನೋಡುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ......

ಶ್ರೀ ಬಿ. ಎ. ಮೊಯ್ದೀನ್ :- ಇಷ್ಟು ಜನ ಮಂತ್ರಿಗಳು ಯಾವ ಕಾಲದಲ್ಲಿ ಇದ್ದರು?

ಶ್ರೀ ಸಿ. ಆರ್. ಸಗೀರ್ ಅಹಮದ್ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ಪ್ರಶ್ನೆ ಹಾಕಿದ್ದಾರೆ. (ಜನತಾ ದಳ) ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಇವರ ಕೂಗಾಟವನ್ನು ನೀವು ಕೇಳಬೇಕಾಗಿತ್ತು. ಆಗ ಮಾನ್ಯ ಮುಖ್ಯ ಮಂತ್ರಿಗಳು ಏನೇ ಹೇಳಿದರೂ, ಮಾತನಾಡಿದರೂ ಸಭಾತ್ಯಾಗ, ಧರಣಿ ಮಾಡುತ್ತಿದ್ದರು. ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರಾವಧಿಯಲ್ಲಿ ಸದನದ ಬಾವಿ ಖಾಲಿಯಾಗಿ ಇರುತ್ತಿರಲಿಲ್ಲ, ಇವರುಗಳು ಮಾಡುತ್ತಿದ್ದ ಧರಣಿಯಿಂದ ದಿನದ 24 ಗಂಟೆಗಳೂ ಬಾವಿ ತುಂಬಿರುತ್ತಿತ್ತು. ಈಗ ನಾವು ವಿರೋಧ ಪಕ್ಷದಲ್ಲಿರುವುದರಿಂದ ಗೌರವದಿಂದ ಇತ್ತ ಕಡೆ ಕುಳಿತುಕೊಂಡಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಸದಸ್ಯರಾದ ಸಗೀರ್ ಅಹಮದ್ ರವರು ಹೇಳುತ್ತಿರುವುದು ನೂರಕ್ಕೆ ನೂರು ಸತ್ಯ. ನಾವು ವಿರೋಧ ಪಕ್ಷದಲ್ಲಿದ್ದಾಗ ಧರಣಿ ಮಾಡುತ್ತಿದ್ದೆವು. ಆದರೆ, ಅವರ ಪರಿಸ್ಥಿತಿ ಹೇಗಿತ್ತು ಎಂದರೆ, ಅವರು ಆಡಳಿತ ಪಕ್ಷದಲ್ಲಿದ್ದಾಗ, ಆಡಳಿತ ಪಕ್ಷದವರೇ ಧರಣಿ ಮಾಡುತ್ತಿದ್ದರು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಆಗ ವಿರೋಧ ಪಕ್ಷದವರ ಸಂಖ್ಯಾಬಲ ಕಡಿಮೆ ಇತ್ತೆಂದು ಆ ರೀತಿ ಮಾಡುತ್ತಿದ್ದೆವು.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷರೇ, ನನ್ನ ವಿನಂತಿ ಇಷ್ಟೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಸರ್ಕಾರ ಐದು ಕೃಪಾಂಕಗಳನ್ನು ಏನು ಕೊಡುತ್ತಿರುವ ವಿದ್ಯಾಭ್ಯಾಸವನ್ನು ಸರಿಸಮನಾಗಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಕೊಡಿ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸರಿಸಮಾನವಾಗಿ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಆಗದಿದ್ದರೆ ಕನಿಷ್ಠ ಪಕ್ಷ ಅವರಿಗೆ ಹೆಚ್ಚುವರಿಯಾಗಿ ಇಪ್ಪತ್ತೈದು ಅಂಕಗಳನ್ನು ಕೊಡಬೇಕು. ಮೆಡಿಕಲ್ ಕಾಲೇಜು ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಶಿಕ್ಷಣ ಪಡೆಯಲು ಗ್ರಾಮಾಂತರ ಪ್ರದೇಶದಿಂದ ಬಂದಂಥ ವಿದ್ಯಾರ್ಥಿಗಳಿಗೆ ಇಪ್ಪತ್ತೈದು

ಅಂಕಗಳನ್ನು ಒದಗಿಸಿಕೊಟ್ಟರೆ ಇವೊತ್ತು ಅವರು ವಿದ್ಯಾಭ್ಯಾಸದಲ್ಲಿ ಎಲ್ಲರಂತೆ, ಮೇಲಕ್ಕೆ ಬರಲು ಸೇರಿಸಿಕೊಡಬೇಕು. ಇಲ್ಲದಿದ್ದರೆ. ಹುದ್ದೆಗಳನ್ನು ಕಲ್ಪಿಸಿಕೊಡುವಾಗ ಶೇಕಡ ನಲವತ್ತರಷ್ಟು ಸೇರಿಸಿಕೊಡಬೇಕು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವೊತ್ತು ರಾಜ್ಯಮಟ್ಟದಿಂದ ರಾಷ್ಟ್ರಮಟ್ಟದವರೆವಿಗೂ ನಮ್ಮವರೇ ಆಡಳಿತ ನಡೆಸುತ್ತಿರುವುದರಿಂದ ಈ ಕುರಿತು ಏನಾದರೊಂದು ಹೊಸ ಚಿಂತನೆ ನಡೆಯಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಡ ಮಕ್ಕಳೇನಿದ್ದಾರೆ, ಅಲ್ಲಿನ ಶಾಲಾ-ಕಾಲೇಜುಗಳಲ್ಲಿ ಉಪಾಧ್ಯಾಯರಿಲ್ಲ, ಪ್ರಯೋಗ ಶಾಲೆ ಇಲ್ಲ, ಆಟದ ಮೈದಾನವಿಲ್ಲ, ಈ ಎಲ್ಲಾ ಕೊರತೆಗಳಿಂದ ಕೂಡಿರುವ ಶಾಲಾ-ಕಾಲೇಜುಗಳಲ್ಲಿ ಓದಿದಂಥ ಬಡ ಬೋರೇಗೌಡನ ಮಕ್ಕಳು ಇವೊತ್ತು ಬೆಂಗಳೂರು ಮಹಾನಗರದ ಹೆಸರಾಂತ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ಸಿರಿಗೌಡನ ಮಕ್ಕಳ ಜೊತೆ ಪೈಪೋಟಿ ನಡೆಸಬೇಕಾಗಿದೆ. ಸರ್ಕಾರಿ ಅಧಿಕಾರಿಗಳು ತಮ್ಮ ಮಕ್ಕಳನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಪ್ರತಿಷ್ಠಿತ ಶಾಲಾ-ಕಾಲೇಜುಗಳಲ್ಲಿ ವಿದ್ಯಾಭ್ಯಾಸಕೊಡಿಸುವುದಲ್ಲದೆ, ಅಲ್ಲಿ ಪಾಠ ಮುಗಿದ ತಕ್ಷಣ ಮನೆ ಟ್ಯೂಶನ್ ವ್ಯವಸ್ಥೆಯನ್ನೂ ಕಲ್ಪಿಸಿಕೊಡುತ್ತಾರೆ. ಇವರ ಮಕ್ಕಳು ಬಿಶಪ್ ಕಾಟನ್ ಅಥವಾ ಪೂರ್ಣಪ್ರಜ್ಞ ಅಥವಾ ಬಾಲ್ಡ್‌ವಿನ್ ಮುಂತಾದ ಪ್ರತಿಷ್ಠಿತ ಶಾಲೆಗಳಿಗೆ ಹೋಗುತ್ತಿದ್ದರೆ, ಮೂರು ಗಂಟೆಗಳಿಗೊಂದು ಸಾರಿ ಮಕ್ಕಳಿಗೆ ಊಟ ಕಳುಹಿಸುತ್ತಾರೆ, ಆದರೆ, ನಮ್ಮ ಬಡ ಬೋರೇಗೌಡನ ಮನಗನಿಗೆ ಸಾಯಂಕಾಲದ ತನಕ ಊಟ ಕೊಡತಕ್ಕಂಥವರು ಗತಿ ಇಲ್ಲ. ಇಂತಹ ಪರಿಸ್ಥಿತಿಯಿರುವಾಗ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇವೊತ್ತು ಕೇಂದ್ರದಲ್ಲಿ ಬಡ ಬೋರೇಗೌಡನ ಸರ್ಕಾರ ಅಧಿಕಾರದಲ್ಲಿರುರ ಸಂದರ್ಭದಲ್ಲಿ ಹಾಗೂ ರಾಜ್ಯದಲ್ಲಿ ಸಮಾಜವಾದದ ಹಿನ್ನೆಲೆಯಿಂದ ಬಂದಿರತಕ್ಕ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರ ನೇತೃತ್ವದಲ್ಲಿ ರಚಿಸಲಾಗಿರುವ ಮಂತ್ರಿಮಂಡಲದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿರುವ ಶ್ರೀ ಗೋವಿಂದೇಗೌಡರು ಬಹಳ ಪ್ರಾಮಾಣಿಕ ವ್ಯಕ್ತಿ, ಅವರ ವ್ಯಕ್ತಿತ್ವದ ಬಗ್ಗೆ ಯಾರೂ ಸಹ ಬೆರಳು ಮಡಚುವ ಹಾಗಿಲ್ಲ. ತಪ್ಪಿದ್ದರೆ ತಪ್ಪು ಎಂದು ಹೇಳೋಣ. ಶಿಕ್ಷಣ ಇಲಾಖೆಯನ್ನು ಮೇಲಕ್ಕೆ ತರಬೇಕೆಂದು ಹಗಲಿರುಳೂ ಪ್ರಾಮಾಣಿಕವಾಗಿ ಶ್ರಮ ವಹಿಸುತ್ತಿರುವ ಗೋವಿಂದೇಗೌಡರು ಎಷ್ಟರಮಟ್ಟಿಗೆ ಒತ್ತುಕೊಡುತ್ತಾರೆ? ನನ್ನ ಪ್ರಶ್ನೆಯೇನೆಂದರೆ, ನೀವು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕಲ್ಪಿಸುವ ಐದರಷ್ಟು ಕೃಪಾಂಕ ನಮಗೆ ಬೇಕಾಗಿಲ್ಲ, ಇದರಲ್ಲಿ ಸರ್ಕಾರದ ಮುಲಾಜು ಬೇಕಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಓದಿದಂಥ ವಿದ್ಯಾರ್ಥಿಗಳಿಗೆ ಇವೊತ್ತು ಇಪ್ಪತ್ತೈದು ಅಂಕಗಳನ್ನು ಕೊಡದಿದ್ದರೆ ನೇರವಾಗಿ ವಿಧಾನಸೌಧದಿಂದಲೇ ಬಡ ಬೋರೇಗೌಡನ ಮಕ್ಕಳು ಒಂದು ಕಡೆ ಮತ್ತು ಸಿರಿಗೌಡನ ಮಕ್ಕಳು ಇನ್ನೊಂದುಕಡೆ ಇಡುವಂಥ ತೀರ್ಮಾನವನ್ನು ನೀವೇ ಮಾಡುತ್ತೀರಿ. ಇದು ತಪ್ಪಬೇಕು. ಇದನ್ನು ತಪ್ಪಿಸಬೇಕಾಗಿದ್ದರೆ ಬಹಳ ವ್ಯವಸ್ಥಿತವಾಗಿ ಓದಿದಂಥ ಮಕ್ಕಳ ಜೊತೆ ಗ್ರಾಮೀಣ ಪ್ರದೇಶದಿಂದ ಬಂದಂಥ ಮಕ್ಕಳು ಪೈಪೋಟಿ ನಡೆಸಬೇಕಾಗಿದ್ದರೆ, ಅವರಿಗೆ ಕೊನೇ ಪಕ್ಷ 25 ಕೃಪಾಂಕಗಳನ್ನು .....ಅದನ್ನು ಕೃಪಾಂಕವೆಂದು ಹೇಳಬೇಡಿ, ಇಪ್ಪತ್ತೈದು ಅಂಕಗಳನ್ನು ನೀವು ಕೊಡಿಸುವ ವ್ಯವಸ್ಥೆಯನ್ನು ನೀವು

ಮಾಡಬೇಕು. ಉದಾಹರಣೆಗೆ, ಇವೊತ್ತು ಕೆ.ಎಸ್.ಆರ್.ಟಿ.ಸಿವ ಹುದ್ದೆಗಳಿಗೆ ಅಭ್ಯರ್ಥಿ ಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಎಲ್ಲರಿಗೂ ಶೇಕಡ 30-40 ರಷ್ಟು ಮೀಸಲಾತಿ ಕಲ್ಪಿಸಬೇಕೆಂದರೆ, ವಿಧಾನಸೌಧದಲ್ಲಿ ಮತ್ತು ಎಲ್ಲಾ ಸರ್ಕಾರಿ ಕಛೇರಿಗಳಲ್ಲೂ ನಾಗಮಂಗಲ ಮತ್ತು ಕುಣಿಗಲ್‌ನ ನೌಕರರುಗಳೇ ನೂರಕ್ಕೆ ನೂರರಷ್ಟಿದ್ದು, ಅವರು ಖಾಲಿ ಮಾಡಬೇಕಾಗುತ್ತದೆ, ಅವರುಗಳನ್ನೇ ನೂರಕ್ಕೆ ನೂರರಷ್ಟು ತೆಗೆದುಕೊಂಡಿದ್ದು, ಎಲ್ಲರೂ ಬೆಂಗಳೂರಿನಲ್ಲಿಯೇ ಇರುವುದು. ಪರಿಸ್ಥಿತಿ ಹೀಗಿರುವಾಗ ನಾಳೆ ಅವರ ಮಕ್ಕಳಿಗೆ ಸೀಟು ಸಿಗದಿದ್ದರೆ ಪುನಃ ತಾವು ಆಡುತ್ತಿರುವ ಮಾತನ್ನು ಉಲ್ಟಾ ಹೇಳಬೇಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾಗಮಂಗಲದವರು, ಕುಣಿಗಲ್ ನವರು ಬೆಂಗಳೂರಿನಲ್ಲಿ ಇಲ್ಲದಿದ್ದರೆ ಇಲ್ಲಿ ತಮಿಳಿನವರು ಆಕ್ರಮಿಸಿಕೊಳ್ಳುತ್ತಿದ್ದರು. ನೀವು ಬೆಂಗಳೂರಿಗೆ ಬಂದಿರಲು ಆಗುತ್ತಿರಲಿಲ್ಲ. ಆದ್ದರಿಂದ ತಾವು ನಮಗೆ ಧನ್ಯ ವಾದವನ್ನು ಹೇಳಬೇಕಾಗುತ್ತದೆ. ನಾಗಮಂಗಲದಿಂದ ಬಂದು ಬೆಂಗಳೂರಿನಲ್ಲಿರುವ ಮಕ್ಕಳಲ್ಲಿ ನಾಗಮಂಗಲದವರಿಗೆ ಕೆಲಸವನ್ನು ಕೊಡಿ. ನಾಗಮಂಗಲದಲ್ಲಿರುವ, ಕುಣಿಗಲ್‌ನಲ್ಲಿರುವ ಬಡಬೋರೇಗೌಡನ ಮಕ್ಕಳು ಮೆಡಿಕಲ್, ಇಂಜನಿಯರಿಂಗ್ ಮಾಡಬೇಕು ಎಂಬುದೇ ನನ್ನ ಆಶೆ. ಆದ್ದರಿಂದ ಸರ್ಕಾರ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಮೆಡಿಕಲ್ ಮತ್ತು ಇಂಜನಿಯರಿಂಗ್ ಓದಲು 25 ಅಂಕಗಳನ್ನು ಕೃಪಾಂಕವಾಗಿ ಕೊಡಬೇಕು. ಇವತ್ತು ಸಾರಿಗೆ ಇಲಾಖೆಯಲ್ಲಿ, ಆರೋಗ್ಯ ಇಲಾಖೆಯಲ್ಲಿ, ಪೋಲೀಸ್ ಇಲಾಖೆಯಲ್ಲಿ, ಸಾವಿರಾರು ಹುದ್ದೆಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಆದರೆ ತಾವು ಐದು ಕೃಪಾಂಕವನ್ನು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಕೊಟ್ಟರೂ ಅವರು ಮೇಲಕ್ಕೆ ಬರುತ್ತಿಲ್ಲ, ನಗರ ಪ್ರದೇಶದ ಮಕ್ಕಳೊಂದಿಗೆ ಸ್ಪರ್ಧೆ ಮಾಡಲು ಆಗುತ್ತಿಲ್ಲ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನ್ಯಾಯವಾಗಿದೆ. ಗ್ರಾಮಾಂತರ ಪ್ರದೇಶದ ಜನರ ಹೆಸರನ್ನೇಳಿ ಅವರಿಗೆ ಅನ್ಯಾಯ ಮಾಡುತ್ತಿರತಕ್ಕದ್ದು ನಿರಂತರವಾಗಿ ನಡೆಯುತ್ತಿದೆ. ಆ ರೀತಿ ಯಾಗದಂತೆ ತಪ್ಪಿಸಲು ತಾವು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಹೆಚ್ಚು ಕೃಪಾಂಕವನ್ನು ಕೊಡಬೇಕು. ಇನ್ನು ಪರೀಕ್ಷಾ ವಿಧಾನದ ಬಗ್ಗೆ ಹೇಳುವುದಾದರೆ, ಹೊರ ರಾಷ್ಟ್ರಗಳಲ್ಲಿ ತೆರೆದ ಪುಸ್ತಕದ ಪರೀಕ್ಷೆಯನ್ನು ಮಾಡುತ್ತಿದ್ದಾರೆ. ಈ ಸದನದಲ್ಲಿ ಮೌಲ್ಯಮಾಪನದ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ತಾವು ಯಾವುದೇ ರೀತಿಯ ಬಿಗಿ ವ್ಯವಸ್ಥೆಯಲ್ಲಿ ಪರೀಕ್ಷೆ ಗಳನ್ನು ನಡೆಸಿದರೂ ಇನ್ನೊಂದು ರೀತಿಯಲ್ಲಿ ಅವ್ಯವಹಾರವನ್ನು ಮಾಡುತ್ತಿದ್ದಾರೆ. ಆದ್ದರಿಂದ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಿ ಪಾಶ್ಚಿಮಾತ್ಯ ದೇಶದಲ್ಲೇ ತೆರೆದ ಪುಸ್ತಕದ ಪರೀಕ್ಷೆ ಮಾಡುತ್ತಾರೆ ಆ ರೀತಿ ಮಾಡಬೇಕಾಗುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಉಪಾಧ್ಯಕ್ಷರೇ, ಯಾವ ದೇಶದಲ್ಲಿ ತೆರೆದ ಪುಸ್ತಕದ ಪರೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಿದರೆ ನಮಗೂ ಗೊತ್ತಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ತಾವು ತಿಳಿದುಕೊಂಡಿದ್ದೀರಿ.

ಹೊರದೇಶ ಬೇಡ, ಉನ್ನತ ಶಿಕ್ಷಣದಲ್ಲಿ ಐ.ಎ.ಎಸ್. ಮತ್ತು ಕೆ.ಎ.ಎಸ್. ಮಾಡ ತಕ್ಕವರಿಗೆ ಪುಸ್ತಕವನ್ನೇ ಕೊಟ್ಟರು ಅಂಥ ಪ್ರಶ್ನೆ ಪತ್ರಿಕೆಗಳನ್ನು ತಯಾರು ಮಾಡುವುದಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :– ಸನ್ಮಾನ್ಯ ಉಪಾಧ್ಯಕ್ಷರೇ, ಗ್ರಾಮಾಂತರ ಪ್ರದೇಶದಿಂದ ಬರತಕ್ಕ ವಿದ್ಯಾರ್ಥಿಗಳ ಕಷ್ಟಸುಖದ ಬಗ್ಗೆ ನಮ್ಮ ಮಿತ್ರರು ಬಹಳ ಉತ್ತಮವಾಗಿ ಮಾತನಾಡುತ್ತಿದ್ದಾರೆ. ಅವರು ಓಪನ್ ಪುಸ್ತಕದ ಪರೀಕ್ಷೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಓಪನ್ ಪುಸ್ತಕದ ಬಗ್ಗೆ ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಅವರು ಮನಸ್ಸು ಬಿಚ್ಚಿ ಹೇಳಿದರೆ ನಾವೂ ಅದರ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡಬಹುದು. ಆದ್ದರಿಂದ ಅವರು ದಯಮಾಡಿ ಓಪನ್ ಪುಸ್ತಕದ ಪರೀಕ್ಷೆಯ ಬಗ್ಗೆ ಮನಸ್ಸುಬಿಚ್ಚಿ ಮಾತನಾಡಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ :– ಉಪಾಧ್ಯಕ್ಷರೇ, ಅವರು ಓಪನ್ ಪುಸ್ತಕ ಎಂದು ಹೇಳಿರುವುದು, ಎಲ್ಲಾ ಕಡೆ ಯಾವ ರೀತಿಯಲ್ಲಿ ಕಾಪಿ ಮಾಡುವುದು ಪರೀಕ್ಷೆಯಲ್ಲಿ ನಡೆಯುತ್ತಿದೆ, ಎಲ್ಲಾ ಕಡೆ ಪುಸ್ತಕವನ್ನು ಹಿಡಿದುಕೊಂಡು ಓಪನ್‌ಆಗಿ ಕಾಪಿ ಮಾಡುತ್ತಿದ್ದಾರೆ ಎಂಬ ಬಗ್ಗೆ ಹೇಳಿರುವುದು ;

ಶ್ರೀ ಎಲ್. ಆರ್. ಶಿವರಾಮೇಗೌಡ :– ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೋ ಎಂಬಂತೆ ಅವರು ಹೇಳಿದ್ದಾರೆ. ಇಲ್ಲಿ ಏನಾದರೂ ವಿಚಾರವನ್ನು ಹೇಳಿದರೆ ಅವರನ್ನು ಅವರೇ ಹೇಳಿಕೊಳ್ಳಬೇಕು. ಶಿಕ್ಷಣದ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡುತ್ತಿದೆ, ಶಿಕ್ಷಣ ತಜ್ಞರು ಚಿಂತನೆ ಮಾಡುತ್ತಿದ್ದಾರೆ, ಮಾಜಿ ಶಿಕ್ಷಣ ಸಚಿವರಾಗಿದ್ದ ಹಿರಿಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿದ್ದಾರೆ. ಇಡೀ ರಾಷ್ಟ್ರದಲ್ಲಿ ಶಿಕ್ಷಣದ ಬಗ್ಗೆ ಚಿಂತನೆ ನಡೆಯುತ್ತಿದೆ. ತಾವು ಎಷ್ಟೇ ಭದ್ರತೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟರೂ ಪತ್ರಿಕೆಗಳು ಬಯಲಾಗುತ್ತಿರುವುದು ಸಾಮಾನ್ಯವಾಗಿದೆ. ನಾವು ವಿದ್ಯಾಭ್ಯಾಸ ಮಾಡುತ್ತಿದ್ದ ಸಮಯದಲ್ಲಿ ಪೋಲೀಸರು ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಹೋಗತಕ್ಕ ಪರಿಸ್ಥಿತಿ ಇರಲಿಲ್ಲ. ಆದರೆ ಇವತ್ತು ಪೋಲೀಸರು, ಜಿಲ್ಲಾಧಿಕಾರಿಯವರು ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಲ್ಲಿ ಹಣವನ್ನಿಟ್ಟಂತೆ ಇಟ್ಟು ನೋಡಿ ಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಇಷ್ಟಾದರೂ ಪರೀಕ್ಷಾ ವಿಧಾನವನ್ನೇ ಬದಲಾವಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಮೇರಿಕಾ ದೇಶದಲ್ಲಿ ಹದಿನೆಂಟು ವರ್ಷಕ್ಕೆ ವಿದ್ಯಾಭ್ಯಾಸವನ್ನು ಮುಗಿಸಿ ಮಕ್ಕಳು ಹೊರಗೆ ಬಂದರೆ ಅವರನ್ನು ತಂದೆತಾಯಿಯರು ನೋಡಿಕೊಳ್ಳುವುದಿಲ್ಲ. ಆದರೆ ಭಾರತ ದೇಶದಲ್ಲಿ ಮಕ್ಕಳಿಗೆ ಮದುವೆ ಮಾಡಿ ಮಕ್ಕಳುಗಳಾಗಿದ್ದರೂ ತಂದೆತಾಯಿಯರೇ ಅವರನ್ನು ನೋಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಅದಕ್ಕೆ ಮೂಲಕಾರಣ ವಿದ್ಯಾಭ್ಯಾಸದ ಕೊರತೆ. ಇದನ್ನು ಸರಿಪಡಿಸಬೇಕೆಂಬುದು ನಮ್ಮ ವಾದ. ಇಂಜನಿಯರಿಂಗ್, ಮೆಡಿಕಲ್ ಕಾಲೇಜುಗಳನ್ನ ಸ್ಥಾಪನೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಜಾಬ್ ಓರಿಯಂಟೆಡ್ ಕಾಲೇಜುಗಳನ್ನು ತೆರೆಯುವುದು ಅಗತ್ಯವಾಗಿದೆ. ಕಳೆದ ಐದು ವರ್ಷಗಳಲ್ಲಿ ಅರಣ್ಯ ಕಾಲೇಜು, ತೋಟಗಾರಿಕಾ ಕಾಲೇಜು ಮುಂತಾದ ಜಾಬ್ ಓರಿಯಂಟೆಡ್ ಕಾಲೇಜುಗಳನ್ನು ತೆರೆಯುತ್ತಿದ್ದೀರಿ. ತಾವು

ಸೈನಿಕ ಶಿಕ್ಷಣವನ್ನು ಕೊಡಬೇಕು. ಒಂದು ಲಕ್ಷ ಜನ ವಿದ್ಯಾರ್ಥಿಗಳು ಪದವಿಯನ್ನು ಪಡೆದುಕೊಂಡು ಬಂದರೆ ಅವರಲ್ಲಿ ಹತ್ತು ಪರ್‌ಸೆಂಟ್ ಜನರಿಗೆ ಕೆಲ್ಸ ಸಿಕ್ಕುವುದಿಲ್ಲ. ನಿರುದ್ಯೋಗದಿಂದ ಈ ರಾಜ್ಯದ ವಿದ್ಯಾರ್ಥಿಗಳು ನಕ್ಸಲಿಯರುಗಳು, ಎಲ್.ಟಿ.ಟಿ. ಗಳಾಗುತ್ತಾರೆ, ದೇಶವನ್ನು ಸೂರೆ ಮಾಡತಕ್ಕ ಕೆಲಸಕ್ಕೆ ಕೈಹಾಕುತ್ತಾರೆ. ಇದರ ಬಗ್ಗೆ ಹೊಸಚಿಂತನೆಯನ್ನು ಮಾಡದಿದ್ದರೆ ದೇಶಕ್ಕೆ ಮುಂದಿನ ದಿವಸಗಳಲ್ಲಿ ಉಳಿಗಾಲವಿಲ್ಲ ವೆಂದು ಹೇಳಬೇಕಾಗುತ್ತದೆ. ತಾಂತ್ರಿಕ ಕಾಲೇಜು, ಅರಣ್ಯ ಕಾಲೇಜು, ತೋಟಗಾರಿಕಾ ಕಾಲೇಜು, ರೇಷ್ಮೆ ಕಾಲೇಜು, ಕೃಷಿ ಕಾಲೇಜು ಮುಂತಾದ ಜಾಬ್ ಓರಿಯಂಟೆಡ್ ಕಾಲೇಜುಗಳು ಇತ್ತೀಚೆಗೆ ಬಂದಿರತಕ್ಕದ್ದು. ಇದರಲ್ಲಿ ಪರಿಣಿತಿಯನ್ನು ಪಡೆದರೆ ಉದ್ಯೋಗಕ್ಕೆ ಹೆಚ್ಚು ಅವಕಾಶವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣವನ್ನು ಬಿಗಿ ಮಾಡುವುದು ಒಂದು ಕಡೆಯಾಗಿದ್ದರೆ, ಅವರನ್ನು ಕಾಯತಕ್ಕ ಅಧಿಕಾರಿಗಳು ಮತ್ತೊಂದು ಕಡೆಯಾಗಿದೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎ.ಇ.ಒಗಳ ಜೊತೆಗೆ ಬಿ.ಇ.ಓ. ಬ್ಲಾಕ್ ಇಜ್ಯುಕೇಷನ್ ಆಫೀಸರ್‌ಗಳನ್ನು ಮಾಡಿದ್ದೀರಿ. ಕೆಲಸಕ್ಕೆ ಬಾರದಿರುವ ಇಲಾಖೆಗೆ ಜೀಪ್ ಸೌಲಭ್ಯವನ್ನು ಕೊಟ್ಟಿದ್ದೀರಿ. ವಿದ್ಯಾ ಇಲಾಖೆಗೂ ಜೀಪ್‌ಗಳನ್ನು ಕೊಡುವುದಾಗಿ ಹೇಳಿದ್ದೀರಿ, ಆದರೆ ಕೊಟ್ಟಿಲ್ಲ. ಆದ್ದರಿಂದ ಎಲ್ಲಿ ತಾಲ್ಲೂಕುಮಟ್ಟದಲ್ಲಿ ವಿದ್ಯಾ ಇಲಾಖೆಗೆ ಜೀಪುಗಳ ಅಗತ್ಯವಿದೆಯೋ ಅಲ್ಲಿಗೆ ಜೀಪುಗಳನ್ನು ಕೊಡಲು ಆದ್ಯತೆಯನ್ನು ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೊಡಲು 25 ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ. ಆದರೆ ತಾವು ನೀಡುವ ಸಮವಸ್ತ್ರದಿಂದ ಯಾವ ಪ್ರಯೋಜನವೂ ಇಲ್ಲ. ಇಲ್ಲಿ ಇಟ್ಟಿರುವ ಹಣದಲ್ಲಿ ನೂರಕ್ಕೆ ಎಪ್ಪತ್ತೈದು ಭಾಗ ಹಣ ನಷ್ಟವಾಗುತ್ತದೆ. ಬಟ್ಟೆಯನ್ನು ಕ್ವಾಲಿಟಿಯದ್ದು ಬೇರೆ ವಿಚಾರ, ಆದರೆ ಅವರು ಪೀಸ್ ಮಾಡಿಕೊಡುವ ಬಟ್ಟೆಯಲ್ಲಿ ಒಂದು ತೋಳೇ, ಇರುವುದಿಲ್ಲ, ಕಾಲರೇ ಇರುವುದಿಲ್ಲ. ತುಂಬಾ ಕಳಪೆ ಬಟ್ಟೆಯನ್ನು ಕೊಡುತ್ತಾರೆ. ಆದ್ದರಿಂದ ಸಮವಸ್ತ್ರವನ್ನು ಕೊಡತಕ್ಕ ಯೋಜನೆಯನ್ನು ರದ್ದುಮಾಡಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಹಾಗೆ ನಮ್ಮ ಸರ್ಕಾರದಲ್ಲಿ ಕೊಟ್ಟಿತ್ತೆ?

ಶ್ರೀ ಎಲ್. ಆರ್. ಶಿವರಾಮೇಗೌಡ :- ನೀವಿದ್ದಾಗಲೂ ಅದನ್ನು ಕೊಟ್ಟಿದ್ದೀರಿ. ತಾವಿದ್ದಾಗೇನು ಸತ್ಯಹರಿಶ್ಚಂದ್ರನ ಸರ್ಕಾರವಿತ್ತೆ? ಮಾನ್ಯ ಸಗೀರ್ ಅಹಮದ್‌ರವರು ನನ್ನ ಹಿರಿಯ ಸ್ನೇಹಿತರು, ಮಂತ್ರಿಗಳಾಗಿದ್ದವರು. ಅವರ ಸರ್ಕಾರವಿದ್ದಾಗಲೂ ನಾನು ಅದರ ಸಹಸದಸ್ಯನಾಗಿದ್ದೆ, ಈ ಸರ್ಕಾರದಲ್ಲೂ ಸಹ ಸದಸ್ಯನಾಗಿದ್ದೇನೆ. ಅವರು ಮಾಡಿದ್ದೆಲ್ಲ ಸರಿಯೆಂದು ಹೇಳತಕ್ಕವನು ನಾನಲ್ಲ. ನಾನೇನು ಅವರ ಗುತ್ತಿಗೆಗೆ ಹೋಗಿಲ್ಲ. ಯಾವ ಮಣ್ಣಿನ ಮಗನ ಸರ್ಕಾರ ಈ ರಾಜ್ಯಕ್ಕೆ ಒಳ್ಳೆಯದನ್ನು ಮಾಡುತ್ತೇವೆಂದು ಹೇಳಿದ್ದಾರೋ ಚುನಾವಣೆಗೂ ಪೂರ್ವಭಾವಿಯಾಗಿ ಈ ಸರ್ಕಾರಕ್ಕೆ ಬೆಂಬಲವನ್ನು ಕೊಡುವುದಾಗಿ ಸೂಚಿಸಿದ್ದೆ. ಬಹುಶಃ ಸಗೀರ್ ಅಹಮದ್‌ರವರಿಗೆ ಇದು ಗೊತ್ತಿಲ್ಲವೆಂದು ಕಾಣುತ್ತದೆ. ವೀರಪ್ಪಮೊಯ್ಲಿರವರ, ಬಂಗಾರಪ್ಪನವರ, ವೀರೇಂದ್ರಪಾಟೀಲ್‌ರವರ ಎಲ್ಲರ ಸರ್ಕಾರಗಳಲ್ಲೂ ಎಲ್ಲರೂ ಇದ್ದರು. ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಧರ್ಮಸಿಂಗ್‌ರಂಥವರು, ಬಂಗಾರಪ್ಪನವರು, ವೀರಪ್ಪಮೊಯ್ಲಿಯಂಥವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಆದರೆ ಕೆಲವರು ಮಾಡಿದ ಪಾಪಕ್ಕೆ ಕೇವಲ 36 ಸೀಟುಗಳಲ್ಲಿ ಜಯಗಳಿಸಿದರು. ಎಲ್ಲಾ ಮಲ್ಲಿಕಾರ್ಜುನ ಖರ್ಗೆಯಂತೆ, ಎಲ್ಲಾ ಧರ್ಮಸಿಂಗ್‌ರವರಿಂತಿದ್ದರೆ 36 ಕ್ಕೆ ಇಳಿಯುತ್ತಿರಲಿಲ್ಲ. ಸಗೀರ್ ಅಹಮದ್‌ರವರಂಥವರಿದ್ದರೂ ಅಷ್ಟು ಕೆಳಮಟ್ಟಕ್ಕೆ ಇಳಿಯುತ್ತಿರಲಿಲ್ಲ. ಇನ್ನೂ ಕಳಪೆಯವರು ಇಲ್ಲಿದ್ದರು. ಯಾವ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತದೆ, ಯಾವ ಸರ್ಕಾರ ಕೆಲಸಮಾಡುವುದಿಲ್ಲ ಎಂಬುದನ್ನು ನಮಗಿಂತ ಹೊರಗಿರುವ ಜನರು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ತಾವು ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಕೊಡಲು ಆಗುವುದಿಲ್ಲ. ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ಮಕ್ಕಳಿಗೆ ಹಾಲನ್ನು ಕೊಡು ತ್ತೇವೆಂದು ಹೇಳಿದ ಮೇಲೆ ಇಲ್ಲೂ ಶಾಲಾ ಮಕ್ಕಳಿಗೆ ಹಾಲನ್ನು ಕೊಡಲು ಅಂದಿನ ಪಶುಸಂಗೋಪನಾ ಸಚಿವರಾಗಿದ್ದಂಥ ನಾಗೇಗೌಡರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ ಬೇರೆ ಸರ್ಕಾರ ಬಂದಮೇಲೆ ಅದನ್ನು ನಿಲ್ಲಿಸಿದರು. ಪೌಷ್ಠಿಕ ಆಹಾರವನ್ನು ಕೊಡತಕ್ಕ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು. ಅವರಿಗೆ ಸಾಕಷ್ಟು ಹಣವಿದೆ, ವಿದೇಶಿ ಫಂಡ್ ಬರುತ್ತದೆ, ಆದ್ದರಿಂದ ಕೇಂದ್ರ ಸರ್ಕಾರದವರು ಅದನ್ನು ಮಾಡಬಹುದು.

6.30 ಪಿ. ಎಂ.

ಸನ್ಮಾನ್ಯ ಕೃಷಿ ಸಚಿವರು ಇಲ್ಲಿದ್ದಾರೆ, ಅವರು ಸರ್ಕಾರಕ್ಕೆ ಈ ವಿಚಾರದಲ್ಲಿ ಮನದಟ್ಟು ಮಾಡಲಿ. ಇವತ್ತು 55 ಕೋಟಿ ರೂ. ದುಡ್ಡಿದೆ. ಪೌಷ್ಟಿಕ ಆಹಾರ ಮತ್ತು 2 ಕೋಟಿ ರೂ. ಸಮವಸ್ತ್ರದ್ದು. ಈ ಹಣವನ್ನು ನೀವು ಈ ಎರಡಕ್ಕೂ ನಿಲ್ಲಿಸಿ, ಈ ಸ್ಕೂಲ್ ರೂಮುಗಳು ಇವತ್ತು, ನೀವು ಎಷ್ಟೋ ಸ್ಕೂಲ್ ರೂಮುಗಳನ್ನು ಕಟ್ಟಿಸಿ ಕೊಟ್ಟಿದ್ದರೂ ಸಹಿತ, ಬ್ಲಾಕ್ ಬೋರ್ಡ್ ಆಪರೇಷನ್ ಎಂಬ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಸ್ಕೂಲು ರೂಮುಗಳನ್ನು ಕಟ್ಟಿಸ ತಕ್ಕಂಥ ಕೆಲಸವನ್ನು ಮಾಡಿದ್ದರೂ ಸಹಿತ, ಎಷ್ಟೋ ಹಳ್ಳಿಗಳಲ್ಲಿ ಇವತ್ತು ಸ್ಕೂಲು ರೂಮುಗಳು ಸರಿಯಾಗಿಲ್ಲ, ಕನ್‌ಸ್ಟ್ರಕ್ಷನ್ ಕ್ವಾಲಿಟಿ ಇಲ್ಲ, ಇವತ್ತು ಇಂತಹ ಒಂದು ಸಂದರ್ಭದಲ್ಲಿ ನೀವು ಹೆಚ್ಚು ಈ ಸ್ಕೂಲು ರೂಮುಗಳನ್ನು, ಒಂದು ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಟ ಪಕ್ಷ 50 ಸಾವಿರ ರೂ.ಗಳನ್ನು ಒಂದು ಸ್ಕೂಲ್ ರೂಮಿಗೆ ಇಟ್ಟು, 50 ರೂಮುಗಳನ್ನು ಒಂದು ಕ್ಷೇತ್ರಕ್ಕೆ ಇಟ್ಟರೆ, 224 ವಿಧಾನ ಸಭಾ ಕ್ಷೇತ್ರಕ್ಕೆ ಈ 50 ಕೋಟಿ ರೂ. ಒಂದು ವರ್ಷಕ್ಕೆ ಆಸ್ತಿಗುತ್ತದೆ. ಒಂದು ಕನ್‌ಸ್ಟ್ರಕ್ಟೀವ್ ಆಗಿ, ಒಂದು ಅಸೆಟ್‌ಆಗಿ, ಈ ರಾಜ್ಯಕ್ಕೆ ಉಳಿಯತಕ್ಕಂಥ ವ್ಯವಸ್ಥೆಯಾಗುತ್ತದೆ. ಇವತ್ತು ಈ ಪೌಷ್ಟಿಕ ಆಹಾರವನ್ನು ಕೊಡತಕ್ಕಂಥದ್ದಾಗಲಿ, ಸಮವಸ್ತ್ರವನ್ನು ಕೊಡತಕ್ಕಂಥದ್ದಾಗಲೀ, ಈ ಕೆಲಸ ನಿಮ್ಮಿಂದ ಬೇಡ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ವಿದ್ಯಾರ್ಥಿಗಳ ಮನಸ್ಸು ಮಾಸನಕವಾಗಿ ಬದಲಾವಣೆಯಾಗಬೇಕಾಗಿದೆ. ಇವತ್ತು ಏನಾಗಿದೆ, ಮಾನ್ಯ ಉಪಾಧ್ಯಕ್ಷರೇ, ಈ ಸ್ಕೂಲ್ ರೂಮುಗಳು ಶಿಕ್ಷಕರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನೋಡಿ, ಇವತ್ತು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಏಕೆ ಕಳುಹಿಸಬೇಕು ಎನ್ನತಕ್ಕಂಥ ಯೋಚನೆ ಇವತ್ತು ವಿದ್ಯಾರ್ಥಿಗಳ ತಂದೆತಾಯಿಗಳಲ್ಲಿ ಬರುತ್ತಿದೆ. ಇದನ್ನು ಹೋಗಲಾಡಿಸಬೇಕಾಗಿದ್ದರೆ, ಇದೆಲ್ಲವನ್ನೂ ಸಹಿತ ನೀವು ವ್ಯವಸ್ಥಿತವಾಗಿ, ಸ್ಕೂಲು

ರೂಮು, ಶಿಕ್ಷಕರ ಕೊರತೆ ಏನು ಇದೆ, ಅದನ್ನು ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ಈ ರಾಜ್ಯದಲ್ಲಿ ಸನ್ಮಾನ್ಯ ಉಪಾಧ್ಯಕ್ಷರೇ, ಶಿಕ್ಷಣವನ್ನು ಪ್ರತಿಯೊಬ್ಬರಿಗೂ ಕೊಡಬೇಕು, ಅಕ್ಷರವನ್ನು ಪ್ರತಿಯೊಬ್ಬರಿಗೂ ಕಲಿಸಬೇಕು ಮಾಡಬೇಕೆಂದು ಹೇಳಿ ಕೋಟ್ಯಾಂತರ ರೂ.ಗಳ ಸಾಕ್ಷರತಾ ಆಂದೋಳನ ನಡೆಯುತ್ತಿದೆ. ಸಾಕ್ಷರತಾ ಆಂದೋಳನ ಬರೀ ಗೋಡೆ ಮೇಲಿದೆಯೇ ಹೊರತು, ಯಾರ ಮನಸ್ಸಿಗೆ ತಾವು ಕಲಿಯಬೇಕು ಎಂಬುದು ಹೋಗಬೇಕೋ, ಆ ರೀತಿ ಆಗದೇ ಅಕ್ಷರ ಕಲಿಸತಕ್ಕಂಥ ಕೆಲಸ ಆಗುತ್ತಿಲ್ಲ. ಇವತ್ತು ಕೋಟ್ಯಾಂತರ ರೂ.ಗಳು ಮಂಡ್ಯ ಜಿಲ್ಲೆಯಲ್ಲಿ, ಇವತ್ತು ಸನ್ಮಾನ್ಯ ಉಪಾಧ್ಯಕ್ಷರು ಒಪ್ಪಿಕೊಳ್ಳುವುದಾದರೆ, ಅಲ್ಲಿ ಹಿಂದೆ ಇದ್ದಂಥ ಜಿಲ್ಲಾಧಿಕಾರಿ, ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳು ಅರ್ಧಕರ್ಧ ಹಣವನ್ನು ಲೂಟಿ ಮಾಡಿದರು. ಇದೇ ಸದನದಲ್ಲಿ, ಆ ಸರ್ಕಾರದ ಜೊತೆ ಇರತಕ್ಕಂಥ ಸಂದರ್ಭದಲ್ಲಿ ನಾನು ಕೇಳಿದ್ದೇನೆ, ಇದನ್ನು ಸಿ.ಓ.ಡಿ. ಅಥವಾ ಸಿ.ಬಿ.ಐ. ತನಿಖೆ ಮಾಡಿ, ಯಾರು ಈ ಹಣವನ್ನು ತಿಂದಿದ್ದಾರೆ, ಅವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಇದೇ ಸದನದಲ್ಲಿ ಕೇಳಿದ್ದೇನೆ. ಅದು ರೆಕಾರ್ಡ್‌ನಲ್ಲಿದೆ. ತಾವು ಅದನ್ನು ಪರಿಶೀಲನೆ ಮಾಡಬಹುದು. ಈಗಲೂ ನಾನು ಒತ್ತಾಯ ಮಾಡುತ್ತೇನೆ, ಇಡೀ ರಾಜ್ಯದಲ್ಲಿ ಸಾಕ್ಷರತಾ ಆಂಧೋಳನಕ್ಕೆ ಕೊಟ್ಟಿರತಕ್ಕಂಥ ಹಣ ಸಂಪೂರ್ಣ ನಾಶವಾಗುತ್ತಿದೆ, ಅದನ್ನು ತಿಂದು ಹಾಕಿದರು, ಬರೀ ಗೋಡೆ ಮೇಲೆ ಬರೆಯತಕ್ಕಂಥದೊಂದೇ ಅವರ ಉದ್ಯೋಗ. ಇವತ್ತು ಬರೀ ಬ್ಯಾನರ್‌ಅನ್ನು ಕಟ್ಟಿದರು, ಶೇಕಡ 10 ರಷ್ಟಾದರೂ ಜನತೆ ಇವತ್ತು ಈ ಆಂಧೋಳನದಿಂದ ವಿದ್ಯಾಭ್ಯಾಸವನ್ನು ಕಲಿಯಲಿಲ್ಲ. ಇವತ್ತು ತುಮಕೂರಿನಲ್ಲಿ ನಡೆದಂತಹ ಘಟನೆ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಬೇಕು ಎನ್ನತಕ್ಕಂಥ ಮಾತನ್ನೂ ಸಹ ಹೇಳಿದರು. ಅದರ ಬಗ್ಗೆ ಏನಾಗಿದೆ ಎನ್ನುವುದರ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಅವರು ಉತ್ತರ ಹೇಳತಕ್ಕ ಸಂದರ್ಭದಲ್ಲಿ, ತುಮುಕೂರು ಮತ್ತು ಮಂಡ್ಯ ಜಿಲ್ಲೆ ಬಗ್ಗೆ ತನಿಖೆ ಏನಾಗಿದೆ ಎನ್ನುವುದರ ಬಗ್ಗೆ ತಾವು ಹೇಳಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನೂ ನಗರದಲ್ಲಿರತಕ್ಕಂಥ ದೊಡ್ಡ ದೊಡ್ಡ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳು ಆಗುತ್ತಾ ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನಲ್ಲಿ ಆರ್ಟ್ಸ್ ಕಾಲೇಜ್ ಎಂದು ಇದೆ. ಅದನ್ನು 'ಗ್ಯಾಸ್ ಕಾಲೇಜ್' ಎಂದು ಕರೆಯುತ್ತಾರೆ. ಆ ಗ್ಯಾಸ್ ಕಾಲೇಜಿನವರೇನಾದರೂ ಸ್ಟ್ರೈಕ್ ಮಾಡುತ್ತಾರೆ ಎಂದು ಹೇಳಿದರೆ, ಇಲ್ಲಿ ಸರ್ಕಾರ ನಡೆಸತಕ್ಕವರು ಯೋಚನೆ ಮಾಡುತ್ತಿದ್ದರು. ಏನಪ್ಪ ಇವತ್ತು ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಾರೆ, ಯಾವ ರೀತಿ ಇವರನ್ನು ನಿಗ್ರಹಿಸುವುದು? ವಿದ್ಯಾರ್ಥಿಗಳ ಮಟ್ಟ ಕುಸಿದು ಹೋಗಿದೆ. ಅವರ ವಿಚಾರದಲ್ಲಿ ಹೋರಾಟ ಮಾಡತಕ್ಕಂಥವರು ಯಾರೂ ಇಲ್ಲ. ಅಲ್ಲಿಯೂ ಸಹಿತ ರಾಜಕೀಯ ಬೆರೆತು ಗುಂಪು, ಗುಂಪುಗಳಾಗಿ ಛಿದ್ರವಾಗಿ ಹೋಗಿದ್ದಾರೆ. ಯಾವುದಾದರೂ ಒಂದು ವಿದ್ಯಾರ್ಥಿ ಸಂಘದ ಚುನಾವಣೆ ನಡೆಯುತ್ತದೆ ಎಂದು ಹೇಳಿದರೆ, ಅಲ್ಲಿ ನಾಲ್ಕು ಪೋಲೀಸ್ ವ್ಯಾನ್ ನಿಲ್ಲಿಸಲೇಬೇಕು, ಇಲ್ಲದಿದ್ದರೆ ಲಾಠಿ ಚಾರ್ಜ್ ಮಾಡಲೇಬೇಕು ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಆದ್ದರಿಂದ ಇಡೀ ರಾಜ್ಯಕ್ಕೆ ಒಂದು ಕಾಮನ್ ರೂಲ್ ಮಾಡಿ, ಈ ಒಂದು ಘಟನೆಯನ್ನು ಮುಂದಿಟ್ಟುಕೊಂಡು ಇಡೀ ಚುನಾವಣೆಯನ್ನೇ ರದ್ದು ಮಾಡಿದ್ದಾರೆ. ಇವತ್ತು ವಿದ್ಯಾರ್ಥಿಗಳಿಗೆ ಹುಮ್ಮಸ್ಸು ಬರದ ಹಾಗೆ ಮಾಡಿದ್ದಾರೆ. ಯಾರೋ ಕೆಲವರು ಮಾಡತಕ್ಕಂಥ ತಪ್ಪಿಗೆ ಎಲ್ಲರಿಗೂ ಬರೆ ಹಾಕತಕ್ಕಂಥಾದ್ದು ಸೂಕ್ತವಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ಚುನಾವಣೆ ಮಾಡುವುದರ ಬದಲು ಒಂದು ಕಾಮನ್ ಗೈಡ್ ಲೈನ್ ಮಾಡಿ, ಇಡೀ ರಾಜ್ಯದಲ್ಲಿ ಯಾವ್ಯಾವ ಪ್ರತಿಷ್ಠಿತ ವಾಗಿರತಕ್ಕಂತಹ ಎಲ್ಲಾ ಡಿಗ್ರಿ ಕಾಲೇಜುಗಳಿವೆ, ಜೂನಿಯರ್ ಕಾಲೇಜ್‌ಗಳಿವೆ, ಅಲ್ಲಿ ಅವರ ಚಟುವಟಿಕೆಗಳನ್ನು, ಹೋರಾಟವನ್ನು ನ್ಯಾಯವಾಗಿ ಕೇಳತಕ್ಕಂತಹ ವಿಚಾರದಲ್ಲಿ ಅವರು ಹೋರಾಟವನ್ನು ಮಾಡಬೇಕಾಗುತ್ತದೆ. ಅದಕ್ಕೆ ಒಂದು ಕಾಮನ್ ಗೈಡ್ ಲೈನ್ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಲ್ಲಿಗೆ ನಾನು ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲಿನ ವಿಚಾರ ಮುಗಿಸಿ, ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ಜನರಲ್ ಅಡ್ಮಿನಿಸ್ಟ್ರೇ ಷನ್‌ನಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತದೆ ಎನ್ನುತ್ತಾರೆ. ತುಂಬಿ ತುಳುಕುತ್ತದೆ ಅಂದರೆ ಈಗಲ್ಲ, ಮೊದಲಿನಿಂದಲೂ ಎಂದು ತೀರ್ಮಾನ ಆಗಬೇಕು ಅಲ್ಲಿಗೆ. ಇತ್ತೀಚಿನ ದಿನಗಳಲ್ಲಂತೂ ಬಹಳಷ್ಟು, ಎಲ್ಲಿ ನೋಡಿದರೆ ಅಲ್ಲಿ ಭ್ರಷ್ಟಾಚಾರ ಇದೆ. ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು, ಎಲ್ಲದಕ್ಕೂ ರೇಟ್ ಇಷ್ಟು ಫಿಕ್ಸ್ ಅಂತ ಹೇಳಿದರೆ ಅಡ್ಡಿಯಿಲ್ಲ, ಆ ಮಟ್ಟಕ್ಕೆ ಇವತ್ತು ಭ್ರಷ್ಟಾಚಾರ ಇದೆ. ಮಾನ್ಯ ಸಗೀರ್ ಅಹ ಮದ್‌ರವರು ಮಂತ್ರಿಯಾಗಿದ್ದಾಗ ಅವರ ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿತ್ತು ಎನ್ನುವುದನ್ನು ನಾವು ಮರೆಯಬೇಕಾಗಿಲ್ಲ.

ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಉಪಾಧ್ಯಕ್ಷರೇ, ನಾವು ಬೆಳಿಗ್ಗೆ 10 ಗಂಟೆಗೇ ಸದನಕ್ಕೆ ಬಂದಿದ್ದೇವೆ. ಈಗಾಗಲೇ 6-30 ಗಂಟೆಯಾಯಿತು. ಮಾನ್ಯ ಸದಸ್ಯರು ಇವತ್ತು ಮಾತನಾಡುವುದು ಮುಗಿಸುತ್ತಾರೋ, ನಾಳೆ ಮುಗಿಸುತ್ತಾರೋ ಅನ್ನುವುದನ್ನು ತಾವು ಕೇಳಿದರೆ ಒಳ್ಳೆಯದು.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷರೇ, ಇವತ್ತೇ ನನ್ನ ಭಾಷಣವನ್ನು ಮುಗಿಸಲಿಕ್ಕಾಗುವುದಿಲ್ಲ. ನಾನು ನನ್ನ ಭಾಷಣವನ್ನು ನಾಳೆಗೆ ಮುಂದುವರೆಸುತ್ತೇನೆ. ನನಗೆ ಇನ್ನೂ ಮಾತನಾಡಲು ಕನಿಷ್ಟ ಒಂದು ಗಂಟೆಯಾದರೂ ಬೇಕು. ಮಂಡಿಸಿರುವ 19 ಬೇಡಿಕೆಗಳ ಪೈಕಿ, ನಾನು ಕಳೆದ 35 ನಿಮಿಷದಲ್ಲಿ ಕೇವಲ ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಮಾತ್ರ ಮಾತನಾಡಿದ್ದೇನೆ.

ಉಪಾಧ್ಯಕ್ಷರು :- ತಮಗೆ ಮಾತನಾಡಲು ಇವತ್ತು ಒಂದು ಗಂಟೆ ಸಮಯ ಸಿಗುವುದಿಲ್ಲ. ತಾವು ಇವತ್ತೇ ತಮ್ಮ ಭಾಷಣವನ್ನು ಮುಗಿಸಿಬಿಡಿ. ಈಗಾಗಲೇ ಎಲ್ಲರಿಗೂ ಟೈಮ್ ಹಂಚಿಕೆಯಾಗಿದೆ. ಆ ಅವಧಿಯೊಳಗೆ ತಾವು ಮಾತನಾಡಬೇಕಾಗುತ್ತದೆ. ತಾವು ಇವತ್ತು ತಮ್ಮ ಭಾಷಣ ಮುಗಿಸಿಬಿಡಿ.

ಉಪಾಧ್ಯಕ್ಷರು :- ಇವತ್ತೇ ತಮ್ಮ ಭಾಷಣ ಮುಗಿಸಬೇಕಾದರೆ ತಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಲ್. ಆರ್. ಶಿವರಾಮೇಗೌಡ :- ನನಗೆ ಇನ್ನೂ ಒಂದೂವರೆ ಗಂಟೆ ಬೇಕು.

ಉಪಾಧ್ಯಕ್ಷರು :- ತಮಗೆ ಇವತ್ತು ಒಂದೂವರೆ ಗಂಟೆಗಳ ಸಮಯ ನೀಡಲಾಗುವುದಿಲ್ಲ. ತಾವು ಏಳು ಗಂಟೆಯವರೆಗೆ ಮಾತನಾಡಿ ಭಾಷಣವನ್ನು ಇವತ್ತೇ ಮುಗಿಸಿಬಿಡಿ. ನಾಳೆಗೆ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ನೀವು ಕೊಟ್ಟಂತಹ ತೀರ್ಪಿಗೆ ವಿರುದ್ಧ ಹೇಳತಕ್ಕವನು ಅಲ್ಲ. ನೀವು ನಮ್ಮ ರಕ್ಷಣೆಗೆ ಬರಬೇಕು. 19 ಬೇಡಿಕೆಗಳ ಮೇಲೆ ನಾನು ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು :- ಅವೆಲ್ಲವುಗಳ ಬಗ್ಗೆ ತಾವು ಸಂಕ್ಷಿಪ್ತವಾಗಿ ಏಳು ಗಂಟೆ ಯೊಳಗಾಗಿ ಮಾತನಾಡಿ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷರೇ, ತಾವು ಈ ರೀತಿ ಸಿಟ್ಟು ಮಾಡಿಕೊಂಡರೆ ಹೇಗೆ? ದಯಮಾಡಿ ಕೇಳಿ.

ಉಪಾಧ್ಯಕ್ಷರು :- ನನಗೇನೂ ಸಿಟ್ಟಿಲ್ಲ, ನಾನು ಯಾರ ಮೇಲೆ ಸಿಟ್ಟು ಮಾಡಬೇಕು?

ಶ್ರೀ ಎಲ್. ಆರ್. ಶಿವರಾಮೇಗೌಡ :- ನೀವು ನಮ್ಮ ರಕ್ಷಣೆಗೆ ಬರಬೇಕು. ಈ ಸದನದಲ್ಲಿ ಗಂಟೆಗಟ್ಟಲೆ ಮಾತನಾಡತಕ್ಕವರಿಗೆ ದಿವಸಗಟ್ಟಲೇ ಮಾತನಾಡತಕ್ಕಂತಹವರಿಗೆ ನೀವು ಸ್ವಲ್ಪ ಕಡಿಮೆ ಅವಧಿ ಕೊಡಿ. ನಾವು ಆಳುವ ಪಕ್ಷದಲ್ಲಿ ಸೇರಿಕೊಂಡು ಬರೀ ಡಿಮ್ಯಾಂಡ್ ಬಗ್ಗೆ ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು :- ನೀವು ನಿಮ್ಮ ಭಾಷಣವನ್ನು ಮುಂದುವರೆಸಿ, ಸುಮ್ಮನೆ ಸಮಯ ಹಾಳಾಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ತಾವು ಕೊನೇ ಪಕ್ಷ ನನಗೆ ಒಂದೂವರೆ ಗಂಟೆ ಕಾಲಾವಧಿ ಕೊಡಬೇಕು.

ಉಪಾಧ್ಯಕ್ಷರು :- ಅದು ಸಾಧ್ಯವಾಗುವುದಿಲ್ಲ. ಏಳು ಗಂಟೆಯವರೆಗೆ ಮಾತ್ರ ನೀವು ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಏಕೆಂದರೆ ತಾವು ಹೇಳಿ ಬಿಟ್ಟ ಮೇಲೆ ನಾನು ಮುಗಿಸಲೇಬೇಕಾಗುತ್ತದೆ, ಆದರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಇನ್ನೂ ಮಾತನಾಡಲು ಒಂದೂವರೆ ಗಂಟೆಗಳ ಕಾಲಾವಧಿಯನ್ನು ಕೇಳುತ್ತಿದ್ದಾರೆ. ಚಿಂತೆಯಿಲ್ಲ, ಅದಕ್ಕೆ ತಾವು ಅವಕಾಶ ಮಾಡಿಕೊಡಿ. ಆದರೆ ಇನ್ನೂ ಒಂದೂವರೆ ಗಂಟೆಗಳ ಕಾಲ ಸದನದಲ್ಲಿ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆಯೇ? ಎಂದು

ತಾವು ಮಾನ್ಯ ಸದಸ್ಯರ ಒಪ್ಪಿಗೆಯನ್ನೂ ಸಹಿತ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರುಗಳೆಲ್ಲರೂ ಇಲ್ಲಿ ಕುಳಿತುಕೊಳ್ಳಲಿಕ್ಕೆ ತಯಾರಾಗಿದ್ದರೆ ಒಂದೂವರೆ ಅಥವಾ ಎರಡು ಗಂಟೆ ಮಾತನಾಡಲಿ. ಅದಕ್ಕೆ ನಮ್ಮದೇನೂ ಅಬ್ಜೆಕ್ಷನ್ ಇಲ್ಲ.

ಉಪಾಧ್ಯಕ್ಷರು :– ಈಗ ಇನ್ನೂ ಸಾಕಷ್ಟು ಜನ ಮಾತನಾಡುವವರು ಇದ್ದಾರೆ. ಮಾನ್ಯ ಶಿವರಾಮೇಗೌಡರೇ, ದಯಮಾಡಿ ತಾವು ತಮ್ಮ ಭಾಷಣವನ್ನು ಇವತ್ತು ಏಳು ಗಂಟೆಗೇ ಮುಕ್ತಾಯಗೊಳಿಸಿ. ನಾಳೆ ತಮ್ಮ ಭಾಷಣವನ್ನು ಮುಂದುವರೆಸಲು ತಮಗೆ ಅವಕಾಶವಿಲ್ಲ. ನಾಳೆ ಶುಕ್ರವಾರವಾಗಿರುವುದರಿಂದ ಸದನ ಬೆಳಿಗ್ಗೆ 9-30 ಕ್ಕೇ ಸಮಾವೇಶಗೊಳ್ಳಬೇಕಾಗಿದೆ. ಅದರಲ್ಲಿ ಒಂದು ಗಂಟೆ ಖೋತಾ ಆಗುತ್ತದೆ. ಆದ್ದರಿಂದ ತಾವು ದಯಮಾಡಿ ಇವತ್ತೇ ಮುಗಿಸಿ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ನಾವು ಏಳು ಗಂಟೆಯವರೆಗೆ ಕುಳಿತುಕೊಳ್ಳಲಿಕ್ಕೆ ತಯಾರಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಮಾನ್ಯ ಉಪಾಧಕ್ಷರೇ, ನಾನು ನೀವು ಈಗಲೇ ಮಾತನಾಡುವುದು ಮುಗಿಸಿ ಎಂದು ಹೇಳಿದರೆ ಈಗಲೇ ಮುಗಿಸುತ್ತೇನೆ, ನಾಳೆಗೆ ಮುಗಿಸಿ ಎಂದು ಹೇಳಿದರೆ, ನಾಳೆಗೆ ಮುಗಿಸುತ್ತೇನೆ.

ಉಪಾಧ್ಯಕ್ಷರು :– ಇವತ್ತೇ ಏಳು ಗಂಟೆಯವರೆಗೆ ಮಾತನಾಡಿ ತಮ್ಮ ಭಾಷಣ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಇವತ್ತು ಭ್ರಷ್ಟಾಚಾರ ಎಲ್ಲೆಲ್ಲೂ ತಾಂಡವವಾಡುತ್ತಿದೆ. ನಾನು ಪ್ರಪ್ರಥಮವಾಗಿ ಹೇಳಬೇಕಾಗುತ್ತದೆ... ಭ್ರಷ್ಟಾಚಾರ ತಾಂಡವವಾಡುತ್ತದೆ ಎಂದರೆ, ಅದರ ಅರ್ಥ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿ ಆದಮೇಲೆ ಅಲ್ಲ, ಮಾನ್ಯ ಜೆ. ಹೆಚ್. ಪಟೇಲರು ಈ ರಾಜ್ಯದ ಮುಖ್ಯಮಂತ್ರಿ ಆದಮೇಲೆ ಅಲ್ಲ, ಯಾರು ಪುಣ್ಯಾತ್ಮರು ಈ ರಾಜ್ಯವನ್ನು ಆಳಿ ಹೋದರೋ, ಅವರ ಕಾಲದಲ್ಲಿ ಸಹಿತ ಭ್ರಷ್ಟಾಚಾರ ಏನು ಪರ್ಸಂಟೇಜ್ ಇತ್ತೋ, ಅದು ಹಾಗೆಯೇ ಉಳಿದುಕೊಂಡು ಬಂದಿದೆ. ಕಡಿಮೆಯಾಗುವುದಕ್ಕೆ ಸಾಧ್ಯವೇ ಆಗಿಲ್ಲ. ಇದಕ್ಕೆ ಕಡಿವಾಣ ಹಾಕಬೇಕು ಎನ್ನತಕ್ಕದ್ದೇ ನನ್ನ ವಾದ. ಮಾನ್ಯ ಉಪಾಧ್ಯಕ್ಷರೇ, ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತು ಏನಾಗಿದೆ ಸನ್ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪರಿಷತ್ತಿನಲ್ಲಿ ಇಂಜಿನಿಯರಿಂಗ್ ವಿಭಾಗ ಇದೆ, ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರಿಂಗ್ ವಿಭಾಗ ಇದೆ, ನೀರಾವರಿ ಇಲಾಖೆಯಲ್ಲೂ ಇಂಜಿನಿಯರಿಂಗ್ ವಿಭಾಗ ಅನ್ನುವುದು ಇದೆ. ಮಾನ್ಯ ಉಪಾಧ್ಯಕ್ಷರೇ, ಇವತ್ತು ನೀವು ನೋಡಬೇಕು, ಏನು ಭ್ರಷ್ಟಾಚಾರ ಅಲ್ಲಿ ನಡೆಯುತ್ತಿದೆ ಎನ್ನುವುದನ್ನು. ಒಂದು ಲಕ್ಷ ರೂ. ಕೆಲಸಕ್ಕೆ 50 ಸಾವಿರ ರೂ. ಗಳ ಕೆಲಸ ಸಹಿತ ಇವತ್ತು ಸರಿಯಾಗಿ, ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಹಿಂದೆಲ್ಲಾ ಕಂಟ್ರಾಕ್ಟ್ ಮಾಡುವವರು, ಯಾರಾದರೂ ಇಂಜಿನಿಯರ್ ಕೊಟ್ಟರೆ, ಕೆಲಸವೆಲ್ಲಾ ಆಗಿ ಬಿಲ್

ತೆಗೆದುಕೊಂಡರೆ, ಲಂಚ ಕೊಟ್ಟರೆ ತೆಗೆದುಕೊಳ್ಳುತ್ತಿದ್ದರು. ಈಗ ಆ ರೀತಿ ಆಗುವುದಿಲ್ಲ. ಸಿಸ್ಟಮ್ ಬದಲಾವಣೆ ಆಗಿದೆ. ಇಂಜಿನಿಯರೇ ಬಿಲ್ ತೆಗೆದುಕೊಂಡು ಬಂದು, ಅವನಿಗೆ ಕೊಡಬೇಕಾದುದನ್ನು ಫಸ್ಟ್ ಮುರಿದುಕೊಂಡು, ಉಳಿಕೆ ದುಡ್ಡು ಕೊಡತಕ್ಕಂಥ ವ್ಯವಸ್ಥೆ ಯಾಗುತ್ತದೆ. ಇವತ್ತು ನನ್ನ ಸಹ ಮಿತ್ರರು ಆದ ಶ್ರೀ ಎ. ಟಿ. ರಾಮಸ್ವಾಮಿಯವರು, ರಾಮಲಿಂಗರೆಡ್ಡಿಯವರು ಹಿಂದೆ ಮೆತ್ತಗೆ ಹೇಳುತ್ತಿದ್ದಾರೆ, ನನ್ನ ಜೊತೆಯಲ್ಲಿ ಓದಿ ಎಮ್.ಎಲ್.ಎ.ಗಳಾಗಿದ್ದಾರೆ, ಇವರು ಇದೇ ವಾದ ಹೋದ ಸಾರಿ ಹೇಳಿದ್ದರು. ಏತಕ್ಕೆ ಹೇಳಿದೆ ಎಂದರೆ ಸನ್ಮಾನ್ಯ ದೇವೇಗೌಡರು ಈ ರಾಜ್ಯದ ಚುಕ್ಕಾಣಿ ಹಿಡಿದ ಮೇಲೆ ಭ್ರಷ್ಟಾಚಾರ ಪ್ರಾರಂಭವಾಗಿಲ್ಲ. ಸನ್ಮಾನ್ಯ ಜೆ. ಹೆಚ್. ಪಟೇಲರು ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರ ಪ್ರಾರಂಭ ಆಗಿಲ್ಲ. ಹಿಂದೆ ವೀರೇಂದ್ರ ಪಾಟೀಲರ ಕಾಲದಲ್ಲಿ ಶರಾವತಿ ಕರ್ಮ ಕಾಂಡ ಎಂದು ಈ ಸದನದಲ್ಲಿ ಚರ್ಚೆಯಾಗಿದೆ. ಅದರ ಬಗ್ಗೆ ಎನ್ಕ್ವೈರಿ ಆಗಿದೆ. ಈ ಪಿಡುಗನ್ನು ಹೋಗಲಾಡಿಸಬೇಕಾದರೆ, ಏನು ಮಾಡಬೇಕು ಅದಕ್ಕೆ ನಾನು ಕೇಳುವುದು ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯತಕ್ಕಂಥದ್ದು ಏನಿದೆ ಅದರ ಬಗ್ಗೆ ಏನಾದರೂ ಒಂದು ಹೊಸ ಸಿಸ್ಟಮ್‌ನ್ನು ನೀವು ಈ ಕೆಲಸ ಚೆಕ್ ಮಾಡತಕ್ಕಂಥದ್ದು ಏನಿದೆ ಅದರ ಬಗ್ಗೆ ಏನಾದರೂ ಒಂದು ಹೊಸ ಸಿಸ್ಟಮ್‌ನ್ನು ನೀವು ಈ ಕೆಲಸ ಚೆಕ್ ಮಾಡತಕ್ಕಂಥದ್ದು, ಅಥವಾ ಅವರಿಗೆ ಏನಾದರೂ ಹಿಂದೆ ದೇವರಾಜ ಅರಸರ ಕಾಲದಲ್ಲಿ ಮಾಡುತ್ತಿದ್ದರು, ಯಾವುದು ಒಂದು ರೂಲ್ ಅಡಾಪ್ಟ್ ಮಾಡಿ ಎಷ್ಟು ಜನ ಅಧಿಕಾರಿಗಳನ್ನು ಮನೆಗೆ ಕಳುಹಿಸತಕ್ಕಂಥ, ನಿರ್ದಾಕ್ಷಿಣ್ಯವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಹಣ ಸರಿಯಾಗಿ ಉಪಯೋಗ ಆಗುವುದಿಲ್ಲ. ಕಡ್ಡಾಯ ನಿವೃತ್ತಿ ಮಾಡಬೇಕು.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :– ಉಪಾಧ್ಯಕ್ಷರೇ, ಪರ್ಸೆಂಟೇಜ್ ಅವರೇ ತೆಗೆದುಕೊಂಡು ಹೋಗುತ್ತಾರೆಂದು ಹೇಳುತ್ತಾರೆ, ಆ ಪರ್ಸೆಂಟೇಜ್ ಯಾರ್‍ಯಾರಿಗೆ ಎಷ್ಟೆಷ್ಟು ಬರುತ್ತದೆ ಆ ಎಲ್ಲಾ ಲೆಕ್ಕ ಗೊತ್ತಿರಬಹುದು ಬಹುಶಃ ಅದನ್ನೂ ಹೇಳಿ ಬಿಟ್ಟರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಪರ್ಸೆಂಟೇಜ್ ಎಷ್ಟೆಷ್ಟು, ಯಾರ್‍ಯಾರು ತೆಗೆದುಕೊಳ್ಳುತ್ತಾರೆ, ಅದೆಲ್ಲವನ್ನು ನಾನು ಹೇಳುತ್ತಿದ್ದೇನೆ, ಅವರು ಯಾರೇ ತೆಗೆದು ಕೊಂಡಿರಲಿ ಪರ್ಸೆಂಟೇಜ್ ಇವತ್ತು ಏನಾಗಿದೆ ಎಂದರೆ ಸಂಪೂರ್ಣ ನೀವು ನಿಗ್ರಹಿಸು ವುದಕ್ಕೆ ಆಗದೇ ಇರಬಹುದು, ಕೆಲಸದ ಗುಣಮಟ್ಟ ಯಾವ ಮಟ್ಟಿಗೆ ಹೋಗುತ್ತಿದೆ ಎಂದರೆ ನಿನ್ನೆ ಮಾಡಿದ ಕೆಲಸ ಇವತ್ತು ಬಿದ್ದು ಹೋಗತಕ್ಕಂತಹ ಪರಿಸ್ಥಿತಿ ಇದೆ. ಸನ್ಮಾನ್ಯ ಕೃಷಿ ಸಚಿವರು ಇಲ್ಲೇ ಕೂತಿದ್ದಾರೆ ನನ್ನ ತಾಲ್ಲೂಕಿನಲ್ಲಿ ಡಿ.ಎಲ್.ಡಿ.ಬಿ. ಎಂದು ಇದೆ, ನಾನು ಈ ಸರ್ಕಾರವನ್ನು ಸಂದರ್ಭದಲ್ಲಿ ನನ್ನ ತಾಲ್ಲೂಕಿನಲ್ಲಿರತಕ್ಕಂತಹ ಡಿ.ಎಲ್.ಡಿ.ಬಿ.ಯನ್ನು ನೀವು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕು. ಈ ಮೂಲಕ ಒತ್ತಾಯ ಮಾಡುತ್ತೇನೆ ನನ್ನ ತಾಲ್ಲೂಕಿನಲ್ಲಿ ಕಳೆದ ನಾಲ್ಕುವರೆ ಐದು ವರ್ಷಗಳಿಂದ ಎಂಟು ಕೋಟಿ ರೂಪಾಯಿಗಳ ಕೆಲಸವನ್ನು ಕೆಲಸ ಮಾಡಿದ್ದಾರೆ.

ಸನ್ಮಾನ್ಯ ಕೃಷಿ ಸಚಿವರ ಮುಖ ಸುತ್ತಿಗೆ ಹೇಳುವ ಮಾತಲ್ಲ ನನಗೆ ಗೊತ್ತಿದೆ, ಇವತ್ತು ಈ ಡಿ.ಎಲ್.ಡಿ.ಬಿ. ಪ್ರಾರಂಭ ಆದಾಗಿನಿಂದ ಕೃಷಿ ಸಚಿವರ ಕಛೇರಿ ಮುಂದೆ ಕೋಟಿಗಟ್ಟಲೆ ದುಡ್ಡು ಕೊಟ್ಟುಕೊಂಡು ಟ್ರಾನ್ಸ್‌ಫರ್‌ಗೆ ಸಾಯಿಲ್ ಕನ್‌ಸರ್ವೇಷನ್ ಆಫೀಸರ್ ಕೆಲಸ ಬೇಕೇ ಬೇಕು ಎಂದು ಕ್ಯೂ ನಿಂತಿದ್ದು ನಾವು ನೋಡಿದ್ದೇವೆ. ಸನ್ಮಾನ್ಯ ಬೈರೇಗೌಡರು ಅಧಿಕಾರ ವಹಿಸಿಕೊಂಡ ಮೇಲೆ ಅವರ ಛಾಟಿ ಏಟು ಬಿದ್ದ ಮೇಲೆ ಯಾರೂ ಒಬ್ಬ ಅಧಿಕಾರಿಗೂ ಕೃಷಿ ಇಲಾಖೆಯಲ್ಲಿ ಇವತ್ತು ಲಂಚ ಕೊಡುತ್ತೇನೆಂದು ಹೇಳತಕ್ಕಾಂಥದ್ದು ತಪ್ಪಿದೆ. ನಾನು ಕೇಳುತ್ತೇನೆ, ಎಂಟು ಕೋಟಿ ರೂಪಾಯಿಗಳನ್ನು ನಾಲ್ಕುವರೆ ವರ್ಷದಿಂದ ನಮ್ಮ ಸರ್ಕಾರ ನಮ್ಮ ತಾಲ್ಲೂಕಿನಲ್ಲಿ ಖರ್ಚು ಮಾಡಿರುವಂಥದ್ದು, ತಾವು ನನ್ನ ತಾಲ್ಲೂಕಿಗೆ ಬಂದಿದ್ದೀರಿ, ನಾನು ನಿಮಗೆ ಒಂದು ಸಾರಿ ಕರೆದುಕೊಂಡು ಹೋಗಿದ್ದೆ. ಅವರು ಎನ್‌ಕ್ವೈರಿ ಆರ್ಡರ್ ಮಾಡಿ ಬಂದಿದ್ದಾರೆ. ತಾವು ಇನ್ನೊಂದು ಸಾರಿ ಸ್ಪಾಟ್ ವಿಸಿಟ್ ಮಾಡಬೇಕು. ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ, ಅವನನ್ನು ನಿರ್ದಾಕ್ಷಿಣ್ಯವಾಗಿ ಕಡ್ಡಾಯ ನಿವೃತ್ತಿಮಾಡ ಬೇಕು. ಬೈರೇಗೌಡರ ಕಾಲದಲ್ಲಿ ಇದು ಆಗದಿದ್ದರೆ ಯಾರ ಕಾಲದಲ್ಲಿ ನಾವು ನಿರೀಕ್ಷೆ ಮಾಡೋಣ. ದಯಮಾಡಿ ಇದರ ಬಗ್ಗೆ ತೀವ್ರವಾದ ಕ್ರಮ ತೆಗದುಕೊಳ್ಳಬೇಕೆಂದು ನನ್ನ ವಾದ. ನೀವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು ಅಧ್ಯಕ್ಷರೇ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :– ಮಾನ್ಯ ಉಪ ಸಭಾಧ್ಯಕ್ಷರೇ, ಮಾನ್ಯ ಶಿವರಾಮೇಗೌಡರು ಹೇಳುವುದರಲ್ಲಿ ಅರ್ಥವಿದೆ. ಬರೀ ನಾಗಮಂಗಲದಲ್ಲಿ ಅಲ್ಲ ಇಡೀ ರಾಜ್ಯದಲ್ಲಿ ಸಾಕಷ್ಟು ಹಣ ದುರುಪಯೋಗ ಆಗಿರತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಕೆಲವು ಕಡೆ ಬಹಳ ತೀವ್ರವಾದ ಕ್ರಮವನ್ನು ತೆಗೆದುಕೊಂಡಿದ್ದೇನೆ, ನಿನ್ನೆ ದಿವಸ ಕುಣಿಗಲ್‌ನಲ್ಲಿ ಇಂಥದ್ದೇ ಸುಮಾರು ಒಂದು ಲಕ್ಷ 80,000 ರೂಪಾಯಿ ದುರುಪಯೋಗದ ಬಗ್ಗೆ ನಾನೇ ಸ್ಥಳ ತನಿಖೆ ಮಾಡಿ ಬಂದಿ ದ್ದೇನೆ. ನಿನ್ನೆ ದಿವಸ ಅವರ ಮೇಲೆ ಪೋಲೀಸ್‌ನವರಿಗೆ ಕ್ರಿಮಿನಲ್ ಕಂಪ್ಲೇಂಟ್ ಕೊಟ್ಟು ಅವರನ್ನು ದಸ್ತಗಿರಿ ಮಾಡುವಂತಹ ಕ್ರಮ ತೆಗೆದುಕೊಳ್ಳತಕ್ಕಂತಹ ಕೆಲಸ ಆಗಿದೆ. ಕೇವಲ ಕುಣಿಗಲ್‌ನಲ್ಲಿ ಅಲ್ಲ, ಹಿಂದೆ ಇದೇ ತರಹ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ಸಹ ಆಗಿದ್ದವು. ಅಲ್ಲಿ ಸಹ ಇದೇ ಕ್ರಮ ತೆಗೆದುಕೊಂಡಿದ್ದೇನೆ. ನಿನ್ನೆ ದಿವಸ ಆರು ಜನರ ಮೇಲೆ ಮೊಕದ್ದಮೆಗಳನ್ನು ಮೂರು ಪೋಲೀಸ್ ಠಾಣೆಗಳಲ್ಲಿ ಅದನ್ನು ದಾಖಲು ಮಾಡತಕ್ಕಂತಹ ಕೆಲಸ ಮಾಡಿಸಿದ್ದೇನೆ. ನಾನು ಒಂದು ಸಾರಿ ನಾಗಮಂಗಲ ತಾಲ್ಲೂಕಿಗೆ ಸಹ ಹೋಗಿ ಒಂದು ಮಧ್ಯಾಹ್ನದ ಕೆಲಸಗಳನ್ನು ಪರಿಶೀಲನೆ ಮಾಡಿದ್ದೆ. ನಾನು ನೋಡಿದಂತಹ ಕೆಲಸದಲ್ಲಿ ಒಂದು ಸಮರ್ಪಕವಾಗಿ ಆಗಿರಲಿಲ್ಲ. ಆ ತನಿಖೆಯನ್ನು ನಾನೇ ಖುದ್ದಾಗಿ ಮಾಡಬೇಕೆಂಬ ದೃಷ್ಟಿಯಿಂದ ಪರಿಪೂರ್ಣವಾಗಿ ಆವತ್ತು ತನಿಖೆ ಮಾಡುವುದಕ್ಕೆ ಆಗಲಿಲ್ಲ. ನಾಗಮಂಗಲ ತಾಲ್ಲೂಕಿನಲ್ಲಿ ಅವರು ಹೇಳಿದ ಹಾಗೆ ಅಪಾರವಾದ ಹಣ ದುರುಪಯೋಗ ಆಗಿರತಕ್ಕಂಥದ್ದನ್ನು ನಾನು ಗಮನಿಸಿದ್ದೇನೆ. ನಾನೇ ಖುದ್ದಾಗಿ ಅದನ್ನು ತನಿಖೆ ಮಾಡಬೇಕೆಂದು ಸಹ ತೀರ್ಮಾನಕ್ಕೆ ಬಂದಿದ್ದೇನೆ. ಎರಡು ದಿವಸ ಕಾಲ ಅದೇ ಒಂದು ತಾಲ್ಲೂಕಿನಲ್ಲಿ ನಾನೇ ಕುಳಿತು ಎರಡು ದಿವಸಗಳ ಕಾಲ ಎಷ್ಟು ಕೆಲಸಗಳನ್ನು ನೋಡುವುದಕ್ಕೆ ಸಾಧ್ಯವಿದೆಯೋ

ಅಷ್ಟನ್ನು ಆ ಕೆಲಸಗಳನ್ನು ತನಿಖೆ ನಡೆಸಿ ಯಾವ ಅಧಿಕಾರಿಯ ಮುಲಾಜಿಲ್ಲದೆ, ಅಂತಹವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಸ್ವಾಗತಿಸುತ್ತೇನೆ, ಸನ್ಮಾನ್ಯ ಸಚಿವರು ನೇರವಾಗುವುದಕ್ಕೆ ಹೇಳಿರತಕ್ಕಂಥದ್ದನ್ನು ನಾನು ಶೀಘ್ರವಾಗಿ ಅದನ್ನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ವಿಧಾನಸೌಧಕ್ಕೆ ಸೀಮಿತವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಇವತ್ತು ಭ್ರಷ್ಟಾಚಾರದ ಬಗ್ಗೆ ಹೇಳುತ್ತಾ ಹೋದರೆ ಚರ್ಚೆ ಮಾಡುವುದಕ್ಕೆ ಕೊನೆ ಇಲ್ಲ. ಅದು ನಾವು ಒಂದು ವಿಚಾರವನ್ನು ಮುಂದಿಟ್ಟಾಗ ಅದರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ ಎಂದು ಎನ್ನತಕ್ಕಂತಹ ಮಾತು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ವಿಧಾನ ಸೌಧಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಜನರಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ಹಾಗೆ ಒಂದು ವಿನಂತಿ ಸರ್ಕಾರಕ್ಕೆ ಮಾಡುತ್ತೇನೆ, ಪೆನ್‌ಷನ್ ಪದ್ಧತಿ ಮಾಡಿದ್ದೀರಿ 350 ಕೋಟಿ ರೂಪಾಯಿ ಪೆನ್‌ಷನ್ ಕೊಡುವುದಕ್ಕೆ 63 ಕೋಟಿ ರೂಪಾಯಿ ನೌಕರರನ್ನು ಇಟ್ಟುಕೊಂಡಿದ್ದೀರಿ. ಯಾವ ರಾಷ್ಟ್ರದಲ್ಲಿ ಸಹಿತ ಇಡೀ ಇಂಡಿಯಾ ದೇಶದಲ್ಲಿ ಇರತಕ್ಕಂತಹ ವ್ಯವಸ್ಥೆ ಇಲ್ಲ. ಇಲ್ಲಿ ಅವನು 20 ವರ್ಷ, 21 ವರ್ಷಕ್ಕೆ ಕೆಲಸಕ್ಕೆ ಸೇರಿದರೆ 58 ನೇ ವರ್ಷದವರೆಗೆ ಅವನಿಗೆ ಸಂಬಳ ಕೊಡಬೇಕು. ಆತ ಕೆಲಸ ಬಿಟ್ಟು ಮನೆಗೆ ಹೋದ ಮೇಲೆ ನಾವು ಪೆನ್‌ಷನ್ ಕೊಡುತ್ತೇವೆ. ಪಾಶ್ಚಿಮಾತ್ಯ ದೇಶಗಳಲ್ಲಿ ನನಗೆ ತಿಳಿದ ಮಟ್ಟಿಗೆ 10-15 ವರ್ಷ ಕಂಟ್ರ್ಯಾಕ್ಟ್ ಕೊಟ್ಟು ಅವನು ಚೆನ್ನಾಗಿ ಕೆಲಸ ಮಾಡಿದರೆ ಇಟ್ಟುಕೊಳ್ಳುತ್ತಾರೆ, ಮಾಡದೆ ಇದ್ದರೆ ಅವನಿಗೆ ಆಚೆಗೆ ಕಳುಹಿಸುತ್ತಾರೆ. ದೃಢಕಾಯರಾಗಿರುವಾಗಲೇ ಅಧಿಕಾರಿಗಳು ವಿಧಾನ ಸೌಧದಲ್ಲಿ ಎಮ್.ಎಸ್. ಬಿಲ್ಡಿಂಗ್‌ನಲ್ಲಿ ಕುಳಿತು 50 ರಿಂದ ಆಚೆಗೆ ಅಥವಾ 53 ರವರೆಗೆ ಆಚೆಗೆ 58 ರ ಒಳಗೆ ಇರತಕ್ಕಂತಹ ಅಧಿಕಾರಿಗಳನ್ನು ನೋಡಬೇಕು ಅವರಿಗೆ ಬೇಕೇ ಬೇಕು ಬೇಡವೇ ಬೇಡ ಎನ್ನುವ ರೀತಿಯಲ್ಲಿ ವರ್ತಿಸುತ್ತಿರುತ್ತಾರೆ ಸರ್ಕಾರ ಯಾವುದೇ ಒಂದು ನಿರ್ದಿಷ್ಟವಾದ ಕಾನೂನು ಮಾಡಿದರೂ ಸಹಿತ ಅದನ್ನು ಜಾರಿಗೆ ತರಬೇಕೆಂಬುದಕ್ಕೆ ವಿಚಾರ ಅವರಲ್ಲಿ ಇಲ್ಲ ಹೇಗಿದ್ದರೂ ಮನೆಗೆ ಹೋಗುತ್ತೇನೆ ಏನು ಬೇಕಾದರೂ ಆಗಲಿ ಎಂಬ ಮನೋ ಭಾವನೆ ಅವರಿಗೆ ಬಂದು ಬಿಟ್ಟಿದೆ. ಇವತ್ತು ನಾನು ಕೇಳುತ್ತೇನೆ, ಈ ಅನಿಷ್ಟ ಪದ್ಧತಿ ಏನು ಇದೆ ಪೆನ್‌ಷನ್ ಕೊಡತಕ್ಕಂತಹ ಪದ್ಧತಿ ನೀವು ಏನಾದರೂ ಮಾಡಿ ನೀವು ಅವರಿಗೆ ಕೆಲಸ ಬಿಟ್ಟ ತಕ್ಷಣ ನಿವೃತ್ತಿ ಆದ ತಕ್ಷಣ ಒಂದು ನನ್ನ ವಾದ ನಿವೃತ್ತಿ ವಯಸ್ಸನ್ನು 58 ರಿಂದ 55 ಕ್ಕೆ ಇಳಿಸಬೇಕು. ಇಳಿಸಿದರೆ ಇವತ್ತು ಲಕ್ಷೋಪಲಕ್ಷ ಜನ ಬೀದಿಯಲ್ಲಿರತಕ್ಕಂತಹವರಿಗೆ ಉದ್ಯೋಗವಕಾಶ ಸಿಗುತ್ತದೆ. ಇದು ಒಂದು. ಅದು ಒಂದು ಕಡೆ ಆದರೆ ಎರಡನೆಯದು, ಪೆನ್‌ಷನ್ ಪದ್ಧತಿ 350 ಕೋಟಿ ರೂಪಾಯಿಗಳನ್ನು ಬಟವಾಡೆ ಮಾಡುವುದಕ್ಕೆ 63 ಕೋಟಿ ರೂಪಾಯಿ ಜನ ಇಟ್ಟುಕೊಂಡಿದ್ದೇವೆ. ಇದಕ್ಕಿಂತ ಅನಿಷ್ಟ ಪದ್ಧತಿ ಮತ್ತೊಂದು ಇಲ್ಲ. ಇದನ್ನು ಕೊನೆಗಾಣಿಸಬೇಕು. ಆ ಪೆನ್‌ಷನ್ ಪದ್ಧತಿಯನ್ನು ನಿಲ್ಲಿಸಬೇಕು. ಏನಾಗಿದೆ ಎಂದರೆ ಕೂತು ತಿನ್ನುವವನಿಗೆ ಕುಡಿಕೆ ಹಣ ಸಾಲದು ಸಾಲದು ಎಂದು ಗಾದೆ ಇದೆ. ನೀವು

ಕೂತುಕೊಂಡು ತಿನ್ನುವವನಿಗೆ ಎಷ್ಟು ಕೊಡುತ್ತೀರಿ, ಸರ್ಕಾರದ ದುಡ್ಡು? ಅದಕ್ಕೋಸ್ಕರ ಈ 63 ಕೋಟಿ ಉಳಿಯುತ್ತದೆ. ಇವರಿಗೆ ಯಾವುದಾದರೂ ರೂಪದಲ್ಲಿ ದುಡ್ಡು ಕೊಟ್ಟ ಹಾಗೆ ಆಗುತ್ತದೆ. ಇದನ್ನು ಬದಲಾವಣೆ ಮಾಡಬೇಕು. ಅಧಿಕಾರದಲ್ಲಿ 58 ವರ್ಷದವರೆಗೆ ಇದ್ದರೂ ಸಹಿತ ಸರ್ಕಾರ ಮನೆ ಅಳಿಯನನ್ನು ನೋಡಿದ ಹಾಗೆ ನೋಡಿಕೊಳ್ಳುತ್ತದೆ. ಅತ್ತೆ ಮಾವ ಮನೆಯ ಅಳಿಯನನ್ನು ಹೇಗೆ ನೋಡಿಕೊಳ್ಳುತ್ತಾರೆ, ಹಾಗೆ ಸರ್ಕಾರ ನೋಡಿಕೊಳ್ಳುತ್ತದೆ. ಈಗ ಹಾಗೆ ಸರ್ಕಾರ ನೌಕರರನ್ನು 58 ವರ್ಷದವರೆಗೆ ನೋಡಿ ಕೊಳ್ಳುತ್ತದೆ. 58 ಆದ ಮೇಲೆ ಮಾವನನ್ನು ನೋಡಿದ ಹಾಗೆ, ಮಾವನನ್ನು ಎಷ್ಟು ಗೌರವಯುತವಾಗಿ ಕಾಣುತ್ತೇವೊ ಆ ರೀತಿ ನೋಡತಕ್ಕಂಥದ್ದು. ಈ ಸಿಸ್ಟಮ್ ರಾಜ್ಯದಲ್ಲಿ ಬದಲಾವಣೆ ಮಾಡಬೇಕು. ಇದಕ್ಕೆ ಒಂದು ಅಂಕಿತ ಹಾಕಬೇಕು. ಪೆನ್ಷನ್ ರದ್ದತಿಯನ್ನು ಮಾಡಬೇಕು. ಪೆನ್ಷನ್ ಕೊಡದೇ ಇದ್ದರೆ ಅವರು ಅಧಿಕಾರಿಗಳು ಕೇಳುವುದಿಲ್ಲ. ಹಳೆಯ ಕಾಲ ಹೋಯಿತು ಸಂಬಳದ ಕಾಲ, ಸರ್ಕಾರ ಕೊಡತಕ್ಕಂತಹ ಸಂಬಳ ಮೂರು ದಿವಸ ಸಾಲುವುದಿಲ್ಲ ಕೆಲವು ಅಧಿಕಾರಿಗಳಿಗೆ. ಎಲ್ಲಾ ಅಧಿಕಾರಿಗಳಿಗೆ ಕುರಿತು ನಾನು ಹೇಳುತ್ತಿಲ್ಲ, ಬಹಳ ಉತ್ತಮರಿದ್ದಾರೆ. ಕೆಲವರು ಬಹಳ ಪ್ರಮುಖವಾಗಿ ಪ್ರಾಮಾಣಿಕರಾದ ಅಧಿಕಾರಿಗಳು ಇವತ್ತು ಇದ್ದಾರೆ. ಆದರೆ ಅಷ್ಟೇ ಪ್ರಮಾಣದ ಕೆಟ್ಟ ಅಧಿಕಾರಿಗಳು ಈ ಸರ್ಕಾರದಲ್ಲಿ ಇರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಅವರಿಗೆ ಪ್ರಜಾ ಪ್ರತಿನಿಧಿಗಳ ಬಗ್ಗೆ ಗೌರವ ಇಲ್ಲ. ಇವತ್ತು 12,000ಕೋಟಿ ರಾಜ್ಯದಲ್ಲಿ 5 ಕೋಟಿ ಜನಗಳಿಂದ ಸುಲಿಗೆ ಆದನಂತರ ರೆವಿನ್ಯೂನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇದಕ್ಕೆ ತಾವು ಅಂಕಿತ ಹಾಕಬೇಕು. ಈ ಒಂದು ಪೆನ್ಷನ್ ಪದ್ಧತಿಯನ್ನು ನಿಲ್ಲಿಸಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಫ್ಯಾಕ್ಟರಿಯಲ್ಲಿ ಗ್ರಾಚ್ಯುಯಿಟಿ ಎಂದು ಕೊಡುತ್ತಾರೆ, ನೀವು ಏನಾದರೂ ಸರ್ಕಾರದ ಪದ್ಧತಿಯನ್ನು ಫ್ಯಾಕ್ಟರಿಯಲ್ಲಿ ಅಳವಡಿಸಿದರೆ ಯಾವ ಫ್ಯಾಕ್ಟರಿನೂ ಇವತ್ತು ತಲೆ ಎತ್ತುವುದಕ್ಕೆ ಆಗುವುದಿಲ್ಲ. ಆ ಪ್ರಕಾರದಲ್ಲಿ ನೀವು ಗ್ರ್ಯಾಯಿಟಿ ಟೈಪ್ ಏನಾದರೂ ಮಾಡಿ ಇದಕ್ಕೆ ಕಡಿವಾಣ ಹಾಕಬೇಕು ಎನ್ನತಕ್ಕಂತಹ ಮಾತು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು ಮಹಾನಗರದಲ್ಲಿ ಇರತಕ್ಕಂತಹ ಅಧಿಕಾರಿಗಳಿಗೆ ಕೆಲವರು ಹೊಸದಾಗಿ ಇರತಕ್ಕಂತಹ ಅಂಬ್ಯಾಸಿಡರ್ ಕಾರಿನಲ್ಲಿ ತಿರುಗುವಾಗ ಕೆಲವು ಅಧಿಕಾರಿಗಳು ಕಾಂಟೆಸ್ಸಾದಲ್ಲಿ ಹೋಗುತ್ತಾರೆ. ಇನ್ನು ಕೆಲವರು ಹೊಸಕಾರು 1000 ದಲ್ಲಿ ಹೋಗುತ್ತಾರೆ, ಅದು 2. ಕಿ. ಮಿ. ಕೊಡುವುದಿಲ್ಲ. ಸರ್ಕಾರ ದುಡ್ಡು ಇದೆ, ಹೊಸ ಟೆಕ್ನಾಲಜಿ ಬಂದಿದೆ, ಅವನು ಎಲ್ಲಾ ಗುಜ್ರಿಗೆ ತಳ್ಳಿ ಹೊಸ ಟೆಕ್ನಾಲಜಿ 16-10 ಕಿ. ಮೀ. ಕೊಡತಕ್ಕಂತಹ ಕಾರ್‌ಗಳು ಇವೆ, ಒಬ್ಬ ಡೆಪ್ಯುಟಿ ಸೆಕ್ರೆಟರಿ, ಒಬ್ಬ ಸೆಕ್ರೆಟರಿ ಇವತ್ತು ಅವರು ಮನೆಯಿಂದ ಆಫೀಸ್‌ಗೆ ಬರಬೇಕಾದರೆ ಒಂದು ಕಾರು ಬೇಕು. ಆ ಕಾರು ಕೊಡಬೇಕಾದರೆ ಇವತ್ತು ಎಲ್ಲಾ ಬದಲಾವಣೆಯನ್ನು ತಾವು ನೋಡಬೇಕಾಗಿದೆ. ಇವತ್ತು ಒಂದು ಮಾರುತಿ ಕಾರ್ ವ್ಯಾನ್ ಮಾರುತಿ ಕಾರ್ 16 ರಿಂದ 17 ಕಿ. ಮಿ. ಕೊಡುತ್ತದೆ. 1000 ರಲ್ಲಿ ಯಾರಾದರೂ ಓಡಾಡಿದರೆ ಎರಡು ಕಿ. ಮೀ. ಕೊಡುತ್ತದೆ. ಇವತ್ತು ಮೇಂಟೆನೆನ್ಸ್ ಕಾಸ್ಟ್ ಜಾಸ್ತಿಯಾಗುತ್ತದೆ. ದಯಮಾಡಿ ಬೆಂಗಳೂರು ನಗರದಲ್ಲಿ ಸರ್ಕಾರ ಒಂದು

ತೀರ್ಮಾನ ತೆಗೆದುಕೊಳ್ಳಬೇಕು, ಬೆಂಗಳೂರು ನಗರದಲ್ಲಿ ಇರತಕ್ಕಂತಹ ಅಧಿಕಾರಿಗಳ ಪಟ್ಟಿ ಒಂದು ಇದೆ, ಡೆಪ್ಯುಟಿ ಸೆಕ್ರೆಟರೀಸ್, ಅಂಡರ್ ಸೆಕ್ರೆಟರೀಸ್, ಸೆಕ್ರೆಟರೀಸ್, ಪರ್ಮನೆಂಟಾಗಿ ಇಲ್ಲಿರತಕ್ಕಂತಹ ಪೋಸ್ಟ್ ಇವೆ, ಇವಕ್ಕೆ ನೀವು ಬಿಗಿ ಮಾಡಬೇಕು. ಈ ಕಾರ್‌ಗಳು ಫೋನ್‌ಗಳು ಹೇಗೆ ಆಗಿದೆ ಎಂದರೆ ಫೋನ್ ನಾವು ಯಾರಾದರೂ ಮಂತ್ರಿಗಳಲ್ಲಿ ಏನಾದರೂ ಚರ್ಚೆಯಾದರೆ ಬೀಗ ಹಾಕಿ ಬಿಡುತ್ತಾರೆ. ನಮ್ಮ ಮಂತ್ರಿಗಳು. ನೀವು ನೋಡಬೇಕು ಸುಮ್ಮನೆ ತಮಾಷೆಯಾಗಿ ಕೂತುಕೊಳ್ಳಬೇಕು. ಇಂಟರ್ ನ್ಯಾಷನಲ್ ಕಾಲ್ ಮಾಡುತ್ತಾರೆ ನಿಮ್ಮ ಪಿ. ಎ.ಗಳು ಅಲ್ಲಿ ಕುಳಿತು. ಮಂತ್ರಿಗಳ ಕಚೇರಿಯಲ್ಲಿ ಕಾರ್ಯದರ್ಶಿಯವರ ಕಚೇರಿಯಲ್ಲಿ ಯಾರಾದರು ಪಿ.ಎ.ಗಳು ಇದ್ದರೆ ಅವರು ಬೇಕಾದರೆ ಇಂಟರ್ ನ್ಯಾಶನಲ್ ಕಾಲ್ ಮಾಡಲಿ, ಆದರೆ ಪಿ.ಎ. ಫ್ರೆಂಡ್ಸ್ ಇರುತ್ತಾರಲ್ಲ ಅವರು ಬಂದು ಕುಳಿತುಕೊಂಡು ಇಂಟರ್ ನ್ಯಾಶನಲ್ ಕಾಲ್‌ಗಳನ್ನು ಮಾಡುತ್ತಾರೆ. ಸನ್ಮಾನ್ಯ ಸಭಾಧ್ಯಕ್ಷರೇ ನಾನು ಯಾವುದೋ ಒಂದು ಆಫೀಸ್‌ನಲ್ಲಿ ಕುಳಿತುಕೊಂಡಿದ್ದೆ, ಆ ಕಚೇರಿಯ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂದು ದುಬಾಯಿನಲ್ಲಿ ಇರತಕ್ಕಂಥ ಹೆಣ್ಣುಮಗಳ ಬರ್ತ್‌ಡೇಗೆ ಗುಡ್ ಬೈ ಹೇಳಲಿಕ್ಕೆ ಆ ಕಚೇರಿಯಿಂದ ಇಂಟರ್ ನ್ಯಾಷನಲ್ ಕಾಲ್ ಮಾಡುತ್ತಾರೆ. ನಮ್ಮ ಕಣ್ಣೆದುರೇ ಇದು ನಡೆಯಿತು. ಆದರು ನಾವು ಸುಮ್ಮನೇ ಕೂತಿದ್ದೆವು. ನಾವು ಸಾರ್ವಜನಿಕ ಕಾರ್ಯಕ್ಕಾಗಿ ಒಂದು ಫೋನ್ ಮಾಡ ಬೇಕೆಂದರೆ ಜೀವ ಹಿಸಿಕಿಕೊಳ್ಳುತ್ತೇವೆ. ಇನ್ನು ಕಾರ್‌ಗಳು ಮಾನ್ಯ ಸಭಾಧ್ಯಕ್ಷರೇ, ನೀವು ಬೆಳಿಗ್ಗೆ, ಬಿಶಪ್ ಕಾಟನ್ ಮುಂದೆ ಹೋಗಿ, ಪೂರ್ಣ ಪ್ರಜ್ಞಾ ಮುಂದೆ ಹೋಗಿ, ಸೋಫಿಯಾ ಮುಂದೆ ಹೋಗಿ, ನ್ಯಾಶನಲ್ ಕಾಲೇಜ್ ಮುಂದೆ ಹೋಗಿ ಎಲ್ಲಾ ಗೂಟದ ಕಾರು, ಸರ್ಕಾರಿ ಎಂಬುದು ಇರತಕ್ಕ ಸರ್ಕಾರಿ ಕಾರುಗಳ ಎಲ್ಲಾ ಕಡೆ ಕ್ಯೂ ಇರುತ್ತದೆ. ಯಾವುದಾದರು ಬಡ ಬೋರೇಗೌಡನ ಕಾರು ಸಿಕ್ಕರೆ ಅಲ್ಲಿ ಗುಜ್ಜಿಕೊಂಡು ಹೊರಟುಹೋಗುತ್ತಾರೆ ಅಲ್ಲಿ. ಇಲ್ಲಿ ಕೆಲವು ಪ್ರಾಮಾಣಿಕ ಅಧಿಕಾರಿಗಳು ಕೂಡ ಇದ್ದಾರೆ ಅವರ ಬಗ್ಗೆ ನಾನು ಹೇಳುವುದಿಲ್ಲ. ಇದಕ್ಕೆಲ್ಲಾ ಕಡಿವಾಣ ಹಾಕಬೇಕು. ತರಕಾರಿ ತರುವುದಕ್ಕೆ ಕಾರು, ಮಾಂಸ ತರುವುದಕ್ಕೆ ಕಾರು, ಬೇರೆಯಾರಾದರನ್ನ ಕರೆದುಕೊಂಡು ಬರಬೇಕಾದರೂ ಸರ್ಕಾರಿ ಕಾರು. ಈ ಪರಿಸ್ಥಿತಿ ಇರುವಾಗ ಇದನ್ನು ಬದಲಾವಣೆ ಮಾಡದಿದ್ದರೆ ಆಗುವುದಿಲ್ಲ, ಮಾನ್ಯ ಭೈರೇಗೌಡರು ಈ ನಿಟ್ಟಿನಲ್ಲಿ ಗಮನಹರಿಸಬೇಕು. ಇವೊತ್ತು ಉದಾಹರಣೆಗೆ ಹುಬ್ಬಳ್ಳಿ ಧಾರವಾಡದಿಂದ ಬರತಕ್ಕಂಥ ಅಧಿಕಾರಿಗಳು ಸುಮ್ಮನೆ ಬರುತ್ತಾರಾ? ಅವರು ಯಾವ ಯಾವ ರೀತಿ ಬರುತ್ತಾರೋ, ಯಾರ್ಯಾರನ್ನು ಕರೆದುಕೊಂಡು ಬರುತ್ತಾರೋ ಅವರಿಗೆಲ್ಲಾ ನಿಮ್ಮ ಸರ್ಕಾರಿ ಕಾರು. ಇದಕ್ಕೇನಾದರೂ ಕಡಿವಾಣ ಹಾಕಬೇಕು, ಇದನ್ನೇನಾದರು ನಿಲ್ಲಿಸಿದರೆ, ಇದಕ್ಕೇನಾದರೂ ಕಡಿವಾಣ ಹಾಕದಿದ್ದರೆ...

ಶ್ರೀ ಬಿ. ಬಿ. ಚಿಮನಕಟ್ಟಿ :- ಇದು ಕೇವಲ ಧಾರವಾಡ ಹುಬ್ಬಳ್ಳಿಯಿಂದ ಬರತಕ್ಕಂಥ ಅಧಿಕಾರಿಗಳೋ ಅಥವಾ ಇಡೀರಾಜ್ಯದಿಂದ ಬರತಕ್ಕಂಥ ಅಧಿಕಾರಿಗಳೋ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ :- ಛೇ, ಛೇ, ಹಾಗೇನಿಲ್ಲ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನಾನು ಏತಕ್ಕೆ ಹೇಳಿದೆ ಎಂದರೆ ದೂರ, ಈಗ ಮೈಸೂರಿನ ಅಧಿಕಾರಿಗಳು ಬರಲಿ, ಅವರು ಯಾರನ್ನಾದರೂ ಕರೆದುಕೊಂಡು ಬರಲಿ ತಡೆದುಕೊಳ್ಳಬಹುದು, ಸ್ಟೇನೋಸ್ ಕರೆದುಕೊಂಡು ಬರಲಿ, ಟೈಪಿಸ್ಟನ್ನೇ ಕರೆದು ಕೊಂಡು ಬರಲಿ ಇನ್ನ್ಯಾರನ್ನಾದರೂ ಕರೆದುಕೊಂಡು ಬರಲಿ ತಡೆದಕೊಳ್ಳಬಹುದು. ಆದರೆ ಅದೇ ಹುಬ್ಬಳ್ಳಿ, ಬೆಳಗಾಂದಿಂದ ಗಾಡಿಗಳು ಬರಬೇಕು ಎಂದರೆ ಐದ್ಹೈದು ಸಾವಿರ ರೂಪಾಯಿಗಳ ಖರ್ಚು. ಈ ಪರಿಸ್ಥಿತಿ ಇರುವಾಗ ಇದಕ್ಕೆ ಏನಾದರೂ ಸರ್ಕಾರಿ ಆಜ್ಞೆ ಹೊರಡಿಸಬೇಕು, ಇದಕ್ಕೆ ಯಾವ ತರಹ ಕಡಿವಾಣ ಹಾಕಬೇಕು ಎಂಬುದರ ಬಗ್ಗೆ ತ್ವರಿತವಾಗಿ ಚಿಂತನೆ ಆಗಬೇಕು. ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಮಾತ್ರ ಗೂಟದ ಕಾರು ಹಾಕಿಕೊಂಡು ಹೋಗಲು ಪ್ರಾವಿಜನ್ ಇದೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೂ ಈ ಪ್ರಾವಿಜನ್ ಇಲ್ಲ. ಆದರೆ ಇವೊತ್ತು ಯಾವ ಕಾರು ಬರುತ್ತದೆ, ಯಾರು ಬರುತ್ತಾರೆಂಬುದು ಬಹಳ ಕನ್‌ಫ್ಯೂಷನ್ ಆಗಿದೆ. ಗೂಟ ತೆಗೆಯಬೇಕೆಂದು ಇದೇ ಸದನದಲ್ಲಿ ಮಾನ್ಯ ಜಾಲಪ್ಪ ನವರು ಇದ್ದಾಗ ಚರ್ಚೆಯಾಯಿತು. ಅವರು ಇವೊತ್ತು ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಆದರೆ ಅಂದು ಸನ್ಮಾನ್ಯ ಭೈರೇಗೌಡರು, ವಾಟಾಳ್ ನಾಗರಾಜ್‌ರವರೂ ಕೂಡ ಇದ್ದರು. ಅಂದು ಲೈಟಿನ ಬಗ್ಗೆ ಕೂಡ ಚರ್ಚೆಯಾಯಿತು. ಲೈಟ್ ಹಾಕಿಕೊಳ್ಳಲಿ, ಲೈಟ್ ಹಾಕಿಕೊಂಡರೆ ಅದು ಸೇಫ್ಟಿ. ಸನ್ಮಾನ್ಯ ಪುಟ್ಟಣ್ಣಯ್ಯನವರು ಕೂಡ ಹಸಿರು ಲೈಟ್ ಹಾಕಿಕೊಂಡು ಹೋಗಿದ್ದಾರೆ. ಈ ಹಿಂದೆ ಈ ಲೈಟಿನ ಬಗ್ಗೆ ಹಾಗೂ ಬಾವುಟದ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯಿತು. ಗೂಟದ ಬಗ್ಗೆ ನಮ್ಮ ರಾಜ್ಯದಲ್ಲಿ ಕೌನ್ಸಿಲ್ ಆಫ್ ಮಿಸಿಸ್ಟರ್ಸ್ ಮಾತ್ರ ಹಾಕಿಕೊಳ್ಳಬೇಕೆಂದು ಒಂದು ಆದೇಶವನ್ನು ಹೊರಡಿಸಲು ತಾವು ಸರ್ಕಾರಕ್ಕೆ ಆದೇಶ ನೀಡಬೇಕು. ಆದರೆ ಲೈಟಿನ ಬಗ್ಗೆ ಜಿಜ್ಞಾಸೆ ಇದೆ. ಇವೊತ್ತು ಲೈಟ್ ಹಾಕತಕ್ಕಂಥದ್ದು ಶೋಕಿಗಲ್ಲ. ಸನ್ಮಾನ್ಯ ಸಭಾಧ್ಯಕ್ಷರೇ ತಾವು ನೋಡಬೇಕು ಮೈಸೂರು ಬೆಂಗಳೂರಿನ ರಸ್ತೆಯಲ್ಲಿ ಯಾರೂ ರಾತ್ರಿ ಹೊತ್ತು ಕಾರನ್ನು ಓಡಿಸುವ ಹಾಗಿಲ್ಲ ನಮ್ಮ ಸನ್ಮಾನ್ಯ ಸಿಂಧ್ಯರವರ ಡ್ರೈವರ್‌ಗಳು ಬಸ್ಸನ್ನು ಮೇಲೇನೆ ಏರಿಸಿಬಿಡುತ್ತಾರೆ. ಹೊಲ ಮಾಳ ಮೇಲೆ ಬಿದ್ದರು ಪರವಾ ಇಲ್ಲ ಮೇಲೇರಿಸಿಬಿಡುತ್ತಾರೆ. ಈ ಪರಿಸ್ಥಿತಿ ಇದೆ. ಇನ್ನೂ ಈ ಲೈಟಿನ ಬಗ್ಗೆ. ನೀವು ಲೈಟನ್ನು ಸಂಪೂರ್ಣವಾಗಿ ನಿಲ್ಲಿಸುವುದಾದರೆ ನಮ್ಮದೇನು ಅಭ್ಯಂತರವಿಲ್ಲ. ವಿರೋಧ ಪಕ್ಷದ ನಾಯಕರಿಗೆ ಕೆಂಪು ಲೈಟನ್ನು ಕೊಟ್ಟಿದ್ದೀರಿ, ಪುಟ್ಟಣ್ಣಯ್ಯನವರು ಇವೊತ್ತು ಹಸಿರು ಲೈಟ್ ಹಾಕಿಕೊಂಡ ಮೇಲೆ, ಇವೊತ್ತು ಕನ್ನಡ ಚಳುವಳಿಯ ವೀರ ಆರ್.ಎಸ್.ಎನ್. ಗೌಡ ಇವೊತ್ತು ಯಾವುದೋ ಒಂದು ಲೈಟನ್ನು ಹಾಕಿಕೊಂಡಿದ್ದಾರೆ. ಆದರಂತೆ ನೀವು ಶಾಸಕರಿಗೂ ಕೂಡ ರಾತ್ರಿ ಹೊತ್ತು ಓಡಾಡುವುದಕ್ಕೆ ಒಂದು ಲೈಟನ್ನು ಕೊಟ್ಟರೆ ಚಿಂತೆ ಇಲ್ಲ. ಯಾವ ಕಲರೆಂದು ನೀವೇ ತೀರ್ಮಾನ ಮಾಡಬೇಕು. ಇದಕ್ಕೆ ವ್ಯವಸ್ಥೆ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಇವೊತ್ತು ವಿಧಾನ ಸೌಧದಲ್ಲಿಯ ಅಧಿಕಾರಿಗಳಿಗೆ ಬ್ಯಾಡ್ಜ್ ಹಾಕಿ ಎಂದು ನಾವು ಬಹಳಷ್ಟು ಸಾರಿ ಹೇಳಿದ್ದೇವೆ. ಬ್ಯಾಡ್ಜ್ ಹಾಕದಿದ್ದರೆ ಯಾವ ಅಧಿಕಾರಿಗಳು ಎಲ್ಲಿ ಹೋಗುತ್ತಾರೋ, ಎಲ್ಲಿ ಕೂತಿರುತ್ತಾರೋ, ಏನು ಮಾಡುತ್ತಾರೋ ಎಂದು ಒಂದು ಚೂರು ಅರ್ಥವಾಗುವುದಿಲ್ಲ. ಒಂದೊಂದು ಡಿಪಾರ್ಟ್‌ಮೆಂಟ್‌ಗೆ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ

ಹಸಿರು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ವೈಟು, ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ರೆಡ್, ಇನ್ನಾವುದಾದರು ಡಿಪಾರ್ಟ್‌ಮೆಂಟ್ ಇನ್ನೊಂದು ಕಲರ್ ಹೀಗೆ ಮಾಡಿ. ಈಗ ಕೆಲವೊಂದು ದೊಡ್ಡ ದೊಡ್ಡ ಅಧಿಕಾರಿಗಳು ಹಾಕಿಕೊಂಡು ಬರುತ್ತಾರೆ. ಅವರು ಎಷ್ಟು ಚೆನ್ನಾಗಿ ಕಾಣುತ್ತಾರೆ ಅಧ್ಯಕ್ಷರೇ, ಅದನ್ನು ನೀವು ನಂಬುತ್ತಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಹೇಳಿದ ಹಾಗೆ ಫಾರೆಸ್ಟ್ ಇದ್ದರೆ ಗಿಡ, ಎಕ್ಸೈಸ್ ಬಂದರೆ ಬಾಟ್ಲು, ಅಗ್ರಿಕಲ್ಚರ್ ಬಂದರೆ ಯಾವುದಾದರೊಂದು ಕ್ರಾಪ್, ಗೊಬ್ಬರ ಚೀಲ ಹೀಗೆ ನೋಡಿಕೊಂಡು ಕೊಡಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರ ಸಲಹೆಯನ್ನು ಒಪ್ಪಿದರೂ ಸಹಿತ..... ಈಗ ಉದಾಹರಣೆಗೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ನೀವು ಬಾಟ್ಲನ್ನು ಅಥವಾ ಬಿಸಲೇರಿ ಬಾಟ್ಲನ್ನು ನೇತಾಕಿದ್ದರೆ ಅವನು ಎಲ್ಲೋ ಎಜುಕೇಶನ್ ಡಿಪಾರ್ಟಮೆಂಟ್‌ಗೆ ಹೋದರೆ ಅವನು ಇಲ್ಲಿಗೇಕೆ ಬಂದು ಎಂದು ಗೊತ್ತಾಗುತ್ತದೆ. ಯಾರ್‍ಯಾರು ಎಲ್ಲೆಲ್ಲಿ ಕುಳಿತಿರುತ್ತಾರೋ ಅದು ದೇವರಿಗೇ ಗೊತ್ತು. ಸನ್ಮಾನ್ಯ ಸಭಾಧ್ಯಕ್ಷರೇ, ತಾವು ವಿಧಾನ ಸೌಧದಲ್ಲಿರುವ ಕ್ಯಾಂಟಿನನ್ನು ಮುಚ್ಚಿಸಿ ಬಿಡಿ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನೀವು ರೈಲು ಭವನಕ್ಕೆ ಹೋಗಿ, ವಿಜ್ಞಾನ ಭವನಕ್ಕೆ ಹೋಗಿ ನೋಡಿ ಅಲ್ಲಿ ನೌಕರರಿಗೆ ಟ್ರ್ಯಾಲಿನಲ್ಲಿ ಎರಡು ಸಾರಿಯೋ, ಮೂರು ಸಾರಿಯೋ ಕಾಫಿ ಕೊಡತಕ್ಕಂಥ ವ್ಯವಸ್ಥೆ ಇದೆ. ಅದನ್ನು ಸರ್ಕಾರವೇ ಮಾಡಲಿ. ಇದರಿಂದ ಅಧಿಕಾರಿಗಳು ಹೋಗುವುದು ತಪ್ಪುತ್ತದೆ. ಇವೊತ್ತು ನೀವು ಯಾವುದೇ ದೊಡ್ಡ ದೊಡ್ಡ ಅಧಿಕಾರಗಳನ್ನು ಫೋನ್ ಮಾಡಿ ಕೇಳಿ ಯಾರೂ ಸಿಗುವುದಿಲ್ಲ. ಉದಾಹರಣೆಗೆ ಮೈಸೂರು ಮಿನರಲ್ಸ್‌ನಲ್ಲಿ ಒಬ್ಬ ಫೈನಾನ್ಸ್ ಡೈರೆಕ್ಟರ್ ಇದ್ದಾರೆ ಅವರಿಗೆ ನಾನು ನಲವತ್ತೈದು ಸಾರಿ ಒಂದು ವಾರದಿಂದ ದೂರವಾಣಿ ಮಾಡಿದ್ದೇನೆ. ಅವರು ಫೋನಿಗೆ ಸಿಕ್ಕಿದಾಗ ನಾನು ಹೇಳಿದೆ ಪ್ರಜಾಪ್ರತಿನಿಧಿಗಳು ಎಂದರೆ ನಿಮಗೆ ಹಾಸ್ಯ ಆಗಿದೆ ಏನಪ್ಪಾ, ನಲವತ್ತೈದು ಸಾರಿ ಫೋನ್ ಮಾಡಿದ್ದೇನೆ, ನಿಮ್ಮ ಪಿ. ಎ. ನಾನು ಫೋನ್ ಮಾಡಿದ್ದೇನೆಂದು ಕೂಡ ಹೇಳಲಿಲ್ಲವೆ? ಅವರೇನು ಕತ್ತೆ ಕಾಯುವುದಕ್ಕೆ ಇರುವುರೇ? ಏನು ವಿಚಾರ ಹೇಳಿ ಎಂದರೆ ತಬ್ಬಿಬ್ಬಾಗುತ್ತಾರೆ. ದೊಡ್ಡ ಅಧಿಕಾರಿಗಳಿಗೆ ಇವೊತ್ತು ಮೋಜು, ನಾವು ಏತಕ್ಕೆ ಸಂಬಳ ತೆಗೆದುಕೊಳ್ಳುತ್ತಿದ್ದೇವೆ, ಈ ಜನ ಪ್ರತಿನಿಧಿಗಳು ನಮಗೆ ಏತಕ್ಕೋಸ್ಕರ ಫೋನ್ ಮಾಡುತ್ತಾರೆ ಎಂದು ತಿಳಿದುಕೊಳ್ಳುವುದಿಲ್ಲ. ಮಧ್ಯಾಹ್ನ ಫೋನ್ ಮಾಡಿದರೆ ಮೀಟಿಂಗ್ ಹೋಗಿದ್ದಾರೆಂದು ಹೇಳುತ್ತಾರೆ. ನಾವು ಈ ವಿಷಯ ಸಮಿತಿಯೊಂದನ್ನು ಮಾಡಿದ್ದೇವೆ. ಇವರು ವಿಷಯ ಸಮಿತಿಗಳಿಗೆ ಬರುತ್ತಾರೋ ಆಂಟಿ ಚೇಂಬರ್‌ಗಳಿಗೆ ಇರುತ್ತಾರೋ ದೇವರಿಗೆ ಗೊತ್ತು. ಅಲ್ಲಿ ಯಾರೂ ಹೇಳುವುದಿಲ್ಲ. ನಾವು ಕೇಳಿದರೆ ಈಗ ಇದ್ದರು ಸಾರ್ ಈಗ ಮೀಟಿಂಗ್‌ಕ್ಕೆ ಕೆಳಗೆ ಹೋದರು ಎಂದು ಹೇಳುತ್ತಾರೆ. ಇನ್ನು ಸ್ವಲ್ಪ ಹೊತ್ತಾದ ಮೇಲೆ ಈಗ ಇಲ್ಲೇ ಇದ್ದರು ಮೇಲೆ ಹೋದರು ಎಂದು ಹೇಳುತ್ತಾರೆ. ಇನ್ನು ಸ್ವಲ್ಪ ಹೊತ್ತಾದ ಮೇಲೆ ವಿಧಾನ ಸೌಧಕ್ಕೆ ಹೋದರು ಎಂದು ಹೇಳುತ್ತಾರೆ ನೆಗೆದು ಬಿದ್ದು ಹೋಯಿತು ಇನ್ನು ನೀವು ಹುಡುಕುವ ಹಾಗೇ ಇಲ್ಲ ಅವರನ್ನು.

ಅಧಿಕಾರಿಗಳು ಪ್ರಜಾ ಪ್ರತಿನಿಧಿಗಳಿಗೆ ಈ ಡೆಮಾಕ್ರಾಟಿಕ್ ಸೆಟಪ್‌ನಲ್ಲಿ ಸಿಕ್ಕಿ ಏನು ಜನ ಪ್ರಜಾ ಪ್ರತಿನಿಧಿಗಳಿಗೆ ಕುಂದುಕೊರತೆಗಳನ್ನು ಹೇಳಿರುತ್ತಾರೆ ಆ ವ್ಯವಸ್ಥೆಯನ್ನು ಮಾಡಲು ಅಧಿಕಾರಿಗಳಿಗೆ ನೀವು ಕಟ್ಟುನಿಟ್ಟಾಗಿ ಹೇಳಬೇಕು. ಇವೊತ್ತು ಈ ರಾಜ್ಯದಲ್ಲಿ ಒಳ್ಳೆಯ ಹೆಸರು ಇರತಕ್ಕಂಥ ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಖದೀಮರು ಇರುವಂಥವರು ಕೂಡ ಇದ್ದಾರೆ. ಇವೊತ್ತು ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳ ಮೇಲೆ ಸಿ.ಓ.ಡಿ. ತನಿಖೆಯಾಗಿ ಪೆಂಡಿಂಗ್ ಇದೆ ಎನ್ನತಕ್ಕಂಥದ್ದನ್ನು ನೀವು ಪರಿಶೀಲನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಎಷ್ಟು ಹಣ ಲೂಟಿಯಾಗುತ್ತಿದೆ. ನೀವು ಸಮಾಜದಲ್ಲಿ ಸೇವೆ ಮಾಡಿರುವಂಥವರಿಗೆ ತೆಗೆದುಕೊಂಡು ಹೋಗಿ ಚೇರ್ಮನ್ ಮಾಡುವುದಿಲ್ಲ. ನೀವು ನೋಡಬೇಕು ಮಾನ್ಯ ಸಭಾಧ್ಯಕ್ಷರೇ, ಕೆ.ಎಸ್.ಎಫ್.ಸಿ.ನಲ್ಲಿ ಸುಮಾರು ಎಂಟು ಜನ ಡೈರೆಕ್ಟರ್, ಮ್ಯಾನೇಜಿಂಗ್ ಡೈರೆಕ್ಟರಲ್ಲಾ ಸೇರಿ ಇದ್ದಾರೆ. ಆ ಜನರೇ ಇವೊತ್ತು ಮೈಸೂರು ಮಿನರಲ್ಸ್‌ನಲ್ಲಿರುತ್ತಾರೆ. ಅಲ್ಲಿ ಮೂರು ಜನ ಚೇಂಜ್ ಆದರೆ ಇನ್ನು ಮೂರು ಜನ ಜಾಸ್ತಿ ಬೇರೆ ಕಡೆ ಇರುತ್ತಾರೆ. ಅವರು ಬಿಟ್ಟರೆ ಪವರ್ ಕಾರ್ಪೊರೇಷನ್ ಪವರ್ ಕಾರ್ಪೊರೇಷನ್ ಬಿಟ್ಟರೆ ಟ್ರಾನ್ಸ್‌ಪೋರ್ಟ್ ಬಿಟ್ಟರೆ ಕೆ.ಇ.ಬಿ. ಬಿಟ್ಟರೆ ಮೈಸೂರು ಲ್ಯಾಂಪ್ಸ್, ಮೈಸೂರು ಲ್ಯಾಂಪ್ಸ್ ಬಿಟ್ಟರೆ ಸೋಪ್ಸ್ ಅಂಡ್ ಡಿಟರ್‌ಜೆಂಟ್. ಯಾವುದು ಉದ್ಧಾರವಾಗಿವೆ ಸ್ವಾಮಿ. ನಾನು ಕೇಳುತ್ತೇನೆ ಭೈರೇಗೌಡರಿಗೆ ಇವೊತ್ತು ನೀವು ರಾಜಕಾರಣಕ್ಕೆ ಬಂದಮೇಲೆ, ಪ್ರಾಮಾಣಿಕವಾಗಿ ರಾಜಕಾರಣ ಮಾಡಿದವರಿಗೆ ಇಪ್ಪತ್ತೆದು ವರ್ಷ ಆಯಸ್ಸು ಕಡಿಮೆಯಾಗುತ್ತದೆ. ಇವೊತ್ತು ಎಷ್ಟೋ ಜನ ವಿಧಾನ ಸೌಧದ ಒಳಗೆ ಬರದೆ ಪ್ರಾಣ ಬಿಟ್ಟಿರತಕ್ಕಂಥ ನಿಮ್ಮ ಸ್ನೇಹಿತರುಗಳು ಇದ್ದಾರೆ. ಆ ರೀತಿ ಸೇವೆಗಳು ಮಾಡಿರತಕ್ಕಂಥವರಿಗೆ ನೀವು ಚೇರ್ಮನ್‌ಗಳನ್ನು ಆಗಿ ಮಾಡಿ. ನಿಮ್ಮ ಮಂಡಳಿಗಳಿಗೆ ಏನೇನು ನೀವು ಮಾಡುತ್ತೀರಿ ಅವುಗಳಿಗೆಲ್ಲಾ ಸಮಾಜದಲ್ಲಿ ಸೇವೆ ಮಾಡಿರತಕ್ಕಂಥವರಿಗೆ ಕೊಡಿ. ಇವೊತ್ತು ಐ.ಎ.ಎಸ್. ಅಧಿಕಾರಿಗಳು ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ ಹೇಳಬೇಡಿ ಅವರು ಯಾರೂ ಇವೊತ್ತು ಸತ್ಯಸಾಧರೇನು ಅಲ್ಲ.

7-00 ಪಿ. ಎಂ.

ಕೆಲವು ಪ್ರಾಮಾಣಿಕ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿದ್ದಾರೆ ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಇವೊತ್ತು ಐ.ಎ.ಎಸ್. ಅಧಿಕಾರಿಗಳ ಮನೆಯನ್ನು ನೋಡಿದರೆ ಗೊತ್ತಾಗುತ್ತದೆ, ಈಜುಕೊಳವನ್ನೂ ಕೂಡ ಮನೆಯ ಆವರಣದಲ್ಲೇ ನಿರ್ಮಾಣ ಮಾಡಿ ರತಕ್ಕ ಅನೇಕ ಉದಾಹರಣೆಗಳು ಇವೆ. ಇವೊತ್ತಿನ ದಿನಗಳಲ್ಲಿ ಹೊರಗಡೆ ಬಂದು ಅವರು ಏನು ಶೋಕಿ ಮಾಡಬಹುದೋ, ಮಜಾ ಮಾಡಬಹುದೋ ಆ ವ್ಯವಸ್ಥೆ ಎಲ್ಲವನ್ನೂ ಮನೆಯಲ್ಲೇ ಮಾಡಿಕೊಂಡಿರುವ ಉದಾಹರಣೆಗಳು ಇವೆ. ನಾನು ಇವೊತ್ತು ಕೇಳುತ್ತೇನೆ, ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ

ನಿಟ್ಟಿನಲ್ಲಿ ಲೋಕಾಯುಕ್ತ ಇಲಾಖೆ ಏನು ಮಾಡುತ್ತಿದೆ. ಇವೊತ್ತು ಯಾರಾದರೂ ಒಬ್ಬ ಬಡವ ಸಣ್ಣ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡರೆ ಲೋಕಾಯುಕ್ತದವರು ಅವನನ್ನು ನರಳಿಸುತ್ತಾರೆ. ಲಕ್ಷಗಟ್ಟಲೆ ತಿಂದವರನ್ನು ಅವರು ಮಾತನಾಡಿಸುವುದಿಲ್ಲ. ಇವೊತ್ತು ಮೆಟೀರಿಯಲ್ಸ್ ಪರ್ಚೇಸ್ ಮಾಡುವ ಹಂತದಿಂದ ಹಿಡಿದು ಪ್ರತಿಯೊಂದು ಹಂತದಲ್ಲೂ ಕೂಡ ದರವನ್ನು ಫಿಕ್ಸ್ ಮಾಡಿಕೊಂಡಿದ್ದಾರೆ. ಇದಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ಇದಕ್ಕೆ ಸರ್ಕಾರ ಕಡಿವಾಣ ಹಾಕದಿದ್ದರೆ ಇವೊತ್ತು ನಮ್ಮ ರಾಜ್ಯದ ಅರ್ಧ ಸಂಸತ್ತು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಹತ್ತಿರ ಮಾರ್ವಾಡಿ ಮತ್ತು ಸಿಂಧಿಗಳ ಹತ್ತಿರ ಬಿಟ್ಟರೆ ಕೆಂಪೇಗೌಡನ ವಂಶಸ್ಥರು ಯಾರು ರೈತ ಸಮುದಾಯದವರು ಇದ್ದಾರೆ ಅವರ ಹತ್ತಿರ ಇಲ್ಲ. ಇದಕ್ಕೆ ಸರ್ಕಾರ ಕಡಿವಾಣ ಹಾಕಲೇಬೇಕಾಗಿದೆ. ಮೊನ್ನೆ ನಮ್ಮ ಹಿರಿಯ ಸದಸ್ಯರಾದ ರಾಮಕೃಷ್ಣರವರು ದಲಿತರ ಬಗ್ಗೆ ಮಾತನಾಡುತ್ತ ಬಹಳ ಉತ್ತಮವಾದ ವಿಷಯಗಳನ್ನು ಹೇಳಿದರು. ಇವೊತ್ತು ದಲಿತರು ಏನಾಗಿದ್ದಾರೆ ಎಂಬ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಿದರು. ಆದರೆ ಅವರು ಮಾತನಾಡುತ್ತ ಆವೇಶದಲ್ಲಿ ಸರ್ಕಾರವನ್ನೇ ಬೈದರು, ಅದು ನನಗೆ ಸಂಬಂಧಪಟ್ಟ ವಿಚಾರವಲ್ಲ, ಅದು ಅವರಿಗೇ ಸಂಬಂಧಪಟ್ಟ ವಿಚಾರ. ಆದರೂ ಕೂಡ ಅವರ ಕಾಳಜಿ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ನಾವೆಲ್ಲರೂ ನೋಡಬೇಕಾಗುತ್ತದೆ. ಇವೊತ್ತು ಬಡ ಬೋರೇಗೌಡ ಇಲ್ಲಿ ಏನೂ ಮಾಡುವ ಹಾಗಿಲ್ಲ. ಇವೊತ್ತು ಎಲ್ಲಿಂದಲೋ ಬಂದಿರತಕ್ಕಂಥ ಐ.ಎ.ಎಸ್. ಅಧಿಕಾರಿಗಳು ಉಪ ಅಧ್ಯಕ್ಷರೇ ಕರ್ನಾಟಕದವರೇ ಆದಂಥ ಐ.ಎ.ಎಸ್. ಅಧಿಕಾರಿಗಳು ಎಷ್ಟು ಜನ ಇದ್ದಾರೆ ಎಂಬುದನ್ನು ನಾನು ಕೇಳುತ್ತೇನೆ, ಬೆರಳೆಣಿಕೆಯಷ್ಟು ಜನರೂ ಕೂಡ ನಮ್ಮ ಕರ್ನಾಟಕದ ಐ.ಎ.ಎಸ್. ಅಧಿಕಾರಿಗಳು ಇಲ್ಲ. ನಮ್ಮವರು ಐ.ಎ.ಎಸ್. ಇರಲಿ ಕೆ.ಎ.ಎಸ್.ಗೆ ಹತ್ತುವುದಿಲ್ಲ ಪಾಪಾ. ಮುನ್ನೂರು ಜನರಿಗೆ ಸಂದರ್ಶನ ಬಂದರೆ ಆದರಲ್ಲಿ ಮೂರು ಜನರೂ ಕೂಡ ಸೆಲೆಕ್ಟ್ ಆಗುವುದಿಲ್ಲ, ಒಂದು ವೇಳೆ ಸೆಲೆಕ್ಟ್ ಆದರೂ ಕೂಡ ಯಾವುದಕ್ಕೂ ಕೆಲಸಕ್ಕೆ ಬಾರದ ಇಲಾಖೆಗಳಲ್ಲಿ ಅವರಿಗೆ ಕೆಲಸ ಸಿಗುತ್ತದೆ. ಈ ಅಧಿಕಾರಿಗಳು ಶಿಕ್ಷಣದಲ್ಲಿ ಪರಿಣಿತರಾಗಿ ಬಂದಿರುವುದಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ಆದರೆ ಇವರಲ್ಲಿ ಕೆಲವರು ಈ ರಾಜ್ಯದಲ್ಲಿಯ ಸಾರ್ವಜನಿಕ ಹಣವನ್ನು ಎಷ್ಟರಮಟ್ಟಿಗೆ ದುರುಪಯೋಗ ಮಾಡುತ್ತಿದ್ದಾರೆ, ಇದಕ್ಕೆ ನೀವು ಕಡಿವಾಣ ಹಾಕದಿದ್ದರೆ ... ಇವೊತ್ತು ಯಾರ್‍ಯಾರು ಪಬ್ಲಿಕ್‌ಸೆಕ್ಟರ್‌ನಲ್ಲಿ ಅಧಿಕಾರಿಗಳು ಐ.ಎ.ಎಸ್.ನವರು ಇದ್ದಾರೆ ಅವರನ್ನು ತೆಗೆದುಬಿಟ್ಟು... ಸಮಾಜದಲ್ಲಿ ಒಳ್ಳೆಯ ರೀತಿಯಲ್ಲಿ ದುಡಿದಿರತಕ್ಕಂಥ ವ್ಯಕ್ತಿಗಳಿಗೆ ಆ ಕಾರ್ಖಾನೆಯನ್ನು ಬಿಟ್ಟುಕೊಡಿ, ಆಗ ನಿಜವಾಗಲೂ ಕಾರ್ಖಾನೆ ಲಾಭಗಳಿಸಲು ವ್ಯವಸ್ಥೆಯನ್ನು ಇವರು ಮಾಡುತ್ತಾರೆ. ಏಕೆಂದರೆ ಅವರಿಗೆ ಸೋಶಿಯಲ್ ಕಮಿಟ್‌ಮೆಂಟ್ಸ್ ಇರುತ್ತದೆ. ಆದರೆ ಐ.ಎ.ಎಸ್. ಅಧಿಕಾರಿಗಳಿಗೆ ಯಾವ ಕಮಿಟ್‌ಮೆಂಟ್ಸ್ ಇರುವುದಿಲ್ಲ, ಕಮಿಟ್‌ಮೆಂಟ್ಸ್ ಇಲ್ಲಿಂದ ಅಲ್ಲಿಗೆ ಹೋದರೆ, ಅಲ್ಲಿಂದ ಬೇರೊಂದು ಕಡೆ ಹೋಗುತ್ತಾರೆ, ಇದಕ್ಕೇನೂ ಅವರಿಗೆ ಲೆಕ್ಕವಿಲ್ಲ. ಆದಕ್ಕಾಗಿ ಕಡಿವಾಣ ಹಾಕಬೇಕಾಗಿದೆ ಈ ಕಡಿವಾಣವನ್ನು ಹಾಕಿದ್ದೇ ಆದರೆ ಸುಮಾರು 50 ಕೋಟಿ ರೂ.ಗಳು ಇದರಲ್ಲಿ ಉಳಿತಾಯವಾಗುತ್ತದೆ. ಇವೊತ್ತು ವಿಧಾನ ಸೌಧದಲ್ಲಿ, ಬಹುಮಹಡಿ ಕಟ್ಟಡಗಳಲ್ಲಿ,

ಬೆಂಗಳೂರಿನಲ್ಲಿರುವ ಸರ್ಕಾರೀ ಅಧಿಕಾರಿಗಳ ವೃಂಧಕ್ಕೆ ನೀವು ಕಡಿವಾಣ ಮಾಡಿದ್ದೇ ಆದರೆ ಸುಮಾರು 50 ಕೋಟಿ ರೂ.ಗಳನ್ನು ವರ್ಷಕ್ಕೆ ಉಳಿಸಬಹುದು. ಇದಕ್ಕೆ ಸರ್ಕಾರ ಚಿಂತನೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸದನದಲ್ಲಿ ಕೇಳುತ್ತೇನೆ. ಇದಲ್ಲದೇ ಸರ್ಕಾರ ಸೋಪ್ಸ್ ಅಂಡ್ ಡಿಟರ್ಜೆಂಟ್ ಮತ್ತೊಂದು ಕಾರ್ಖಾನೆಗಳಲ್ಲೇ ಆಗಲೀ ಇದುವರೆಗೆ ನೀವು ಹಾಕಿರತಕ್ಕಂಥ ಅಧಿಕಾರಿಗಳಲ್ಲಿ ಯಾರು ಚೆನ್ನಾಗಿ ಇಂಥ ಕಾರ್ಖಾನೆ ಗಳಲ್ಲೇ ಆಗಲೀ ಇದುವರೆಗೆ ನೀವು ಹಾಕಿರತಕ್ಕಂಥ ಅಧಿಕಾರಿಗಳಲ್ಲಿ ಯಾರು ಚೆನ್ನಾಗಿ ಇಂಥ ಕಾರ್ಖಾನೆಗಳಲ್ಲಿ ಲಾಭ ಬರುವಂತೆ ಮಾಡಿದ್ದಾರೆ, ಯಾರು ಚೆನ್ನಾಗಿ ಆ ಕಾರ್ಖಾನೆಯನ್ನು ಮುಂದಕ್ಕೆ ತಂದಿದ್ದಾರೆ ಅಂಥವರ ಬಗ್ಗೆ ಸರ್ಕಾರ ಕಾಳಜಿ ತೋರಿಸಿ ಅವರಿಗೆ ಪ್ರಮೋಶನ್ ಕೊಟ್ಟು ಒಳ್ಳೆಯ ಸ್ಥಾನಮಾನವನ್ನು ಅವರಿಗೆ ಕೊಟ್ಟರೆ ಕೆಲಸ ಮಾಡಬೇಕು ಕಾರ್ಖಾನೆಯನ್ನು ಇನ್ನೂ ಮುಂದಕ್ಕೆ ತರಬೇಕು ಎಂಬುದರಲ್ಲಿ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಯಾರ ಕಾಲದಲ್ಲಿ ಲಾಸ್ ಆಗಿದೆ, ಯಾರ ಕಾಲದಲ್ಲಿ ತಿಂದಿದ್ದಾರೆ ಅವರನ್ನು ನೀವು ಮನೆಗೆ ಕಳುಹಿಸಬೇಡಿ, ಅವರನ್ನು ನೀವು ಜೈಲಿಗೆ ಕಳುಹಿಸಬೇಕು. ಈ ಸಿಸ್ಟಂನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶಿವರಾಮೇಗೌಡರ ಮಾತನಾಡುತ್ತ ಇಲಾಖಾವಾರು ಗಣನೆಗೆ ತೆಗೆದುಕೊಂಡು ಅಲ್ಲಿ ಕೆಲಸ ಮಾಡುವವರಿಗೆ ಬೇರೆ ಬೇರೆ ರೀತಿಯಲ್ಲಿ ಬಣ್ಣದ ಯೂನಿಫಾರಂ ಮಾಡಬೇಕು, ಎಂದು ಹೇಳಿದರು. ಆದರೆ ಬೂಟು ಯಾವ ಬಣ್ಣದಲ್ಲಿರಬೇಕು ಎಂಬುದನ್ನು ಅವರು ಹೇಳಲಿಲ್ಲ. ಈಗ ಒಂದು ಇಲಾಖೆಯಲ್ಲಿದ್ದ ಅಧಿಕಾರಿಗೆ ಇಂಥ ಬಣ್ಣದ್ದೇ ಎಂದು ಬಟ್ಟೆ ನಿಗಧಿ ಮಾಡಿದ ಮೇಲೆ ಸ್ವಲ್ಪ ದಿನಗಳ ನಂತರ ಅಧಿಕಾರಿಗೆ ಬೇರೆ ಇಲಾಖೆಗೆ ವರ್ಗಾವಣೆಯಾದರೆ ಆಗ ಆತ ಪುನಃ ಮತ್ತೇ ಇದೇ ಇಲಾಖೆಗೆ ಬಂದಾಗಲೇ ಈ ಬಟ್ಟೆಯನ್ನು ಹಾಕಬೇಕೋ ಅಥವಾ ಈ ಬಟ್ಟೆಯನ್ನು ಮಡಬಿಡಬೇಕೋ ಇದು ಗೊಂದಲಮಯವಾಗುತ್ತದೆ. ಇದಕ್ಕಾಗಿ 50 ಕೋಟಿ ರೂ. ಗಳನ್ನು.....

ಉಪಾಧ್ಯಕ್ಷರು :- ತಾವು ಮಾತನಾಡುವಾಗ ಇವೆಲ್ಲಾ ವಿಷಯಗಳನ್ನು ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಹೇಳಿದ್ದು ಬಟ್ಟೆಯಲ್ಲ, ಬ್ಯಾಡ್ಜ್ ವಿಷಯ, ಹೇಳಿದ್ದು. ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರಕ್ಕೆ ಸಂಬಂಧ ಪಟ್ಟಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಇದೆ, ಇದಕ್ಕೇ ಸಂಬಂಧಪಟ್ಟಂತೆ ಮಾನ್ಯ ಅನಂತ್‌ನಾಗ್ ಎನ್ನುವವರು ಮಂತ್ರಿ ಆಗಿದ್ದಾರೆ. ಈ ಪ್ರಾಧಿಕಾರದಲ್ಲಿ ನಿವೇಶನಕ್ಕಾಗಿ ಕಾದಿರುವ ಸುಮಾರು 81 ಸಾವಿರ ಅರ್ಜಿಗಳಿದ್ದು ಇವರುಗಳಿಂದ ಸುಮಾರು 34 ಕೋಟಿ ರೂ. ಗಳನ್ನು ವಸೂಲು ಮಾಡಲಾಗಿದೆ. ಇಲ್ಲಿ ಉಪಾಧ್ಯಕ್ಷರೇ, ನೀವು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದಿಂದ ಯಾವುದೇ ಒಂದು ಫೈನಾನ್ಶಿಯಲ್ ಇನ್ಸ್‌ಟ್ಯೂಟ್‌ನಿಂದ ಯಾರಾದರೊಬ್ಬ ಬಡ ಬೋರೇಗೌಡ ಸಾಲ ತೆಗೆದುಕೊಂಡಿದ್ದರೆ

ಅವನು ಸರಿಯಾದ ಸಮಯದಲ್ಲಿ ಬಡ್ಡಿಯನ್ನು ಕಟ್ಟದಿದ್ದರೆ ಚಕ್ರಬಡ್ಡಿ ಹಾಕುತ್ತಾರೆ ಮತ್ತು ಮುಂದೆ ಪೀನಲ್ ಇಂಟರೆಸ್ಟನ್ನು ಇದಕ್ಕೆ ಆ್ಯಡ್ ಮಾಡುತ್ತಾರೆ. ಅವನು ಕಟ್ಟದಿದ್ದರೆ ಅವನ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ 1988 ರಿಂದ ಸುಮಾರು 81 ಸಾವಿರ ಜನರು ಸುಮಾರು 34 ಕೋಟಿ ರೂ.ಗಳಷ್ಟು ಹಣವನ್ನು ನಿವೇಶನಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಟ್ಟಿದ್ದಾರೆ. ಆದರೆ ಇದಕ್ಕೆ ಬಡ್ಡಿಯಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜಮೀನು ಸೇರುತ್ತದೆ ಎನ್ನುವುದಕ್ಕೆ ನನ್ನ ಬಳಿ ಚಿತ್ರವಿದೆ; ಬೆಂಗಳೂರು ನಗರದಲ್ಲಿ ಯಾರಾದರೂ ಒಬ್ಬರು ಪ್ರೈವೇಟ್ ಡೆವಲಪರ್ ಸುಮಾರು 25 ಅಥವಾ 50 ಲಕ್ಷ ರೂ.ಗಳನ್ನು ಬಂಡವಾಳ ವನ್ನಾಗಿ ತೆಗೆದುಕೊಂಡು ಎರಡು ವರ್ಷದಿಂದೀಚೆಗೆ ಬಂದಿದ್ದರೆ ಆತ ಇವೊತ್ತು 10 ಕೋಟಿ ರೂ.ಗಳಿಗೂ ಹೆಚ್ಚು ದುಡಿಮೆ ಮಾಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 1200 ಜನ ಉದ್ಯೋಗಿಗಳಿದ್ದಾರೆ. ಈ 1200 ಜನ ಉದ್ಯೋಗಿಗಳಿಗಾಗಿ ಈ ವರ್ಷದ ಬಜೆಟ್‌ನಲ್ಲಿ 87 ಕೋಟಿ ರೂ.ಗಳನ್ನು ಇಟ್ಟು ಇದರಲ್ಲಿ ಸುಮಾರು 25 ಪರ್ಸೆಂಟ್ ಇವರಿಗೆ ಸಂಬಳವನ್ನು ಕೊಡುತ್ತಿದ್ದಾರೆ. ಇವೊತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸರ್ಕಾರದ ಬಿಳಿ ಆನೆಯಾಗಿದೆ. ಇದನ್ನು ಮುಚ್ಚಬೇಕು ಎನ್ನುವ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಇಲ್ಲಿಯ ಕಮಿಶನರ್‌ರವರನ್ನು ಕೇಳಿದೆ, 81 ಸಾವಿರ ಜನರು ನಿವೇಶನಗಳಿಗಾಗಿ ಅರ್ಜಿ ಹಾಕಿದ್ದಾರಲ್ಲಾ, ನೀವು ಎಷ್ಟು ಜನರಿಗೆ ನಿವೇಶನ ಗಳನ್ನು ಕೊಡುತ್ತೀರಿ? ಒಂದು ವೇಳೆ ನಿವೇಶನ ಕೊಡುವುದಕ್ಕೆ ಆಗದಿದ್ದರೆ ಅವರಿಂದ ಪಡೆದ ಹಣವನ್ನು ಏಕೆ ಇಟ್ಟುಕೊಂಡಿದ್ದೀರೀ? ಆಗ ಅವರು ಹೇಳುತ್ತಾರೆ ಜನರು ಹಣವನ್ನು ವಾಪಸ್ ಕೇಳಿದರೆ ನಾವು ಕೊಟ್ಟುಬಿಡುತ್ತೇವೆ ಎನ್ನುತ್ತಾರೆ. ಕೇಳಿದರೆ ಕೊಟ್ಟುಬಿಡುತ್ತೇವೆ ಎಂದರೆ ಹೇಗೆ ಯಾರಾದರೂ ಒಬ್ಬ ರೈತ ಅಥವಾ ನಗರದಲ್ಲಿರುವ ಯಾರಾದರೊಬ್ಬ ನಾವು ಕೇಳದೇ ಇದ್ದರೆ ಮತ್ತು ಹಣ ಪ್ರಾಧಿಕಾರದಲ್ಲೇ ಇನ್ನೂ ಸ್ವಲ್ಪ ದಿವಸ ಇದ್ದರೆ ಏನಾದರೂ ಒಂದು ಸಣ್ಣ ಸೈಟ್ ಸಿಗುವುದೇನೋ ಎನ್ನುವ ಆಸೆಯಿಂದ ಇಲ್ಲಿಯೇ ಹಣವನ್ನು ಬಿಟ್ಟಿದ್ದಾರೆ. ನಾನು ಕೇಳುತ್ತೇನೆ, ನಗರದಲ್ಲಿ ಯಾರಾದರೂ ಒಬ್ಬ ಡೆವಲಪರ್ ವಂಚನೆ ಮಾಡಿದ್ದಾರೆ ಎಂದರೆ ನೀವು ಸೆಂಟ್ರಲ್ ಜೈಲಿಗೆ ಕಳುಹಿಸುತ್ತೀರಿ. ನಿಮ್ಮ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏನು ಮಾಡುತ್ತಿದೆ? ಇದು ಜನಕ್ಕೆ ಹಗಲು ದರೋಡೆ ಮಾಡುತ್ತಿದೆ. ಏನು ಕೆಲಸ ಆಗುತ್ತಿದೆ ಅಲ್ಲಿಂದ? ಯಾವ ಸೊಸೈಟಿಯೊಳಗೆ ಕೊಟ್ಟರೂ ಪ್ಲಾನ್ ಮಂಜೂರು ಆಗುತ್ತಿಲ್ಲ, ಡೆವಲಪರ್ಸ್‌ಗೆ ಕೊಟ್ಟರೂ ಪ್ಲಾನ್ ಮಂಜೂರು ಆಗುತ್ತಿಲ್ಲ. ಇವತ್ತು 10 ಸಾವಿರ ಎಕರೆ ಇರತಕ್ಕಂಥ ಜಮೀನಿನಲ್ಲಿ 6 ಸಾವಿರ ಲಿಟಿಗೇಷನ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲೆ ಡಿ-ನೋಟಿಫೈ ಮಾಡಿರತಕ್ಕಂಥಾದ್ದು; ಕೋರ್ಟಿನಲ್ಲಿ ಕೇಸ್ ಇದೆ. ಸರ್ಕಾರ ನಿರ್ದಾಕ್ಷಿಣ್ಯವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇವತ್ತು ಯಾರನ್ನಾದರೂ ಒಬ್ಬರನ್ನು ಪ್ರತಿಷ್ಠಿತವಾಗಿರತಕ್ಕಂಥವರನ್ನು, ಕಮಿಟ್‌ಮೆಂಟ್ ಇರತಕ್ಕಂಥಾವರನ್ನು ಅಧ್ಯಕ್ಷರನ್ನಾಗಿ

ಮಾಡಿ. ನೀವು ಅಧಿಕಾರಿಗಳನ್ನು ಅಲ್ಲಿ ಹಾಕುತ್ತೀರಿ. ಬಿ.ಡಿ.ಎ. ಅಧಿಕಾರಿಗಳಾಗಿರತಕ್ಕಂಥ ಅಧಿಕಾರಿಗಳನ್ನು ನಾವು ನೋಡಿದ್ದೇವೆ. ಆದರೆ ನೀವು ಜನತೆಗೆ ಸ್ಪಂದನೆ ಮಾಡತಕ್ಕಂಥ ಒಳ್ಳೆಯ ಅಧಿಕಾರಿಗಳನ್ನು ನೀವು ಅಲ್ಲಿಗೆ ಹಾಕಲಿಲ್ಲ. ಇವತ್ತು ಬಿ.ಡಿ.ಎ. ಅಧ್ಯಕ್ಷರಾಗಿರ ತಕ್ಕಂಥವರ ಹತ್ತಿರ ಜನಸಾಮಾನ್ಯರು ಸುಳಿಯುವ ಹಾಗೆ ಇಲ್ಲ.

ಉಪಾಧ್ಯಕ್ಷರು :- ತಾವು ಬೇಗ ಮುಗಿಸಿಬಿಡಿ. ಟೈಂ ಆಗಲೇ ಬಹಳವಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮುಗಿಸುತ್ತೇನೆ, ಇವತ್ತು ಬಿ.ಡಿ.ಎ.ನಲ್ಲಿ ಯಾರೂ ಒಳಗೆ ಹೋಗಿ ಈಚೆ ಬರುವ ಹಾಗೆ ಇಲ್ಲ. ಕಮಿಷನ್ ಹೋದರೆ ಕೇಳಿ ಮಾಡುತ್ತಾರೆ. ಇಲ್ಲವೆಂದಲ್ಲ. ಆದರೆ ಅವರಿಗೆ ಶಕ್ತಿ ಸಾಲದು. ಇವತ್ತು ಬಿ.ಡಿ.ಎ.ನಲ್ಲಿ ಯಾರೂ ಬೇಡ, ಒಬ್ಬ ಹಳ್ಳಿ ರೈತ ಬೇಡ, ಒಬ್ಬ ಸಾಮಾನ್ಯ ಮನುಷ್ಯ ಬೇಡ, ಪ್ರತಿಷ್ಠಿತರಾಗಿರತಕ್ಕಂಥ ಒಬ್ಬ ಪ್ರಭಾವಿ ವ್ಯಕ್ತಿ ಸೈಟ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಸೈಟ್ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಅಲ್ಲಿ ಇಲ್ಲ. ನೀವು ಹಾಗಿದ್ದ ಮೇಲೆ ಏತಕ್ಕೆ ಅದನ್ನು ಇಟ್ಟುಕೊಂಡಿದ್ದೀರಿ? ನಾನು ಒಂದು ಮಾತನ್ನು ಹೇಳುತ್ತೇನೆ, ರಿಂಗ್ ರೋಡ್ ಎಂದು ಮಾಡಿದ್ದೀರಿ. ನೋಡಿ, ಇಲ್ಲಿ ರಿಂಗ್ ರೋಡ್ ಗುರುತು ಮಾಡಿದ್ದಾರೆ. ಇದು ಔಟರ್ ರಿಂಗ್ ರೋಡ್, ಇನ್ನರ್ ರಿಂಗ್ ರೋಡ್ ಎಂದು ಮಾಡಿದ್ದಾರೆ. ಈ ರಿಂಗ್ ರೋಡ್‌ಗೆ 1993-94 ನೇ ಸಾಲಿಗೆ 110 ಕೋಟಿ ರೂಪಾಯಿ ಮೀಸಲಿಟ್ಟಿದ್ದರು. ಈ ವರ್ಷ 300 ಕೋಟಿ ರೂಪಾಯಿ ಇಡಲಾಗಿದೆ. ಈಗ ಹೋಗುತ್ತಿರುವ ಸ್ಪೀಡ್‌ನಲ್ಲಿ ಹೋದರೆ ಸರ್ಕಾರ ಇತ್ತೀಚಿನ ದಿನಗಳಲ್ಲಿ ರಿಂಗ್ ರೋಡ್ ಮಾಡಲೇಬೇಕಾಗುತ್ತದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸೋಮಣ್ಣನವರು ಇಲ್ಲಿ ಇದ್ದಾರೆ ಎಂದು ಹೇಳತಕ್ಕಂಥ ಮಾತಲ್ಲ. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇಲ್ಲಿ ಕರೆದುಕೊಂಡು ಹೋಗಿ ಬಹಳಷ್ಟು ಹೋರಾಟ ಮಾಡಿ...

ಶ್ರೀ ಪಿ. ಸೋಮಣ್ಣ (ಬಂದರು ಮತ್ತು ಗೃಹ ರಕ್ಷಕ ದಳ) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶಿವರಾಮೇಗೌಡರು ಏನು ರಿಂಗ್ ರೋಡ್ ಬಗ್ಗೆ ಹೇಳುತ್ತಿದ್ದರು, ಕೆಲಸ ಮುಗಿದಿದೆ. ಶಿವರಾಮೇಗೌಡರಂಥ ಪ್ರಭಾವಶಾಲಿಗಳು ಎಲ್ಲೆಲ್ಲಿ ಜಾಗಗಳನ್ನು ಬಿಟ್ಟು ಕೊಡುವುದಕ್ಕೆ ಅವಕಾಶ ಮಾಡುತ್ತಿಲ್ಲ ಅಂತಹವರು ಎಲ್ಲಾ ಸಹಕಾರ ಮಾಡಿದರೆ ರಿಂಗ್ ರೋಡ್ ಇಷ್ಟೊತ್ತಿಗೆ ಮುಗಿಯುತ್ತಿತ್ತು. ಹಿಂದೆ ಇದ್ದಂತಹ ಸನ್ಮಾನ್ಯ ಸಿಂಧ್ಯಾರವರು ಅಂದಿನ ಮುಖ್ಯಮಂತ್ರಿಗಳು, ನಾವೆಲ್ಲಾ ಸುತ್ತಾಡಿದ್ದೇವೆ. ಬಹುತೇಕ ರಿಂಗ್ ರೋಡ್‌ಗಳ ಕೆಲಸ ಮುಗಿಯುತ್ತಿದೆ. ಎಲ್ಲಾ ಮುಗಿದು ಯಾವುದೋ ಒಂದು ಹಂತದಲ್ಲಿ ನಿಂತು ಹೋಗಿರತಕ್ಕಂಥ ಐದು ಕಿಲೋಮೀಟರ್, ಒಂದು ಕಿಲೋಮೀಟರ್ ಅರ್ಧ ಕಿಲೋಮೀಟರ್ ಈ ತರಹದ್ದು ಏನಿದೆ ಅಂತಹ ಕೆಲಸಗಳನ್ನು ಮಾಡುವಾಗ, ಏನು ಶಿವರಾಮೇಗೌಡರು ಹೇಳಿದರು ಡಿ- ನೋಟಿಫಿಕೇಷನ್ ಮಾಡಿ ಎಂದು ಆ ಪ್ರಭಾವವನ್ನು ಬೀರತಕ್ಕಂಥಾದ್ದು ಕಡಿಮೆಯಾದರೆ ಆ ಕೆಲಸವನ್ನು ಸರ್ಕಾರ ಖಂಡಿತ ಮಾಡುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಪ್ರಭಾವ ಬೀರುತ್ತೇನೆ ಎನ್ನುವಂತಹ ಮಾತನ್ನು ಹೇಳಲಿಲ್ಲ. ಅವರಿಗೆ ಅರ್ಥ ಆಗಲಿಲ್ಲವೆಂದು ಕಾಣುತ್ತದೆ. ನಾನು ಹೇಳಿದ್ದು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ದೇವೇಗೌಡರು ಇವತ್ತಿನ ಪ್ರಧಾನ ಮಂತ್ರಿಗಳು ಇಲ್ಲಿ ಇದ್ದಂತಹ ಕಾಲದಲ್ಲಿ ಸೋಮಣ್ಣನವರು, ಸಿಂಧ್ಯಾರವರು ದಿನಬೆಳಿಗ್ಗೆ ಎದ್ದರೆ ಅವರನ್ನು ಕರೆದುಕೊಂಡು ಹೋಗಿ ರಿಂಗ್ ರೋಡ್ ಮಾಡಬೇಕು ಎಂದು ಆಸೆ ಹೊತ್ತು ಬಹಳ ಪ್ರಯತ್ನ ಮಾಡಿದರು. ಇನ್ನು ಅದು ಮುಗಿದಿಲ್ಲ. ಈಗ ಇರತಕ್ಕಂಥ ಸ್ಪೀಡ್ ಸಾಲದು, ಇನ್ನು ಸ್ಪೀಡ್‌ಅಪ್ ಮಾಡಿ. ಇದರ ವೆಚ್ಚ 1996-97 ಕ್ಕೆ 450 ಕೋಟಿ ರೂಪಾಯಿ ಆಗುವುದು ಬೇಡ. ಈ ಸ್ಕೀಮ್ 300 ಕೋಟಿ ರೂಪಾಯಿಯ ಎಸ್ಟಿಮೇಟ್‌ನಲ್ಲಿ ನೀವು, ಅಲ್ಲಿ ಒಂದು ತೀರ್ಮಾನ ಮಾಡಿದ್ದೀರಿ. ರಿಂಗ್ ರೋಡ್ ಬರತಕ್ಕಂಥ ಜಾಗದಲ್ಲಿ ಪಕ್ಕದಲ್ಲಿ ಜಮೀನನ್ನು ಯಾರೋ ಒಬ್ಬ ಡೆವಲಪರ್ ತೆಗೆದುಕೊಡುವುದು. ಅವರೇ ಮಾಡಿಕೊಡುವುದು. ಆ ಪಕ್ಕದ ಜಾಗವನ್ನು ಅವನೇ ಎಕ್ವರಿಸಿಕೊಳ್ಳುವುದು ಎಂದು ಮಾಡಿದ್ದೀರಿ. ಆ ಜಮೀನನ್ನು ಬಿಡತಕ್ಕಂಥವರು ದಡ್ಡರು. ಆ ಜಮೀನನ್ನು ಅವನು ಡೆವಲಪ್ ರಿಗೆ ಏಕೆ ಬಿಟ್ಟು ಕೊಡಬೇಕು? ನಾವೇ ಮಾಡಿಕೊಡುತ್ತೇವೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಅದನ್ನು ನೆಗೋಷಿಯೇಟ್ ಮಾಡುವವರು ಯಾರು? ನಿಮ್ಮ ಬಿ.ಡಿ.ಎ.ನವರು ಮಾಡುತ್ತಾರೆಯೇ? ಆ ಶಕ್ತಿ ಅವರಿಗೆ ಇದೆಯೇ? ಅದಕ್ಕೆ ನಾನು ಹೇಳುವುದು ಅದನ್ನು ಮಾಡಿ. ಬೆಂಗಳೂರು ನಗರದಲ್ಲಿ ಮನುಷ್ಯರಾಗಿರತಕ್ಕಂಥವರು ತಿರುಗಾಡುವುದಕ್ಕೆ ಆಗುವುದಿಲ್ಲ. ಮೊನ್ನೆ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್ ಹಾಗೂ ನಂಜೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬೆಂಗಳೂರಿನ ವಾಹಗಳು ಸಂಖ್ಯೆ ಎಷ್ಟಿದೆ ವಾತಾವರಣ ಯಾವ ರೀತಿ ಕಲುಷಿತವಾಗುತ್ತಿದೆ ಎಂದು. ಇದನ್ನೆಲ್ಲಾ ನಿಗ್ರಹಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ? ಅದಕ್ಕೆ ನಿಮಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೊಡಬೇಕಾಗಿತ್ತು ಆಗ ಚೆನ್ನಾಗಿ ಇರುತ್ತಿತ್ತು. ಆದರೆ ನಿಮಗೆ ಪ್ರಯೋಜನವಿಲ್ಲದ ಇಲಾಖೆಯನ್ನು ಕೊಟ್ಟಿದ್ದಾರೆ. ಆದರೆ ನೀವು ಅದನ್ನು ಕೊಟ್ಟಿದ್ದಾರೆ ಎಂದು ಕುಳಿತುಕೊಳ್ಳಬೇಡಿ. ನೀವು ನಿಮ್ಮ ಪ್ರಭಾವವನ್ನು ಉಪಯೋಗಿಸಿ. ನಿಮ್ಮ ಭಾಗದಲ್ಲೀ ರಿಂಗ್ ರೋಡ್ ಬಾಕಿ ಉಳಿದರಿತಕ್ಕಂಥಾದ್ದು. ಅದನ್ನು ಶೀಘ್ರವಾಗಿ ಮುಗಿಸಲು ಕೆಲಸವನ್ನು ಮಾಡಿ. ಆಗ ಏನಾಗುತ್ತದೆ, ಶೀಘ್ರವಾಗಿ ರಿಂಗ್ ರೋಡ್ ಆದರೆ ಎಲ್ಲಾ ವಾಹನಗಳು ಆ ರಿಂಗ್ ರೋಡ್‌ನಲ್ಲಿ ಹೋಗುತ್ತವೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ವಾಹನ ಸಂಚಾರ ಒತ್ತಡ ಒಂದು ಮಾತನ್ನು ಹೇಳುತ್ತೇನೆ, ಇವತ್ತು ಮದ್ರಾಸ್‌ನಲ್ಲಿ ನೀವು ಹೋಗಿ. ಮದ್ರಾಸ್ ಡೆವಲಪ್‌ಮೆಂಟ್ ಅಥಾರಿಟಿಗೆ ಹೋಗಿ, ಅಲ್ಲಿ ಒಂದು ಸೈಟ್ ಬೇಕು ಎಂದು ಬೆಳಿಗ್ಗೆ ಅರ್ಜಿ ಹಾಕಿದರೆ ಎರಡು ದಿವಸದಲ್ಲಿ ಸೈಟ್ ಕೊಡುತ್ತಾರೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ ಹೀಗಾಗಿಎಲ್ಲಾ ಡೆವಲಪರ್ಸ್